ಮಂಗಳೂರು

ಬುಧವಾರ, 24 ಜೂನ್ 2026

ಸಂಪುಟ 48, ಸಂಚಿಕೆ 97 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಜುಲೈನಲ್ಲಿ ಭಾರತ-ಅಮೆರಿಕ ಬಿಟಿಎ ಅಂತಿಮ | ೦೨ 2030ರೊಳಗೆ ಇವಿ ಸ್ವದೇಶೀಕರಣ | ೦೨ ವಿಶ್ವಕಪ್‌ನಲ್ಲಿ 18 ಗೋಲು, ಮೆಸ್ಸಿ ದಾಖಲೆ | ೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಚಿತ್ರೆ

ದಿನದ ಮಾತು

ಅಹಿಂಸೆ, ಸತ್ಯ, ಆಸ್ತೇಯ, ನೈರ್ಮಲ್ಯ, ಇಂದ್ರಿಯ ನಿಗ್ರಹ– ಇವು ಎಲ್ಲರೂ ಆಚರಿಸಬೇಕಾದ ಧರ್ಮ.

▲ಮನುಸ್ಮೃತಿ

ಭಾರತೀಯ ದರ್ಶನಗಳಲ್ಲಿ ಜಗತ್ತಿನ ಸ್ವರೂಪ

ಪದ ಸಂಚಲನ

• ಡಾ.ವಿಶ್ವನಾಥ ಸುಂಕಸಾಳ

• ಪುಟ ೬

ಕಿರುಸುದ್ದಿ

ಇಂದು ಬೆಂಗಳೂರಿಗೆ ಸಿಎಂ ಯೋಗಿ ಆದಿತ್ಯನಾಥ್

• **ಬೆಂಗಳೂರು:** ಉತ್ತರ ಪ್ರದೇಶದಲ್ಲಿ ಹೂಡಿಕೆ ಹಾಗೂ ವ್ಯವಹಾರ ಅವಕಾಶಗಳ ಕುರಿತು ಉದ್ಯಮಿಗಳನ್ನು ಆಕರ್ಷಿಸುವ ಸಲುವಾಗಿ ರೋಡ್ ಶೋನಲ್ಲಿ ಭಾಗವಹಿಸಲು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರಾಜ್ಯಕ್ಕೆ ಬುಧವಾರ ಸಂಜೆ ಆಗಮಿಸಲಿದ್ದಾರೆ.

➡ಪುಟ ೪

ಕೇಂದ್ರ ಸಚಿವ ಜಾರ್ಜ್ ಕುರಿಯನ್ ರಾಜೀನಾಮೆ

• **ಕೊಟ್ಟಾಯಂ:** ಜಾರ್ಜ್ ಕುರಿಯನ್ ರಾಜ್ಯಸಭಾ ಅವಧಿ ಕೊನೆಗೊಂಡಿದ್ದು, ಮಂಗಳವಾರ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಕೇರಳದ ಹಿರಿಯ ಬಿಜೆಪಿ ನಾಯಕ ಕುರಿಯನ್ ಸಲ್ಲಿಸಿದ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ಸ್ವೀಕರಿಸಿದ್ದಾರೆ. ಕೇಂದ್ರ ಸಂಪುಟದಿಂದ ಹೊರಬಂದ ಕುರಿಯನ್ ಬಿಜೆಪಿ ಪಕ್ಷಕ್ಕಾಗಿ ಕೇರಳದಲ್ಲಿ ಸೇವೆ ಸಲ್ಲಿಸುವ ಸಾಧ್ಯತೆಯಿದೆ.

ಸದಾ ಸುದ್ದಿಯಲ್ಲಿರಲು ಪ್ರಿಯಾಂಕ್ ಖರ್ಗೆ ಆರೆಸ್ಸೆಸ್ ಬಗ್ಗೆ ಮಾತು: ಶೋಭಾ

• ಪುಟ ೭

ಭಾರತದತ್ತ ತೈಲ, ಅನಿಲ ಹೊತ್ತ 11 ನೌಕೆಗಳು

• ಪುಟ ೨

ಕತಾರ್ ಸ್ಫೋಟ: ಮೃತರಲ್ಲಿ 12 ಭಾರತೀಯರು

• ಪುಟ ೨

ನಮ್ಮ ಗೈಡ್ ಆನ್‌ಲೈನ್ ವೇದಿಕೆ ಆರಂಭಕ್ಕೆ ಚಿಂತನೆ

• ಪುಟ ೭



ಲಯನ್ಸ್ ರೇಂಜ್ ಮತ್ತೆ ಅಬ್ಬರ?

• ಪುಟ ೨

ಸುದ್ದಿ ಸಮಗ್ರ

ಎಫ್‌ಸಿಆರ್‌ಎ ಹೊಸ ನೀತಿ | ಎನ್‌ಜಿಒಗಳಿಗೆ ಕೇಂದ್ರದ ಬಿಗಿ ಕ್ರಮ

ವಿದೇಶಿ ದೇಣಿಗೆಯಲ್ಲಿ ಮತಾಂತರಕ್ಕೆ ಅಂಕುಶ

• **ಹೊಸದಿಲ್ಲಿ:** ವಿದೇಶಿ ದೇಣಿಗೆ ಬಳಸಿಕೊಂಡು ಮತಾಂತರ ಅಥವಾ ಮತಪ್ರಚಾರ ಚಟುವಟಿಕೆ ನಡೆಸುವುದಕ್ಕೆ ಕಡಿವಾಣ ಹಾಕಿರುವ ಕೇಂದ್ರ ಸರಕಾರ, ಸ್ವಯಂಸೇವಾ ಸಂಸ್ಥೆಗಳು ಹಾಗೂ ಇತರ ಸಂಘಟನೆಗಳಿಗೆ ವಿದೇಶಿ ನಿಧಿ ಸ್ವೀಕಾರ ಮತ್ತು ಬಳಕೆಯ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಿದೆ.

ಕೇಂದ್ರ ಗೃಹ ಸಚಿವಾಲಯವು ಸೋಮವಾರ ಗೆಜೆಟ್‌ನಲ್ಲಿ ಪ್ರಕಟಿಸಿರುವ ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ನಿಯಮಗಳು–2026ರ ಪ್ರಕಾರ, ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ವಲಯಗಳಿಗೆ ಸಂಬಂಧಿಸಿದ ಒಟ್ಟು 105 ನಿರ್ದಿಷ್ಟ ಚಟುವಟಿಕೆಗಳಿಗೆ ಮಾತ್ರ ವಿದೇಶಿ ಹಣ ಬಳಸಬಹುದಾಗಿದೆ. ಆದರೆ ಧಾರ್ಮಿಕ ಮತಾಂತರ,



ಮತಪ್ರಚಾರ ಅಥವಾ ಅನ್ಯಮತಕ್ಕೆ ಸೆಳೆಯುವ ಯಾವುದೇ ಚಟುವಟಿಕೆಗೆ ವಿದೇಶಿ ನಿಧಿ ಬಳಸುವಂತಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಲ್ಲಿ ವಿದೇಶಿ ಹಣ ಪಡೆಯಲು ಬಯಸುವ ಪ್ರತಿ ಸಂಘಟನೆಗೂ ಕೇಂದ್ರ ಗೃಹ ಸಚಿವಾಲಯದ ನೋಂದಣಿ ಅಥವಾ ಪೂರ್ವಾನುಮತಿ ಕಡ್ಡಾಯವಾಗಿದೆ. ಇನ್ನು ಮುಂದೆ ಪರವಾನಗಿಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಗಳು ತಾವು ವಿದೇಶಿ ಹಣವನ್ನು ಯಾವ ಉದ್ದೇಶಕ್ಕೆ ಮತ್ತು ಯಾವ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ವೆಚ್ಚ ಮಾಡಲಿವೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕಾಗಿದೆ.

➡ಪುಟ ೪



105
ಚಟುವಟಿಕೆಗಳಿಗೆ ಮಾತ್ರ ವಿದೇಶಿ ನಿಧಿ ಬಳಕೆ

- ಹಣದ ಉದ್ದೇಶ, ಕಾರ್ಯ ನಿರ್ವಹಿಸುವ ರಾಜ್ಯದ ವಿವರ ಕಡ್ಡಾಯ
- ನಿಷ್ಕ್ರಿಯ ಸಂಸ್ಥೆಗಳ ಪರವಾನಗಿ ರದ್ದತಿಗೆ ಕನಿಷ್ಠ ವೆಚ್ಚದ ಮಿತಿ

ಐದು ವಿಭಾಗಗಳಲ್ಲಿ 105 ಚಟುವಟಿಕೆ

ವಿದೇಶಿ ಹಣ ಪಡೆಯಲು ಅರ್ಜಿ ಸಲ್ಲಿಸುವ ಸಂಸ್ಥೆಗಳು ಹೊಸ ನಿಯಮಗಳಲ್ಲಿ ಪಟ್ಟಿ ಮಾಡಿರುವ ಚಟುವಟಿಕೆಗಳನ್ನಷ್ಟೇ ಆಯ್ಕೆ ಮಾಡಬೇಕು.

ಧಾರ್ಮಿಕ ಚಟುವಟಿಕೆಗಳು	16
ಸಾಂಸ್ಕೃತಿಕ ಚಟುವಟಿಕೆಗಳು	18
ಆರ್ಥಿಕ ಚಟುವಟಿಕೆಗಳು	19
ಶೈಕ್ಷಣಿಕ ಚಟುವಟಿಕೆಗಳು	22
ಸಾಮಾಜಿಕ ಚಟುವಟಿಕೆಗಳು	30


ಶೇ.75 ಬಳಕೆ ಬಳಿಕ ಮುಂದಿನ ಕಂತು

ಪೂರ್ವಾನುಮತಿಯಲ್ಲಿ ವಿದೇಶಿ ಹಣ ಪಡೆಯುವ ಸಂಸ್ಥೆಗಳಿಗೆ 2ನೇ ಅಥವಾ ನಂತರದ ಕಂತನ್ನು ಬಿಡುಗಡೆ ಮಾಡುವ ಮುನ್ನ ಹಿಂದಿನ ಕಂತಿನ ಕನಿಷ್ಠ ಶೇ.75ರಷ್ಟು ಹಣ ಬಳಸಿರುವುದು ಕಡ್ಡಾಯ.

➡ಪುಟ ೪

ಎರಡು ವರ್ಷದಲ್ಲಿ ಕನಿಷ್ಠ 10 ಲಕ್ಷ ರೂ. ವೆಚ್ಚ ಕಡ್ಡಾಯ

ನಿಷ್ಕ್ರಿಯ ಸ್ವಯಂಸೇವಾ ಸಂಸ್ಥೆಗಳು ವಿದೇಶಿ ದೇಣಿಗೆ ಪರವಾನಗಿಯನ್ನು ಅನಿರ್ದಿಷ್ಟವಾಗಿ ಉಳಿಸಿಕೊಳ್ಳುವುದನ್ನು ತಡೆಯಲು ಕೇಂದ್ರ ಸರಕಾರ ಕನಿಷ್ಠ ವೆಚ್ಚದ ಮಿತಿ ಜಾರಿಗೊಳಿಸಿದೆ. ಪರವಾನಗಿ



ನವೀಕರಿಸಿಕೊಳ್ಳಲು ಅಥವಾ ಪರವಾನಗಿ ರದ್ದಾಗುವುದನ್ನು ತಪ್ಪಿಸಿಕೊಳ್ಳಲು ಸಂಸ್ಥೆಯು ಕಳೆದ ಎರಡು ಹಣಕಾಸು ವರ್ಷಗಳಲ್ಲಿ ಕನಿಷ್ಠ 10 ಲಕ್ಷ ರೂ. ವಿದೇಶಿ ದೇಣಿಗೆಯನ್ನು ತಾನು ಆಯ್ಕೆ ಮಾಡಿಕೊಂಡಿರುವ ಅನುಮೋದಿತ ಚಟುವಟಿಕೆಗಳಿಗೆ ವೆಚ್ಚ ಮಾಡಿರಬೇಕು.

ವಿದೇಶಿಯರು ಪ್ರಮುಖ ಹುದ್ದೆಯಲ್ಲಿದ್ದರೆ ಪರವಾನಗಿ ಕಷ್ಟ

ಭಾರತೀಯ ಮೂಲದವರನ್ನು ಹೊರತುಪಡಿಸಿ ವಿದೇಶಿ ಪ್ರಜೆಗಳನ್ನು ಪ್ರಮುಖ ಪದಾಧಿಕಾರಿಗಳು ಅಥವಾ ನಿರ್ವಹಣಾ ಮುಖ್ಯಸ್ಥರನ್ನಾಗಿ ಹೊಂದಿರುವ ಸಂಘಟನೆಗಳನ್ನು ವಿದೇಶಿ ದೇಣಿಗೆ ನೋಂದಣಿ ಅಥವಾ ಪೂರ್ವಾನುಮತಿಗಾಗಿ ಸಾಮಾನ್ಯವಾಗಿ ಪರಿಗಣಿಸಲಾಗುವುದಿಲ್ಲ ಎಂದು ನಿಯಮಗಳಲ್ಲಿ ತಿಳಿಸಲಾಗಿದೆ.


➡ಪುಟ ೪

ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಭೇಟಿಯಾದ ರಾಜ್ಯ ನಾಯಕರ ತಂಡ

ಬಿಜೆಪಿ ವರಿಷ್ಠರಿಗೆ ಅಡ್ಡ ಮತದಾನದ ಮಾಹಿತಿ

• **ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿರುವ ವಿಷಯ ಈಗ ಬಿಜೆಪಿ ವರಿಷ್ಠರ ಅಂಗಳ ತಲುಪಿದೆ. ಬಿಜೆಪಿ ರಾಜ್ಯ ನಾಯಕರ ತಂಡ ಮಂಗಳವಾರ ದಿಲ್ಲಿಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಭೇಟಿಯಾಗಿದೆ.

ನಿತಿನ್ ನವೀನ್ ಅವರನ್ನು ಭೇಟಿ ಮಾಡಿದ ಬಿ.ವೈ. ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ, ಚುನಾವಣಾ ಜವಾಬ್ದಾರಿ ವಹಿಸಿದ್ದ



ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್ ಅವರು ವಸ್ತುಸ್ಥಿತಿ ವಿವರಿಸಿದ್ದಾರೆ. ಕಳೆದ ಗುರುವಾರ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಏಳು ಸ್ಥಾನಗಳ ದ್ವೈವಾರ್ಷಿಕ ಚುನಾವಣೆಯಲ್ಲಿ ಬಿಜೆಪಿಯಿಂದಲೂ ಅಡ್ಡ ಮತದಾನವಾಗಿದೆ. ಪಕ್ಷದ ಮೂರ್ನಾಲ್ಕು ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ಚಲಾಯಿಸಿದ್ದಾರೆ. ಈ ಕುರಿತು ಈ ತಂಡ ತಮ್ಮದೇ ಮೂಲದಿಂದ ಸಂಗ್ರಹಿಸಿದ ಪ್ರಾಥಮಿಕ ವರದಿಯನ್ನು ರಾಷ್ಟ್ರೀಯ ಅಧ್ಯಕ್ಷರಿಗೆ ಸಲ್ಲಿಸಿದೆ.

ಮೂವರ ತಂಡದಿಂದ ವರದಿ: ಅಡ್ಡ ಮತದಾನದ ಕುರಿತು ಕೂಲಂಕಷವಾಗಿ ಪರಿಶೀಲಿಸಿ, ಸಮಗ್ರ ವರದಿ ನೀಡಲು ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರ ನೇತೃತ್ವದಲ್ಲಿ ರಾಜ್ಯಾಧ್ಯಕ್ಷರು ಮೂವರ ತಂಡ ರಚಿಸಿದ್ದಾರೆ.

➡ಪುಟ ೪

“ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯವರಿಂದ ಅಡ್ಡ ಮತದಾನ ವಿಚಾರಕ್ಕೆ ಸಂಬಂಧಿಸಿ ಪಕ್ಷ ಸಮಿತಿ ರಚಿಸಿದೆ. ಇದು ಹಿರಿಯರ ಮತ್ತು ಹೈಕಮಾಂಡ್ ಗಮನಕ್ಕೆ ಬಂದಿದೆ. ತಾಯಿಗೆ ಮೋಸ ಮಾಡುವಂಥ ಕೆಲಸ ಮಾಡಿದವರನ್ನು ಕ್ಷಮಿಸಬಾರದು. ಇಬ್ಬರು ಶಾಸಕರು ಮುಕ್ತವಾಗಿ ಕಾಂಗ್ರೆಸ್ ಬೆಂಬಲಿಸಿದ್ದು, ಅವರು ಪಕ್ಷ ಬಿಟ್ಟು ಹೊರಹೋಗಲಿ.

■ **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ



ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ಕೊಟ್ಟಿದ್ದೇವೆ: ವಿಜಯೇಂದ್ರ

ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲವು ಶಾಸಕರು ಅಡ್ಡ ಮತದಾನ ಮಾಡಿ ವಿಪ್ ಉಲ್ಲಂಘಿಸಿದ ಬಗ್ಗೆ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ವಿಸ್ತೃತ ಮಾಹಿತಿ ನೀಡಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ. ನಿತಿನ್ ನವೀನ್ ಅವರ ಭೇಟಿಯ ಬಳಿಕ ಮಂಗಳವಾರ ಹೊಸದಿಲ್ಲಿಯಲ್ಲಿ ಮಾತನಾಡಿದ ಅವರು ಪ್ರಶ್ನೆಗೆ ಉತ್ತರಿಸಿದ್ದಾರೆ. ಅಧ್ಯಕ್ಷರಿಗೂ ಅವರದೇ ಆದ ಮಾಹಿತಿ ಇತ್ತು. ಈ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಯಾರು ಅನ್ಯಾಯ ಮಾಡಿದ್ದಾರೋ, ದ್ರೋಹ ಎಸಗಿದ್ದಾರೋ ಅವರ ವಿರುದ್ಧ ಕಠಿಣ ನಿರ್ಣಯ ಮಾಡಲೇಬೇಕಾಗುತ್ತದೆ ಎಂದು ಹೇಳಿದ್ದಾರೆ.

➡ಪುಟ ೪





ರಾಷ್ಟ್ರಪತಿ ಭವನದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಖ್ಯಾತ ಬಹುಭಾಷಾ ನಟ ಮಮ್ಮುಟ್ಟಿ, ಖ್ಯಾತ ಗಾಯಕಿ ಅಲ್ಕಾ ಯಾಜ್ಞಿಕ್ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು.

ಒಕ್ಕಲೆಬ್ಬಿಸಬಾರದೆಂಬುದು ಸರ್ಕಾರದ ನಿಲುವು: ಪರಮೇಶ್ವರ್

ರೈತರ ವಿಶ್ವಾಸದೊಂದಿಗೇ ಟೌನ್‌ಶಿಪ್

• **ಬೆಂಗಳೂರು:** ಬಿಡದಿ ಟೌನ್‌ಶಿಪ್ ವಿಚಾರವಾಗಿ ರೈತರನ್ನು ಒಕ್ಕಲೆಬ್ಬಿಸುವುದು ಬೇಡ ಎನ್ನುವುದು ನಮ್ಮ ಸರ್ಕಾರದ ಉದ್ದೇಶವೂ ಆಗಿದೆ. ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರ ಪೂರ್ಣ ಒಪ್ಪಿಗೆಯ ಮೇಲೆ ಯೋಜನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಎಂದು ಉಪ ಮುಖ್ಯಮಂತ್ರಿ



ಡಾ.ಜಿ.ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ರೈತರು ನಮ್ಮದು ಒಣ ಭೂಮಿ ಇದೆ. ಇದರಿಂದ ನಮಗೆ ಅನುಕೂಲ ಇಲ್ಲ. ಈ ಭೂಮಿಯನ್ನು ನಾವು ಕೊಡಲು ಸಿದ್ಧರಿದ್ದೇವೆ. ನಮಗೆ ಹೆಚ್ಚು ಹಣ ಕೊಡಿ ಎಂದು ಕೇಳುತ್ತಾರೆ. ನಾವು ಅಂಥವರಿಗೆ ಅವರ ಬೇಡಿಕೆ ನೋಡಿ ಸಮಾಧಾನಕರ ಪರಿಹಾರದ ಹಣ ನೀಡಿದರೆ ಅವರು ಬೇರೆ ಕಡೆ ಜಮೀನು ತೆಗೆದುಕೊಳ್ಳುತ್ತಾರೆ. ಅವರು ಕೃಷಿಯಲ್ಲಿ ಮುಂದುವರಿಯುತ್ತಾರೆ. ನಾವು ಈ ದೃಷ್ಟಿಕೋನದಲ್ಲಿ ಮುಂದುವರಿಯುತ್ತಿದ್ದೇವೆ. ಆದರೆ ಅವರು ರಾಜಕೀಯ ಮಾಡಲು ಹೊರಟರೆ ಕಷ್ಟ ಎಂದರು. ಟೌನ್‌ಶಿಪ್ ಬಗ್ಗೆ ಈಗಾಗಲೇ ಸಂಪುಟದಲ್ಲಿ ಚರ್ಚೆ ಆಗಿದೆ.

➡ಪುಟ ೪

“ಕುಮಾರಸ್ವಾಮಿ ಅವರು ರಾಜಕೀಯ ಬಿಟ್ಟು, ಸಲಹೆ ನೀಡಲಿ. ಆಗ ನಾವು ಸಹ ಅವರ ಅನುಮಾನಗಳಿಗೆ, ಆರೋಪಗಳಿಗೆ ಉತ್ತರಿಸುತ್ತೇವೆ. ಈ ತೀರ್ಮಾನ ಕೈಗೊಳ್ಳಲು ಕಾರಣವೇನು ಎಂಬುದನ್ನು ತಿಳಿಸಲು ಸರ್ಕಾರ ಸಿದ್ಧವಿದೆ. ಆದರೆ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದರೆ ರಾಜಕೀಯ ಕಾರಣಕ್ಕಾಗಿ ಮಾಡುತ್ತೀರಿ ಎಂದರ್ಥ

■ **ಡಾ.ಜಿ.ಪರಮೇಶ್ವರ್,** ಉಪ ಮುಖ್ಯಮಂತ್ರಿ

ಮತ್ತೋರ್ವ ಶಂಕಿತ ಉಗ್ರನ ಸೆರೆ

• **ದಾವಣಗೆರೆ:** ಪೇಂಟಿಂಗ್ ಕೆಲಸ ಮಾಡುವ ನೆಪದಲ್ಲಿ ಜಿಲ್ಲೆಯ ಹರಿಹರ ತಾಲೂಕು ಬನ್ನಿಕೋಡು ಗ್ರಾಮದಲ್ಲಿ ಕಳೆದ 20 ದಿನಗಳಿಂದ ವಾಸವಾಗಿದ್ದ ಶಂಕಿತ ಉಗ್ರನನ್ನು ಮಂಗಳವಾರ ಬೆಳಗಿನ ಜಾವ ಪೊಲೀಸರು ಬಂಧಿಸಿದ್ದಾರೆ. ಉತ್ತರ ಪ್ರದೇಶ ರಾಜ್ಯದ ಸಹರಾನಪುರ ಜಿಲ್ಲೆ ಗಂಗೋಹ್ ತಾಲೂಕು ಲಖ್ನೋತಿ ಗ್ರಾಮ ಮೂಲದ ಸೊಹೇಲ್ ತಂದೆ ಲಿಯಾಖತ್(22) ಬಂಧಿತ ಶಂಕಿತ ಉಗ್ರ. ಸಮೀಪದ ಬೆಳ್ಳೂಡಿಯ ಕಾರ್ಖಾನೆಯೊಂದರಲ್ಲಿ ಉತ್ತರ ಪ್ರದೇಶದ ಏಳೆಂಟು ಕೆಲಸಗಾರರು ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ರೆಡ್ ಆಕ್ಸೈಡ್ ಪೇಂಟಿಂಗ್ ಕೆಲಸ ಮಾಡುತ್ತಿದ್ದ ಈ ಕಾರ್ಮಿಕರ ಪೈಕಿ ಓರ್ವನ ಸಹೋದರನಾಗಿರುವ ಸೊಹೇಲ್, ಬನ್ನಿಕೋಡು ಗ್ರಾಮದ ಹೊರ ವಲಯದಲ್ಲಿ ಏನೂ ಅರಿಯದವನಂತೆ ವಾಸವಾಗಿದ್ದ. ಈತನ ಜನ್ಮ ಜಾಲಾಡಿದ್ದ ಕೇಂದ್ರ ಗುಪ್ತಚರ ಇಲಾಖೆ ಮಾಹಿತಿ ಆಧರಿಸಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇನ್ಸ್ಟಾಗ್ರಾಂನಲ್ಲಿ ಪಾಕಿಸ್ತಾನ ಉಗ್ರರ ಜತೆಗೆ ನಿರಂತರ ಸಂಪರ್ಕ, ಪಾಕ್ ಮೂಲದ ಭಾರತ ವಿರೋಧಿ ವಾಟ್ಸಪ್ ಗ್ರೂಪ್ ಆದ ರಾಣಾದಲ್ಲಿ ಸೊಹೇಲ್ ಸಕ್ರಿಯನಾಗಿದ್ದ.

➡ಪುಟ ೪

ವಾಯುಪಡೆ ತಿರುಗೇಟು | ಪಾಕ್ ಸುಳ್ಳು ಸಾಬೀತು

ಭಾರತದ 36 ರಾಫೆಲ್ ಸುರಕ್ಷಿತ



• **ಹೊಸದಿಲ್ಲಿ:** ಆಪರೇಷನ್ ಸಿಂದೂರ ಕಾರ್ಯಾಚರಣೆ ವೇಳೆ ಭಾರತದ ಹಲವು ರಾಫೆಲ್ ಯುದ್ಧವಿಮಾನಗಳನ್ನು ಹೊಡೆದುರುಳಿಸಿದ್ದೇವೆ ಎಂಬ ಪಾಕಿಸ್ತಾನದ ನಿರಂತರ ಪ್ರಚಾರವನ್ನು ಭಾರತೀಯ ವಾಯುಪಡೆ(ಐಎಎಫ್)ಯ ಅಧಿಕೃತ ದಾಖಲೆಯೊಂದು ಮತ್ತೊಮ್ಮೆ ಸುಳ್ಳಾಗಿಸಿದೆ. ಭಾರತದ ಬಳಿ ಇರುವ ಎಲ್ಲ 36 ರಾಫೆಲ್ ಯುದ್ಧವಿಮಾನಗಳೂ ಸೇವೆಯಲ್ಲಿವೆ ಎಂಬುದು ವಾಯುಪಡೆ ಹೊರಡಿಸಿರುವ ಪ್ರಸ್ತಾವನಾ ಕೋರಿಕೆಯಿಂದ ದೃಢಪಟ್ಟಿದೆ.

ವಾಯುಪಡೆ ಪ್ರಧಾನ ಕಚೇರಿ ಜೂನ್‌ನಲ್ಲಿ ಹೊರಡಿಸಿರುವ ಪ್ರಸ್ತಾವನಾ ಕೋರಿಕೆ(ಆರ್‌ಎಫ್‌ಪಿ) ಯಲ್ಲಿ ಎಲ್ಲ 36 ರಾಫೆಲ್ ವಿಮಾನಗಳಿಗೆ 5 ತಿಂಗಳ ಮಧ್ಯಂತರ ನಿರ್ವಹಣಾ ನೆರವು ಒದಗಿಸಲು ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಭಾರತವು 2016ರಲ್ಲಿ ಫ್ರಾನ್ಸ್ ಜತೆ ಮಾಡಿಕೊಂಡ ಒಪ್ಪಂದದಲ್ಲಿ ಒಟ್ಟು 36 ರಫೇಲ್ ವಿಮಾನಗಳನ್ನು ಖರೀದಿಸಿತ್ತು.

➡ಪುಟ ೪

- ಭಾರತದ ಎಲ್ಲ 36 ರಾಫೆಲ್ ಯುದ್ಧವಿಮಾನಗಳೂ ಸೇವೆಯಲ್ಲಿ
- 36 ವಿಮಾನಗಳ ನಿರ್ವಹಣೆಗೆ ವಾಯುಪಡೆಯಿಂದ ಪ್ರಸ್ತಾವನಾ ಆಹ್ವಾನ
- ಆಪರೇಷನ್ ಸಿಂದೂರದಲ್ಲಿ ರಾಫೆಲ್ ನಷ್ಟವಾಗಿದೆ ಎಂಬ ಪಾಕ್ ವಾದ ಸುಳ್ಳು
- ಐದು ತಿಂಗಳಲ್ಲಿ 2,250 ಗಂಟೆಗಳ ಹಾರಾಟ ಯೋಜನೆ
- ದೀರ್ಘಾವಧಿಯ ನಿರ್ವಹಣಾ ಒಪ್ಪಂದದವರೆಗೆ ಮಧ್ಯಂತರ ವ್ಯವಸ್ಥೆ
- ಪಾಕಿಸ್ತಾನದ ಅಪಪ್ರಚಾರಕ್ಕೆ ಅಧಿಕೃತ ದಾಖಲೆ ತಿರುಗೇಟು
- ಇನ್ನೂ 114 ರಾಫೆಲ್ ಖರೀದಿಗೆ ಭಾರತದ ಚಿಂತನೆ
- 18 ವಿಮಾನ ನೇರ ಖರೀದಿ, ಉಳಿದವನ್ನು ಭಾರತದಲ್ಲೇ ತಯಾರಿಸುವ ಯೋಜನೆ

ಎಲ್ಲ ಕಡತಗಳೂ ದೇಶದ ಜನಹಿತಕ್ಕೆ ಅಗತ್ಯ: ಮೋದಿ

• **ಹೊಸದಿಲ್ಲಿ:** ಪ್ರತಿ ಕಡತವೂ ದೇಶದ ಅಸಂಖ್ಯ ನಾಗರಿಕರ ಬದುಕು, ಜನರ ಬವಣೆಗಳು, ಆಶೋತ್ತರಗಳನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ ಜನಹಿತಕ್ಕೆ ಪ್ರಾಧಾನ್ಯತೆಯಿರುವಂತೆ ಯಾವುದೇ ನಿರ್ಧಾರ ಕೈಗೊಳ್ಳುವಂತೆ ಪ್ರಧಾನಿ ಮೋದಿ ಯುವ ಐಎಎಸ್ ಅಧಿಕಾರಿಗಳಿಗೆ ಕರೆ ನೀಡಿದ್ದಾರೆ. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಹಾನುಭೂತಿ, ಸ್ಪಂದನೆ, ಸಮಸ್ತರ ಒಳಗೊಳ್ಳುವಿಕೆ ಯಂತಹ ಅಂಶಗಳಿಗೆ ಪ್ರಾಮುಖ್ಯತೆ ಕೊಡುವಂತೆಯೂ ಪ್ರಧಾನಿ ಸಲಹೆ ಮಾಡಿದ್ದಾರೆ. ಅಭಿವೃದ್ಧಿಗೆ ಸಂಬಂಧಿತ ಪ್ರಮುಖ ಸವಾಲುಗಳನ್ನು ಪ್ರತ್ಯೇಕವಾಗಿ ಬಗೆಹರಿಸಲಾಗದು. ಅರ್ಥಪೂರ್ಣ ಅಂತಿಮ ಫಲಿತಾಂಶಗಳನ್ನು ಪಡೆಯಲು ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಶ್ರಮಿಸುವುದು ಆತ್ಯವಶ್ಯ ಎಂದರು.

• ವಿವರ ಪುಟ ೨




ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮ ಶ್ರೀ ಪ್ರಶಸ್ತಿ ಸ್ವೀಕರಿಸಿದ ಖ್ಯಾತ ಬಹುಭಾಷಾ ನಟರಾದ ಆರ್.ಮಾಧವನ್ ಮತ್ತು ಗದ್ದೆ ಬಾಬು ರಾಜೇಂದ್ರ ಪ್ರಸಾದ್.



13 ವರ್ಷದಿಂದ ವಹಿವಾಟಿಲ್ಲದ 118 ವರ್ಷದ ಕಲ್ಕತ್ತಾ | ಷೇರುಪೇಟೆಗೆ ಮರುಜೀವ ನೀಡಲು ಬಂಗಾಳ ಸರ್ಕಾರ ಸಿದ್ಧತೆ

ಸುದ್ದಿ ಸಮಗ್ರ

ಲಯನ್ಸ್ ರೇಂಜ್ ಮತ್ತೆ ಅಬ್ಬರ?

ಒಂದು ಕಾಲದಲ್ಲಿ ಮುಂಬೈನ ದಲಾಲ್ ಸ್ಟ್ರೀಟ್‌ಗೆ ಸೆಡ್ಡುಹೊಡೆದು ಭಾರತದ ಷೇರು ವಹಿವಾಟಿನ ದಿಕ್ಕು ನಿರ್ಧರಿಸುತ್ತಿದ್ದ ಕೋಲ್ಕತಾದ ಲಯನ್ಸ್ ರೇಂಜ್ ಮತ್ತೆ ಚಟುವಟಿಕೆಯಿಂದ ಕಂಗೊಳಿಸಲಿದೆಯೇ? ಕಳೆದ 13 ವರ್ಷಗಳಿಂದ ಸ್ವಂತ ವೇದಿಕೆಯಲ್ಲಿ ಷೇರು ವಹಿವಾಟಿಲ್ಲದೆ, ಅಸ್ತಿತ್ವದ ಕೊನೆಯ ಘಟ್ಟ ತಲುಪಿರುವ 118 ವರ್ಷಗಳಷ್ಟು ಹಳೆಯ ಕಲ್ಕತ್ತಾ ಷೇರು ವಿನಿಮಯ ಕೇಂದ್ರಕ್ಕೆ ಮರುಜೀವ ನೀಡಲು ಪಶ್ಚಿಮ ಬಂಗಾಳ ಸರ್ಕಾರ ಮುಂದಾಗಿದೆ. ರಾಜ್ಯ ಹಣಕಾಸು ಸಚಿವ ಸ್ವಪನ್ ದಾಸ್‌ಗುಪ್ತ ಅವರು ತಮ್ಮ ಚೊಚ್ಚಲ ಬಜೆಟ್‌ನಲ್ಲಿ ಈ ಐತಿಹಾಸಿಕ ಷೇರುಪೇಟೆಯ ಪುನರುಜ್ಜೀವನಕ್ಕೆ ಸರ್ಕಾರ ಬೆಂಬಲ ನೀಡುವುದಾಗಿ ಪ್ರಕಟಿಸಿದ್ದಾರೆ.

ಪೂರ್ವ ಭಾರತಕ್ಕೊಂದು ಸ್ವಂತ ಬಂಡವಾಳ ವೇದಿಕೆ

ಪ್ರಸ್ತುತ ದೇಶದ ಷೇರು ವಹಿವಾಟು ಬಹುತೇಕ ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ಮತ್ತು ಬಾಂಬೆ ಷೇರು ವಿನಿಮಯ ಕೇಂದ್ರಗಳ ಸುತ್ತ ಕೇಂದ್ರೀಕೃತವಾಗಿದೆ. ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ಜಾರ್ಖಂಡ್, ಅಸ್ಸಾಂ ಹಾಗೂ ಈಶಾನ್ಯ ರಾಜ್ಯಗಳ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಷೇರು ಮಾರುಕಟ್ಟೆ ಮೂಲಕ ಬಂಡವಾಳ ಸಂಗ್ರಹಿಸಬೇಕಾದರೆ ರಾಷ್ಟ್ರೀಯ ವಿನಿಮಯ ಕೇಂದ್ರಗಳನ್ನೇ ಅವಲಂಬಿಸಬೇಕಾಗಿದೆ. ಕಲ್ಕತ್ತಾ ಷೇರುಪೇಟೆ ಹೊಸ ರೂಪದಲ್ಲಿ ಕಾರ್ಯಾರಂಭ ಮಾಡಿದರೆ ಪೂರ್ವ ಭಾರತದ ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಆರಂಭಿಕ ಹಂತದ ಕಂಪನಿಗಳು ಹಾಗೂ ಪ್ರಾದೇಶಿಕ ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ಹತ್ತಿರದಲ್ಲೇ ಬಂಡವಾಳ ಸಂಗ್ರಹಿಸುವ ವೇದಿಕೆ ಸಿಗಬಹುದು ಎಂಬುದು ರಾಜ್ಯ ಸರ್ಕಾರದ ಲೆಕ್ಕಾಚಾರ.

ಹಗರಣದ ಹೊಡೆತ; ರಾಷ್ಟ್ರೀಯ ಪೇಟೆಗಳತ್ತ ವಲಸೆ

ಕಲ್ಕತ್ತಾ ಷೇರುಪೇಟೆಯ ಕುಸಿತಕ್ಕೆ ಒಂದೇ ಕಾರಣವಿರಲಿಲ್ಲ. ತಂತ್ರಜ್ಞಾನದ ಬೆಳವಣಿಗೆ, ರಾಷ್ಟ್ರೀಯ ಷೇರುಪೇಟೆಯ ವಿಸ್ತರಣೆ, ವೇಗದ ಗಣಕೀಕೃತ ವಹಿವಾಟು, ಹೆಚ್ಚಿನ ದ್ರವ್ಯತೆ ಮತ್ತು ದೇಶಾದ್ಯಂತ ಒಂದೇ ವೇದಿಕೆಯ ಮೂಲಕ ವಹಿವಾಟು ಮಾಡುವ ಸೌಲಭ್ಯವು ಪ್ರಾದೇಶಿಕ ಷೇರುಪೇಟೆಗಳ ಅಸ್ತಿತ್ವವನ್ನೇ ಪ್ರಶ್ನಿಸುವಂತೆ ಮಾಡಿತು. 2001ರಲ್ಲಿ ಷೇರು ದಲ್ಲಾಳಿ ಕೇತನ್ ಪಾರೇಖ್‌ಗೆ ಸಂಬಂಧಿಸಿದ ಸುಮಾರು 120 ಕೋಟಿ ರೂ. ಮೊತ್ತದ ಪಾವತಿ ಬಿಕ್ಕಟ್ಟು ಕಲ್ಕತ್ತಾ ಷೇರುಪೇಟೆಗೆ ದೊಡ್ಡ ಹೊಡೆತ ನೀಡಿತು. ಇದರಿಂದ ವಹಿವಾಟು ಸ್ಥಗಿತಗೊಂಡು ಹೂಡಿಕೆದಾರರ ವಿಶ್ವಾಸಕ್ಕೂ ಧಕ್ಕೆ ಉಂಟಾಯಿತು. ನಂತರ ಸಂಸ್ಥೆಯನ್ನು ಪರಸ್ಪರ ಮಾಲೀಕತ್ವದಿಂದ ಬೇರ್ಪಡಿಸಿ ವೃತ್ತಿಪರ ಆಡಳಿತದಡಿ ತರಲಾಯಿತಾದರೂ ಹಿಂದಿನ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗಲಿಲ್ಲ.

ಮರದ ನೆರಳಿನಿಂದ ಗಣಕ ಪರದೆಯವರೆಗೆ

ಕೋಲ್ಕತಾದ ಷೇರು ವಹಿವಾಟಿನ ಇತಿಹಾಸವು ಕಲ್ಕತ್ತಾ ಷೇರು ವಿನಿಮಯ ಕೇಂದ್ರ ಸ್ಥಾಪನೆಯಾದ 1908ಕ್ಕಿಂತಲೂ ಹಳೆಯದು. 1836ರ ವೇಳೆಗೆ ನಗರದ ನೇತಾಜಿ ಸುಭಾಷ್ ರಸ್ತೆಯ ಪ್ರದೇಶದಲ್ಲಿದ್ದ ಬೇವಿನ ಮರದ ಸಮೀಪ ದಲ್ಲಾಳಿಗಳು ಸೇರಿ ಷೇರು ಮತ್ತು ಸಾಲಪತ್ರಗಳ ವಹಿವಾಟು ನಡೆಸುತ್ತಿದ್ದರು. ಅವರಿಗೆ ಆಗ ನಿಗದಿತ ಕಚೇರಿ, ನಿಯಮಾವಳಿ ಅಥವಾ ಸಂಘಟಿತ ವ್ಯವಸ್ಥೆ ಇರಲಿಲ್ಲ. 1839ರ ವೇಳೆಗೆ ಕೋಲ್ಕತಾದ ಪತ್ರಿಕೆಗಳಲ್ಲಿ ಯೂನಿಯನ್ ಬ್ಯಾಂಕ್, ಆಗ್ರಾ ಬ್ಯಾಂಕ್ ಮತ್ತು ಕೆಲವು ವಾಣಿಜ್ಯ ಸಂಸ್ಥೆಗಳ ಷೇರು ಬೆಲೆಗಳು ಪ್ರಕಟವಾಗುತ್ತಿದ್ದವು. ಕಂಪನಿಗಳ ಕಾಯ್ದೆ ಮತ್ತು ಸೀಮಿತ ಹೊಣೆಗಾರಿಕೆಯ ತತ್ವ ಜಾರಿಗೆ ಬಂದ ಬಳಿಕ ಷೇರುಗಳಲ್ಲಿ ಹೂಡಿಕೆ ಮಾಡುವ ಆಸಕ್ತಿ ವೇಗವಾಗಿ ಬೆಳೆಯಿತು. ತೆರೆದ ಜಾಗದಲ್ಲಿ ಬಿಸಿಲು, ಮಳೆಯ ನಡುವೆಯೇ ವಹಿವಾಟು ನಡೆಸುತ್ತಿದ್ದ ದಲ್ಲಾಳಿಗಳು ಕೊನೆಗೆ ಸಂಘಟಿತರಾಗಿ 1908ರ ಮೇ ತಿಂಗಳಲ್ಲಿ ಚೀನಾ ಬಜಾರ್ ರಸ್ತೆಯ 2ನೇ ಸಂಖ್ಯೆಯ ಕಟ್ಟಡದಲ್ಲಿ ಕಲ್ಕತ್ತಾ ಸ್ಟಾಕ್ ಎಕ್ಸ್‌ಚೇಂಜ್ ಅಸೋಸಿಯೇಷನ್ ಸ್ಥಾಪಿಸಿದರು. ಆರಂಭದಲ್ಲಿ 150 ಸದಸ್ಯರು ಇದರಲ್ಲಿದ್ದರು. 1923ರ ಜೂನ್ 7ರಂದು ಇದು ಸೀಮಿತ ಹೊಣೆಗಾರಿಕೆಯ ಸಂಸ್ಥೆಯಾಗಿ ನೋಂದಣಿಯಾಯಿತು. 1928ರಲ್ಲಿ ಕೋಲ್ಕತಾದ ವ್ಯಾಪಾರ ಕೇಂದ್ರವಾಗಿದ್ದ ಲಯನ್ಸ್ ರೇಂಜ್‌ನ 7ನೇ ಸಂಖ್ಯೆಯಲ್ಲಿ ಈಗಿನ ಐತಿಹಾಸಿಕ ಕಟ್ಟಡ ನಿರ್ಮಾಣವಾಯಿತು. 1980ರ ಏಪ್ರಿಲ್ 14ರಿಂದ ಕೇಂದ್ರ ಸರಕಾರ ಕಲ್ಕತ್ತಾ ಷೇರುಪೇಟೆಗೆ ಶಾಶ್ವತ ಮಾನ್ಯತೆ ನೀಡಿತು. ದಲ್ಲಾಳಿಗಳು ಕೂಗಿ ಬೆಲೆ ನಿಗದಿಪಡಿಸುವ ಹಳೆಯ ಬಹಿರಂಗ ವಹಿವಾಟು ಪದ್ಧತಿಯನ್ನು 1997ರಲ್ಲಿ ಕೈಬಿಟ್ಟು, ಸಂಪೂರ್ಣ ಗಣಕೀಕೃತ ಸಿಸ್ಟಾರ್ ವಹಿವಾಟು ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಅಂದಿನ ಮುಖ್ಯಮಂತ್ರಿ ಜ್ಯೋತಿ ಬಸು ಈ ವ್ಯವಸ್ಥೆಯನ್ನು ಉದ್ಘಾಟಿಸಿದ್ದರು. 1997–98ರಲ್ಲಿ ಷೇರುಪೇಟೆಯ ವಾರ್ಷಿಕ ವಹಿವಾಟು ಸುಮಾರು 1.78 ಲಕ್ಷ ಕೋಟಿ ರೂ. ತಲುಪಿತ್ತು. ಆ ಕಾಲದಲ್ಲಿ 3,500ಕ್ಕೂ ಹೆಚ್ಚು ಕಂಪನಿಗಳು ಇಲ್ಲಿ ನೋಂದಣಿಯಾಗಿದ್ದವು. ಕೆಲವು ದಿನಗಳಲ್ಲಿ ಇದರ ವಹಿವಾಟು ಬಾಂಬೆ ಷೇರುಪೇಟೆಯನ್ನೂ ಮೀರಿತ್ತು ಎನ್ನುವುದು ಇದರ ಗತವೈಭವಕ್ಕೆ ಸಾಕ್ಷಿ.

ಪುನರುಜ್ಜೀವನಕ್ಕೆ ಅಡ್ಡಿಯಾಗಿರುವ ನಿರ್ಗಮನ ಅರ್ಜಿ

ಬಂಗಾಳ ಸರಕಾರ ಕಲ್ಕತ್ತಾ ಷೇರುಪೇಟೆಗೆ ಮರುಜೀವ ನೀಡುವುದಾಗಿ ಘೋಷಿಸಿರುವ ಹೊತ್ತಿನಲ್ಲೇ, ಷೇರುಪೇಟೆ ಸಂಸ್ಥೆಯು ಸೆಬಿಗೆ ಸಲ್ಲಿಸಿರುವ ಸ್ವಯಂ ನಿರ್ಗಮನ ಅರ್ಜಿ ಇನ್ನೂ ಪರಿಶೀಲನೆಯಲ್ಲಿದೆ. ಸೆಬಿಯ 2012ರ ಪ್ರಾದೇಶಿಕ ಷೇರು ವಿನಿಮಯ ಕೇಂದ್ರಗಳ ನಿರ್ಗಮನ ನೀತಿಯ ಪ್ರಕಾರ, ಸ್ವಂತ ವೇದಿಕೆಯಲ್ಲಿ ವಾರ್ಷಿಕವಾಗಿ ಕನಿಷ್ಠ 1,000 ಕೋಟಿ ರೂ. ವಹಿವಾಟು ಸಾಧಿಸಲಾಗದ ವಿನಿಮಯ ಕೇಂದ್ರಗಳು ಸ್ವಯಂ ಮಾನ್ಯತೆ ತ್ಯಜಿಸಬಹುದು. ಅಗತ್ಯ ಮಟ್ಟದ ವಹಿವಾಟು ನಿರಂತರವಾಗಿ ಸಾಧಿಸಲು ವಿಫಲವಾದರೆ ಸೆಬಿಯು ಕಡ್ಡಾಯ ನಿರ್ಗಮನ ಪ್ರಕ್ರಿಯೆ ಆರಂಭಿಸಬಹುದಾಗಿದೆ. ಪ್ರತ್ಯೇಕ ನಿಯಮದಡಿ ಷೇರು ವಿನಿಮಯ ಕೇಂದ್ರವು ಕನಿಷ್ಠ 100 ಕೋಟಿ ರೂ. ನಿವ್ವಳ ಮೌಲ್ಯ ಹೊಂದಿರಬೇಕಾಗಿದೆ. ಈ ನಿಯಮಗಳನ್ನು ಪಾಲಿಸಲು ವಿಫಲವಾದ ಹಿನ್ನೆಲೆಯಲ್ಲಿ ಕಲ್ಕತ್ತಾ ಷೇರುಪೇಟೆಯ ಸ್ವಂತ ವಹಿವಾಟು ವೇದಿಕೆ 2013ರ ಏಪ್ರಿಲ್‌ನಿಂದ ಸ್ಥಗಿತಗೊಂಡಿತು. ಸೆಬಿಯ ಕ್ರಮವನ್ನು ಪ್ರಶ್ನಿಸಿ ಸಂಸ್ಥೆಯು ಕಲ್ಕತ್ತಾ ಹೈಕೋರ್ಟ್ ಮೆಟ್ಟಿಲೇರಿತ್ತು. 2024ರ ಫೆಬ್ರವರಿ ಮತ್ತು ಆಗಸ್ಟ್‌ನಲ್ಲಿ ಹೈಕೋರ್ಟ್ ನೀಡಿದ ಆದೇಶಗಳಲ್ಲಿ, ನಿಯಮಗಳಿಗೆ ಅನುಗುಣವಾದ ತೀರುವಳಿ ನಿಗಮವನ್ನು ಸ್ಥಾಪಿಸಲು ಅಥವಾ ಈಗಿರುವ ಮಾನ್ಯತೆ ಪಡೆದ ತೀರುವಳಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಕಲ್ಕತ್ತಾ ಷೇರುಪೇಟೆಗೆ ಕಾಲಾವಕಾಶ ನೀಡಲಾಗಿತ್ತು. ಅಗತ್ಯ ನಿವ್ವಳ ಮೌಲ್ಯ ಮತ್ತು ತೀರುವಳಿ ವ್ಯವಸ್ಥೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಂಸ್ಥೆಗೆ ಸಾಧ್ಯವಾಗಲಿಲ್ಲ. ಇದಾದ ಬಳಿಕ 2025ರ ಫೆಬ್ರವರಿ 18ರಂದು ಷೇರು ವಿನಿಮಯ ವ್ಯವಹಾರದಿಂದ ಸ್ವಯಂ ನಿರ್ಗಮಿಸಲು ಸಂಸ್ಥೆಯು ಸೆಬಿಗೆ ಅಧಿಕೃತ ಅರ್ಜಿ ಸಲ್ಲಿಸಿತು. 2026ರ ಮಾರ್ಚ್‌ನಲ್ಲಿ ಕೇಂದ್ರ ಹಣಕಾಸು ಸಚಿವಾಲಯ ಲೋಕಸಭೆಗೆ ನೀಡಿದ ಉತ್ತರದ ಪ್ರಕಾರ, ಈ ಅರ್ಜಿ ಇನ್ನೂ ಸೆಬಿಯ ಪರಿಶೀಲನೆಯಲ್ಲಿದೆ.



ಯುವ ಐಎಎಸ್ ಅಧಿಕಾರಿಗಳಿಗೆ ಪ್ರಧಾನಿ

ಎಲ್ಲಾ ಕಡತ ದೇಶದ ಜನಹಿತಕ್ಕೆ ಪ್ರಮುಖ

ಹೊಸದಿಲ್ಲಿ: ಎಲ್ಲಾ ಕಡತಗಳೂ ದೇಶದ ಅಸಂಖ್ಯ ನಾಗರಿಕರ ಬದುಕು, ಜನರ ಬವಣೆಗಳು, ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ. ಹಾಗಾಗಿ ಜನಹಿತಕ್ಕೆ ಪ್ರಾಧಾನ್ಯತೆಯಿರುವ ರೀತಿ ಯಾವುದೇ ನಿರ್ಧಾರ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಯುವ ಐಎಎಸ್ ಅಧಿಕಾರಿಗಳಿಗೆ ಮಂಗಳವಾರ ಕರೆ ನೀಡಿದ್ದಾರೆ. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಹಾನುಭೂತಿ, ಸ್ಪಂದನೆ, ಸಮಸ್ತರ ಒಳಗೊಳ್ಳುವಿಕೆಯಂತಹ ಅಂಶಗಳಿಗೆ ಪ್ರಾಮುಖ್ಯತೆ ಕೊಡುವಂತೆಯೂ ಪ್ರಧಾನಿ ಸಲಹೆ ಮಾಡಿದ್ದಾರೆ.



ಅಭಿವೃದ್ಧಿಗೆ ಸಂಬಂಧಿತ ಪ್ರಮುಖ ಸವಾಲುಗಳನ್ನು ಪ್ರತ್ಯೇಕವಾಗಿ ಬಗೆಹರಿಸಲಾಗದು. ಅರ್ಥಪೂರ್ಣ ಅಂತಿಮ ಫಲಿತಾಂಶಗಳನ್ನು ಪಡೆಯಲು ವಿವಿಧ ಇಲಾಖೆಗಳು ಪರಸ್ಪರ ಸಮನ್ವಯತೆಯಿಂದ ಶ್ರಮಿಸುವುದು ಅತ್ಯವಶ್ಯ ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು. ಸರಕಾರದ ವಿವಿಧ ಖಾತೆಗಳು, ಇಲಾಖೆಗಳಿಗೆ ಸಹಾಯಕ ಕಾರ್ಯದರ್ಶಿಗಳಾಗಿ ನಿಯೋಜಿತ, ಐಎಎಸ್–2024 ಬ್ಯಾಚ್‌ನ ,ತರಬೇತಿ ಹಂತದಲ್ಲಿರುವ 183ಯುವ ಅಧಿಕಾರಿಗಳ ಜತೆ ಪ್ರಧಾನಿ ಮೋದಿ ಸಂವಾದ ನಡೆಸಿದರು.

ನಾಗರಿಕ ದೇವೋ ಭವ ಮಂತ್ರವನ್ನು ಮುಂದಿಟ್ಟುಕೊಂಡು ಜನಕೇಂದ್ರಿತ ಆಡಳಿತ, ಆವಿಷ್ಕಾರ, ಬಲಿಷ್ಠ ಸತ್‌ಧ್ಯೇಯ ಸಂಪನ್ನರಾಗಿ, ರಾಷ್ಟ್ರ ನಿರ್ಮಾಣಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳಿ ಮತ್ತು ಪ್ರತಿಯೊಂದು ಆಡಳಿತಾತ್ಮಕ ಕಡತಗಳ ಹಿಂದಿರುವ ಮಾನವೀಯ ಕಾಳಜಿ ಅಥವಾ ಅವು ಜನರ ಬದುಕಿನ ಮೇಲೆ ಬೀರಲಿರುವ ಪರಿಣಾಮಗಳನ್ನು ನೆನಪಿಟ್ಟುಕೊಂಡು ಕರ್ತವ್ಯ ನಿರ್ವಹಿಸಿ ಎಂದು ಪ್ರಧಾನಿ ಮೋದಿ ಯುವ ಸರಕಾರಿ ಅಧಿಕಾರಿಗಳಿಗೆ ಕಿವಿಮಾತು ಹೇಳಿದರೆಂದು ಅಧಿಕೃತ ಹೇಳಿಕೆ ತಿಳಿಸಿದೆ.

ನಿರಂತರ ಅವಲೋಕನ: ರಾಷ್ಟ್ರ ನಿರ್ಮಾಣಕ್ಕೆ ತಮ್ಮ ಕೊಡುಗೆ ಬಗ್ಗೆ ನಿರಂತರ ಅವಲೋಕನ ನಡೆಸುತ್ತಿರಿ ಮತ್ತು ತಮ್ಮ ಉನ್ನತ ಹುದ್ದೆ ಬಗ್ಗೆ ಅಲ್ಲ, ಬದಲಾಗಿ ತಮ್ಮ ಕರ್ತವ್ಯಶೈಲಿಯು ನೀಡುವ ಫಲಿತಾಂಶಗಳ ಬಗ್ಗೆ ಸಂತೃಪ್ತಿಪಡುವಿರಂತೆ ಎಂದು ಸಲಹೆಯಿತ್ತ ಪ್ರಧಾನಿ, ಎರಡು ವರ್ಷಗಳ ಕಾಲ ಆಡಳಿತಾತ್ಮಕ ಕಲಿಕೆ, ಪ್ರಾಯೋಗಿಕ ತರಬೇತಿ ನಂತರ ಅಧಿಕಾರಿಗಳೀಗ ತಮ್ಮ ಭವಿಷ್ಯ ಮಾತ್ರವಲ್ಲ ಕೋಟ್ಯಂತರ ನಾಗರಿಕರ ಭವಿಷ್ಯವನ್ನೂ ರೂಪಿಸಬಲ್ಲಂತಹ ನಿರ್ಧಾರಕೈಗೊಳ್ಳುವ ನಿರ್ಣಾಯಕ ಘಟ್ಟದಲ್ಲಿದ್ದಾರೆ.

ಸಂಪೂರ್ಣ ಸರಕಾರಿ ನೆಲೆಯಲ್ಲಿ ಪ್ರಯತ್ನಿಸಿ: ವಿಕಸಿತ್ ಭಾರತ್ 2047 ವಿಷನ್ ಬಗ್ಗೆ ಉಲ್ಲೇಖಿಸಿ, ಮುಂಬರುವ ದಶಕಗಳಲ್ಲಿ ಕೈಗೊಳ್ಳುವ ಪ್ರತಿಯೊಂದು ಆಡಳಿತಾತ್ಮಕ ನಿರ್ಧಾರಗಳು, ರೂಪಿಸುವ ಪ್ರತಿಯೊಂದು ನೀತಿಗಳು ಸಂಪನ್ನ ಭಾರತ ನಿರ್ಮಾಣಕ್ಕೆ ಕೊಡುಗೆಯಾಗಬೇಕು. ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾ, ಉತ್ಪಾದನಾ ರಂಗದಲ್ಲಿ ಬೆಳವಣಿಗೆ, ಇಂಧನ ಭದ್ರತೆ ಮತ್ತು ಯುವಶಕ್ತಿಗೆ ಅವಕಾಶಗಳ ಸೃಜಿಸುವುದೇ ಇತ್ಯಾದಿ ದೇಶದ ಪ್ರಸಕ್ತ ಪ್ರಾಧಾನ್ಯತೆಗಳಲ್ಲಿ ಒಳಗೊಂಡಿವೆ. ಇವೆಲ್ಲವುಗಳ ಸಾಕಾರಕ್ಕಾಗಿ ಸಂಪೂರ್ಣವಾಗಿ ಮತ್ತು ಸಮಗ್ರವಾಗಿ ಸರಕಾರಿ ನೆಲೆಯಲ್ಲಿ ಪ್ರಯತ್ನಿಸುವಂತೆ ಪ್ರಧಾನಿ ಮೋದಿ ಅಧಿಕಾರಿಗಳಿಗೆ ಕರೆ ನೀಡಿದರು.

ಕಿರುಸುದ್ದಿ

2030ರೊಳಗೆ ಇವಿ ಸ್ವದೇಶೀಕರಣ

ಮುಂಬೈ: ಇಲೆಕ್ಟ್ರಿಕ್ ವಾಹನ(ಇವಿ)ಗಳಲ್ಲಿ ಬಳಕೆಯಾಗುವ ಉಪಕರಣಗಳ ಸ್ವದೇಶಿ ಉತ್ಪಾದನೆ ಪ್ರಗತಿ ಕಾಣುತ್ತಿದ್ದು, 2030ರ ವೇಳೆಗೆ ಭಾರತದ ಇಲೆಕ್ಟ್ರಿಕ್ ವಾಹನಗಳು (ಬ್ಯಾಟರಿ ಹೊರತುಪಡಿಸಿ) ಶೇ.90ರಿಂದ 100ರಷ್ಟು ಸ್ವದೇಶೀಕರಣ ಆಗಲಿದೆ ಎಂದು ಇಂಧನ ಆರ್ಥಿಕತೆ ಮತ್ತು ಹಣಕಾಸು ವಿಶ್ಲೇಷಣಾ ಸಂಸ್ಥೆ(ಐಇಇಎಫ್‌ಎ) ಹಾಗೂ ಜೆಎಂಕೆ ಸಂಶೋಧನೆ ಮತ್ತು ವಿಶ್ಲೇಷಣೆ ತಮ್ಮ ಹೊಸ ವರದಿಯಲ್ಲಿ ಉಲ್ಲೇಖಿಸಿವೆ. ಇವಿಯಲ್ಲಿ ಬಳಕೆಯಾಗುವ ಉಪಕರಣಗಳ ವಿದೇಶಿ ಆಮದು ಕಡಿಮೆಗೊಳಿಸಿ ದೇಶದಲ್ಲೇ ಅವುಗಳ ಉತ್ಪಾದಿಸುವುದನ್ನು ಇವಿ ಉಪಕರಣಗಳ ಸ್ವದೇಶೀಕರಣ ಎನ್ನುತ್ತಾರೆ. ಇವಿಗಳಲ್ಲಿ ಬ್ಯಾಟರಿ ಹೊರತುಪಡಿಸಿದರೆ ಮೋಟರ್, ಪವರ್ ಇಲೆಕ್ಟ್ರಾನಿಕ್ಸ್, ಥರ್ಮಲ್ ನಿರ್ವಹಣಾ ವ್ಯವಸ್ಥೆ, ಚಾರ್ಜರ್ಸ್ ಮತ್ತು ಕಂಟ್ರೋಲ್ ಯೂನಿಟ್ಸ್ ಇತ್ಯಾದಿ ಸ್ವದೇಶಿ ನಿರ್ಮಾಣಕ್ಕೆ ಅವಕಾಶವಿದೆ.

ಅನಿಲ ಘಟಕ ಸ್ಫೋಟ: 12 ಭಾರತೀಯರ ಸಾವು

ಹೊಸದಿಲ್ಲಿ: ಕತಾರ್‌ನ ಅನಿಲ ಘಟಕದಲ್ಲಿ ಭಾನುವಾರ ತಡರಾತ್ರಿ ಸಂಭವಿಸಿದ ಅನಿಲ ಸ್ಫೋಟದಲ್ಲಿ ಮೃತಪಟ್ಟ 13 ಮಂದಿಯಲ್ಲಿ 12 ಮಂದಿ ಭಾರತೀಯರೇ ಸೇರಿದ್ದಾರೆ ಎಂದು ವಿದೇಶಾಂಗ ಇಲಾಖೆ ಸ್ಪಷ್ಟನೆ ನೀಡಿದೆ. ಕತಾರ್‌ನ ರಾಸ್ ಲಫ್ಫಾನ್ ಉದ್ಯಮ ನಗರದಲ್ಲಿನ ಅನಿಲ ಘಟಕವೊಂದರಲ್ಲಿ ಸ್ಫೋಟ ಸಂಭವಿಸಿತ್ತು. ಹನ್ನೆರಡು ಮಂದಿ ಭಾರತೀಯ ಸಾವು ಬಹಳ ದುರದೃಷ್ಟಕರ ಎಂದು ವಿದೇಶಾಂಗ(ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಮಂಗಳವಾರ ಸಂತಾಪ ಸೂಚಿಸಿದ್ದಾರೆ. ಘಟನೆಯಲ್ಲಿ ಒಟ್ಟಾರೆ ವಿವಿಧ ರಾಷ್ಟ್ರಗಳ 66 ಮಂದಿ ಗಾಯಗೊಂಡಿದ್ದಾರೆ.

ಲಖನೌ ದುರಂತ: ನಾಲ್ವರು ಅಧಿಕಾರಿಗಳ ಅಮಾನತು

ಲಕ್ನೋ: ಲಕ್ನೋದಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ 15 ವಿದ್ಯಾರ್ಥಿಗಳು ಮೃತಪಟ್ಟ ಬೆನ್ನಲ್ಲೇ ಉತ್ತರ ಪ್ರದೇಶ ಸರ್ಕಾರವು ನಾಲ್ವರು ರಾಜ್ಯ ಸರ್ಕಾರಿ ಅಧಿಕಾರಿಗಳನ್ನು ಅಮಾನತುಗೊಳಿಸಿದೆ. ನಾಲ್ವರು ಆರೋಪಿಗಳನ್ನು ಬಂಧಿಸಿದೆ. ಬಂಧಿತ ಆರೋಪಿಗಳೆಲ್ಲರೂ ಕಟ್ಟಡದ ಜಂಟಿ ಮಾಲೀಕರು ಎಂದು ತಿಳಿದುಬಂದಿದೆ. ಅಲಿಗಂಜ್ ಪೊಲೀಸರು ಆರು ಜನ ಹೆಸರಿಸಲಾದ ವ್ಯಕ್ತಿಗಳು ಮತ್ತು ಇತರರ ವಿರುದ್ಧ ಬಿಎನ್‌ಎಸ್ ಹಾಗೂ ಉತ್ತರ ಪ್ರದೇಶ ಅಗ್ನಿಶಾಮಕ ಸೇವಾ ಕಾಯ್ದೆಯಡಿ ಪ್ರಥಮ ಮಾಹಿತಿ ವರದಿ (ಎಫ್ ಐಆರ್) ದಾಖಲಿಸಿದ್ದಾರೆ.

ಭಾರತ-ಅಮೆರಿಕ ಬಿಟಿಎ ಜುಲೈನಲ್ಲಿ ಅಂತಿಮ?

ಹೊಸದಿಲ್ಲಿ: ಭಾರತ-ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಮಾತುಕತೆ ಬಹುತೇಕ ಅಂತಿಮ ಹಂತವನ್ನು ತಲುಪಿದೆ. ಅಮೆರಿಕದ ವ್ಯಾಪಾರ ಸಂಧಾನಕಾರ ಜೇಮಿಸನ್ ಗ್ರೀರ್ ಭಾರತಕ್ಕೆ ಆಗಮಿಸಿದ್ದು, ದಿಲ್ಲಿಯ ವಾಣಿಜ್ಯ ಭವನದಲ್ಲಿ ಕೇಂದ್ರ ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ಅವರೊಂದಿಗೆ ಉನ್ನತಮಟ್ಟದ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ಮುಂದಿನ ತಿಂಗಳು ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದೆ.

ಫ್ರಾನ್ಸ್‌ನ ಎವಿಯನ್‌ನಲ್ಲಿ ನಡೆದ ಜಿ7 ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡುವಿನ ಸಭೆಯ ಬಳಿಕ ಸಚಿವರ ನಡುವಿನ ಸಭೆಗಳ ವೇಗವರ್ಧನೆ ಆಗಿದೆ. ದೀರ್ಘಕಾಲದಿಂದ ಬಾಕಿ ಉಳಿದಿರುವ ಒಪ್ಪಂದಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಇಬ್ಬರು ರಾಷ್ಟ್ರ ನಾಯಕರು ಒಮ್ಮತಕ್ಕೆ ಬಂದಿದ್ದರು. ವಾಣಿಜ್ಯ ಭವನದಲ್ಲಿ ನಡೆದ ಸಭೆಯಲ್ಲಿ ಅಮೆರಿಕ ರಾಯಭಾರಿ ಗೋರ್ ಹಾಜರಿದ್ದು, ಹೊಸದಿಲ್ಲಿಯಲ್ಲಿ ಸಚಿವ ಪಿಯೂಷ್ ಗೋಯಲ್ ಮತ್ತು ಅಮೆರಿಕ ವ್ಯಾಪಾರ ಸಂಧಾನಕಾರ ಗ್ರೀರ್ ಅವರೊಂದಿಗೆ ಮಾತುಕತೆ ಉತ್ತಮವಾಗಿತ್ತು. ಒಪ್ಪಂದ ಅಂತಿಮಗೊಳಿಸುವ ಉದ್ದೇಶದಿಂದ ಇಬ್ಬರು ಸಚಿವರು ಮಾತುಕತೆ ನಡೆಸಿದ್ದಾರೆ ಎಂದು ಎಕ್ಸ್‌ನಲ್ಲಿ ಬರೆದಿದ್ದಾರೆ.

ಒಪ್ಪಂದ ನಿಯಮಗಳ ಚರ್ಚೆ: ಮುಂದಿನ ತಿಂಗಳು ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದ್ದು, ಮಧ್ಯಂತರ ಒಪ್ಪಂದವು ಅದರ ಮೊದಲ ಹೆಜ್ಜೆಯಾಗಿರಲಿದೆ. ಅಮೆರಿಕದ ಕೃಷಿ ಉತ್ಪನ್ನ, ಇಂಧನ ರಫ್ತು, ರಕ್ಷಣಾ ಉಪಕರಣ ಮತ್ತು ಅತ್ಯಾಧುನಿಕ ವಾಣಿಜ್ಯ ವಿಮಾನಗಳ ಮಾರುಕಟ್ಟೆ ವ್ಯಾಪ್ತಿ ವಿಸ್ತರಿಸಲು ಅಮೆರಿಕ ಬಯಸಿದೆ.

ಎಂಟು ನಾಯಕರನ್ನು ಉಚ್ಚಾಟಿಸಿದ ಟಿಎಂಸಿ


ಕೋಲ್ಕತ್ತಾ: ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದಲ್ಲಿ , ಕೋಲ್ಕತ್ತಾದ ಮಾಜಿ ಮೇಯರ್ ಫಿರ್ಹದ್ ಹಕೀಮ್, ಅರೂಪ್ ಬಿಸ್ವಾಸ್ ಮತ್ತು ಇತರ ಆರು ಮಂದಿ ನಾಯಕರನ್ನು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಬಣ ಪಕ್ಷದಿಂದ ಉಚ್ಚಾಟಿಸಿದೆ. ಜಾವೇದ್ ಅಹಮದ್ ಖಾನ್, ಅರೂಪ್ ರಾಯ್ ,ರಥಿನ್ ಘೋಷ್, ಬಿಪ್ಲಬ್ ಮಿತ್ರಾ, ಸಬಿನಾ ಯಾಸ್ಮಿನ್, ಸ್ನೇಹಸಿಸ್ ಚಕ್ರವರ್ತಿ ಉಚ್ಚಾಟಿತ ಇತರ ನಾಯಕರು.



ಉಚ್ಚಾಟನೆಗೆ ಮುನ್ನ , ಈ ಎಲ್ಲಾ ಎಂಟು ನಾಯಕರಿಗೆ ಅಖಿಲ ಭಾರತ ತೃಣಮೂಲ ಕಾಂಗ್ರೆಸ್ (ಎಐಟಿಸಿ) ಶೋಕಾಸ್ ನೋಟೀಸ್‌ಗಳನ್ನು ಜಾರಿಗೊಳಿಸಿತ್ತು. ಎಐಟಿಸಿಗೆ ಮಮತಾ ಬ್ಯಾನರ್ಜಿ ಅಧ್ಯಕ್ಷೆ ಎಂದು ವಿಶದಪಡಿಸುವ ದಾಖಲೆಯನ್ನು , ಮಮತಾ ಬ್ಯಾನರ್ಜಿ ನೇತೃತ್ವದ ಬಣವು ಚುನಾವಣಾ ಆಯೋಗಕ್ಕೆ ಸಲ್ಲಿಸಿತ್ತು. ಸುಬ್ರತಾ ಬಕ್ಷಿ ಟಿಎಂಸಿಯ ಉಪಾಧ್ಯಕ್ಷ, ಅಭಿಷೇಕ್ ಬ್ಯಾನರ್ಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಲೋಕಸಭಾ ನಾಯಕ ಡೆರೆಕ್ ಒಬ್ರಿಯನ್ ಪಕ್ಷದ ಜಂಟಿ ಕಾರ್ಯದರ್ಶಿ, ರಾಜ್ಯಸಭಾ ನಾಯಕ ಡೋಲಾ ಸೇನ್ ಜಂಟಿ ಕಾರ್ಯದರ್ಶಿ, ಸುಭಾಸಿಶ್ ಚಕ್ರವರ್ತಿ ಕೋಶಾಧಿಕಾರಿಯೆಂದು ಯಾದಿ ಅಥವಾ ದಾಖಲೆಯಲ್ಲಿ ಮಾಹಿತಿ ನೀಡಲಾಗಿದೆ. ವಿಪಕ್ಷ ನಾಯಕ ರಿತಬ್ರತ ಬ್ಯಾನರ್ಜಿ ನೇತೃತ್ವದ ಟಿಎಂಸಿಯ ಬಂಡಾಯ ಬಣವು, ಮಮತಾ ಬ್ಯಾನರ್ಜಿಯನ್ನು ಪಕ್ಷಾಧ್ಯಕ್ಷ ಸ್ಥಾನದಿಂದ ಉಚ್ಚಾಟಿಸಲಾಗಿದೆ ಮತ್ತು ಅಭಿಷೇಕ್ ಬ್ಯಾನರ್ಜಿಯನ್ನೂ ಅಮಾನತುಗೊಳಿಸಲಾಗಿದೆ.

ಭಾರತದತ್ತ ತೈಲ, ಅನಿಲ ಹೊತ್ತ 11 ನೌಕೆಗಳು

ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ಉದ್ವಿಗ್ನತೆ ಶಮನಗೊಳಿಸುವ ಒಪ್ಪಂದ ಏರ್ಪಟ್ಟ ಬೆನ್ನಲ್ಲೇ, ಕಚ್ಚಾತೈಲ, ಅಡುಗೆ ಅನಿಲ ಹಾಗೂ ರಸಗೊಬ್ಬರ ಹೊತ್ತ 11 ವಾಣಿಜ್ಯ ನೌಕೆಗಳು ಹೋರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿ ಭಾರತದತ್ತ ಪ್ರಯಾಣ ಆರಂಭಿಸಿವೆ.



ಇದೇ ವೇಳೆ, ಭಾರತದಿಂದ ಪರ್ಷಿಯನ್ ಕೊಲ್ಲಿ ಪ್ರದೇಶದತ್ತ ಎರಡು ಭಾರತೀಯ ನೌಕೆಗಳು ಹೋರ್ಮುಜ್ ಜಲಸಂಧಿಯನ್ನು ದಾಟಿವೆ. ಉಭಯ ದಿಕ್ಕುಗಳಲ್ಲೂ ಹಡಗು ಸಂಚಾರ ಪುನರಾರಂಭವಾಗಿರುವುದು, ಜಾಗತಿಕ ಇಂಧನ ಮತ್ತು ಸರಕು ಸಾಗಣೆಯ ಪ್ರಮುಖ ಮಾರ್ಗದಲ್ಲಿ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುತ್ತಿರುವುದರ ಸೂಚನೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಮೂರು ಭಾರತೀಯ ತೈಲ ಟ್ಯಾಂಕರ್: ಜೂ.17ರಂದು ಅಮೆರಿಕ ಮತ್ತು ಇರಾನ್ ನಡುವೆ 14 ಅಂಶಗಳ ತಿಳಿವಳಿಕೆ ಒಪ್ಪಂದ ಏರ್ಪಟ್ಟ ಬಳಿಕ ಒಟ್ಟು 11 ಭಾರತಮುಖಿ ನೌಕೆಗಳು ಜಲಸಂಧಿಯನ್ನು ದಾಟಿವೆ. ಇವುಗಳಲ್ಲಿ ಭಾರತೀಯ ಧ್ವಜ ಹೊಂದಿರುವ ಮೂರು ತೈಲ ಟ್ಯಾಂಕರ್‌ಗಳಿದ್ದು, ಪ್ರತಿಯೊಂದರಲ್ಲೂ ಸುಮಾರು 2.85 ಲಕ್ಷ ಮೆಟ್ರಿಕ್ ಟನ್ ಕಚ್ಚಾತೈಲ ಸಾಗಿಸಲಾಗುತ್ತಿದೆ. ಉಳಿದವುಗಳಲ್ಲಿ ವಿದೇಶಿ ಧ್ವಜದ ಒಂದು ಕಚ್ಚಾತೈಲ ಟ್ಯಾಂಕರ್, 1 ಅಡುಗೆ ಅನಿಲ ಸಾಗಣೆ ಹಡಗು ಹಾಗೂ ರಸಗೊಬ್ಬರ ಹೊತ್ತ 6 ಬೃಹತ್ ಸರಕು ನೌಕೆಗಳು ಸೇರಿವೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಸರ್ಕಾರಕ್ಕೆ ಮಧ್ಯಂತರ ವರದಿ ಸಲ್ಲಿಕೆ

ಲಖನೌ: ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಮಂದಿರಕ್ಕೆ ಭಕ್ತರು ಸಲ್ಲಿಸಿದ ದೇಣಿಗೆ ಮತ್ತು ಕಾಣಿಕೆಗಳ ನಿರ್ವಹಣೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ತನಿಖೆ ನಡೆಸಿರುವ ವಿಶೇಷ ತನಿಖಾ ತಂಡ, 20ಕ್ಕೂ ಹೆಚ್ಚು ಜನರ ವಿರುದ್ಧ ಪ್ರಥಮ ಮಾಹಿತಿ ವರದಿ ದಾಖಲಿಸುವಂತೆ ಶಿಫಾರಸು ಮಾಡಿದೆ. ಮೂರು ಸದಸ್ಯರ ತನಿಖಾ ತಂಡವು ತನ್ನ 150 ಪುಟಗಳ ಮಧ್ಯಂತರ ವರದಿಯನ್ನು ಉತ್ತರ ಪ್ರದೇಶದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಗೃಹ) ಸಂಜಯ್ ಪ್ರಸಾದ್ ಅವರಿಗೆ ಮಂಗಳವಾರ ಸಲ್ಲಿಸಿದೆ. ಮಂದಿರದ ಹುಂಡಿ ಮತ್ತು ದೇಣಿಗೆ ಪೆಟ್ಟಿಗೆಗಳಿಂದ ಸಂಗ್ರಹವಾಗುತ್ತಿದ್ದ ಹಣದ ಎಣಿಕೆ, ಬ್ಯಾಂಕಿಗೆ ಜಮೆ ಮಾಡುವ ವಿಧಾನ, ಹಣಕಾಸು ದಾಖಲೆಗಳ ನಿರ್ವಹಣೆ ಹಾಗೂ ಅಮೂಲ್ಯ ಕಾಣಿಕೆಗಳ ಸಂರಕ್ಷಣೆಯಲ್ಲಿ ಹಲವು ಕಾರ್ಯವಿಧಾನಾತ್ಮಕ ಲೋಪಗಳು ಕಂಡುಬಂದಿವೆ ಎಂದು ಮೂಲಗಳು ತಿಳಿಸಿವೆ.

ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜತೆಯತ್ತ: ಕೈ ನಾಯಕ ತರೂರ್ ಹೇಳಿಕೆ

ಕಾಂಗ್ರೆಸಿಗೆ ಮತ್ತೆ ತೀವ್ರ ಮುಜುಗರ

ಶ್ರೀನಗರ: ರಾಷ್ಟ್ರೀಯ ಹಿತ ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಿಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಸರಿಯಾಗಿವೆ ಎಂಬುದಾಗಿ ಹೇಳಿ ಬೆಂಬಲಿಸುತ್ತಿರುವ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು, ಇದೀಗ ಜಮ್ಮು-ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜಗೊಳ್ಳುತ್ತಿದೆ ಎಂಬ ಹೇಳಿಕೆ ನೀಡಿರುವುದು ಮತ್ತೆ ಕಾಂಗ್ರೆಸಿಗೆ ತೀವ್ರ ಮುಜುಗರ ಉಂಟು ಮಾಡಿದೆ.

ಮೋದಿ ಸರಕಾರದ ಎಲ್ಲ ನೀತಿಗಳನ್ನು ವಿಪಕ್ಷ ಕಾಂಗ್ರೆಸಿನ ನಾಯಕ ರಾಹುಲ್ ಗಾಂಧಿ ಒಂದೇ ಸವನೆ ವಿರೋಧಿಸುತ್ತಿರುವಾಗಲೇ, ಶಶಿ ತರೂರ್ ಅವರ ಈ ಹೇಳಿಕೆ ಬಂದಿರುವುದು ಮತ್ತು ರಾಷ್ಟ್ರೀಯ ಹಿತದ ವಿಷಯದಲ್ಲಿ ಕ್ಷುಲ್ಲಕ ರಾಜಕೀಯ ಮಾಡುವುದು ಸರಿಯಲ್ಲ ಎಂದಿರುವುದು ಕಾಂಗ್ರೆಸಿಗೆ ತೀವ್ರ ಪೇಚುಂಟು ಮಾಡಿದೆ.

ಶ್ರೀನಗರದ ಲೋಕ ಭವನದಲ್ಲಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರೊಂದಿಗಿನ ಅತ್ಯುತ್ತಮ ಸಭೆಯ ಗೌರವ ಸಿಕ್ಕಿತು. ನಾವು ರಾಜ್ಯದ ಪರಿಸ್ಥಿತಿ ಮತ್ತು ಸಹಜ ಸ್ಥಿತಿಯತ್ತ ಸಾಗುತ್ತಿರುವ ಪ್ರೋತ್ಸಾಹದಾಯಕ ಪ್ರಗತಿಯ ಬಗ್ಗೆ ಚರ್ಚಿಸಿದೆವು. ನಾನು ಬಂದ ವೇಳೆ,ಅವರು ಕಾಶ್ಮೀರಿ ಬರಹಗಾರರ ಸಂಘ ಮತ್ತು ಮಹಿಳಾ ಸಂಘಟನೆಯ ಅಧ್ಯಕ್ಷರೊಂದಿಗೆ ಮಾತನಾಡುತ್ತಿದ್ದರು – ಈ ಸಕಾರಾತ್ಮಕ ಸಂಪರ್ಕವನ್ನು ನಾನು ಸ್ವಾಗತಿಸಿದೆ. ಹಲವು ಸವಾಲುಗಳು ಉಳಿದಿವೆ ಮತ್ತು ಇನ್ನೂ ಹೆಚ್ಚಿನದನ್ನು ಮಾಡಬೇಕಾಗಿದೆ, ಆದರೆ ನಾನು ಸ್ವಲ್ಪ ಸಮಯದವರೆಗೆ ಅನುಭವಿಸಿದ್ದಕ್ಕಿಂತ ಹೆಚ್ಚು ಸಕಾರಾತ್ಮಕ ಭಾವನೆಯಿಂದ ಸಭೆಯಿಂದ ಹೊರಗೆ ಬಂದಿದ್ದೇನೆ '' ಎಂದು ತರೂರ್ ಎಕ್ಸ್‌ನಲ್ಲಿ ಬರೆದಿದ್ದಾರೆ.

ನಲಂದಾ ಮಾತುಕತೆಗಳಿಗಾಗಿ ತರೂರ್ ಅವರ ಶ್ರೀನಗರ ಭೇಟಿ ಮತ್ತು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರೊಂದಿಗಿನ ಅವರ ಭೇಟಿಯ ಬಳಿಕ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಕೆಲವು ಕಾಂಗ್ರೆಸ್ ನಾಯಕರು ತೀವ್ರ ಅಸಹನೆ ವ್ಯಕ್ತಪಡಿಸಿದ್ದಾರೆ.

ಜಮ್ಮು -ಕಾಶ್ಮೀರದ ಕಾಂಗ್ರೆಸ್ ಮುಖ್ಯ ವಕ್ತಾರ ರವೀಂದರ್ ಶರ್ಮಾ, ಶಶಿ ತರೂರ್ ಅವರನ್ನು ಟೀಕಿಸಿ ಮೂಲ ವಾಸ್ತವವನ್ನು ಅರ್ಥಮಾಡಿಕೊಳ್ಳಲು ತರೂರ್ ಕಾಶ್ಮೀರ ಕಣಿವೆಯ ಜನರನ್ನು ಭೇಟಿ ಮಾಡಲು ಸಮಯ ಮೀಸಲಿಡಬೇಕಿತ್ತು ಎಂದಿದ್ದಾರೆ.

ಬಿಜೆಪಿ ಜಮ್ಮು -ಕಾಶ್ಮೀರದಲ್ಲಿ ಪರಿಸ್ಥಿತಿ ಸಹಜವಾಗಿಲ್ಲ ಎಂದು ಬಿಂಬಿಸಲು ಕಾಂಗ್ರೆಸ್ ಹೆಣಗಾಡುತ್ತಿರುವಾಗಲೇ, ಜಮ್ಮು-ಕಾಶ್ಮೀರದಲ್ಲಿನ ಪ್ರಗತಿಯನ್ನು ಪ್ರೋತ್ಸಾಹಿಸುವ ಬೆಳವಣಿಗೆಯನ್ನು ತರೂರ್ ಶ್ಲಾಘಿಸಿದ್ದಾರೆ. ತಮ್ಮ ಹೇಳಿಕೆಗೆ ಕಾಂಗ್ರೆಸ್ ನಾಯಕರ ತಕರಾರಿಗೆ ಪ್ರತಿಕ್ರಿಯಿಸಿರುವ ಅವರು, ತಾವು ವಿದೇಶಾಂಗ ವ್ಯವಹಾರಗಳಿಗೆ ಸಂಬಂಧಿಸಿದ ಸಂಸತ್ತಿನ ಸ್ಥಾಯೀ ಸಮಿತಿಯ ನಿಯೋಗವಾಗಿ ಅಲ್ಲಿಗೆ ತೆರಳಿದ್ದು, ಅಲ್ಲಿ ಪಾಸ್‌ಪೋರ್ಟ್ ಕಚೇರಿ ಚಟುವಟಿಕೆಗಳು ಸುಗಮವಾಗಿ ನಡೆಯುತ್ತಿತ್ತು ಎಂದಿದ್ದಾರೆ.

ವಿಶ್ವಾಸಾರ್ಹ ಶಕ್ತಿಯಾಗಿ ಭಾರತ ಉದಯ: ಪ್ರಧಾನಿ ಮೋದಿ

ಭಾರತ ಜಾಗತಿಕ ಪಾಲುದಾರ

ಹೊಸದಿಲ್ಲಿ: ಭಾರತವು ವಿಶ್ವದ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿರುವುದಷ್ಟೇ ಅಲ್ಲ, ವಿಶ್ವಾಸಾರ್ಹ ಮತ್ತು ನಂಬಿಕೆಗೆ ಅರ್ಹವಾದ ಜಾಗತಿಕ ಶಕ್ತಿಯಾಗಿಯೂ ಹೊರಹೊಮ್ಮಿದೆ. ದೇಶದ ಪ್ರತಿಯೊಂದು ನೀತಿ ಮತ್ತು ನಿರ್ಧಾರಕ್ಕೂ 'ರಾಷ್ಟ್ರ ಮೊದಲು' ಎಂಬ ತತ್ವವೇ ಪರಮ ಮಾರ್ಗದರ್ಶಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. 'ರಿಪಬ್ಲಿಕ್ ಶೃಂಗಸಭೆ–2026'ರಲ್ಲಿ ಮಾತನಾಡಿದ ಅವರು, ವಿಶ್ವವು ಕ್ಷಿಪ್ರ ಮತ್ತು ಪರಿಣಾಮಕಾರಿ ಬದಲಾವಣೆಗಳನ್ನು ಕಾಣುತ್ತಿರುವ ಈ ಸಂದರ್ಭದಲ್ಲಿ 'ಮಹಾಶಕ್ತಿ ಭಾರತ: ರಾಷ್ಟ್ರ ಮೊದಲು' ವಿಷಯದ ಕುರಿತು ಚರ್ಚೆ ನಡೆಯುತ್ತಿರುವುದು ಮಹತ್ವದ್ದಾಗಿದೆ ಎಂದರು.

ಭಾರತದ ಬೆಳವಣಿಗೆಯು ವಿಶ್ವಾಸ, ಸ್ಥಿರತೆ ಮತ್ತು ಜಾಗತಿಕ ಒಳಿತಿನ ಬದ್ಧತೆಯ ಮೇಲೆ ನಿಂತಿದೆ. ಇತ್ತೀಚೆಗೆ ನಡೆದ ಜಿ–7 ಶೃಂಗಸಭೆಯಲ್ಲಿಯೂ ವಿಶ್ವನಾಯಕರು ಭಾರತದ 'ರಾಷ್ಟ್ರ ಮೊದಲು' ಬದ್ಧತೆಯನ್ನು ಗುರುತಿಸಿದ್ದಾರೆ. ಇದೇ ತತ್ವ ದೇಶದ ನೀತಿ, ಆದ್ಯತೆ ಮತ್ತು ಅಭಿವೃದ್ಧಿಯ ಆಶಯಗಳಿಗೆ ದಿಕ್ಕು ತೋರಿಸುತ್ತಿದೆ ಎಂದು ಮೋದಿ ತಿಳಿಸಿದರು.

ಮಾವೋವಾದಿ ಹಿಂಸಾಚಾರ ಅಂತಿಮ ಹಂತದಲ್ಲಿ: ದೇಶದಲ್ಲಿ ಮಾವೋವಾದಿ ಭಯೋತ್ಪಾದನೆ ಈಗ ಕೊನೆಯುಸಿರೆಳೆಯುತ್ತಿದೆ.

ಭದ್ರತಾ ಪಡೆಗಳ ದೃಢ ಕಾರ್ಯಾಚರಣೆ ಮತ್ತು ತ್ವರಿತ ಅಭಿವೃದ್ಧಿ ಕಾರ್ಯಗಳ ಪರಿಣಾಮವಾಗಿ ಹಿಂದೆ ಹಿಂಸಾಚಾರ ಹಾಗೂ ಹಿಂದುಳಿದಿದ್ದ ಪ್ರದೇಶಗಳು ಈಗ ಪ್ರಗತಿಯ ಹಾದಿಯಲ್ಲಿವೆ ಎಂದು ಪ್ರಧಾನಿ ಹೇಳಿದರು. ಮಾವೋವಾದಿ ಪೀಡಿತ ಮತ್ತು ಬುಡಕಟ್ಟು ಪ್ರದೇಶಗಳಲ್ಲಿ ಕಳೆದ ಹತ್ತು ವರ್ಷಗಳಲ್ಲಿ 12 ಸಾವಿರ ಕಿಮೀಗೂ ಹೆಚ್ಚು ರಸ್ತೆ ನಿರ್ಮಿಸಲಾಗಿದೆ.

ಆರೋಗ್ಯ ಸೇವೆಗಳನ್ನು ಜನಸಾಮಾನ್ಯರಿಗೆ ಕೈಗೆಟಕುವಂತೆ ಮಾಡಲು ಸರಕಾರ ನಿರಂತರವಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಕಡಿಮೆ ದರದಲ್ಲಿ ಔಷಧ

ಜನೌಷಧಿ ಕೇಂದ್ರಗಳ ಮೂಲಕ ಕಡಿಮೆ ಬೆಲೆಗೆ ಔಷಧ ಒದಗಿಸಲಾಗುತ್ತಿದೆ. ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆ ನೀಡುವ ವಿವಿಧ ಯೋಜನೆಗಳಿಂದ ಕುಟುಂಬಗಳ ಚಿಕಿತ್ಸಾ ವೆಚ್ಚ ಕಡಿಮೆಯಾಗಿದೆ.

ಕಿರುಸುದ್ದಿ

ಸಿಎ ಅಂತಿಮ ಪರೀಕ್ಷೆಯಲ್ಲಿ ಶ್ರಾವ್ಯ ಶೆಟ್ಟಿ ಉತ್ತೀರ್ಣ

• ಕುಂದಾಪುರ: ದ ಇನ್ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಇವರು ಕಳೆದ ಮೇ ತಿಂಗಳಿನಲ್ಲಿ ನಡೆಸಿದ ಸಿಎ ಅಂತಿಮ ಪರೀಕ್ಷೆಯಲ್ಲಿ ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಪ್ರಾಕ್ತನ ವಿದ್ಯಾರ್ಥಿನಿ ಶ್ರಾವ್ಯ ಶೆಟ್ಟಿ ಅವರು ಚೊಚ್ಚಲ ಪ್ರಯತ್ನದಲ್ಲಿಯೇ ಉತ್ತೀರ್ಣರಾಗಿದ್ದಾರೆ.



ಅವರ ಈ ಗಮನಾರ್ಹ ಸಾಧನೆಗಾಗಿ ಡಾ.ಬಿ.ಬಿ.ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಅಭಿನಂದನೆಗಳನ್ನು ಸಲ್ಲಿಸಿ ಶುಭ ಹಾರೈಸಿದ್ದಾರೆ.

ಶ್ರೀರಾಮ ವಿದ್ಯಾಲಯದಲ್ಲಿ ಪ್ರವೇಶ ಸಂಸ್ಕೃತ ಪರೀಕ್ಷೆಯಲ್ಲಿ ರಜತ ಪದಕ

• ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿದ್ಯಾಲಯದಲ್ಲಿ ಭಾರತಿ ಸಂಸ್ಕೃತ ಸಂಘದಿಂದ ಸುರಸರಸ್ವತೀ ಸಭಾ ಶೃಂಗೇರಿ ನಡೆಸಲ್ಪಡುವ ಪ್ರವೇಶ ಸಂಸ್ಕೃತ ಪರೀಕ್ಷೆಯಲ್ಲಿ



ವಿದ್ಯಾರ್ಥಿನಿಯರಾದ ಚಂದ್ರಕಲಾ ಮತ್ತು ಶ್ರದ್ಧಾ ಅತಿ ಹೆಚ್ಚು ಅಂಕ ಪಡೆದು ರಜತ ಪದಕ ಪಡೆದಿರುತ್ತಾರೆ ಎಂದು ಶಾಲಾ ಪ್ರಕಟಣೆ ತಿಳಿಸಿದೆ.

ಕೊಡಗಿನ ಮನೋಹರ್‌ಗೆ ಪೊಲೀಸ್ ಪ್ರಂಶಸನಾ ಪದಕ

• ಕುಶಾಲನಗರ: ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುವ ಸಿಬ್ಬಂದಿಗಳಿಗೆ ನೀಡಲಾಗುವ ಡಿಜಿ ಮತ್ತು ಐಜಿಪಿ ಕಮಾಂಡೇಷನ್ ಡಿಸ್ಕ್ ಪ್ರಶಸ್ತಿಗೆ ಮೂಲತಃ ಕೊಡಗಿನವರಾಗಿದ್ದು, ಪ್ರಸಕ್ತ ಹುಣಸೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಕರ್ತವ್ಯದಲ್ಲಿರುವ ಎಸ್.ಎ.ಮನೋಹರ್ ಅವರು ಭಾಜನರಾಗಿದ್ದಾರೆ. ಕುಶಾಲನಗರ ತಾಲೂಕಿನ ಶಿರಂಗಾಲ ಗ್ರಾಮದವರಾದ ಎಸ್.ಎ.ಮನೋಹರ ಅವರ 2020ರಿಂದ 2025ನೇ ಸಾಲಿನವರೆಗಿನ ಐದು ವರ್ಷಗಳ ಉತ್ತಮ ಕರ್ತವ್ಯವನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ.



ಮನೋಹರ್ ಅವರು ಕೊಡಗಿನ ವಿವಿಧ ಠಾಣೆಗಳಲ್ಲಿ ಸೇವೆ ಸಲ್ಲಿಸಿ ವರ್ಗಾವಣೆಗೊಂಡು ಪ್ರಸ್ತುತ ಹುಣಸೂರು ಪಟ್ಟಣ ಪೊಲೀಸ್ ಠಾಣೆಯ ಠಾಣಾ ಬರಹಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮಾಜಿ ಸಂಸದರೊಬ್ಬರ ಪ್ರಕರಣಕ್ಕೆ ಸಂಬಂಧಿಸಿದ ವಿಶೇಷ ತನಿಖಾ ತಂಡದಲ್ಲಿ ಗುರುತರವಾದ ಕರ್ತವ್ಯ ನಿರ್ವಹಿಸಿದ್ದು, ಇವರು ಪೊಲೀಸ್ ಇಲಾಖೆಯಲ್ಲಿನ ಉತ್ತಮ ಕರ್ತವ್ಯಕ್ಕಾಗಿ ನಗದು ಬಹುಮಾನ, ಜಿಲ್ಲಾ ಮಟ್ಟದಲ್ಲಿ ನೀಡಲಾಗುವ ಪೊಲೀಸ್ ಆಫ್ ದ ಮಂಥ್ ಹಾಗೂ ಕಾಪ್ ಆಫ್ ದ ಮಂಥ್ ಪ್ರಶಸ್ತಿಯನ್ನು ಕ್ರಮವಾಗಿ ಒಂದು ಮತ್ತು ಎರಡು ಬಾರಿ, ರೋಟರಿ ಸಂಸ್ಥೆ ವತಿಯಿಂದ ಸಾಧಕರ ಪುರಸ್ಕಾರ ಸೇರಿದಂತೆ ಹಲವಾರು ಪ್ರಂಶಸನಾ ಪತ್ರಗಳನ್ನು ಪಡೆದಿದ್ದಾರೆ. ಇವರ ಕರ್ತವ್ಯವನ್ನು ಮೇಲಧಿಕಾರಿಗಳೂ ಶ್ಲಾಘಿಸಿದ್ದಾರೆ.

ದೇಹದಾರ್ಢ್ಯ ಸ್ಪರ್ಧೆ: ಪ್ರಜ್ವಲ್ ಸಾಧನೆ

• ವೀರಾಜಪೇಟೆ: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಅಂತಾರಾಷ್ಟ್ರೀಯ ಮಟ್ಟದ ನೈಸರ್ಗಿಕ ದೇಹದಾರ್ಢ್ಯ ಸ್ಪರ್ಧೆಯಲ್ಲಿ ವೀರಾಜಪೇಟೆಯ ಸಂತ ಅನ್ನಮ್ಮ ಪಿಯು ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಪ್ರಜ್ವಲ್ ಪಿ. ಎಂ. ಭಾಗವಹಿಸಿ ಉತ್ತಮ ಪ್ರದರ್ಶನ ನೀಡಿದರು. ವೀರಾಜಪೇಟೆಯ ಗಾಂಧಿ ನಗರದ ನಿವಾಸಿಗಳಾದ ಪಿ. ಎ. ಮಂಜುನಾಥ್ ಹಾಗೂ ಸಂತ ಅನ್ನಮ್ಮ ಕಾಲೇಜಿನ ಉಪನ್ಯಾಸಕಿ ಅಶ್ವಿನಿ ದಂಪತಿಯ ಪುತ್ರರಾಗಿರುವ ಪ್ರಜ್ವಲ್, ವೀರಾಜಪೇಟೆ ತೆಲುಗರ ಬೀದಿಯ ರಿಶೆಪ್ ಫಿಟ್ನೆಸ್ ಜಿಮ್ ಮಾಲಕ ಹಾಗೂ ತರಬೇತುದಾರ ಲಕ್ಷ್ಮೀಶ್ ಹಾಗೂ ಮೈಸೂರಿನ ಅರ್ನಾಲ್ಡ್ ಫಿಟ್ನೆಸ್ ಸೆಂಟರ್ ತರಬೇತುದಾರ ರವಿ ಅವರಿಂದ ತರಬೇತಿ ಮತ್ತು ಮಾರ್ಗದರ್ಶನ ಪಡೆದಿದ್ದರು.





ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಪ್ರಥಮ ಬಾರಿಗೆ ಮಂಗಳೂರಿಗೆ ಭೇಟಿ ನೀಡಿದ ಬಿ.ಕೆ. ಹರಿಪ್ರಸಾದ್ ಅವರು ಕುದ್ರೋಳಿ ಶ್ರೀ ಗೋಕರ್ಣನಾಥ ದೇವಸ್ಥಾನಕ್ಕೆ ಭೇಟಿ ನೀಡಿದರು. ಈ ಸಂದರ್ಭ ದೇವಸ್ಥಾನದ ಆಡಳಿತ ಸಮಿತಿಯವರು ಉಪಸ್ಥಿತರಿದ್ದರು.

ಕಾಡಾನೆ-ಮಾನವ ಸಂಘರ್ಷ ತಡೆಗೆ ಪಕ್ಷಾತೀತ ಕಾರ್ಯಯೋಜನೆ ಅಗತ್ಯ: ಸಂಸದ ಯದುವೀರ್

• ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಕಾಡಾನೆ ಹಾಗೂ ಮಾನವ ಸಂಘರ್ಷ ತಡೆಯುವಲ್ಲಿ ಪಕ್ಷಾತೀತವಾಗಿ ಎಲ್ಲರೂ ಕಾರ್ಯ ಯೋಜನೆ ರೂಪಿಸಬೇಕು ಎಂದು ಸಂಸದ ಯದುವೀರ್‌ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಲಹೆ ಮಾಡಿದರು.



ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಾಜೆಕ್ಟ್ ಎಲಿಫೆಂಟ್ ಯೋಜನೆಯಡಿ ಕೇರಳ ರಾಜ್ಯ ಹೆಚ್ಚಿನ ಹಣ ಪಡೆದಿದ್ದು, ಕರ್ನಾಟಕಕ್ಕೆ ಕಡಿಮೆ ಹಣ ಬಂದಿದೆ ಎಂಬ ಅಪಪ್ರಚಾರ ಮಾಡಲಾಗುತ್ತಿದ್ದು, ಇದು ಸರಿಯಲ್ಲ. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿರುವ ಹಣ ಬಂದಿದ್ದು, ವನ್ಯ ಪ್ರಾಣಿಗಳ ಹಾವಳಿ ನಿಯಂತ್ರಣಕ್ಕೆ ಅಗತ್ಯ ಕ್ರಮವಹಿಸಬೇಕಿದೆ ಎಂದು ಅವರು ಹೇಳಿದರು.

ಈ ಸಂದರ್ಭ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರು ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರ ಕಿರುಕುಳ ಹೆಚ್ಚಾಗಿದ್ದು, ಇದು ನಿಲ್ಲಬೇಕು. ರೈತರು ಹಾಗೂ ಇತರರಿಗೆ ತೊಂದರೆ ನೀಡಬಾರದು. ಸ್ಥಳೀಯರಿಂದಲೇ ಅರಣ್ಯ ಉಳಿದಿದೆ ಎಂಬುದನ್ನು ಮನಗಾಣಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಭೋಜೇಗೌಡ ಅವರು ಮಾತನಾಡಿ, ವನ್ಯಪ್ರಾಣಿಗಳು ಕಾಡಿನಲ್ಲಿ ಇರುವಂ ತಾಗಲು ಹಲಸು, ಬಿದಿರು, ಬಾಳೆ ಮತ್ತಿತರ ಹಣ್ಣಿನ ಗಿಡಗಳನ್ನು ನೆಡುವಂತಾಗಬೇಕು. ನೀಲಗಿರಿ ಮತ್ತು ಆಕೇಶಿಯಾ ಮರಗಳನ್ನು ಬುಡಸಮೇತ ತೆರವುಗೊಳಿಸಬೇಕು. ಸೋಲಾರ್ ತಂತಿ ಬೇಲಿ ಅಳವಡಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಹೇಳಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ಅವರು ಮಾತನಾಡಿ ವನ್ಯಪ್ರಾಣಿಗಳ ಹಾವಳಿ ತಡೆಯುವಲ್ಲಿ ಪ್ರತೀ ಕಿ.ಮೀ.ಗೆ ಒಂದೂವರೆ ಕೋಟಿ ರೂ. ಬೇಕಾಗುತ್ತದೆ ಎಂದು ಮಾಹಿತಿ ನೀಡಿದರು.

ಕೇಂದ್ರ, ರಾಜ್ಯ ಸರಕಾರಗಳಿಗೆ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ಒತ್ತಾಯ

ಸಮಸ್ಯೆಗಳ ಪರಿಹಾರಕ್ಕೆ ತಕ್ಷಣ ಕ್ರಮ ಕೈಗೊಳ್ಳಿ

• ಪುತ್ತೂರು: ಅಡಿಕೆ ಬೆಳೆಗಾರರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಕುರಿತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ತುರ್ತು ಗಮನಹರಿಸಿ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ಒತ್ತಾಯಿಸಿದೆ.

ಇತ್ತೀಚೆಗೆ ನಡೆದ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಸಭೆಯಲ್ಲಿ ವಿವಿಧ ಸಮಸ್ಯೆಗಳ ಬಗ್ಗೆ ಚರ್ಚಿಸಿ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನ ಸೆಳೆಯಲು ನಿರ್ಧರಿಸಲಾಯಿತು.

ಬೆಳೆಗಾರರ ಸಮಸ್ಯೆ

ಮಳೆಗಾಲದಲ್ಲಿ ಅಡಿಕೆ ತೋಟಗಳಲ್ಲಿ ಕೊಳೆ ರೋಗ ನಿಯಂತ್ರಣಕ್ಕೆ ವ್ಯಾಪಕವಾಗಿ ಬಳಸಲಾಗುವ ಬೋರ್ಡೋ ದ್ರಾವಣ ತಯಾರಿಕೆಗೆ ಅಗತ್ಯವಿರುವ ಕಾಪರ್ ಸಲ್ಫೇಟ್ ಮತ್ತು ಸುಣ್ಣದ ಬಳಕೆ ಅತ್ಯಗತ್ಯವಾಗಿದೆ. ಆದರೆ, ಇತ್ತೀಚೆಗೆ ಕಾಪರ್ ಸಲ್ಫೇಟ್ ಉತ್ಪಾದನೆಯಲ್ಲಿ ಕಚ್ಚಾ ವಸ್ತುಗಳ ಕೊರತೆ, ವಿಶೇಷವಾಗಿ ಸಲ್ಫ್ಯೂರಿಕ್ ಆಸಿಡ್ ಹಾಗೂ ತಾಮ್ರದ ಅಭಾವದಿಂದ ಸರಬರಾಜು ಸಮಸ್ಯೆ ಉಂಟಾಗಿದೆ. ಪರಿಣಾಮವಾಗಿ ಕಾಪರ್ ಸಲ್ಫೇಟ್ ದರ ಏರಿಕೆಯಾಗಿದ್ದು, ಕಳಪೆ ಗುಣಮಟ್ಟದ ಉತ್ಪನ್ನಗಳು ಮಾರುಕಟ್ಟೆಗೆ ಬರುತ್ತಿರುವ ಬಗ್ಗೆ ವರದಿಗಳು ಕೇಳಿ ಬರುತ್ತಿವೆ. ಈ ಹಿನ್ನೆಲೆಯಲ್ಲಿ ಗುಣಮಟ್ಟ ನಿಯಂತ್ರಣಕ್ಕೆ ಸರ್ಕಾರ ಕಟ್ಟುನಿಟ್ಟಿನ ಮಾರ್ಗಸೂಚಿಗಳನ್ನು ಜಾರಿಗೆ ತರಬೇಕು.

ಆಮದು ದರ ಏರಿಸಿ

ಅಡಿಕೆ ಎಲೆಚುಕ್ಕಿ ಸೇರಿದಂತೆ ವಿವಿಧ ರೋಗಬಾಧೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರೋಗ ನಿಯಂತ್ರಣಕ್ಕೆ ಹಲವು ಸುತ್ತಿನ ಸಿಂಪಡಣೆ ಅಗತ್ಯವಾಗಿದ್ದು, ಕಾರ್ಮಿಕರ ಕೂಲಿ ಹಾಗೂ ಇತರೆ ನಿರ್ವಹಣಾ ವೆಚ್ಚಗಳೂ ಗಣನೀಯವಾಗಿ ಏರಿಕೆಯಾಗಿದೆ. ಪ್ರಸ್ತುತ ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಅಡಿಕೆ ಉತ್ಪಾದನಾ ವೆಚ್ಚವು ಪ್ರತಿ ಕೆ.ಜಿ.ಗೆ ಸುಮಾರು ರೂ.450 ತಲುಪಿದೆ. ಹೀಗಾಗಿ ಅಡಿಕೆಗೆ ಕನಿಷ್ಠ ಆಮದು ದರವನ್ನು ರೂ.451ಕ್ಕೆ ಏರಿಸಿ ದೇಶೀಯ ಬೆಳೆಗಾರರ ಹಿತಾಸಕ್ತಿಯನ್ನು ರಕ್ಷಿಸಬೇಕು ಎಂದು ಸಂಘ ಆಗ್ರಹಿಸಿದೆ.

ಕರ್ನಾಟಕದ ವಿದ್ಯುತ್ ವಿತರಣಾ ಕ್ಷೇತ್ರಕ್ಕೆ ಖಾಸಗಿ ಕಾರ್ಪೊರೇಟ್ ಸಂಸ್ಥೆಗಳ ಪ್ರವೇಶ ಕುರಿತ ಚರ್ಚೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ, ಅದರ ಪರಿಣಾಮಗಳ ಕುರಿತು ಸಮಗ್ರ ಅಧ್ಯಯನ ನಡೆಸದೆ ಯಾವುದೇ ನಿರ್ಧಾರ ಕೈಗೊಳ್ಳಬಾರದು ಎಂದು ಸಂಘ ತಿಳಿಸಿದೆ. ಖಾಸಗೀಕರಣದಿಂದ ಕೃಷಿಕರು ಹಾಗೂ ಸಾಮಾನ್ಯ ವಿದ್ಯುತ್ ಗ್ರಾಹಕರಿಗೆ ಉಂಟಾಗಬಹುದಾದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದು ಹೇಳಿದೆ.

ಕೃಷಿ ಯಾಂತ್ರೀಕರಣ ಹೆಚ್ಚುತ್ತಿರುವ ಸಂದರ್ಭದಲ್ಲಿ ಕೃಷಿ ಯಂತ್ರೋಪಕರಣಗಳ ಬಳಕೆಗೆ ಪೆಟ್ರೋಲ್ ಮತ್ತು ಡೀಸೆಲ್ ಅವಶ್ಯಕವಾಗಿದೆ. ಆದರೆ, ಕೆಲವು ಪ್ರದೇಶಗಳಲ್ಲಿ ಕ್ಯಾನ್‌ಗಳಲ್ಲಿ ಇಂಧನ ವಿತರಣೆ ಮಾಡುವುದಕ್ಕೆ ನಿರ್ಬಂಧಗಳಿರುವ ಬಗ್ಗೆ ರೈತರಿಂದ ದೂರುಗಳು ಕೇಳಿಬರುತ್ತಿವೆ. ಈ ಸಮಸ್ಯೆಯನ್ನು ಸರ್ಕಾರ ಮತ್ತು ಜಿಲ್ಲಾಡಳಿತ ತಕ್ಷಣ ಪರಿಶೀಲಿಸಿ ರೈತರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಂಘ ಮನವಿ ಮಾಡಿದೆ.

ಇದಲ್ಲದೆ, ಕೃಷಿ ರಕ್ಷಣೆಗೆ ಸರ್ಕಾರದ ಅನುಮತಿಯೊಂದಿಗೆ ರೈತರು ಹೊಂದಿರುವ ಕೋವಿ ಪರವಾನಿಗೆಗಳ ನವೀಕರಣ ಪ್ರಕ್ರಿಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮಸ್ಯೆಗಳು ಎದುರಾಗುತ್ತಿವೆ. ಕಾಡಂಚಿನ ಪ್ರದೇಶಗಳಲ್ಲಿ ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆ ರಕ್ಷಣೆ ದೊಡ್ಡ ಸವಾಲಾಗಿರುವ ಹಿನ್ನೆಲೆಯಲ್ಲಿ, ಪರವಾನಿಗೆ ನವೀಕರಣ ಪ್ರಕ್ರಿಯೆಯನ್ನು ಸರಳಗೊಳಿಸಿ ರೈತರಿಗೆ ಅನುಕೂಲವಾಗುವಂತೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘ ಪ್ರಕಟಣೆಯಲ್ಲಿ ಆಗ್ರಹಿಸಿದೆ.

ವೈಜ್ಞಾನಿಕ ಶಿಫಾರಸು ಬೇಕು

ಇದರ ಜೊತೆಗೆ ಬೋರ್ಡೋ ದ್ರಾವಣಕ್ಕೆ ಪರ್ಯಾಯವಾಗಿ ಬಳಸಬಹುದಾದ ಪರಿಣಾಮಕಾರಿ ಸಿಂಪಡಣೆಗಳ ಕುರಿತು ಕೇಂದ್ರ ತೋಟಗಾರಿಕಾ ಇಲಾಖೆ, ರಾಜ್ಯ ತೋಟಗಾರಿಕಾ ಇಲಾಖೆ ಹಾಗೂ ಸಿಪಿಸಿಆರ್‌ಐ ವೈಜ್ಞಾನಿಕ ಶಿಫಾರಸುಗಳನ್ನು ಪ್ರಕಟಿಸಬೇಕು. ಕಾಪರ್ ಸಲ್ಫೇಟ್‌ಗೆ ನೀಡುತ್ತಿರುವಂತೆ ಪರ್ಯಾಯ ರೋಗನಿಯಂತ್ರಣ ಉತ್ಪನ್ನಗಳಿಗೂ ಸಹಾಯಧನ ಒದಗಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಸಂಘ ಒತ್ತಾಯಿಸಿದೆ. ಅದಲ್ಲದೆ, ಈಗಾಗಲೇ ಕಾಪರ್‌ಸಲ್ಫೇಟ್‌ಗೆ ನೀಡುತ್ತಿರುವ ಸಹಾಯಧನ ಹಾಗೂ ಮಿತಿಗಳಲ್ಲಿ ಏರಿಕೆ ಮಾಡಬೇಕಾದ ಅಗತ್ಯ ಇದೆ. ಇದುವರೆಗೂ 2-3 ಸಿಂಪಡಣೆ ಸಾಕಾಗುತ್ತಿದ್ದರೆ ಈಗ ಕನಿಷ್ಠ 4-5 ಸಿಂಪಡಣೆ ಬೇಕಾಗಿದೆ. ಹೀಗಾಗಿ ಸಹಾಯಧನ ಏರಿಕೆ ಅಥವಾ ಮಿತಿಯಲ್ಲಿ ಏರಿಕೆ ಬೇಕಾಗಿದೆ.



ಕಳಪೆ ಅಡಿಕೆ ಆಮದು

ದೇಶಕ್ಕೆ ಕಳಪೆ ಗುಣಮಟ್ಟದ ಅಡಿಕೆ ಆಮದು ಆಗುತ್ತಿರುವುದು ಹಲವು ವರ್ಷಗಳಿಂದ ಬೆಳೆಗಾರರಿಗೆ ದೊಡ್ಡ ಸಮಸ್ಯೆಯಾಗಿದೆ. ಅಕ್ರಮ ಮಾರ್ಗಗಳ ಮೂಲಕ ಆಮದು ಆಗುವ ಅಡಿಕೆ ದೇಶೀಯ ಮಾರುಕಟ್ಟೆಯ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಕಳಪೆ ಗುಣಮಟ್ಟದ ಅಡಿಕೆ ಸಾಗಾಟಕ್ಕೆ ತಡೆ ಉಂಟಾಗಿರುವ ಘಟನೆಗಳು ಕೂಡ ಈ ಸಮಸ್ಯೆಯ ಗಂಭೀರತೆಯನ್ನು ತೋರಿಸುತ್ತವೆ. ಆದ್ದರಿಂದ ಕಳಪೆ ಗುಣಮಟ್ಟದ ಅಡಿಕೆ ಆಮದು ಸಂಪೂರ್ಣ ನಿಷೇಧಿಸಲು ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸಂಘ ಒತ್ತಾಯಿಸಿದೆ.

ವಿಮೆ ಸೌಲಭ್ಯ: ಸ್ವಾಗತ

ಹವಾಮಾನ ಆಧಾರಿತ ಅಡಿಕೆ ಬೆಳೆ ವಿಮೆ ಪ್ರೀಮಿಯಂ ಪಾವತಿಗೆ ಜುಲೈ ಅಂತ್ಯದವರೆಗೆ ಅವಕಾಶ ನೀಡಿರುವುದನ್ನು ಸ್ವಾಗತಿಸಿರುವ ಸಂಘ, ಕಳೆದ 2-3 ವರ್ಷಗಳಿಂದ ಅತಿಯಾದ ಬಿಸಿಲಿನ ಪರಿಣಾಮ ಎಳೆ ಅಡಿಕೆ ಉದುರುವುದು ಹಾಗೂ ಹಿಂಗಾರ ಒಣಗುವಂತಹ ಸಮಸ್ಯೆಗಳು ಹೆಚ್ಚುತ್ತಿರುವುದನ್ನು ಉಲ್ಲೇಖಿಸಿದೆ. ಆದ್ದರಿಂದ ಮಳೆ ಹಾಗೂ ತಾಪಮಾನ ವೈಪರೀತ್ಯಗಳನ್ನು ವೈಜ್ಞಾನಿಕವಾಗಿ ದಾಖಲಿಸಿ, ಹವಾಮಾನ ವೈಪರೀತ್ಯದಿಂದ ಉಂಟಾಗುವ ನಷ್ಟಗಳಿಗೆ ಸೂಕ್ತ ಪರಿಹಾರ ಮತ್ತು ವಿಮೆ ಸೌಲಭ್ಯ ದೊರೆಯುವಂತೆ ಸರ್ಕಾರ ಹಾಗೂ ಸಂಬಂಧಿತ ಇಲಾಖೆಗಳು ಈಗಿನಿಂದಲೇ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದೆ. ಅಷ್ಟೇ ಅಲ್ಲ, ಕಳೆದ ಸಾಲಿನ ಬೆಳೆ ವಿಮಾ ಅವಧಿ ಮುಗಿದಿದೆ. ತಕ್ಷಣವೇ ಇದರ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು. ಕಳೆದ ಬಾರಿಯಂತೆ ಈ ಬಾರಿಯೂ ವಿಳಂಬ ಮಾಡಬಾರದು ಎಂದು ಆಗ್ರಹಿಸಿದೆ.

ಸಚಿವ ಡಾ.ಜಿ.ಪರಮೇಶ್ವರ್ ವ್ಯಕ್ತಿತ್ವದಿಂದ ಶ್ರೀಮಂತರು: ಶ್ರೀ ಚಂದ್ರಶೇಖರ ಸ್ವಾಮೀಜಿ

• ಮಂಗಳೂರು: ರಾಜಕೀಯವಾಗಿ ತಮ್ಮ ವೈಯಕ್ತಿಕ ಸಾಮರ್ಥ್ಯದ ಜೊತೆಗೆ ಧಾರ್ಮಿಕ ನಂಬಿಕೆಯ ಶಕ್ತಿಯ ಬಲದಿಂದ ರಾಜ್ಯ ಸರ್ಕಾರದ ಉಪ ಮುಖ್ಯಮಂತ್ರಿಯಾಗಿರುವ ಡಾ.ಜಿ.ಪರಮೇಶ್ವರ್ ಅವರು ಉನ್ನತ ಸ್ಥಾನಮಾನದಲ್ಲಿದ್ದರೂ ಸಹ ಸರಳತೆಯ ಜೀವನ ಹಾಗೂ ನಿಷ್ಠೆ, ಪ್ರಾಮಾಣಿಕತೆಯಿಂದ ಅವರು ತಮ್ಮ ವ್ಯಕ್ತಿತ್ವದಿಂದ ಶ್ರೀಮಂತರಾಗಿದ್ದಾರೆ. ಶೈಕ್ಷಣಿಕವಾಗಿ ಶಿಕ್ಷಣ ತಜ್ಞರಾಗಿ, ಸಾಮಾಜಿಕ ಚಿಂತಕರಾಗಿ ತಾನು ಬೆಳೆದು ಸರ್ವಧರ್ಮದ ಸಮಾಜವೂ ಬೆಳೆಯಬೇಕೆಂಬ ಉದಾತ್ತ ಮನೋಭಾವನೆಯ ಅಪರೂಪದ ರಾಜಕಾರಣಿ ಎಂದು ಆಧ್ಯಾತ್ಮಿಕ ವಿಶ್ವ ಗುರುಗಳಾದ ಶ್ರೀ ಚಂದ್ರಶೇಖರ ಸ್ವಾಮೀಜಿ ನುಡಿದರು.



ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ್ ಅವರನ್ನು ಶ್ರೀ ಚಂದ್ರಶೇಖರ ಸ್ವಾಮೀಜಿ ಸೇವಾಶ್ರಮದ ಅಭಿಮಾನಿಗಳ ಪರವಾಗಿ ಬೆಂಗಳೂರಿನಲ್ಲಿ ವಿಶೇಷವಾಗಿ ಸನ್ಮಾನಿಸಿ ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಸನ್ಮಾನಕ್ಕೆ ಪ್ರತಿಕ್ರಿಯಿಸಿ ಡಾ.ಜಿ.ಪರಮೇಶ್ವರ್ ಮಾತನಾಡಿ, ಜೀವನದಲ್ಲಿ ಎಷ್ಟೇ ದೊಡ್ಡ ಸ್ಥಾನಮಾನ ಸಿಕ್ಕರೂ ಸಹ ನಮ್ಮ ಕಾರ್ಯಪ್ರವೃತ್ತಿಯಲ್ಲಿ ಬದಲಾವಣೆಯಿಲ್ಲ, ನಮ್ಮ ಜವಾಬ್ದಾರಿಯನ್ನು ಅರಿತು ನಮ್ಮ ಕೆಲಸವನ್ನು ಜನರಪರವಾಗಿ ಮಾಡುವುದೇ ನಮ್ಮ ಮೊದಲ ಆದ್ಯತೆ. ಧಾರ್ಮಿಕ ಚಿಂತನೆಯಲ್ಲಿ ಸದಾ ಮಾರ್ಗದರ್ಶನ ನೀಡುತ್ತಾ ಬಂದಿರುವ ಶ್ರೀ ಚಂದ್ರಶೇಖರ ಸ್ವಾಮೀಜಿಯವರ ಸೇವೆಯನ್ನು ಹತ್ತಿರದಿಂದ ಕಂಡಿದ್ದೇನೆ, ಅವರ ಸಮಾಜ ಕಾರ್ಯವೂ ವಿಭಿನ್ನವಾಗಿ ಅರ್ಹರನ್ನು ತಲುಪುತ್ತಿದೆ ಎಂದರು.

ಈ ಸಂದರ್ಭದಲ್ಲಿ ಡಾ.ಜಿ.ಪರಮೇಶ್ವರ್ ಹಾಗೂ ಕನ್ನಿಕಾ ಪರಮೇಶ್ವರ್ ಅವರಿಗೆ ಪ್ರಭಾವಳಿ ಸಹಿತ ತಿರುಪತಿ ದೇವರ ಮೂಲ ವಿಗ್ರಹದ ಜೊತೆಗೆ ವಿಶೇಷ ಪ್ರಸಾದವನ್ನು ಸ್ವಾಮೀಜಿಯವರು ನೀಡಿ ದಂಪತಿಯನ್ನು ಆಶೀರ್ವದಿಸಿದರು.

ಶ್ರೀ ಚಂದ್ರಶೇಖರ ಸ್ವಾಮೀಜಿ ಸೇವಾಶ್ರಮದ ನಿರ್ದೇಶಕಿ ರಜನಿ ಸಿ. ಭಟ್, ಆಶ್ರಮದ ಸೇವಾ ಚಟುವಟಿಕೆಯ ಮುಖ್ಯಸ್ಥ ರಾಹುಲ್ ಸಿ. ಭಟ್, ಕಾನೂನು ಸಲಹೆಗಾರರಾದ ರೋಶಿನಿ ರಾಘವ್ ಸೂರ್ಯ, ಆಶ್ರಮದ ಗೌರವ ಸಲಹೆಗಾರರಾದ ರಾಘವ ಸೂರ್ಯ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸೇವಾ ಕಾರ್ಯಕ್ರಮದ ಸಂಯೋಜಕ ನರೇಂದ್ರ ಕೆರೆಕಾಡು ಸ್ವಾಗತಿಸಿದರು, ಆಶ್ರಮದ ಸಂಚಾಲಕ ಪುನೀತ್ ಕೃಷ್ಣ ಕಾರ್ಯಕ್ರಮ ನಿರೂಪಿಸಿದರು.

ಡಿಜಿ-ಐಜಿಪಿ ಪ್ರಶಂಸನಾ ಪದಕಕ್ಕೆ ಬಿ. ವಿಜಯಕುಮಾರ್

• ಉಡುಪಿ: ಮೆಸ್ಕಾಂ ಜಾಗೃತ ದಳದ ಹೆಡ್ ಕಾನ್ ಸ್ಟೇಬಲ್ ಬಿ. ವಿಜಯಕುಮಾರ್ ಅವರು ಇಲಾಖೆಯಲ್ಲಿ ಸಲ್ಲಿಸಿರುವ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ 2025-26ನೇ ಸಾಲಿನ 'ಡಿಜಿ-ಐಜಿಪಿ ಪ್ರಶಂಸನಾ ಪದಕ'ಕ್ಕೆ ಆಯ್ಕೆಯಾಗಿದ್ದಾರೆ.



ವಿಜಯಕುಮಾರ್ ಅವರು ಈ ಹಿಂದೆ ಮುಖ್ಯಮಂತ್ರಿಗಳ ಚಿನ್ನದ ಪದಕ ಹಾಗೂ ಭಾರತದ ರಾಷ್ಟ್ರಪತಿಗಳ ಶ್ಲಾಘನೀಯ ಪದಕವನ್ನು ಪಡೆದಿದ್ದಾರೆ. ಮೂಲತಃ ಬೆಳ್ತಂಗಡಿಯವರಾಗಿದ್ದು, ದಿವಂಗತ ಗೋಪಾಲಕೃಷ್ಣ ಹಾಗೂ ಶಾರದ ದಂಪತಿಯ ಪುತ್ರರಾಗಿದ್ದಾರೆ. ಸುಮಾರು 33 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಡಿಸಿಆರ್‌ಬಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ.

ಕುದ್ಮುಲ್ ರಂಗರಾವ್ ಪುರಭವನದಲ್ಲಿ ಎಸ್‌ಐಆರ್ ಜನಜಾಗೃತಿ ಸಮಾವೇಶ

ಸಮಗ್ರ ಮತ ಪರಿಷ್ಕರಣೆ ವೇಳೆ ಎಚ್ಚರ ಅಗತ್ಯ: ಬಿ.ಕೆ.

• ಮಂಗಳೂರು: ಸಮಗ್ರ ಮತ ಪರಿಷ್ಕರಣೆ ವೇಳೆ ಎಚ್ಚರವಹಿಸಬೇಕಾದ ಅಗತ್ಯವಿದೆ. ಬಿಎಲ್‌ಒಗಳು ಈ ನಿಟ್ಟಿನಲ್ಲಿ ವಿಶೇಷ ಮುತುವರ್ಜಿ ವಹಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಕರೆ ನೀಡಿದ್ದಾರೆ.



ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಮಂಗಳವಾರ ಎಸ್‌ಐಆರ್ ಜನಜಾಗೃತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಒಂದು ವೇಳೆ ನಿರ್ಲಕ್ಷ್ಯ ವಹಿಸಿದರೆ ಎಚ್ಚರ ತಪ್ಪಿದರೆ ಸಂವಿಧಾನಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ. ನೈಜ ಮತದಾರರು ಕೈ ತಪ್ಪದಂತೆ ಬಿಎಲ್‌ಒಗಳು ನೋಡಿಕೊಳ್ಳಬೇಕು ಎಂದರು.

ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಲಕ್ಷಾಂತರ ಜನ ಪ್ರಾಣಾರ್ಪಣೆ ಮಾಡಬೇಕಾದರೆ ಅದರ ಮೂಲ ಆಶಯ ದೇಶದ ಬಹುತ್ವವನ್ನು ಕಾಪಾಡುವುದು. ದೇಶದ ಆತ್ಮವೇ ಬಹುತ್ವ. ಬಹುತ್ವ ಎಂದರೆ ಎಲ್ಲ ಧರ್ಮ, ಭಾಷೆ, ಜಾತಿ, ಪ್ರಾಂತ್ಯಗಳು ಒಟ್ಟಾಗಿ ಬದುಕುವುದು ಎಂಬುದನ್ನು ನಮ್ಮ ಹಿರಿಯರು ಹೇಳಿಕೊಟ್ಟಿದ್ದಾರೆ. ಬಿಎಂ ಇದಿನಬ್ಬನವರು ಇದೇ ವೇದಿಕೆಯಲ್ಲಿ ಕುವೆಂಪು ಅವರ ಕವನದ ಮೂಲಕ ಸಹೋದರತ್ವದ ಕಿಚ್ಚು ಹಚ್ಚಿದ್ದರು. ಅದನ್ನು ಕೇಳಿಯೇ ನಾವು ಕುವೆಂಪು ಅವರನ್ನು ಕಲಿಯಲು ಸಾಧ್ಯವಾಯಿತು. ಇಂತಹ ಪ್ರಭುತ್ವದ ಜಿಲ್ಲೆಯಲ್ಲಿ ಕುದ್ಮುಲ್ ರಂಗರಾವ್ ರಂತಹವರು ಸಾಮಾಜಿಕ ನ್ಯಾಯ ಮತ್ತು ದಲಿತರ ಬಗ್ಗೆ ಕಾಳಜಿ ವಹಿಸಿ ಅವರಿಗೆ ವಿದ್ಯೆ ಕೊಡಿಸಿದ್ದರು ಎಂದು ಹರಿಪ್ರಸಾದ್ ಹೇಳಿದರು.

ಕಾಂಗ್ರೆಸ್ ಎಸ್‌ಐಆರ್ ಜಾಗೃತಿ ಸಮಿತಿ ರಾಜ್ಯ ಅಧ್ಯಕ್ಷ ಹಾಗೂ ವಿಧಾನ ಪರಿಷತ್‌ನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಮಾತನಾಡಿ, ನೈಜ ಮತದಾರರ ಹಕ್ಕು ರಕ್ಷಿಸುವುದು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವುದಾಗಿದೆ. ಹಾಗಾಗಿ ಎಸ್‌ಐಆರ್ ಸಂದರ್ಭ ನೈಜ ಮತದಾರರನ್ನು ಯಾವುದೇ ಸಬೂಬು ನೀಡಿ ಮತದಾರರ ಪಟ್ಟಿಯಿಂದ ತಿರಸ್ಕೃತ ಆಗದಂತೆ ನೋಡುವ ಹೊಣೆಗಾರಿಕೆ ಪಕ್ಷದ ಬಿಎಲ್‌ಎಗಳು ಹಾಗೂ ಮುಖಂಡರ ಮೇಲಿದೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಡಾ. ಮಂಜುನಾಥ್ ಭಂಡಾರಿ, ಮಾಜಿ ಸಚಿವರಾದ ವಿನಯ ಕುಮಾರ್ ಸೊರಕೆ, ರಮಾನಾಥ ರೈ ಎಸ್‌ಐಆರ್ ಜಾಗೃತಿ ಕುರಿತಂತೆ ಬಿಎಲ್‌ಎಗಳಿಗೆ ಮಾಹಿತಿ ನೀಡಿದರು.

ಕುದ್ಮುಲ್ ರಂಗರಾವ್ ಪುರಭವನದ ಆವರಣದಲ್ಲಿನ ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆಯೊಂದಿಗೆ ಸಮಾವೇಶಕ್ಕೆ ಚಾಲನೆ ನೀಡಲಾಯಿತು. ಬಳಿಕ ದೀಪ ಬೆಳಗಿ, ತೆಂಗಿನ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮವನ್ನು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಉದ್ಘಾಟಿಸಿದರು. ಉದ್ಘಾಟನೆಯ ಬಳಿಕ ಬಿಎಲ್‌ಎಗಳ ಜತೆ ಸಂವಾದ ನಡೆಯಿತು.

ಸಚಿವ ಯು.ಟಿ.ಖಾದರ್, ಮಾಜಿ ಸಚಿವರಾದ ಅಭಯಚಂದ್ರಜೈನ್, ಮಾಂಕಾಳ ವೈದ್ಯ, ಮುಖಂಡರಾದ ಜೆ.ಆರ್. ಲೋಬೋ, ಜಯಪ್ರಕಾಶ್ ಹೆಗ್ಡೆ, ಬಿ. ಇಬ್ರಾಹಿಂ, ಇನಾಯತ್ ಅಲಿ, ಮಿಥುನ್ ರೈ, ಜಿ.ಎ. ಬಾವ, ಕೃಷ್ಣಪ್ಪ, ಕೆ.ಎ. ಅಂಶುಮನ್, ಅಶೋಕ್ ಕುಮಾರ್ ಕೊಡವೂರು, ಮಮತಾ ಗಟ್ಟಿ, ಲಾವಣ್ಯ ಬಳ್ಳಾಲ್, ರಕ್ಷಿತ್ ಶಿವರಾಂ, ಮಂಜುನಾಥ ಪೂಜಾರಿ, ಎಂ.ಎ. ಗಫೂರ್, ದಿನೇಶ್ ಹೆಗ್ಡೆ, ಉದಯ ಕುಮಾರ್, ಟಿ.ಎಂ. ಶಹೀದ್ ಮತ್ತಿತರರು ಉಪಸ್ಥಿತರಿದ್ದರು.

ದ.ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜಾ ಕಾರ್ಯಕ್ರಮ ನಿರೂಪಿಸಿದರು. ಪದ್ಮರಾಜ್ ವಂದಿಸಿದರು.

ಹಾರ ತುರಾಯಿ ಬೇಡ

ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಪ್ರಥಮ ಬಾರಿಗೆ ಮಂಗಳೂರಿಗೆ ಭೇಟಿ ನೀಡಿದ ಬಿ.ಕೆ. ಹರಿಪ್ರಸಾದ್ ಅವರು ಈಗಾಗಲೇ ತಮಗೆ ಸನ್ಮಾನ, ಗೌರವ ಬೇಡ, ಏನಾದರೂ ಕೊಡುವುದಿದ್ದರೆ ಪಕ್ಷದ ನಿಧಿಗೆ ಹಣ ಕೊಡಿ ಎಂದು ಹೇಳಿದ್ದರಿಂದ ಸರಳವಾಗಿ ಅವರನ್ನು ಕಾರ್ಯಕ್ರಮಕ್ಕೆ ಬರಮಾಡಿಕೊಳ್ಳಲಾಯಿತು. ಮಾತ್ರವಲ್ಲದೆ, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಜತೆ ವೇದಿಕೆಯ ಎದುರುಗಡೆ ಕುಳಿತುಕೊಂಡೇ ಪಕ್ಷದ ಮುಖಂಡರ ಮಾತುಗಳನ್ನು ಆಲಿಸುವ ಮೂಲಕ ಹೊಸತನಕ್ಕೆ ನಾಂದಿ ಹಾಡಿದರು.







ರಾಷ್ಟ್ರಪತಿ ಭವನದಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಸಾಧಕ ಡಾ.ಪ್ರಭಾಕರ್ ಬಸವಪ್ರಭು ಕೋರೆ, ಪ್ರಸಾರ ಭಾರತಿಯ ಸಾಧಕ ಶಶಿ ಶೇಖರ್ ವೆಂಪತಿ, ಹಿಮೋಫಿಲಿಯಾ ರೋಗಿಗಳ ಪಾಲಿನ ಆಶಾಕಿರಣ ಡಾ.ಸುರೇಶ್ ಹನಗವಾಡಿ, ಕಿಚನ್ ಮೊಗಲ್ ಟಿ.ಟಿ. ಜಗನ್ನಾಥನ್ ಅವರಿಗೆ ಮರಣೋತ್ತರ, ರಕ್ಷಣಾ ಮತ್ತು ವಿಮಾನಯಾನ ರಂಗದ ಹೆಮ್ಮೆಯ ವಿಜ್ಞಾನಿ ಡಾ.ಶುಭಾ ವೆಂಕಟೇಶ್ ಅಯ್ಯಂಗಾರ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು.

ರಾಜೇಶ್ ಎಕ್ಸ್‌ಪೋರ್ಟ್ ಮೇಲೆ ಇಡಿ ದಾಳಿ

• **ಹೊಸದಿಲ್ಲಿ:** ಚಿನ್ನ ಶುದ್ಧೀಕರಣ ಮತ್ತು ಆಭರಣ ತಯಾರಿಕಾ ಕ್ಷೇತ್ರದ ಪ್ರಮುಖ ಸಂಸ್ಥೆಯಾಗಿರುವ ಬೆಂಗಳೂರು ಮೂಲದ ರಾಜೇಶ್ ಎಕ್ಸ್‌ಪೋರ್ಟ್ ಲಿಮಿಟೆಡ್ ವಿರುದ್ಧ ಜಾರಿ ನಿರ್ದೇಶನಾಲಯ ಮಂಗಳವಾರ ದಾಳಿ ನಡೆಸಿದೆ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಲ್ಲಿ ಬೆಂಗಳೂರು ಮತ್ತು ಮುಂಬೈನಲ್ಲಿರುವ ಕಂಪನಿಗೆ ಸಂಬಂಧಿಸಿದ ಒಟ್ಟು 9 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಕಂಪನಿಯ ಹಣಕಾಸು ವ್ಯವಹಾರಗಳಲ್ಲಿ ಭಾರೀ ಅಕ್ರಮ ನಡೆದಿರುವ ಶಂಕೆ ವ್ಯಕ್ತಪಡಿಸಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ ತನಿಖೆ ಆರಂಭಿಸಿದ ಬೆನ್ನಲ್ಲೇ ಜಾರಿ ನಿರ್ದೇಶನಾಲಯವೂ ಕಾರ್ಯಪ್ರವೃತ್ತವಾಗಿದೆ. ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘನೆ, ಬೇನಾಮಿ ವ್ಯಕ್ತಿಗಳ ಹೆಸರಿನಲ್ಲಿ ಕಂಪನಿಯ ಷೇರುಗಳ ವಹಿವಾಟು ಹಾಗೂ ವಿದೇಶಗಳಿಗೆ ಹಣ ವರ್ಗಾವಣೆ ಮಾಡಿರುವ ಆರೋಪಗಳ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

170 ಕೋಟಿ ರೂ.ಗೂ ಅಧಿಕ ಹಣ ವಿದೇಶಕ್ಕೆ? ಕಂಪನಿಯಿಂದ 2 ಕೋಟಿ ಅಮೆರಿಕನ್ ಡಾಲರ್‌ಗಿಂತಲೂ ಅಧಿಕ ಮೊತ್ತವನ್ನು ಅಕ್ರಮವಾಗಿ ವಿದೇಶಕ್ಕೆ ವರ್ಗಾಯಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಶಂಕಿಸಿದೆ. ಭಾರತೀಯ ರೂಪಾಯಿ ಮೌಲ್ಯದಲ್ಲಿ ಇದು ಸುಮಾರು 170 ಕೋಟಿ ರೂ.ಗೂ ಅಧಿಕವಾಗುತ್ತದೆ. ಕಂಪನಿಯ ಲೆಕ್ಕಪತ್ರಗಳಲ್ಲಿ ಘೋಷಿಸಿರುವ ಚಿನ್ನದ ದಾಸ್ತಾನು ಮತ್ತು ವಾಸ್ತವಿಕ ದಾಸ್ತಾನಿನ ನಡುವೆ ಶೇ.40ರಷ್ಟು ವ್ಯತ್ಯಾಸವಿದೆ ಎಂಬ ಆರೋಪವೂ ತನಿಖೆಯಲ್ಲಿದೆ. ಸುಮಾರು 3 ಸಾವಿರ ಕೋಟಿ ರೂ. ವ್ಯಾಪಾರ ಬಾಕಿಯನ್ನು ಕಾಲ್ಪನಿಕ ಚಿನ್ನದ ಆಮದಿಗೆ ಹೊಂದಾಣಿಕೆ ಮಾಡಿರುವ ಸಾಧ್ಯತೆಯಿದೆ. ಆದರೆ ಈ ಚಿನ್ನವನ್ನು ನಿಜವಾಗಿಯೂ ಪೂರೈಸಲಾಗಿದೆಯೇ ಎಂಬುದು ಅನುಮಾನಾಸ್ಪದವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇಜೆ

ಹಿಂದೂ ಧರ್ಮ ಆರೆಸ್ಸೆಸ್‌ನ ಸೊತ್ತಲ್ಲ
– ಬಿ.ಕೆ.ಹರಿಪ್ರಸಾದ್
– ಖಂಡಿತ ಅಲ್ಲ, ಹಾಗಂತ ಅವರು ಹೇಳಿಯೂ ಇಲ್ಲ, ಆದರೆ ಆರೆಸ್ಸೆಸ್ ಇಲ್ಲವಾಗಿದ್ದರೆ ಭಾರತದಲ್ಲಿ ಹಿಂದೂಗಳು ಹಿಂದೂಗಳಾಗಿ ಬದುಕಲಾಗುತ್ತಿರಲಿಲ್ಲ ಎಂಬುದರಲ್ಲಿ ಸಂಶಯವಿಲ್ಲ!

ದಿನ ಭವಿಷ್ಯ

ಮೇಷ
ವೃತ್ತಿಕ್ಷೇತ್ರದಲ್ಲಿ ನಿಮಗೆ ಪ್ರತಿಸ್ಪರ್ಧಿ ಹುಟ್ಟಿಕೊಳ್ಳಲಿದೆ. ನಿಮ್ಮ ನಿರ್ವಹಣೆ ಉತ್ತಮ ಪಡಿಸಿ. ಕೌಟುಂಬಿಕ ಸಾಮರಸ್ಯ, ಸೌಹಾರ್ದ.

ವೃಷಭ
ಹರ್ಷತರುವ ಬೆಳವಣಿಗೆ. ಆದರೂ ನಿಮಗೆ ಆನಂದಿಸುವ ಮನಸ್ಸಿಲ್ಲ. ಪ್ರೀತಿಯಲ್ಲಿ ತೊಡಕು. ಖರ್ಚು ಹೆಚ್ಚಳದ ಆತಂಕ.

ಮಿಥುನ
ನಿಮ್ಮ ಕೆಲಸ ನೀವು ಮಾಡುತ್ತಿರಿ. ಟೀಕೆಗೆ ಹೆದರಬೇಕಿಲ್ಲ. ಆರ್ಥಿಕ ತೊಡಕು ನಿವಾರಣೆ. ಬಸುರಿಯರು ಹೆಚ್ಚು ಎಚ್ಚರ ವಹಿಸಬೇಕು.

ಕಟಕ
ಉದ್ಯೋಗಾವಕಾಶ ಲಭ್ಯ. ಸಂಬಂಧವನ್ನು ಜತನದಿಂದ ಕಾಪಾಡಿ. ವದಂತಿ ನಂಬಬೇಡಿ. ಹಿರಿಯರಿಗೆ ಉಸಿರಾಟದ ಸಮಸ್ಯೆ ಸಂಭವ.

ಸಿಂಹ
ಇತರರ ಜತೆ ಸಂವಹನ ಸಾಧಿಸುವಲ್ಲಿ ಯಶಸ್ಸು. ಇದರಿಂದ ನಿಮ್ಮ ಕೆಲಸ ಸುಗಮ. ಆಪ್ತರ ಜತೆ ಪ್ರವಾಸ ಸಾಧ್ಯತೆ. ಆರ್ಥಿಕ ಉನ್ನತಿ.

ಕನ್ಯಾ
ಕಾಲಮಿತಿಯಲ್ಲಿ ಕೆಲಸ ಪೂರೈಸಿ. ಟೀಕೆಗೆ ಎರವಾಗಬೇಡಿ. ವೃತ್ತಿ ಬದಲಾವಣೆಯ ಅವಕಾಶ ತೆರೆದಿದೆ. ಶೇರು ಹೂಡಿಕೆ ಒಳಿತು ತಾರದು.

ತುಲಾ
ಪಾಲುದಾರಿಕೆ ಕಡಿದುಕೊಳ್ಳುವುದಕ್ಕಿಂತ ಸೌಹಾರ್ದದಿಂದ ಮಾಡಿ. ವಿರೋಧ ಕಟ್ಟಿಕೊಳ್ಳದಿರಿ. ಕೌಟುಂಬಿಕ ಸೌಹಾರ್ದ. ಆರ್ಥಿಕ ಪ್ರಗತಿ.

ವೃಶ್ಚಿಕ
ನಿಮ್ಮ ಸುತ್ತ ಸೌಹಾರ್ದಮಯ ಪರಿಸರ. ನಿರೀಕ್ಷಿಸಿದ ಆರ್ಥಿಕ ಪ್ರಗತಿ ಸಾಧ್ಯವಾಗದು. ಗಾಯದ ಸಮಸ್ಯೆ ಸಂಭವ.

ಧನು
ಆಪ್ತರ ಜತೆಗಿನ ಉದ್ವಿಗ್ನತೆ ಹೆಚ್ಚಲಿದೆ. ಮನಶ್ಶಾಂತಿ ದೂರ. ವೃತ್ತಿಯಲ್ಲಿ ಅಹಿತ ಪ್ರಸಂಗ ಎದುರಿಸುವಿರಿ. ಖರ್ಚು ಹೆಚ್ಚಲಿದೆ.

ಮಕರ
ವೃತ್ತಿಯ ಒತ್ತಡವು ನೆಮ್ಮದಿ ಕೆಡಿಸುವುದು. ಆತ್ಮೀಯರ ಜತೆ ಕಾಲ ಕಳೆಯಿರಿ. ಖರ್ಚು ನಿಯಂತ್ರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಿ.

ಕುಂಭ
ಹಲವಾರು ಹೊಣೆ ನಿಮ್ಮ ಹೆಗಲೇರುವುದು. ಸೂಕ್ತ ನೆರವೂ ಲಭ್ಯ. ಹೊಟ್ಟೆ ಸಂಬಂಧಿ ಅನಾರೋಗ್ಯ ಕಾಡಬಹುದು. ಶೇರು ಹೂಡಿಕೆ ಲಾಭಕರ.

ಮೀನ
ಸಣ್ಣ ವಿಷಯಕ್ಕೆ ಮನೆಯಲ್ಲಿ ವಾಗ್ವಾದ ನಡೆದೀತು. ಮಾತಿಗೆ ಮಾತು ಕೊಡಬೇಡಿ. ವೃತ್ತಿ ಒತ್ತಡ ನಿವಾರಣೆ, ಗುರಿ ಈಡೇರಿಕೆ.

ರಾಹುಕಾಲ: 12.00–1.30
ಗುಳಿಕಕಾಲ: 10.30–12.00

ಅದೃಷ್ಟ ಸಂಖ್ಯೆ : 3,7,0,2

ನಗರಾಭಿವೃದ್ಧಿಗೆ ಯೋಜನೆ ರೂಪಿಸಲು ಸಚಿವರಿಗೆ ತೇಜಸ್ವಿಸೂರ್ಯ ಪತ್ರ

ಹಳೆ ಯೋಜನೆ ಶೀಘ್ರ ಮುಗಿಸಿ



• **ಬೆಂಗಳೂರು:** ನಗರದ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿ ಜಾರಿ ಮಾಡುವಂತೆ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಭೈರೇಗೌಡ ಅವರಿಗೆ ಪತ್ರ ಬರೆದಿರುವುದಾಗಿ ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಕೃಷ್ಣ ಭೈರೇಗೌಡ ಅವರನ್ನು ಭೇಟಿ ಮಾಡಿ ನಗರದ ಅಭಿವೃದ್ಧಿ ಮತ್ತು ನಾಗರಿಕರಿಗೆ ಅನುಕೂಲವಾಗುವ 15 ಅಂಶಗಳ ಬಗ್ಗೆ ವಿಸ್ತಾರವಾಗಿ ಚರ್ಚೆ ನಡೆಸಿರುವುದಾಗಿ ತಿಳಿಸಿದರು.

ನಗರದ ಜನರ ಜೀವನ ಮಟ್ಟ ಸುಧಾರಿಸುವ ಕ್ರಮಗಳಿಗೆ ಶೇ.100ರಷ್ಟು ಬೆಂಬಲವನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ನೀಡಲಾಗುವುದು. ಸಚಿವರಿಗೆ ಅಭಿವೃದ್ಧಿ ಸಂಬಂಧಿ ವಿವರವನ್ನು ಅಂಕಿ-ಅಂಶಗಳ ಸಮೇತ ನೀಡಿದ್ದೇನೆ. ರಾಜ್ಯ ಸರ್ಕಾರದ 30ಕ್ಕೂ ಹೆಚ್ಚು ಯೋಜನೆಗಳು ಬಾಕಿಯಿವೆ. ಹೊಸ ಯೋಜನೆ ಜಾರಿ ಮಾಡುವ ಮೊದಲು ಹಳೆಯ ಯೋಜನೆಗಳನ್ನು ಶೀಘ್ರ ಮುಗಿಸಬೇಕು ಎಂದು ತಿಳಿಸಿರುವುದಾಗಿ ವಿವರಿಸಿದರು.

ಬಿಎಂಆರ್‌ಸಿಎಲ್, ಬಿಡಿಎ, ಬಿಎಂಎಲ್‌ಟಿಎ, ಕೆಆರ್‌ಐಡಿಎಲ್ ಸೇರಿ 12ಕ್ಕೂ ಹೆಚ್ಚು ಮೂಲ ಸೌಕರ್ಯ ಏಜೆನ್ಸಿಗಳು ಬೆಂಗಳೂರಿನಲ್ಲಿವೆ. ಇವುಗಳ ನಡುವೆ ಅಂತರ ಸಮನ್ವಯ ಏಜೆನ್ಸಿಯಿಲ್ಲ. ಆದ್ದರಿಂದ ಬಿಎಂಎಲ್‌ಟಿಎಗೆ ಅಧ್ಯಕ್ಷರ ನೇಮಕ ಮಾಡಿ ನೋಡಲ್ ಏಜೆನ್ಸಿ ಮಾಡಬೇಕು. ಮೆಟ್ರೊ ವಿಸ್ತರಣೆ, ರಸ್ತೆ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗದ ಬಗ್ಗೆ ಚರ್ಚಿಸಿರುವುದಾಗಿ ಹೇಳಿದರು.

ಮೆಟ್ರೋ ಬೇಗ ಆರಂಭಿಸಿ: ನಾಲ್ಕುವರೆ ವರ್ಷಗಳಿಂದ ಹೊಸ ಮೆಟ್ರೊ ಕಾಮಗಾರಿ ಆರಂಭವಾಗಿಲ್ಲ. ಕೇಂದ್ರ ಸರ್ಕಾರ ಒಪ್ಪಿಗೆ ನೀಡಿರುವ ಮೆಟ್ರೊ ಮೂರನೇ ಹಂತದ ಆರೆಂಜ್ ಮಾರ್ಗಕ್ಕೆ ಎರಡು ವರ್ಷ ಆದರೂ ಟೆಂಡರ್ ಆಗಿಲ್ಲ. ಇದರ ವೆಚ್ಚ ಹೆಚ್ಚಳವಾಗುತ್ತಿದೆ. ವೆಚ್ಚ ಕಡಿಮೆ ಮಾಡಲು ನಿಲ್ದಾಣದ ಪ್ಲಾಟ್‌ಫಾರಂ ಉದ್ದ ಕಡಿಮೆ ಮಾಡಿದರೆ ಉಪಯೋಗ ಆಗದು. ಬೇರೆ ಮಹಾನಗರದಲ್ಲಿ ಮೆಟ್ರೊ ಓಡಾಟ ಮುಂಜಾನೆ ಬೇಗ ಆರಂಭವಾಗುತ್ತದೆ. ಅದೇ ರೀತಿ ಬೆಂಗಳೂರಿನಲ್ಲೂ ಆರಂಭ ಮಾಡಬೇಕು ಎಂದು ಮನವಿ ಮಾಡಿದ್ದೇನೆ ಎಂದು ವಿವರಿಸಿದರು.

ಶ್ವೇತಪತ್ರ ಬಿಡುಗಡೆ ಮಾಡಿ: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಾವಿರಾರು ಕೋಟಿಯನ್ನು ಗುಂಡಿ ಮುಚ್ಚಲು ವ್ಯಯಿಸಿರುವುದಾಗಿ ಹೇಳಿದೆ. ಒಂದೇ ವರ್ಷದಲ್ಲಿ ಸಾವಿರಾರು ಕೋಟಿ ಹಣ ಘೋಷಣೆ ಮಾಡಿದ್ದಾರೆ. ಹಣ ಬಿಡುಗಡೆ ಸಹ ಮಾಡಿದ್ದೇವೆ ಎನ್ನುತ್ತಾರೆ. ಆದರೂ ಗುಂಡಿಗಳು ಮಾತ್ರ ಹಾಗೇ ಇವೆ. ಎಸ್‌ಆರ್‌ಜಿ ಮಾಹಿತಿ ಪ್ರಕಾರ ಗುಂಡಿಗೆ ಬಿದ್ದು ಸಾಯುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಹಾಗಾದರೆ ಹಣ ಎಲ್ಲಿ ಹೋಗಿದೆ? ರಸ್ತೆ ಗುಂಡಿ ದುರಸ್ತಿಗೆ ಮೂರು ವರ್ಷದಲ್ಲಿ ಎಷ್ಟು ಹಣ ವ್ಯಯಿಸಿದ್ದೀರಿ ಎಂಬುದರ ಬಗ್ಗೆ 30 ದಿನಗಳೊಳಗೆ ಶ್ವೇತಪತ್ರ ಬಿಡುಗಡೆ ಮಾಡಬೇಕು ಎಂದು ಸಚಿವರಿಗೆ ಆಗ್ರಹಿಸಿದ್ದೇನೆ ಎಂದು ತೇಜಸ್ವಿ ಸೂರ್ಯ ತಿಳಿಸಿದರು.

ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಮುಖಂಡ ಶ್ರೀಧರ್ ರೆಡ್ಡಿ ಸುದ್ದಿಗೋಷ್ಠಿಯಲ್ಲಿದ್ದರು.

ಬಿಜೆಪಿ ವರಿಷ್ಠರಿಗೆ ಅಡ್ಡ ಮತದಾನದ ಮಾಹಿತಿ

ಪುಟ 0➜ಈ ತಂಡವು ಜೂ. 25ರೊಳಗೆ ವರದಿ ನೀಡುವಂತೆಯೂ ಸೂಚನೆ ನೀಡಿದ್ದಾರೆ. ಶಿಸ್ತಿನ ಪಕ್ಷದಲ್ಲಿ ಇಂತಹ ಅಶಿಸ್ತು ಕಂಡುಬಂದಿರುವುದರಿಂದ ಅಂತಹ ಶಾಸಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಪಕ್ಷದ ನಾಯಕರು, ಕಾರ್ಯಕರ್ತರು ಆಗ್ರಹಿಸುತ್ತಿದ್ದಾರೆ.

ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ಕೊಟ್ಟಿದ್ದೇವೆ: ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ

ಪುಟ 0➜ಪಕ್ಷ ಬಲಪಡಿಸುವ ನಿಟ್ಟಿನಲ್ಲಿ ಸಂಘಟನಾತ್ಮಕ ಸಲಹೆಗಳನ್ನೂ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರುವ ನಿಟ್ಟಿನಲ್ಲಿ ಒಟ್ಟಿಗೆ ಸೇರಿ ಕೆಲಸ ಮಾಡಲು ತಿಳಿಸಿದ್ದಾಗಿ ವಿವರಿಸಿದ್ದಾರೆ. ಪ್ರಕರಣದ ಕುರಿತು ಹಿರಿಯ ಮುಖಂಡ



ಸಿ.ಟಿ.ರವಿ ಅವರ ನೇತೃತ್ವದಲ್ಲಿ ಒಂದು ಸತ್ಯಶೋಧನಾ ಸಮಿತಿ ಮಾಡಿದ್ದೇವೆ. ಅವರು ನಮಗೆ ವರದಿ ಕೊಡಲಿದ್ದು, ಬಳಿಕ ಸಮಗ್ರ ವರದಿಯನ್ನು ರಾಷ್ಟ್ರೀಯ ಅಧ್ಯಕ್ಷರಿಗೆ ಕೊಡಲಿದ್ದೇವೆ ಎಂದು ತಿಳಿಸಿದ್ದಾರೆ. ಧರ್ಮಸ್ಥಳ ಶ್ರೀ ಕ್ಷೇತ್ರದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯುವುದು ಬೇಡ ಎಂಬ ಸಲಹೆಯ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಆ ಬಗ್ಗೆ ನನ್ನ ಅಭಿಪ್ರಾಯ ತಿಳಿಸಿದ್ದೇನೆ. ಅಂತಿಮವಾಗಿ ಪ್ರತಿಪಕ್ಷ ನಾಯಕ ಆರ್.ಅಶೋಕ ಅವರು ಎಲ್ಲರ ಜತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಿ ಎಂದು ಹೇಳಿದ್ದಾರೆ. ಪ್ರತಿಪಕ್ಷ ನಾಯಕ ಆರ್.ಅಶೋಕ ಮಾತನಾಡಿ, ಅಡ್ಡ ಮತದಾನ ಸಂಬಂಧದ ಮಾಹಿತಿ ರಾಷ್ಟ್ರೀಯ ಅಧ್ಯಕ್ಷರ ಬಳಿ ಇದೆ. ನಾವು ಕೊಟ್ಟ ಮಾಹಿತಿ ಮೇರೆಗೆ ತಪ್ಪು ಮಾಡಿದವರ ವಿರುದ್ಧ ಸರಿಯಾದ ಸಮಯಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಪಕ್ಷಕ್ಕೆ ದ್ರೋಹ ಬಗೆದವರಿಗೆ, ಮೋಸ ಮಾಡಿದವರಿಗೆ ಸರಿಯಾದ ಪಾಠ ಕಲಿಸುವುದಾಗಿ ಸ್ಪಷ್ಟವಾಗಿ ಹೇಳಿದ್ದಾರೆಂದು ವಿವರಿಸಿದ್ದಾರೆ. ಪಕ್ಷವನ್ನು ಕರ್ನಾಟಕದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಿಸುವ ದೃಷ್ಟಿಯಿಂದ ಒಗ್ಗಟ್ಟಿನಿಂದ, ಒಳ್ಳೆಯ ರೀತಿಯಿಂದ ಮುನ್ನಡೆಯುವಂತೆ ತಿಳಿಸಿದ್ದಾರೆ. ಅಡ್ಡ ಮತದಾನ ಮಾಡಿದವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಕೇಂದ್ರದ ನಾಯಕರು ತಿಳಿಸಿದ್ದಾರೆ ಎಂದಿದ್ದಾರೆ.

ವಿದೇಶಿ ದೇಣಿಗೆಯಲ್ಲಿ ಮತಾಂತರಕ್ಕೆ ಅಂಕುಶ

ಪುಟ 0➜ಈಗಾಗಲೇ ವಿದೇಶಿ ದೇಣಿಗೆ ಸ್ವೀಕರಿಸುವ ಪರವಾನಗಿ ಹೊಂದಿರುವ ಸಂಸ್ಥೆಗಳು ಕೂಡ ಒಂದು ವರ್ಷದೊಳಗೆ ಈ ಎಲ್ಲ ವಿವರಗಳನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಬೇಕು.

ಮತಾಂತರ ಹೊರತುಪಡಿಸಿ ಧಾರ್ಮಿಕ ಕಾರ್ಯಕ್ಕೆ ನೆರವು: ಹೊಸ ನಿಯಮಗಳಲ್ಲಿ ಧಾರ್ಮಿಕ ಕ್ಷೇತ್ರದ 16 ಚಟುವಟಿಕೆಗಳಿಗೆ ವಿದೇಶಿ ದೇಣಿಗೆ ಪಡೆಯಲು ಅವಕಾಶ ನೀಡಲಾಗಿದೆ. ಧಾರ್ಮಿಕ ಸ್ಥಳಗಳ ನಿರ್ಮಾಣ, ನವೀಕರಣ ಮತ್ತು ನಿರ್ವಹಣೆ, ಭಕ್ತಿಗೀತೆಗಳ ಪ್ರೋತ್ಸಾಹ, ಅಂತರ್ಧರ್ಮ ಸಂವಾದ, ಸ್ಮಶಾನ ಮತ್ತು ಸಮಾಧಿ ಸ್ಥಳಗಳ ಅಭಿವೃದ್ಧಿ ಹಾಗೂ ನಿರ್ವಹಣೆ, ಪವಿತ್ರ ಅವಶೇಷಗಳು, ಧಾರ್ಮಿಕ ಕ್ಷೇತ್ರಗಳು ಮತ್ತು ಪುರಾತತ್ವ ಧಾರ್ಮಿಕ ಪರಂಪರೆಯ ರಕ್ಷಣೆಗೆ ವಿದೇಶಿ ಹಣ ಬಳಸಬಹುದಾಗಿದೆ.

ಧಾರ್ಮಿಕ ತತ್ವಶಾಸ್ತ್ರದ ಅಧ್ಯಯನ, ದಾಖಲೀಕರಣ ಮತ್ತು ಸಂರಕ್ಷಣೆಯಲ್ಲಿ ತೊಡಗಿರುವ ಸಂಸ್ಥೆಗಳ ರಕ್ಷಣೆ, ಧಾರ್ಮಿಕ ಶಿಕ್ಷಣ, ಸತ್ಸಂಗ, ಪ್ರವಚನ, ಧ್ಯಾನ ಶಿಬಿರಗಳು ಹಾಗೂ ಸ್ಥಳೀಯ ನಂಬಿಕೆ ಮತ್ತು ಬುಡಕಟ್ಟು ಧಾರ್ಮಿಕ ಪದ್ಧತಿಗಳ ದಾಖಲೀಕರಣ ಮತ್ತು ಪುನರುಜ್ಜೀವನಕ್ಕೂ ನೆರವು ಪಡೆಯಬಹುದಾಗಿದೆ. ಆದರೆ ಈ ಎಲ್ಲ ಚಟುವಟಿಕೆಗಳನ್ನು ಮತಪ್ರಚಾರ ಮತ್ತು ಮತಾಂತರ ಹೊರತುಪಡಿಸಿ ನಡೆಸಬೇಕು ಎಂದು ನಿಯಮಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಧಾರ್ಮಿಕ ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು ಮತ್ತು ದಾಖಲೆ ಭಂಡಾರಗಳ ಸ್ಥಾಪನೆ, ಧಾರ್ಮಿಕ ಆಧಾರಿತ ಸಮಾಲೋಚನಾ ಕೇಂದ್ರಗಳು, ಮಾದಕವಸ್ತು ವ್ಯಸನಮುಕ್ತಿ ಕೇಂದ್ರಗಳು ಮತ್ತು ಸಾಮಾಜಿಕ ಆರೈಕೆ ಕಾರ್ಯಕ್ರಮಗಳಿಗೂ ವಿದೇಶಿ ನಿಧಿ ಪಡೆಯಬಹುದಾಗಿದೆ. ವಿಗ್ರಹ ತಯಾರಿಕೆ, ಚರ್ಚ್ ಕಲೆ, ಧಾರ್ಮಿಕ ಗ್ರಂಥಗಳ ಲಿಪಿಕಲೆ ಮತ್ತು ಧಾರ್ಮಿಕ ಪ್ರತಿಮಾಶಾಸ್ತ್ರದಂತಹ ಸಾಂಪ್ರದಾಯಿಕ ಪವಿತ್ರ ಕಲೆಗಳ ತರಬೇತಿಗೂ ಅವಕಾಶ ಕಲ್ಪಿಸಲಾಗಿದೆ.

ಶೇ.75 ಬಳಕೆ ಬಳಿಕ ಮುಂದಿನ ಕಂತು

ಪುಟ 0➜ಹಣವನ್ನು ನಿಗದಿತ ಉದ್ದೇಶಕ್ಕೆ ಬಳಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸ್ಥಳ ಪರಿಶೀಲನೆಯನ್ನೂ ನಡೆಸಲಾಗುತ್ತದೆ. ಪರಿಶೀಲನೆಯ ಬಳಿಕವೇ ಮುಂದಿನ ಕಂತಿನ ವಿದೇಶಿ ದೇಣಿಗೆ ಬಿಡುಗಡೆಗೆ ಅವಕಾಶ ದೊರೆಯಲಿದೆ.

ವಿದೇಶಿಯರು ಪ್ರಮುಖ ಹುದ್ದೆಯಲ್ಲಿದ್ದರೆ ಪರವಾನಗಿ ಕಷ್ಟ

ಪುಟ 0➜ಆದರೆ ನಿರ್ದಿಷ್ಟ ಪ್ರಕರಣಗಳಲ್ಲಿ ಕೇಂದ್ರ ಸರಕಾರವು ವಿಶೇಷ ಆದೇಶದ ಮೂಲಕ ವಿನಾಯಿತಿ ನೀಡಬಹುದಾಗಿದೆ. ಪ್ರಮುಖ ಪದಾಧಿಕಾರಿ ಎಂಬ ವ್ಯಾಖ್ಯಾನವನ್ನೂ ವಿಸ್ತರಿಸಲಾಗಿದ್ದು, ಕಂಪನಿಯ ನಿರ್ದೇಶಕರು, ಸಂಸ್ಥೆಯ ಪಾಲುದಾರರು, ಟ್ರಸ್ಟಿಗಳು, ಹಿಂದು ಅವಿಭಕ್ತ ಕುಟುಂಬದ ಕರ್ತ್ಯ ಮತ್ತು ಸಂಘಟನೆಯ ನಿರ್ವಹಣೆಯ ಮೇಲೆ ನಿಯಂತ್ರಣ ಹೊಂದಿರುವ ಯಾವುದೇ ವ್ಯಕ್ತಿಯನ್ನು ಇದರ ವ್ಯಾಪ್ತಿಗೆ ತರಲಾಗಿದೆ.

ರೈತರ ವಿಶ್ವಾಸದೊಂದಿಗೇ ಟೌನ್‌ಶಿಪ್

ಪುಟ 0➜ಬಿಡಿಎ, ಹುಡ್ಕೊ ಇವುಗಳಿಂದ ಯಾವ ರೀತಿ ಅನುದಾನ ಒದಗಿಸಬೇಕು ಎಂಬ ಬಗ್ಗೆ ವಿಸ್ತೃತವಾಗಿ ಚರ್ಚೆ ಆಗಿದೆ. ಆದರೆ ಈ ಯೋಜನೆ ಈಗ ರಾಜಕೀಯ ತಿರುವು ಪಡೆಯುತ್ತಿರುವುದರಿಂದ ಇದನ್ನು ರಾಜಕೀಯದಿಂದ ದೂರ ಇಟ್ಟು ಯಾವ ರೀತಿ ಯೋಜನೆಯನ್ನು ಜಾರಿ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ, ಮುಖ್ಯಮಂತ್ರಿಗಳು ಎಲ್ಲರೂ ಸೇರಿ ತೀರ್ಮಾನ ಮಾಡುತ್ತೇವೆ ಎಂದು ಪರಮೇಶ್ವರ್ ತಿಳಿಸಿದರು.

ಬಿಡದಿ ವಿಚಾರದಲ್ಲಿ ಇಬ್ಬರೂ ಬರೆದಿರುವ ಪತ್ರ ನೋಡಿದ್ದೇನೆ: ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಕುಮಾರ ಸ್ವಾಮಿ ಅವರಿಗೆ ಸಿಎಂ ಡಿಕೆಶಿ ಪತ್ರ ಬರೆದಿದ್ದಾರೆ. ಅದಕ್ಕೆ ಪ್ರತಿಯಾಗಿ ಕುಮಾರಸ್ವಾಮಿ ಉತ್ತರ ಕೊಟ್ಟಿದ್ದಾರೆ. ನೀವು ಬಿಡದಿಗೆ ಬನ್ನಿ, ಅಲ್ಲಿನ ರೈತರನ್ನು, ಸಂಬಂಧಪಟ್ಟವರನ್ನು ಕರೆದು, ಅಲ್ಲಿಯೇ ಚರ್ಚೆ ಮಾಡೋಣ ಎಂದು ಕರೆದಿದ್ದಾರೆ. ಆದರೆ 26ಕ್ಕೆ ಬೇಡ, ನನಗೆ ಪೂರ್ವ ನಿಯೋಜಿತ ಕಾರ್ಯಕ್ರಮ ಇದೆ, 27ಕ್ಕೆ ಬನ್ನಿ ಎಂದು ಕುಮಾರಸ್ವಾಮಿ ಅವರು ಕರೆದಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ನೋಡಬೇಕು ಎಂದು ಪರಮೇಶ್ವರ್ ತಿಳಿಸಿದರು.

ಭಾರತದ 36 ರಾಫೆಲ್ ಸುರಕ್ಷಿತ

ಪುಟ 0➜ಸೆಪ್ಟೆಂಬರ್ 2026ರ ನಂತರವೂ ರಾಫೆಲ್ ವಿಮಾನಗಳ ನಿರ್ವಹಣೆ, ತಾಂತ್ರಿಕ ನೆರವು ಮತ್ತು ಬಿಡಿಭಾಗಗಳ ಪೂರೈಕೆ ನಿರಂತರವಾಗಿ ನಡೆಯುವಂತೆ ಈ ವ್ಯವಸ್ಥೆ ರೂಪಿಸಲಾಗಿದೆ. ಐದು ತಿಂಗಳ ಅವಧಿಯಲ್ಲಿ ಸುಮಾರು 2,250 ಗಂಟೆಗಳ ಹಾರಾಟ ಯೋಜಿಸಲಾಗಿದೆ. ದೀರ್ಘಾವಧಿಯ ನಿರ್ವಹಣಾ ಒಪ್ಪಂದ ಅಂತಿಮಗೊಳ್ಳುವವರೆಗೆ ಕಾರ್ಯಾಚರಣೆಯಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ಮಧ್ಯಂತರ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಜಾಲತಾಣಗಳಲ್ಲಿ ಸುಳ್ಳಿನ ಬಲೆ: ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ ಆಪರೇಷನ್ ಸಿಂದೂರದ ವೇಳೆ ಹಲವು ರಾಫೆಲ್ ವಿಮಾನಗಳನ್ನು ಹೊಡೆದುರುಳಿಸಿದ್ದಾಗಿ ಪಾಕಿಸ್ತಾನ ಅಧಿಕೃತ ಹೇಳಿಕೆಗಳು ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರ ನಡೆಸಿತ್ತು. ಆದರೆ ಯಾವುದೇ ವಿಮಾನ ನಷ್ಟವಾಗಿದ್ದರೆ ವಾಯುಪಡೆಯ ನಿರ್ವಹಣಾ ಪ್ರಸ್ತಾವನೆಯಲ್ಲಿ ವಿಮಾನಗಳ ಸಂಖ್ಯೆ 36ಕ್ಕಿಂತ ಕಡಿಮೆಯಾಗಬೇಕಿತ್ತು. ಎಲ್ಲ 36 ವಿಮಾನಗಳಿಗೂ ನೆರವು ಕೋರಿರುವುದು ಪಾಕಿಸ್ತಾನದ ವಾದವನ್ನು ಹುಸಿಗೊಳಿಸಿದೆ.

ಪಾಕ್ ಸಾಮಾಜಿಕ ಜಾಲತಾಣ ಖಾತೆಗಳು ನಾಶವಾಗಿವೆ ಎಂದು ಹೇಳಿದ್ದ ಕೆಲವು ರಾಫೆಲ್ ವಿಮಾನಗಳು ಬಳಿಕ ಕಾರ್ಯಾಚರಣೆಯ ಹಾರಾಟಗಳಲ್ಲಿ ಭಾಗವಹಿಸುತ್ತಿರುವ ಚಿತ್ರಗಳು ಮತ್ತು ದೃಶ್ಯಗಳೂ ಬಹಿರಂಗವಾಗಿದ್ದವು. ಪಾಕಿಸ್ತಾನ ನಡೆಸುತ್ತಿರುವುದು ಅಪಪ್ರಚಾರದ ಅಭಿಯಾನ ಎಂದು ಭಾರತ ಈ ಹಿಂದೆಯೇ ಸ್ಪಷ್ಟಪಡಿಸಿತ್ತು. ಆಪರೇಷನ್ ಸಿಂದೂರದಲ್ಲಿ ರಾಫೆಲ್ ಯುದ್ಧವಿಮಾನಗಳು ಪಾಕಿಸ್ತಾನದೊಳಗಿನ ಗುರಿಗಳ ಮೇಲೆ ನಿಖರ ದಾಳಿ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ವಿಮಾನಗಳು ನಿರೀಕ್ಷೆಯಂತೆ ಕಾರ್ಯನಿರ್ವಹಿಸಿದ್ದು, ಯುದ್ಧದಲ್ಲಿ ಯಾವುದೇ ರಾಫೆಲ್ ವಿಮಾನ ನಷ್ಟವಾಗಿಲ್ಲ ಎಂದು ರಕ್ಷಣಾ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಇನ್ನೂ 114 ರಾಫೆಲ್ ಖರೀದಿಗೆ ಚಿಂತನೆ: ಈ ನಡುವೆಯೇ ಬಹು ಸಾಮರ್ಥ್ಯದ ಯುದ್ಧವಿಮಾನ ಯೋಜನೆಯಲ್ಲಿ ಫ್ರಾನ್ಸ್‌ನ ಡಸಾಲ್ಟ್ ಸಂಸ್ಥೆಯಿಂದ ಇನ್ನೂ 114 ರಾಫೆಲ್ ವಿಮಾನ ಖರೀದಿಸುವ ಯೋಜನೆಯನ್ನು ಭಾರತ ಮುಂದುವರಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ನಡುವಿನ ಇತ್ತೀಚಿನ ಮಾತುಕತೆಯಲ್ಲೂ ಈ ವಿಷಯ ಚರ್ಚೆಯಾಗಿದೆ. ಯೋಜನೆಯಂತೆ 18 ವಿಮಾನಗಳನ್ನು ಹಾರಾಟಕ್ಕೆ ಸಿದ್ಧ ಸ್ಥಿತಿಯಲ್ಲಿ ಭಾರತಕ್ಕೆ ತರಲಾಗುತ್ತದೆ. ಉಳಿದ ವಿಮಾನಗಳನ್ನು ಸುಮಾರು ಶೇ.50ರಷ್ಟು ಸ್ವದೇಶಿ ಅಂಶಗಳೊಂದಿಗೆ ಭಾರತದಲ್ಲಿಯೇ ತಯಾರಿಸುವ ನಿರೀಕ್ಷೆಯಿದೆ.

20 ಲಕ್ಷ ರೂ.ಮಾದಕವಸ್ತು ಜಪ್ತಿ

• **ಕಲಬುರಗಿ:** ಕಲಬುರಗಿ ನಗರ ಪೊಲೀಸ್ ಆಯುಕ್ತಾಲಯದ ಅಧೀನದ ಪೊಲೀಸರು ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ 20.08ಲಕ್ಷ ಮೌಲ್ಯದ ವಿವಿಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಈ ಸಂಬಂಧ 22 ಪ್ರಕರಣಗಳಲ್ಲಿ ಜಪ್ತಿ ಕಾರ್ಯಾಚರಣೆ ನಡೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಪೊಲೀಸ್ ಆಯುಕ್ತಾಲಯದ ವ್ಯಾಪ್ತಿಯಲ್ಲಿ ನಡೆದ ದಾಳಿಗಳ ವೇಳೆ 17 ಕೆಜಿ 634 ಗ್ರಾಂ ಗಾಂಜಾ (ಅಂದಾಜು ಮೌಲ್ಯ 17.34 ಲಕ್ಷ), Netrazepam NRX Schedule-H ನಿಷೇಧಿತ 14,970 ಮಾತ್ರೆಗಳು ಹಾಗೂ 18.73 ಗ್ರಾಂ ಎಂಡಿಎಂಎ ಡ್ರಗ್ (ಅಂದಾಜು ಮೌಲ್ಯ 2.74 ಲಕ್ಷ) ಸೇರಿದಂತೆ ಒಟ್ಟು 20,08,300 ಮೌಲ್ಯದ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದರು.

ಮತ್ತೋರ್ವ ಶಂಕಿತ ಉಗ್ರನ ಬಂಧನ

ಪುಟ 0➜ಅಲ್ಲದೆ, ತನ್ನ ಮೊಬೈಲ್‌ನಿಂದ ಅಂತಾರಾಷ್ಟ್ರೀಯ ಕರೆಗಳನ್ನೂ ಮಾಡಿದ್ದು, ಸಾಕಷ್ಟು ಮಾಹಿತಿ ಕಲೆ ಹಾಕಿದ ಕೇಂದ್ರ ಗುಪ್ತಚರ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ ಮಂಗಳವಾರ ನಸುಕಿನ ವೇಳೆ ಜಂಟಿ ಕಾರ್ಯಾಚರಣೆ ನಡೆಸಿ, ಸೊಹೇಲ್‌ನನ್ನು ಬಂಧಿಸುವಲ್ಲಿ ಸಫಲವಾಗಿವೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಎಚ್.ಟಿ.ಶೇಖರ್ ಮಾರ್ಗದರ್ಶನದಲ್ಲಿ ಗ್ರಾಮಾಂತರ ಡಿವೈಎಸ್ಪಿ ಬಿ.ಎಸ್.ಬಸವರಾಜ ನೇತೃತ್ವದ ಅಧಿಕಾರಿ, ಸಿಬ್ಬಂದಿ ಕೇಂದ್ರ ಗುಪ್ತಚರ ಇಲಾಖೆ ಅಧಿಕಾರಿಗಳು, ಸಿಬ್ಬಂದಿ ಸಹಕಾರದಲ್ಲಿ ಬನ್ನಿಕೋಡು ಗ್ರಾಮದ ಮನೆ ಮೇಲೆ ದಾಳಿ ಮಾಡಿ, ಸೊಹೇಲ್ ಬಂಧಿಸಿ ತುಮಕೂರು ಪೊಲೀಸರ ವಶಕ್ಕೆ ನೀಡಿದ್ದಾರೆ.

ಇಂದು ಬೆಂಗಳೂರಿಗೆ ಸಿಎಂ ಯೋಗಿ ಆದಿತ್ಯನಾಥ್

ಪುಟ 0➜ನಗರದ ಖಾಸಗಿ ಹೋಟೆಲ್‌ನಲ್ಲಿ ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ಉತ್ತರ ಪ್ರದೇಶದಲ್ಲಿ ಉದ್ಯಮಿಗಳಿಗೆ ಹೂಡಿಕೆಗೆ ಇರುವ ಅವಕಾಶಗಳು, ವ್ಯಾಪಾರ ಸ್ನೇಹಿ ಪರಿಸರ ವ್ಯವಸ್ಥೆ ಇರುವ ಬಗ್ಗೆ ಉದ್ಯಮಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ತಮ್ಮ ರಾಜ್ಯದಲ್ಲಿರುವ ಉದಯೋನ್ಮುಖ ಅವಕಾಶಗಳ ಬಗ್ಗೆಯೂ ಸಂವಾದ ನಡೆಸಲಿದ್ದಾರೆ. ಉತ್ತರ ಪ್ರದೇಶದಲ್ಲಿ ಹೂಡಿಕೆ ಮತ್ತು ವ್ಯವಹಾರ ಅವಕಾಶಗಳ ಕುರಿತು ಕಿರುಚಿತ್ರದ ಪ್ರದರ್ಶನ ಪ್ರಮುಖ ಕೈಗಾರಿಕಾ ಪ್ರತಿನಿಧಿಗಳಿಂದ ಸಂವಾದ ನಂತರ ಯೋಗಿ ಆದಿತ್ಯನಾಥ್ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

ನೀರಿನ ಮಿತ ಬಳಕೆಗೆ ಸೂಚನೆ

• **ಬೆಂಗಳೂರು:** ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಕೇವಲ ಕುಡಿಯುವ ಉದ್ದೇಶಕ್ಕಾಗಿ ಮಿತವಾಗಿ ಮತ್ತು ವಿವೇಚನೆಯಿಂದ ಬಳಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ತಮಿಳುನಾಡು, ಕರ್ನಾಟಕ, ಕೇರಳ ಮತ್ತು ಪುದುಚೇರಿ ರಾಜ್ಯಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಮಂಗಳವಾರ ದಿಲ್ಲಿಯಲ್ಲಿ ನಡೆದ ಪ್ರಾಧಿಕಾರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದ್ದು, ಮುಂಬರುವ ದಿನಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆಯಿದ್ದು, ಪರಿಸ್ಥಿತಿಯನ್ನು ನೋಡಿಕೊಂಡು ಮುಂದಿನ ಸಭೆಯಲ್ಲಿ ಮರುಪರಿಶೀಲನೆ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಮುಂಗಾರು ಮಳೆ ವಿಳಂಬದಿಂದ ಜಲಾಶಯಗಳಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣ ತೀರಾ ಕಡಿಮೆಯಾಗಿದ್ದು, ಜಲಾಶಯಗಳಲ್ಲಿ ಸದ್ಯ ನೀರಿನ ಸಂಗ್ರಹ ಕಡಿಮೆಯಾಗಿದೆ. ಪರಿಣಾಮವಾಗಿ ಹೊರ ಹರಿವು ಕೂಡ ಕಡಿಮೆಯಾಗಿದೆ ಎಂದು ಕರ್ನಾಟಕ ತಿಳಿಸಿತು.

ಕರ್ನಾಟಕ ಸೇರಿ 12 ರಾಜ್ಯಗಳ 111 ಜಿಲ್ಲೆಗಳಲ್ಲಿ ಮುಂಗಾರು ಬೆಳೆಗಳಿಗೆ ಗಂಭೀರ ಅಪಾಯ

ಜು.2ರವರೆಗೂ ಮುಂಗಾರು ದುರ್ಬಲ

• **ಹೊಸದಿಲ್ಲಿ:** ದೇಶದಲ್ಲಿ ನೈಋತ್ಯ ಮುಂಗಾರು ಮಳೆ ಜುಲೈ 2ರವರೆಗೂ ದುರ್ಬಲವಾಗಿಯೇ ಮುಂದುವರಿಯುವ ಸಾಧ್ಯತೆ ಇದ್ದು, ಮಳೆಯನ್ನೇ ಅವಲಂಬಿಸಿರುವ ಪ್ರದೇಶಗಳ ಮುಂಗಾರು ಬೆಳೆಗಳಿಗೆ ತೀವ್ರ ಹೊಡೆತ ಬೀಳುವ ಆತಂಕ ಎದುರಾಗಿದೆ. ಕರ್ನಾಟಕ ಸೇರಿದಂತೆ 12 ರಾಜ್ಯಗಳ 111 ಜಿಲ್ಲೆಗಳನ್ನು ಅತ್ಯಂತ ಅಪಾಯದಲ್ಲಿರುವ ಜಿಲ್ಲೆಗಳೆಂದು ಕೇಂದ್ರ ಕೃಷಿ ಸಚಿವಾಲಯ ಗುರುತಿಸಿದೆ.

ದೇಶದಲ್ಲಿ ಒಟ್ಟಾರೆ ಮುಂಗಾರು ಮಳೆ ಶೇ.43ರಷ್ಟು ಕೊರತೆಯಾಗಿದೆ. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಜುಲೈ 2ರವರೆಗೂ ದುರ್ಬಲ ಮುಂಗಾರು ಪರಿಸ್ಥಿತಿ ಮುಂದುವರಿಯಬಹುದು. ಇದರಿಂದ ಮುಂಗಾರು ಹಂಗಾಮಿನ ಬೆಳೆಗಳು ಬಾಧಿತವಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ತಿಳಿಸಿದರು.

ಮುಂಗಾರು ಪ್ರಗತಿ ಮತ್ತು ಕೃಷಿ ಸಿದ್ಧತೆ ಕುರಿತು ರಾಜ್ಯಗಳ ಕೃಷಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಮುಂಗಾರು ದುರ್ಬಲವಾಗಿದ್ದರೂ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಂಪೂರ್ಣ ಸಿದ್ಧವಾಗಿವೆ. ರೈತರು ಆತಂಕಕ್ಕೆ ಒಳಗಾಗಬಾರದು. ವೈಜ್ಞಾನಿಕ ಯೋಜನೆ ಮತ್ತು ಸ್ಥಳೀಯ ಮಟ್ಟದ ಕ್ರಮಗಳ ಮೂಲಕ ಬೆಳೆ ನಷ್ಟವನ್ನು ಕನಿಷ್ಠಗೊಳಿಸಿ, ರೈತರ ಜೀವನೋಪಾಯವನ್ನು ರಕ್ಷಿಸಲಾಗುವುದು ಎಂದು ಭರವಸೆ ನೀಡಿದರು.

ಅಪಾಯದ ಪಟ್ಟಿಯಲ್ಲಿ ಕರ್ನಾಟಕದ ಜಿಲ್ಲೆಗಳು: ಕಡಿಮೆ ಮಳೆ ಮತ್ತು ನೀರಾವರಿ ಕೊರತೆಯಿಂದ ಸಂಕಷ್ಟಕ್ಕೆ ಒಳಗಾಗಬಹುದಾದ ಜಿಲ್ಲೆಗಳನ್ನು ಕೇಂದ್ರ ಕೃಷಿ ಸಚಿವಾಲಯ ಹಾಗೂ ಭಾರತೀಯ ಕೃಷಿ ಸಂಶೋಧನಾ ಮಂಡಳಿ ಜಂಟಿಯಾಗಿ ಗುರುತಿಸಿವೆ. ಕರ್ನಾಟಕ, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರ, ಜಾರ್ಖಂಡ್, ತೆಲಂಗಾಣ, ಆಂಧ್ರಪ್ರದೇಶ ಮತ್ತು ಒಡಿಶಾದ ಒಟ್ಟು 315 ಜಿಲ್ಲೆಗಳು ದುರ್ಬಲ ಮುಂಗಾರಿನಿಂದ ಬಾಧಿತವಾಗುವ ಸಾಧ್ಯತೆ ಇದೆ. ಈ ಪೈಕಿ ಶೇ.25ಕ್ಕಿಂತ ಕಡಿಮೆ ನೀರಾವರಿ ಸೌಲಭ್ಯವಿರುವ 111 ಜಿಲ್ಲೆಗಳನ್ನು ಅತ್ಯಂತ ಅಪಾಯದ ಪಟ್ಟಿಗೆ ಸೇರಿಸಲಾಗಿದೆ. ಇದರಲ್ಲಿ ಮಹಾರಾಷ್ಟ್ರದ 20 ಜಿಲ್ಲೆಗಳಿವೆ. ಶೇ.25ರಿಂದ 50ರಷ್ಟು ನೀರಾವರಿ ಸೌಲಭ್ಯವಿರುವ 76 ಜಿಲ್ಲೆಗಳನ್ನು ಮಧ್ಯಮ ಅಪಾಯದ ಜಿಲ್ಲೆಗಳೆಂದು ಗುರುತಿಸಲಾಗಿದೆ. ಅಣೆಕಟ್ಟು ಮತ್ತು ಸಮರ್ಪಕ ನೀರಾವರಿ ವ್ಯವಸ್ಥೆ ಹೊಂದಿರುವ 128 ಜಿಲ್ಲೆಗಳನ್ನು ಕಡಿಮೆ ಅಪಾಯದ ಪಟ್ಟಿಯಲ್ಲಿಡಲಾಗಿದೆ.

ಜಲಾಶಯಗಳಲ್ಲಿ ಶೇ.60ರವರೆಗೆ ಕೊರತೆ: ದೇಶದ ವಿವಿಧ ನದಿ ಕಣಿವೆಗಳಲ್ಲಿನ ಜಲಾಶಯಗಳ ನೀರು ಸಂಗ್ರಹ ಸ್ಥಿತಿಯನ್ನೂ ಸಭೆಯಲ್ಲಿ ಪರಿಶೀಲಿಸಲಾಗಿದೆ. ಕೆಲವು ನದಿ ಕಣಿವೆಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ನೀರು ಸಂಗ್ರಹವಿದ್ದರೆ, ಮತ್ತೆ ಕೆಲವು ಪ್ರದೇಶಗಳಲ್ಲಿ ಶೇ.20ರಿಂದ ಶೇ.60ರವರೆಗೆ ಕೊರತೆ ಕಂಡುಬಂದಿದೆ. ಆಯಾ ಪ್ರದೇಶಗಳಲ್ಲಿನ ನೀರಿನ ಲಭ್ಯತೆ ಮತ್ತು ಕೊರತೆಯನ್ನು ಆಧರಿಸಿ ರಾಜ್ಯ ಸರಕಾರಗಳು ಆದ್ಯತೆಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಸೂಚಿಸಿದೆ.

ಸ್ಪಷ್ಟ ಯೋಜನೆ ಸಲ್ಲಿಸಿಲ್ಲ

• **ಬೆಂಗಳೂರು:** ಟಾಟಾ ಪವರ್ ಕಂಪನಿ ಲಿಮಿಟೆಡ್ (ಟಿಪಿಸಿಎಲ್) ಸಲ್ಲಿಸಿರುವ ಸಮಾನಾಂತರ ವಿದ್ಯುತ್ ವಿತರಣಾ ಪರವಾನಗಿ ಅರ್ಜಿಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೆಇಆರ್‌ಸಿ)ಕ್ಕೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ) ಆಕ್ಷೇಪಣೆ ಸಲ್ಲಿಸಿದೆ.

ಪ್ರಸ್ತುತ ಬೆಸ್ಕಾಂ ವ್ಯಾಪ್ತಿಯಲ್ಲಿರುವ ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ವಿದ್ಯುತ್ ವಿತರಣಾ ಪರವಾನಗಿ ನೀಡುವಂತೆ ಟಾಟಾ ಸಂಸ್ಥೆಯು ಪರವಾನಗಿ ಅರ್ಜಿ ಸಲ್ಲಿಸಿತ್ತು. ಈ ಪ್ರಸ್ತಾವನೆ ಕುರಿತು ಬೆಸ್ಕಾಂ ಹಲವು ಗಂಭೀರ ಆಕ್ಷೇಪಣೆಗಳನ್ನು ಕೆಇಆರ್‌ಸಿ ಮುಂದೆ ಸಲ್ಲಿಸಿದ್ದು, ವಿದ್ಯುತ್ ಕಾಯ್ದೆ–2003ರಲ್ಲಿ ಅಗತ್ಯವಿರುವ ಕಾನೂನುಬದ್ಧ ಹಾಗೂ ಸಾರ್ವಜನಿಕ ಹಿತಾಸಕ್ತಿ ಸಂಬಂಧಿತ ಮಾನದಂಡಗಳನ್ನು ಪೂರೈಸುವ ಬಗ್ಗೆ ಟಾಟಾ ಸಂಸ್ಥೆಯು ಅರ್ಜಿಯಲ್ಲಿ ಪ್ರಸ್ತಾಪಿಸಿಲ್ಲ ಎಂದಿದೆ.

ಗ್ರಾಹಕರಿಗೆ ಹೆಚ್ಚುವರಿ ವೆಚ್ಚ ಸಾಧ್ಯತೆ: ಪ್ರಸ್ತಾವಿತ ಪ್ರದೇಶದಲ್ಲಿ ಸ್ವತಂತ್ರ ವಿದ್ಯುತ್ ವಿತರಣಾ ಜಾಲವನ್ನು ನಿರ್ಮಿಸುವ ಕುರಿತು ಟಾಟಾ ಪವರ್ ಸ್ಪಷ್ಟ ಯೋಜನೆ ಸಲ್ಲಿಸಿಲ್ಲ. ಬದಲಾಗಿ, ಬೆಸ್ಕಾಂನ ಈಗಿರುವ ಮೂಲ ಸೌಕರ್ಯವನ್ನು ಅವಲಂಬಿಸಿ ವಿದ್ಯುತ್ ಸರಬರಾಜು ಮಾಡಲು ಉದ್ದೇಶಿಸಿರುವುದಾಗಿ ಹೇಳಿದೆ. ಅಲ್ಪಾವಧಿ ವಿದ್ಯುತ್ ಖರೀದಿ ಹೆಚ್ಚಿನ ಅವಲಂಬನೆಯು ಗ್ರಾಹಕರಿಗೆ ಹೆಚ್ಚುವರಿ ವೆಚ್ಚದ ಭಾರವನ್ನು ಉಂಟು ಮಾಡುವ ಸಾಧ್ಯತೆಯಿದೆ ಎಂದು ವಿದ್ಯುತ್ ಖರೀದಿ ಯೋಜನೆಯ ಕುರಿತು ಬೆಸ್ಕಾಂ ಆಕ್ಷೇಪ ಸಲ್ಲಿಸಿದೆ. ಎಲ್ಲಾ ಗ್ರಾಹಕರಿಗೂ ಸಮರ್ಪಕ ಹಾಗೂ ಗುಣಮಟ್ಟದ ವಿದ್ಯುತ್ ಸರಬರಾಜು ಒದಗಿಸುವ ಕಾನೂನುಬದ್ಧ ಹೊಣೆಗಾರಿಕೆ ಬೆಸ್ಕಾಂ ಮೇಲಿದೆ. ಇದಕ್ಕಾಗಿ ಬೆಸ್ಕಾಂ 2035ರ ನಂತರವೂ ಮುಂದುವರಿಯುವ ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡಿದ್ದು, ವಿದ್ಯುತ್ ಬಳಕೆ ಆಗದಿದ್ದರೂ ನಿಗದಿತ ಸ್ಥಿರ ಶುಲ್ಕಗಳನ್ನು ಪಾವತಿಸಬೇಕಾಗಿದೆ. ಟಿಪಿಸಿಎಲ್‌ಗೆ ಇಂತಹ ಯಾವುದೇ ಹೊಣೆಗಾರಿಕೆಗಳಿಲ್ಲ.

ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗೆ ಎರಡು ಚಿನ್ನದ ಪದಕ

ಮೂಡುಬಿದಿರೆ: ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಡಾ. ಪ್ರಣೀಲ್ ರೋಡ್ರಿಗಸ್ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಎರಡು ಪ್ರತಿಷ್ಠಿತ ಚಿನ್ನದ ಪದಕಗಳನ್ನು ಮುಡಿಗೇರಿಸಿಕೊಂಡು ಶೈಕ್ಷಣಿಕ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮೆರೆದಿದ್ದಾರೆ.

ಪ್ರಥಮ ವರ್ಷದಿಂದ ಅಂತಿಮ ವರ್ಷದವರೆಗೆ ಅತ್ಯುತ್ತಮ ಶೈಕ್ಷಣಿಕ ಸಾಧನೆ ದಾಖಲಿಸಿ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಹಿನ್ನೆಲೆಯಲ್ಲಿ ಸೀತಾರಾಂ ಜಿಂದಾಲ್ ಸಂಸ್ಥೆ ನೀಡುವ 'ಸೀತಾರಾಂ ಜಿಂದಾಲ್ ಚಿನ್ನದ ಪದಕ' ಅವರಿಗೆ ಲಭಿಸಿದೆ. ಜೊತೆಗೆ, ಆಯುಷ್ ವಿಭಾಗದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಸ್ಥಾನ ಪಡೆದ ಸಾಧನೆಗಾಗಿ ಮತ್ತೊಂದು ಚಿನ್ನದ ಪದಕಕ್ಕೂ ಭಾಜನರಾಗಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯದ ಮುಖ್ಯಮಂತ್ರಿಗಳಿಂದ ಈ ಎರಡೂ ಪ್ರತಿಷ್ಠಿತ ಚಿನ್ನದ ಪದಕಗಳನ್ನು ಸ್ವೀಕರಿಸುವ ಮೂಲಕ ಡಾ. ಪ್ರಣೀಲ್ ರೋಡ್ರಿಗಸ್ ಮತ್ತೊಂದು ಮಹತ್ವದ ಗೌರವಕ್ಕೆ ಪಾತ್ರರಾಗಿದ್ದಾರೆ. ಉಡುಪಿ ಮೂಲದ ಪ್ರೇಮಿಲ್ ರೋಡ್ರಿಗಸ್ ಮತ್ತು ಮೆಲ್ವಿನ್ ರೋಡ್ರಿಗಸ್ ದಂಪತಿಯ ಏಕೈಕ ಪುತ್ರರಾಗಿರುವ ಡಾ. ಪ್ರಣೀಲ್ ರೋಡ್ರಿಗಸ್ ಪ್ರಸ್ತುತ ಬೆಂಗಳೂರಿನ ಬಾಪೂಭವನದಲ್ಲಿರುವರಾಷ್ಟ್ರೀಯಪ್ರಕೃತಿಚಿಕಿತ್ಸಾಸಂಸ್ಥೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಅಭಿನಂದನೆ

ಈ ಅಪೂರ್ವ ಸಾಧನೆಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಟ್ರಸ್ಟಿ ವಿವೇಕ್ ಆಳ್ವ, ಕಾಲೇಜಿನ ಪ್ರಾಚಾರ್ಯೆ ಡಾ ವನಿತಾ ಶೆಟ್ಟಿ ಹಾಗೂ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

ರೋಹನ್ ಕಾರ್ಪೊರೇಶನ್‌ನಿಂದ ಆನ್ ಈವಿನಿಂಗ್ ವಿತ್ ಶಾರುಖ್ ಖಾನ್

ಮಂಗಳೂರಿಗೆ ನಾಳೆ ಕಿಂಗ್ ಖಾನ್ ಆಗಮನ

ಮಂಗಳೂರು: ಬಾಲಿವುಡ್‌ನ ಖ್ಯಾತ ನಟ ಹಾಗೂ ಜಾಗತಿಕ ಮಟ್ಟದಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿರುವ ಶಾರುಖ್ ಖಾನ್ ಅವರು ಜೂ.25ರಂದು ಮಂಗಳೂರಿಗೆ ಆಗಮಿಸಲಿದ್ದಾರೆ. ಅವರು ಕರಾವಳಿಯ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಸಂಸ್ಥೆಯಾದ ರೋಹನ್ ಕಾರ್ಪೊರೇಶನ್ ಆಯೋಜಿಸಿರುವ 'ಆನ್ ಈವಿನಿಂಗ್ ವಿತ್ ಶಾರುಖ್ ಖಾನ್' ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಮಂಗಳೂರಿನ ಅಡ್ಯಾರ್ ಗಾರ್ಡನ್‌ನಲ್ಲಿ ನಡೆಯಲಿರುವ ಈ ವಿಶೇಷ ಕಾರ್ಯಕ್ರಮಕ್ಕೆ ಸಂಜೆ 4 ಗಂಟೆಯಿಂದ ಪ್ರವೇಶ ಆರಂಭವಾಗಲಿದ್ದು, ವಿವಿಧ ಕ್ಷೇತ್ರಗಳ ಗಣ್ಯರು, ಉದ್ಯಮಿಗಳು, ಸಾರ್ವಜನಿಕ ಪ್ರತಿನಿಧಿಗಳು ಹಾಗೂ ಪೂರ್ವ ನೋಂದಣಿ ಮಾಡಿಕೊಂಡಿರುವ ಅತಿಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಈ ಕುರಿತು ಮಾತನಾಡಿದ ರೋಹನ್ ಕಾರ್ಪೊರೇಶನ್ ಸಂಸ್ಥಾಪಕ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಡಾ. ರೋಹನ್ ಮೊಂತೆರೊ, 'ಭಾರತದ ಅತ್ಯಂತ ಜನಪ್ರಿಯ ಕಲಾವಿದರಲ್ಲಿ ಒಬ್ಬರಾದ ಶಾರುಖ್ ಖಾನ್ ಅವರನ್ನು ಮಂಗಳೂರಿನ ನೆಲದಲ್ಲಿ ಸ್ವಾಗತಿಸುವ ಅವಕಾಶ ದೊರೆತಿರುವುದು ನಮಗೆ ಹೆಮ್ಮೆಯ ವಿಷಯ' ಎಂದು ಹೇಳಿದರು.



ಕಾರ್ಯಕ್ರಮದ ಸಿದ್ಧತೆಗಳ ಕುರಿತು ಮಾಹಿತಿ ನೀಡಿದ ಸಂಸ್ಥೆಯ ನಿರ್ದೇಶಕ ಡಿಯಾನ್ ಮೊಂತೆರೊ, 'ಇದು ಮಂಗಳೂರಿನಲ್ಲಿ ನಡೆಯಲಿರುವ ಅತಿದೊಡ್ಡ ಕಾರ್ಪೊರೇಟ್ ಕಾರ್ಯಕ್ರಮಗಳಲ್ಲಿ ಒಂದಾಗಲಿದೆ. ನಮ್ಮ ಸಂಸ್ಥೆಗೆ ಮತ್ತು ನಗರಕ್ಕೆ ಮಹತ್ವದ ಕ್ಷಣವಾಗಿರುವ ಈ ಕಾರ್ಯಕ್ರಮವು ಸುರಕ್ಷಿತವಾಗಿ ಹಾಗೂ ಯಶಸ್ವಿಯಾಗಿ ನೆರವೇರಲು ಎಲ್ಲಾ ಇಲಾಖೆಗಳು ಮತ್ತು ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ನೋಂದಣಿ ಕಡ್ಡಾಯವಾಗಿದ್ದು, ಅಧಿಕೃತವಾಗಿ ನೋಂದಾಯಿತ ಪಾಸ್ ಹೊಂದಿರುವವರಿಗೆ ಮಾತ್ರ ಪ್ರವೇಶ ಅವಕಾಶ ಕಲ್ಪಿಸಲಾಗುತ್ತದೆ ಎಂದು ಸಂಸ್ಥೆ ಸ್ಪಷ್ಟಪಡಿಸಿದೆ.

ವಿಶಿಷ್ಟ ಅನುಭವ

ಈ ಕಾರ್ಯಕ್ರಮವು ರೋಹನ್ ಕಾರ್ಪೊರೇಶನ್ ಸಂಸ್ಥೆಯ ಬೆಳವಣಿಗೆಯಲ್ಲಿ ಮಹತ್ವದ ಕ್ಷಣವಾಗಿದ್ದು, ಭಾಗವಹಿಸುವ ಪ್ರತಿಯೊಬ್ಬರಿಗೂ ವಿಶಿಷ್ಟ ಅನುಭವವನ್ನು ನೀಡಲಿದೆ

■ ಡಾ. ರೋಹನ್ ಮೊಂತೆರೊ,

ಸಂಪಾದಕೀಯ

ಮುಂಗಾರು ಕೊರತೆ ಮುನ್ನೆಚ್ಚರಿಕೆಯೇ ಪರಿಹಾರ

ದೇಶದ ಕೃಷಿ ವಲಯಕ್ಕೆ ಜೀವನಾಡಿಯಾಗಿರುವ ನೈರುತ್ಯ ಮುಂಗಾರು ಈ ಬಾರಿ ಆರಂಭದಲ್ಲಿಯೇ ಆತಂಕ ಮೂಡಿಸಿದೆ. ಮಳೆ ಕೊರತೆ ಶೇ.43ಕ್ಕೆ ತಲುಪಿದ್ದು, 315 ಜಿಲ್ಲೆಗಳು ದುರ್ಬಲ ಮುಂಗಾರಿನ ಪರಿಣಾಮ ಎದುರಿಸುವ ಸಾಧ್ಯತೆಯಿದೆ. ಇವುಗಳಲ್ಲಿ ನೀರಾವರಿ ಸೌಲಭ್ಯ ಅತ್ಯಂತ ಕಡಿಮೆ ಇರುವ 111 ಜಿಲ್ಲೆಗಳು ತೀವ್ರ ಅಪಾಯದಲ್ಲಿವೆ. ಕರ್ನಾಟಕವೂ ಅಪಾಯ ಎದುರಿಸುತ್ತಿರುವ ರಾಜ್ಯಗಳಲ್ಲಿ ಒಂದಾಗಿದೆ.

ಮುಂಗಾರು ವಿಳಂಬದ ಮೊದಲ ಹೊಡೆತ ಖಾರಿಫ್ ಬಿತ್ತನೆಗೆ ಬೀಳುತ್ತದೆ.



ಭತ್ತ, ಮೆಕ್ಕೆಜೋಳ, ಹತ್ತಿ, ಬೇಳೆ ಮತ್ತು ಎಣ್ಣೆಕಾಳು ಬೆಳೆಗಳಿಗೆ ಅಗತ್ಯವಾದ ಮಣ್ಣಿನ ತೇವಾಂಶ ಹಲವು ಪ್ರದೇಶಗಳಲ್ಲಿ ಇನ್ನೂ ಸೃಷ್ಟಿಯಾಗಿಲ್ಲ. ಆತುರದ ಬಿತ್ತನೆ ಬಳಿಕ ಮಳೆ ಕೈಕೊಟ್ಟರೆ ರೈತನ ಬೀಜ, ಗೊಬ್ಬರ, ಶ್ರಮ ಎಲ್ಲವೂ ನಷ್ಟವಾಗುತ್ತದೆ. ಆದ್ದರಿಂದ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ನಿಖರ ಹವಾಮಾನ ಮಾಹಿತಿ ಹಾಗೂ ಬೆಳೆ ಸಲಹೆ ತಲುಪಬೇಕು.

ಅಪಾಯಪೀಡಿತ ಜಿಲ್ಲೆಗಳಲ್ಲಿ ಮರುಬಿತ್ತನೆಗೆ ಬೀಜ, ಗೊಬ್ಬರ, ಸಾಲ, ಬೆಳೆ ವಿಮೆ ಮತ್ತು ಕುಡಿಯುವ ನೀರಿನ ಸಿದ್ಧತೆ ಈಗಲೇ ಆಗಬೇಕು. ಕಡಿಮೆ ಅವಧಿಯಲ್ಲಿ ಬೆಳೆಯುವ, ಬರವನ್ನು ತಾಳುವ ತಳಿಗಳು, ಸಿರಿಧಾನ್ಯಗಳು, ಬೇಳೆ ಮತ್ತು ಎಣ್ಣೆಕಾಳುಗಳನ್ನು ಉತ್ತೇಜಿಸಬೇಕು. ಆದರೆ ಪರ್ಯಾಯ ಬೆಳೆಗಳಿಗೆ ಮಾರುಕಟ್ಟೆ ಮತ್ತು ಬೆಂಬಲ ಬೆಲೆ ಖಚಿತಪಡಿಸದಿದ್ದರೆ ರೈತರು ಬದಲಾವಣೆಗೆ ಮುಂದಾಗುವುದಿಲ್ಲ. ಕರ್ನಾಟಕದಲ್ಲಿ ಕೆರೆ, ಕಟ್ಟೆ, ಕೃಷಿಹೊಂಡ ಮತ್ತು ಕಾಲುವೆಗಳ ಪುನಶ್ಚೇತನಕ್ಕೆ ಆದ್ಯತೆ ನೀಡಬೇಕು. ಹನಿ ಹಾಗೂ ತುಂತುರು ನೀರಾವರಿ ಸೌಲಭ್ಯವನ್ನು ತ್ವರಿತವಾಗಿ ವಿಸ್ತರಿಸಬೇಕು. ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಳೆದ ವರ್ಷಕ್ಕಿಂತ ಉತ್ತಮವಾಗಿದೆ ಎಂಬ ಸಮಾಧಾನ ಇದ್ದರೂ, ಪ್ರದೇಶವಾರು ಮಳೆಯ ಅಸಮಾನ ಹಂಚಿಕೆಯನ್ನು ನಿರ್ಲಕ್ಷಿಸಲಾಗದು. ಗ್ರಾಮ ಪಂಚಾಯಿತಿಗಳು, ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ಸಹಕಾರ ಸಂಸ್ಥೆಗಳು ಸಮನ್ವಯದಿಂದ ಕೆಲಸ ಮಾಡಬೇಕು.

ಬೆಳೆ ಹಾನಿ ಸಮೀಕ್ಷೆ ಪಾರದರ್ಶಕವಾಗಿದ್ದು, ವಿಮಾ ಪರಿಹಾರ ವಿಳಂಬವಿಲ್ಲದೆ ರೈತರ ಖಾತೆಗೆ ತಲುಪಬೇಕು. ಸಂಕಷ್ಟದ ಸಂದರ್ಭದಲ್ಲಿ ಬ್ಯಾಂಕುಗಳು ಸಾಲ ವಸೂಲಿಗೆ ಒತ್ತಡ ಹೇರುವ ಬದಲು ಮರುಪಾವತಿ ಅವಧಿ ವಿಸ್ತರಿಸಬೇಕು. ಪಶುಗಳಿಗೆ ಮೇವು, ಗ್ರಾಮಗಳಿಗೆ ಕುಡಿಯುವ ನೀರು ಮತ್ತು ಉದ್ಯೋಗ ಖಾತ್ರಿ ಯೋಜನೆಯಡಿ ಜಲಸಂರಕ್ಷಣಾ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕು. ಮುಂಗಾರು ಮತ್ತೆ ಚುರುಕಾಗಬಹುದು ಎಂಬ ನಿರೀಕ್ಷೆ ಇದ್ದರೂ, ಆಡಳಿತ ಯಂತ್ರ ನಿರ್ಲಕ್ಷ್ಯ ತೋರಬಾರದು; ಪ್ರತಿಯೊಂದು ಜಿಲ್ಲೆಯ ಪರಿಸ್ಥಿತಿಯನ್ನು ನಿತ್ಯ ಪರಿಶೀಲಿಸಿ ಅಗತ್ಯ ನೆರವನ್ನು ತಕ್ಷಣ ಒದಗಿಸಬೇಕು. ನಿಜಕ್ಕೂ ಇದೇ ರೈತನ ಬದುಕು ಉಳಿಸುವ ದಾರಿಯಾಗಿದೆ.

ಮಳೆ ಸರ್ಕಾರದ ನಿಯಂತ್ರಣದಲ್ಲಿಲ್ಲ. ಆದರೆ ಮಳೆ ಕೊರತೆಯಿಂದ ಉಂಟಾಗುವ ಸಂಕಷ್ಟವನ್ನು ಕಡಿಮೆ ಮಾಡುವುದು ಸರ್ಕಾರದ ಹೊಣೆ. ರೈತನಿಗೆ ಸುಳ್ಳು ಭರವಸೆ ಅಲ್ಲ, ಸಕಾಲಿಕ ಮಾಹಿತಿ, ಪರ್ಯಾಯ ಬೆಳೆ ಮಾರ್ಗದರ್ಶನ, ಮಾರುಕಟ್ಟೆ ಭದ್ರತೆ ಮತ್ತು ಕಾರ್ಯರೂಪದ ನೆರವೇ ಬೇಕಾಗಿದೆ.

ವಿನಾಶಕಾಲೇ ವಿಪರೀತ ಬುದ್ಧಿಃ

ನ ನಿರ್ಮಿತಾ ಕೇನ ನ ದೃಷ್ಟಪೂರ್ವಾ ನ ಶ್ರೂಯತೇ ಹೇಮಮಯೀ ಕುರಂಗೀ ।
ತಥಾಪಿ ತೃಷ್ಣಾ ರಘುನಂದನಸ್ಯ ವಿನಾಶಕಾಲೇ ಉಪಹಿತಬುದ್ಧಿಃ ॥ – ಚಾಣಕ್ಯ ನೀತಿ

ಚಿನ್ನದ ಜಿಂಕೆಯನ್ನು ಯಾರೂ ನಿರ್ಮಿಸಿಲ್ಲ. ಹಿಂದೆ ಯಾರೂ ನೋಡಿಲ್ಲ. ಯಾರೂ ಕೇಳಿಲ್ಲ. ಆದರೂ ರಘುನಂದನನಿಗೆ ಅದರ ಮೇಲೆ ಆಸಕ್ತಿ ಹುಟ್ಟಿತು. ಏಕೆಂದರೆ ವಿನಾಶಕಾಲ ಬಂದಾಗ ಬುದ್ಧಿಯು ವಿಕಾರಗೊಳ್ಳುತ್ತದೆ – ಎಂಬುದು ಶ್ಲೋಕಾರ್ಥ.

'ವಿನಾಶಕಾಲೇ ವಿಪರೀತ ಬುದ್ಧಿಃ' ಎಂಬ ನುಡಿಗಟ್ಟನ್ನು ಸಾಕಷ್ಟು ಬಾರಿ ಕೇಳಿದ್ದೇವೆ. ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ ಕೂಡ. ವಿನಾಶಕಾಲ ಸಮೀಪಿಸಿದಾಗ ಬುದ್ಧಿಯು ವಿಕಾರಗೊಳ್ಳುತ್ತದೆ, ಮಾಡಬಾರದ್ದನ್ನು ಮಾಡುತ್ತೇವೆ, ಆಡಬಾರದ್ದನ್ನು ಆಡುತ್ತೇವೆ ಎಂಬುದು ಸೂಕ್ತಿಯ ತಾತ್ಪರ್ಯ. ಒಟ್ಟಿನಲ್ಲಿ ವ್ಯಕ್ತಿಯಿಂದ ವ್ಯವಹಾರ ಮಾಡಬೇಕು. ವಿವೇಕದಿಂದ ನಡೆದುಕೊಳ್ಳಬೇಕು. ಅದಿಲ್ಲದಿದ್ದರೆ ಅನಾಹುತವಾಗುತ್ತದೆ. ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂಬುದು ಕಥನದ ಆಶಯ. ಇದನ್ನು ರಾಮಾಯಣದ ಘಟನೆ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ರಾಮಾಯಣದ ವಿಷಯವ ನ್ನಾಧರಿಸಿದ ಶ್ಲೋಕ ಇದಾಗಿದ್ದರೂ ರಾಮಾಯಣದಲ್ಲಿಲ್ಲ. ಚಾಣಕ್ಯ ನೀತಿ ಎಂಬ ಗ್ರಂಥದಲ್ಲಿ ಬಂದ ಶ್ಲೋಕ. ವಿನಾಶಕಾಲ ಎದುರಾದಾಗ ನಮ್ಮಲ್ಲಿ ಏನಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗಿದೆ. ಶ್ರೀರಾಮ, ಸೀತೆ, ಲಕ್ಷ್ಮಣರು ಪಂಚವಟಿಯ ಪರ್ಣಶಾಲೆಯಲ್ಲಿರುವಾಗ ಸ್ವರ್ಣಜಿಂಕೆಯೊಂದು ಕಾಣಿಸಿಕೊಂಡಿತು. ಮೋಹಿತಳಾದ ಸೀತೆ ಅದು ಬೇಕೆಂದು ಹಠಹಿಡಿದಳು. ಅನಿವಾರ್ಯವಾಗಿ ರಾಮ ಮಾಯಾ ಸ್ವರ್ಣಜಿಂಕೆಯನ್ನು ಹಿಡಿದು ತರಲು ಹೋಗುತ್ತಾನೆ. ರಾಮನ ಬಾಣದಿಂದಾಗಿ ಮರಣವಂಚಿನಲ್ಲಿರುವ ಮಾಯಾ ಜಿಂಕೆಯು ರೂಪ ಧರಿಸಿದ 'ಹಾ ಸೀತಾ' 'ಹಾ ಲಕ್ಷ್ಮಣ' ಎಂದು ಬೊಬ್ಬಿಡುತ್ತಾನೆ. ಇದರಿಂದ ಅಂಜಿದ ಸೀತೆ ಲಕ್ಷ್ಮಣ ಎಷ್ಟೇ ಪರಿಯಲ್ಲಿ ರಾಮನ ಹಿರಿಮೆ ಹೇಳಿದರೂ ಆತ ತೆರಳುವಂತೆ ಮಾಡುತ್ತಾಳೆ. ಸೀತೆಯ ರಕ್ಷಣೆಗಾಗಿ ವಿಧಿಸಿದ ಲಕ್ಷ್ಮಣರೇಖೆಯನ್ನೂ ದಾಟಿ ರಾವಣ ಸಂನ್ಯಾಸಿಗೆ ಭಿಕ್ಷೆ ನೀಡಲು ಹೋಗಿ ಅಪಹರಣಕ್ಕೆ ಒಳಗಾಗುತ್ತಾಳೆ.

ಶ್ಲೋಕ ಸಾಗರ



ಡಾ.ಸೋಂದಾ ಭಾಸ್ಕರ ಭಟ್

ಈ ಕಥೆ ಎಲ್ಲರಿಗೂ ಗೊತ್ತು. ಕಥೆಯು ವಿಶೇಷವಲ್ಲ. ಅದರಿಂದಾದ ಅನಾಹುತ, ಅನಾಹುತಕ್ಕೆ ಕಾರಣವನ್ನು ತಾವಾಗಿ ತಂದುಕೊಂಡ ಪರಿ ಯೋಚಿಸುವಂತೆ ಮಾಡುತ್ತದೆ.

ಬಂಗಾರದ ಜಿಂಕೆಯೇ ಇಲ್ಲ ಎಂಬುದು ಜನಸಾಮಾನ್ಯರಿಗೆ ಗೊತ್ತು. ಇದನ್ನು ಯಾರೂ ನೋಡಿಲ್ಲ. ಯಾರೂ ಕೇಳಿಲ್ಲ. ಅಂತಹ ಸೃಷ್ಟಿಯೊಂದು ಇಲ್ಲ, ಆಗುವುದೂ ಇಲ್ಲ. ಈ ವಿಶ್ವ ಸಾಮಾನ್ಯರಿಗೂ ಗೊತ್ತಿರುವಾಗ ಸೀತೆಗೆ ಗೊತ್ತಾಗದಿರದೆ? ರಾಮನು ಪರಂಪರೆಯಾಗಿ ಹೇಳದ ಮಾತಾ ಅರ್ಥವಾಗದೇ ಹೋಯಿತೆ? ಜಿಂಕೆ ರೂಪದ ಮಾರೀಚನು ಕೂಗಿಕೊಂಡಾಗ ಧ್ವನಿಯನ್ನು ಗುರುತಿಸಲಾಗದೆ ಹೋದಳೆ? ಲಕ್ಷ್ಮಣನನ್ನು ಚೆನ್ನಾಗಿ ತಿಳಿದಿದ್ದ ಅವಳ ಬಾಯಿಯಿಂದ ಅನುಚಿತ ಪದಪ್ರಯೋಗ! ಲಕ್ಷ್ಮಣನು ವಿಧಿಸಿದ ಮಾತನ್ನು ಮೀರಿ ಭಿಕ್ಷೆ ನೀಡುವ ಸಾಹಸ!

ಇಲ್ಲಿ ಮೂವರೂ ಸಮರ್ಥರೇ. ವಿವೇಕಿಗಳೇ. ಶೌರ್ಯದ ಅರಿವಿದ್ದವರೇ. ಆದರೂ ಘಟನ ಸಂಭವಿಸಿತು. ಸೀತಾಪಹರಣವಾಯಿತು. ಇವೆಲ್ಲವನ್ನೂ ಗಮನಿಸಿದರೆ ವಿನಾಶ ಕಾಲಕ್ಕೆ ಘಟನೆಯೊಂದು ಮುನ್ನುಡಿ. ಆಪತ್ತು ಬರಲೇಬೇಕಾದಾಗ ಎಂಥವರ ಮನಸ್ಸೂ ಮಂಕಾಗುತ್ತದೆ. ವಿವೇಕ ಮಾಯವಾಗುತ್ತದೆ. ವಿನಾಶದ ಕಾಲ ಸನ್ನಿಹಿತವಾದಾಗ ಎಲ್ಲರ ಬುದ್ಧಿಯೂ ವಿಪರಿಣಮಿಸುತ್ತದೆ. ಆಗಬೇಕಾದದ್ದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಬುದ್ಧಿಗೆ ಮಂಕುಕವಿದು ಹೀಗೆಲ್ಲ ಆಗುತ್ತದೆ. ಆದ್ದರಿಂದಲೇ ಹೇಳುವುದು ವಿವೇಕವನ್ನು ಕಳೆದುಕೊಳ್ಳಬಾರದು. ಮನೋಬುದ್ಧಿಗಳನ್ನು ಮಲಿನ ಮಾಡಿಕೊಳ್ಳಬಾರದು.

ಭಾರತೀಯ ದರ್ಶನಗಳಲ್ಲಿ ಜಗತ್ತಿನ ಸ್ವರೂಪ

ಜಗತ್ತು ಎಂಬುದು ಭಾರತೀಯ ದರ್ಶನಗಳಿಗೆ ಒಂದು ಮುಖ್ಯ ಪ್ರತಿಪಾದ್ಯವಾದ ವಿಷಯವಾಗಿದೆ.


ಪದಸಂಚಲನ

ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಜಗತ್ತಿನ ಬಗ್ಗೆ ನಮಗೆಷ್ಟು ತಿಳಿದಿದೆಯೋ ಅದಷ್ಟೇ ಜಗತ್ತಲ್ಲ ಎಂಬುದು ವಿವೇಕಿಗಳಿಗೆಲ್ಲ ಗೊತ್ತಿರುವ ವಿಷಯವೇ ಆಗಿದೆ. ಇಲ್ಲಿ ಕಣ್ಣಿಗೆ ಕಾಣುವ ವಸ್ತುಗಳಷ್ಟೇ ಅಲ್ಲ, ಬದಲಿಗೆ ಯಾವ ಇಂದ್ರಿಯಗಳಿಗೂ ಗೋಚರವಾಗದ ಅದೆಷ್ಟೋ ಸಂಗತಿಗಳಿವೆ. ನಮ್ಮ ಸುತ್ತಮುತ್ತಲಿರುವ ಮತ್ತು ನಮ್ಮಿಂದ ಅದೆಷ್ಟೋ ದೂರದವರೆಗೂ ವ್ಯಾಪಿಸಿರುವ ಎಲ್ಲವನ್ನೂ ಸೇರಿ ಜಗತ್ತು ಅಥವಾ ವಿಶ್ವವೆಂದು ಕರೆಯಲಾಗುತ್ತದೆ. ಇಂಥ ಜಗತ್ತಿನ ಹೆಚ್ಚಿನ ಅಂಶ ಭೌತಿಕವಾಗಿರುವುದು ಹೌದಾದರೂ, ಅಭೌತಿಕ ಅಂಶಗಳನ್ನೂ ಈ ಜಗತ್ತು ಒಳಗೊಳ್ಳುತ್ತದೆ. ಒಟ್ಟಿನಲ್ಲಿ ಎಲ್ಲವನ್ನೂ ಒಳಗೊಂಡು ನಮ್ಮ ಜೀವಿತಕ್ಕೆ ಈ ಜಗತ್ತು ಆಧಾರವಾಗಿದೆ. ಅಷ್ಟೇ ಅಲ್ಲ, ನಮ್ಮ ಅನುಭವಕ್ಕೆ ವಿಷಯವೂ ಆಗಿದೆ. ಇಂಥ ಜಗತ್ತಿನ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೇ ಜೀವನವು ಸಾರ್ಥಕವಾಗುವುದಿಲ್ಲವೆಂಬುದಾಗಿ ಭಾರತೀಯ ದರ್ಶನಗಳು ತಿಳಿಸಿವೆ. ಅದೇ ಕಾರಣಕ್ಕಾಗಿ ಭಾರತೀಯ ದರ್ಶನಗಳು ನಿಃಶ್ರೇಯಸ್ಸೆಂಬ ತನ್ನ ಒಳಿತನ್ನು ಉದ್ದೇಶಿಸಿಯೇ ಜಗತ್ತನ್ನು ಚರ್ಚೆಯಒಂದು ಮುಖ್ಯ ವಿಷಯವನ್ನಾಗಿಸಿಕೊಂಡಿವೆ.

ಈ ಪ್ರಪಂಚವು ಒಳಗೊಳ್ಳುವ ವಸ್ತುಗಳಾವವು? ಅವುಗಳನ್ನೆಲ್ಲ ಸೇರಿಸಿ, ಅವುಗಳ ನಡುವಿನ ಸಾಮ್ಯವನ್ನಿರಿಸಿಕೊಂಡು ಒಟ್ಟಾರೆಯಾಗಿ ಹೇಗೆಲ್ಲ ಈ ಪ್ರಪಂಚವನ್ನು ವಿಭಾಗಿಸಬಹುದು? ಅವುಗಳ ಸಂಖ್ಯೆ, ಅವುಗಳ ಗುಣಗಳು ಮತ್ತು ಅವುಗಳ ಸ್ವರೂಪವೇನು? ಜಗತ್ತಿನ ಸೃಷ್ಟಿ ಹೇಗಾಗುತ್ತದೆ? ಜಗತ್ತಿನ ಪ್ರಲಯವು ಹೇಗಾಗುತ್ತದೆ? ಈ ಜಗತ್ತು ಯಾಕಾಗಿ ಹುಟ್ಟಿದೆ? ಇಡೀ ಜಗತ್ತನ್ನು ಬ್ರಹ್ಮಾಂಡ ಎಂದು ಕರೆಯುವುದಾದರೆ, ಇಂಥ ಬ್ರಹ್ಮಾಂಡದಲ್ಲಿರುವ ಲೋಕಗಳು ಯಾವವು? ಈ ಜಗತ್ತು ಕಂಡಂತೆಯೇ ಇದೆಯೋ ಅಥವಾ ಬೇರೆಯದೇ ಸ್ವರೂಪವನ್ನು ಇದು ಹೊಂದಿದೆಯೋ? ಯಾರೆಲ್ಲ ಈ ಜಗತ್ತನ್ನು ಸತ್ಯವೆಂದು ವಾದಿಸುತ್ತಾರೆ? ಯಾರ ಮತದಲ್ಲಿ ಈ ಜಗತ್ತು ಹೇಗಿದೆ? ಈ ಜಗತ್ತು ಚೇತನವೋ ಅಚೇತನವೋ? ಈ ಜಗತ್ತು ನಮ್ಮೊಳಗಿದೆಯೋ ಅಥವಾ ಜಗತ್ತಿನೊಳಗೆ ನಾವಿದ್ದೇವೆಯೋ? ಹೊರಗೆ ಕಾಣುವುದು ಮಾತ್ರ ಪ್ರಪಂಚವೋ ಅಥವಾ ಒಳಗೂ ಒಂದು ಪ್ರಪಂಚವೆಂಬುದಿದೆಯೋ? ಒಳಗಿನ ಪ್ರಪಂಚವೊಂದಿದೆ ಎಂದಾದರೆ ಅದು ಹೊರಗಿನದ್ದಕ್ಕಿಂತ ಬೇರೆಯೋ ಒಂದೇ ಆಗಿದೆಯೋ? ಇತ್ಯಾದಿ ಪ್ರಶ್ನೆಗಳನ್ನು ಎತ್ತಿಕೊಂಡು ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವನ್ನು ದರ್ಶನಗಳು ಮಾಡುತ್ತವೆ.



ಜಗತ್ತು ಎಂಬುದು ಭಾರತೀಯ ದರ್ಶನಗಳಿಗೆ ಒಂದು ಮುಖ್ಯ ಪ್ರತಿಪಾದ್ಯವಾದ ವಿಷಯವಾಗಿದೆ. ಸಾಮಾನ್ಯವಾಗಿ ತತ್ತ್ವಶಾಸ್ತ್ರಗಳು ಪ್ರಪಂಚದ ಸ್ವರೂಪವನ್ನು ಚರ್ಚಿಸದೆಯೇ ಇರಲಾರವು. ಯಾಕೆಂದರೆ ಭಾರತೀಯ ತತ್ತ್ವಶಾಸ್ತ್ರದ ಮುಖ್ಯ ಪ್ರತಿಪಾದ್ಯವಾದ ವಿಷಯ 'ನಾನು ಯಾರು? ಎಂಬುದೇ ಆಗಿದೆ. ಇದನ್ನು ತಿಳಿದುಕೊಳ್ಳಲು ನನ್ನ ಅನುಭವಕ್ಕೆ ವಿಷಯವಾಗುವ ಮತ್ತು ನನ್ನ ಆಧಾರಗಳಲ್ಲಿ ಒಂದಾಗಿರುವ ಈ ಜಗತ್ತಿನ ಸ್ವರೂಪದ ವಿವೇಚನೆಯೂ ಕೂಡ ಅಷ್ಟೇ ಮುಖ್ಯವಾಗುತ್ತದೆ. ದರ್ಶನಗಳು ಆಸ್ತಿಕ ಮತ್ತು ನಾಸ್ತಿಕದರ್ಶನಗಳೆಂಬುದಾಗಿ ಮುಖ್ಯವಾಗಿ ಎರಡು ವಿಧ. ಯಾವ ದರ್ಶನಗಳು ವೇದವನ್ನು ಒಂದು ಪ್ರಮಾಣವನ್ನಾಗಿ ಸ್ವೀಕರಿಸಿವೆಯೋ ಅವನ್ನು ಆಸ್ತಿಕದರ್ಶನಗಳು ಎಂಬುದಾಗಿ ಗುರುತಿಸಲಾಗುತ್ತದೆ. ನ್ಯಾಯ-ವೈಶೇಷಿಕ, ಸಾಂಖ್ಯ-ಯೋಗ, ಪೂರ್ವೋತ್ತರ ಮೀಮಾಂಸಾದರ್ಶನಗಳು ಆಸ್ತಿಕದರ್ಶನಗಳು. ವೇದದ ಪ್ರಾಮಾಣ್ಯವನ್ನು ಅಂಗೀಕರಿಸದ ಚಾರ್ವಾಕ, ಬೌದ್ಧ ಮತ್ತು ಜೈನದರ್ಶನಗಳು ನಾಸ್ತಿಕದರ್ಶನಗಳು ಎಂಬುದಾಗಿ ಭಾರತೀಯ ತತ್ತ್ವಶಾಸ್ತ್ರದಲ್ಲಿ ದರ್ಶನಗಳ ಪ್ರವಿಭಾಗವನ್ನು ಮಾಡಲಾಗಿದೆ. ಆಸ್ತಿಕದರ್ಶನಗಳಿಗೆ ಮೂಲ ವೇದಗಳು. ಹಾಗಾಗಿ ಪ್ರಪಂಚದ ಬಗೆಗಿನ ವಿಚಾರವನ್ನು ಮೊಟ್ಟ ಮೊದಲ ಬಾರಿಗೆ ವೇದಗಳೇ ಮಾಡಿವೆ. ಅವುಗಳ ಆಧಾರದಲ್ಲಿಯೇ ಪ್ರತ್ಯಕ್ಷ, ತರ್ಕ ಮೊದಲಾದ ಪ್ರಮಾಣಗಳನ್ನು ಬಳಸಿ ಬೇರೆ ಬೇರೆ ದರ್ಶನಗಳು ಬೇರೆ ಬೇರೆ ರೀತಿಯಲ್ಲಿ ಪ್ರಪಂಚದ ವಿಮರ್ಶೆಯನ್ನು ಮಾಡಿವೆ ಮತ್ತು ಪ್ರಪಂಚದ ತತ್ತ್ವವನ್ನು ವಿವರಿಸಿವೆ.

ಜಗತ್ತು ಜಡತತ್ತ್ವವೆಂಬುದರಲ್ಲಿ ದಾರ್ಶನಿಕರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಇದು ಸತ್ಯವೋ ಮಿಥ್ಯೆಯೋ ಎಂಬ ಬಗ್ಗೆ ಬಹಳ ಚರ್ಚೆಗಳಿವೆ. ಜಗತ್ತು ತೋರುತ್ತದೆಯೇ ಹೊರತೂ ಅದು ಪಾರಮಾರ್ಥಿಕವಲ್ಲವೆಂಬುದಾಗಿ ಅದ್ವೈತಸಿದ್ಧಾಂತವು ಪ್ರತಿಪಾದಿಸುತ್ತದೆ. ಉಳಿದ ಹೆಚ್ಚಿನ ದರ್ಶನಗಳಲ್ಲಿ ಜಗತ್ತನ್ನು ಸತ್ಯವೆಂಬುದಾಗಿ ಪ್ರತಿಪಾದಿಸಲಾಗಿದೆ. ಆಯಾ ದರ್ಶನದ ಮುಖ್ಯ ಸಿದ್ಧಾಂತದ ವಿಷಯದಲ್ಲಿ ಮತಭೇದವುಂಟಾಗಲು ಆಯಾ ದರ್ಶನವು ಜಗತ್ತಿನ ಬಗ್ಗೆ ತಳೆಯುವ ನಿಲುವು ಕೂಡ ಮುಖ್ಯವಾದ ಕಾರಣವಾಗಿದೆ. ಜಗತ್ತು ಪ್ರತಿಕ್ಷಣ ಪರಿಣಾಮಿಯಾದುದು ಎಂಬುದನ್ನು ಹೆಚ್ಚಿನ ಎಲ್ಲ ದಾರ್ಶನಿಕರೂ ಒಪ್ಪುತ್ತಾರೆ. ಹಾಗಿದ್ದೂ ಅದು ನಿತ್ಯವೆಂದು ಕೆಲವರು ಭಾವಿಸುತ್ತಾರೆ. ಸೃಷ್ಟ್ಯಾದಿಗಳು ಈ ಜಗತ್ತಿಗೆ ಇವೆಯಾದರೂ ಅದು ಅತ್ಯಂತ ಅಸತ್ಯವಲ್ಲ. ಬದಲಿಗೆ ಈ ಸೃಷ್ಟಿ, ಸ್ಥಿತಿ, ಲಯಗಳು ನಿಯತವಾಗಿ ಸಂಭವಿಸುವುದರಿಂದ ಅದೇ ಜಗತ್ತಿನ ಸ್ವರೂಪವಾಗಿದೆ ಎಂಬುದು ಕೆಲವರ ಮತ.

ಜಗತ್ತಿನ ಬಗ್ಗೆ ಕೇವಲ ಆಸ್ತಿಕ ದರ್ಶನಗಳಷ್ಟೇ ವಿಚಾರವನ್ನು ನಡೆಸಿಲ್ಲ. ಬದಲಿಗೆ ನಾಸ್ತಿಕದರ್ಶನಗಳಾದ ಬೌದ್ಧ, ಜೈನದರ್ಶನಗಳಲ್ಲೂ ಪ್ರಪಂಚದ ಕುರಿತಾದ ಆಳವಾದ ಮತ್ತು ವಿಸ್ತೃತವಾದ ಪ್ರಕ್ರಿಯೆಗಳನ್ನು ಪ್ರದರ್ಶಿಸಲಾಗಿದೆ. ಜಗತ್ತು ಸ್ಕಂಧಗಳ ರೂಪದಲ್ಲಿದೆ ಎಂಬುದಾಗಿ ಬೌದ್ಧರು ಸ್ವೀಕರಿಸುತ್ತಾರೆ. ಪರಮಾಣುಗಳ ರೂಪದಲ್ಲಿ ಈ ಪ್ರಪಂಚವಿದೆ ಎಂಬುದು ತಾರ್ಕಿಕರ ಮತ. ಈ ಜಗತ್ತು ತನ್ನ ಸೃಷ್ಟಿಗಿಂತಲೂ ಮುಂಚೆ ಕಾರಣದಲ್ಲಿ ಸೂಕ್ಷ್ಮರೂಪದಲ್ಲಿ ಇದ್ದೇ ಇತ್ತು ಎಂಬುದಾಗಿ ಸಾಂಖ್ಯರು, ಈ ಜಗತ್ತು ಯಾವತ್ತೂ ಹೀಗೆಯೇ ಇದೆ ಎಂಬುದಾಗಿ ಮೀಮಾಂಸಕರು, ಜಗತ್ತು ಒಂದು ತೋರಿಕೆ, ಹಾಗಾಗಿ ಅದರ ಸೃಷ್ಟಿ, ಸ್ಥಿತಿ, ನಾಶವೂ ಕೂಡ ಒಂದು ತೋರಿಕೆಯೆಂಬುದಾಗಿ ಅದ್ವೈತ ಸಂಪ್ರದಾಯ. ಹೀಗೆ ಜಗತ್ತಿನ ಬಗ್ಗೆ ಅನೇಕ ಭಿನ್ನ ಹೊಳಹುಗಳನ್ನು ನಾವು ಭಾರತೀಯ ದರ್ಶನಗಳಲ್ಲಿ ಕಾಣಬಹುದಾಗಿದೆ. ಈ ಜಗತ್ತಿಗೆ ಚೇತನ ಕಾರಣವೋ ಅಥವಾ ಅಚೇತನ ಕಾರಣವೋ ಎಂಬುದು ಕೂಡ ಮತ್ತೊಂದು ಸ್ವಾರಸ್ಯಕರವಾದ ಚರ್ಚೆ. ಅಷ್ಟೇ ಅಲ್ಲ, ಈ ಜಗತ್ತಿನ ನಿಯಂತ್ರಣಕ್ಕೆ ಒಬ್ಬ ಈಶ್ವರ ಬೇಕೋ ಬೇಡವೋ ಎಂಬ ಬಗ್ಗೆಯೂ ದರ್ಶನಗಳು ಚರ್ಚಿಸುತ್ತವೆ. ವಸ್ತುತಃ ಜಗತ್ತೇ ಈಶ್ವರನ ಅಸ್ತಿತ್ವವನ್ನು ಸ್ವೀಕರಿಸಲು ಇರುವ ಮುಖ್ಯ ಕಾರಣಗಳಲ್ಲೊಂದು. ಅರ್ಥಾತ್ ನಿಯಮ್ಯವೊಂದು ಇಲ್ಲದೇ ಇದ್ದರೆ ನಿಯಂತಾ ತಾನೇ ಏನು ಮಾಡಲು ಸಾಧ್ಯ? ಹಾಗಾಗಿ ಕಾಲಕಾಲಕ್ಕೆ ಈ ಜಗತ್ತಿನ ಸೃಷ್ಟಿ, ಲಯ ಮೊದಲಾದವುಗಳನ್ನು ನಿರ್ವಹಿಸಲು ಈಶ್ವರನೊಬ್ಬ ಬೇಕಾಗುತ್ತಾನೆ ಎಂದು ಕೆಲವರು ವಾದಿಸಿದರೆ, ಇನ್ನು ಕೆಲವರು ಹಾಗೇನೂ ಇಲ್ಲ, ಜಗತ್ತು ತನ್ನ ನಿಯಮಗಳಿಂದಲೇ ಸ್ವಯಂ ಚಾಲನೆಯಲ್ಲಿರುತ್ತದೆ ಮತ್ತು ಅದು ತನ್ನ ನಿಯಮಗಳಿಂದಲೇ ಎಲ್ಲವನ್ನೂ ನಿಯಂತ್ರಿಸುತ್ತದೆ ಎಂಬುದಾಗಿ ಇನ್ನು ಕೆಲವರು ವಾದಿಸುತ್ತಾರೆ.

ಹೀಗೆ ಈಶ್ವರನೆಂಬ ಒಂದು ತತ್ತ್ವವನ್ನು ಎಲ್ಲ ದಾರ್ಶನಿಕರೂ ಒಪ್ಪುವುದಿಲ್ಲ. ಈಶ್ವರನನ್ನು ಒಪ್ಪುವವರೆಲ್ಲರೂ ಆಸ್ತಿಕರು ಎಂಬುದಾಗಿ ಲೋಕದಲ್ಲಿ ಪ್ರಸಿದ್ಧಿ ಇದೆಯಾದರೂ, ದರ್ಶನಗಳಲ್ಲಿ ಹಾಗಿಲ್ಲ. ಆಸ್ತಿಕದರ್ಶನಗಳಲ್ಲಿ ಕೂಡ ಇಂಥ ಒಬ್ಬ ಈಶ್ವರನನ್ನು ಅಂಗೀಕರಿಸದೇ ಇರುವವರು ಇದ್ದಾರೆ. ಸಾಂಖ್ಯರು ಈಶ್ವರನು ಬೇಕಾಗಿಲ್ಲ ಎನ್ನುತ್ತಾರೆ. ಮೀಮಾಂಸಕರು ನೇರವಾಗಿ ನಿರಾಕರಿಸುವುದಿಲ್ಲವಾದರೂ ಅವರ ದರ್ಶನದಲ್ಲಿ ತಮ್ಮ ಸಿದ್ಧಾಂತವನ್ನು ನಿರೂಪಿಸುವುದಕ್ಕೆ ಅವರಿಗೆ ಈಶ್ವರನ ಅಗತ್ಯ ಬಿದ್ದಿಲ್ಲ. ಇನ್ನು ಕೆಲವರು ನಿತ್ಯ ಪರಮೇಶ್ವರನನ್ನು ಸ್ವೀಕರಿಸಿದರೆ, ಈಶ್ವರತತ್ತ್ವವೂ ಕೂಡ ಮಿಥ್ಯೆಯೇ ಆಗಿದೆ ಎಂಬುದಾಗಿ ಇನ್ನು ಕೆಲವರು ವಾದಿಸುತ್ತಾರೆ. ಒಟ್ಟಿನಲ್ಲಿ ಪ್ರಪಂಚವೆಂಬ ಒಂದು ವಿಷಯವು ದರ್ಶನಗಳಲ್ಲಿ ಅಭಿಪ್ರಾಯಭೇದಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ, ದೃಷ್ಟಿಭೇದಕ್ಕೂ ಕಾರಣವಾಗಿದೆ. ಹಾಗೆ ನೋಡಿದರೆ ದೃಷ್ಟಿಭೇದವೇ ಪ್ರಪಂಚದ ಬಗೆಗಿನ ಇಷ್ಟೊಂದು ಭಿನ್ನ ಭಿನ್ನ ವಿಚಾರಗಳಿಗೆ ಕಾರಣವೂ ಹೌದು ಎನ್ನಬಹುದು.

ಒಂದೇ ಜಗತ್ತಿದೆಯೋ ಅಥವಾ ನಾನಾ ಜಗತ್ತಿದೆಯೋ ಎಂಬ ಬಗ್ಗೆ ಕೂಡ ದರ್ಶನಗಳಲ್ಲಿ ಚರ್ಚೆಯಿದೆ. ಹಾಗೆ ಚರ್ಚಿಸುವಾಗ ಜಗತ್ತು ಎಂಬ ಶಬ್ದದ ವ್ಯಾಪ್ತಿಯನ್ನು ಮೊದಲು ನಿರ್ಧರಿಸಿಕೊಳ್ಳಬೇಕಾಗುತ್ತದೆ. ನಾವು ಬದುಕುವ ಜಗತ್ತು ಭೌತಿಕವಾದ ಜಗತ್ತಾಗಿದೆ. ಅದರ ಜೊತೆಗೆ ನಾವು ಬದುಕುವ ಇನ್ನೊಂದು ಜಗತ್ತಿದೆ. ಅದೇ ಮಾನಸ ಜಗತ್ತು. ಭೌತಿಕ ಪ್ರಪಂಚ ಎಲ್ಲರಿಗೂ ಸಮನಾಗಿದ್ದರೂ ಮಾನಸಪ್ರಪಂಚವು ಪ್ರತಿವ್ಯಕ್ತಿ ಭಿನ್ನವಾಗುತ್ತದೆ. ಇಂಥ ಜಗತ್ತಿನ ಸೃಷ್ಟಿಕರ್ತ ಯಾರು? ಎಂಬ ಬಗ್ಗೆ ಪ್ರಶ್ನೆಯನ್ನು ಎತ್ತಿಕೊಂಡು, ಸರ್ವಸಾಧಾರಣವಾದ ಜಗತ್ತಿಗೆ ಈಶ್ವರನು ಕರ್ತೃವಾದರೆ, ನಮ್ಮ ಮಾನಸಪ್ರಪಂಚಕ್ಕೆ ನಾವೇ ಕಾರಣವೆಂಬುದಾಗಿ ದರ್ಶನಗಳಲ್ಲಿ ವಿಶಿಷ್ಟವಾದ ದೃಷ್ಟಿಕೋನದ ಚರ್ಚೆಯಿದೆ. ಇವನ್ನೆಲ್ಲ ನಾವು ಒಂದೊಂದೇ ವಿಷಯವಾಗಿ, ಆಳವಾಗಿ ಮುಂದಿನ ಲೇಖನಗಳಲ್ಲಿ ನೋಡೋಣ. ದರ್ಶನಗಳಲ್ಲಿ ಪ್ರತಿಪಾದಿಸಲಾಗಿರುವ ಜಗತ್ತಿನ ಸೃಷ್ಟಿವಿಜ್ಞಾನ ಕೂಡ ಇವತ್ತಿನ ಜಗತ್ತಿಗೆ ಹೊಸ ಹೊಳಹೊಂದನ್ನು ಕೊಡಲು ಶಕ್ತವಾದುದಾಗಿದೆ.

ಆಧುನಿಕ ವಿಜ್ಞಾನವು ಈ ಜಗತ್ತಿನ ಬಗ್ಗೆ ಸಂಶೋಧನೆಯನ್ನು ನಡೆಸುತ್ತಲೇ ಇದೆ. ಅದು ಮುಂದುವರಿಯಲಿದೆ ಕೂಡ. ಆದರೆ ಸಾವಿರಾರು ವರ್ಷಗಳ ಹಿಂದೆಯೇ ಭಾರತೀಯ ಆರ್ಷವಿಜ್ಞಾನ ಪರಂಪರೆಯು ಜಗತ್ತಿನ ಬಗ್ಗೆ ತುಂಬ ಆಳವಾದ ವಿಷಯಗಳನ್ನು ಕಂಡುಕೊಂಡು ಜಿಜ್ಞಾಸುಗಳಿಗೆ ತೆರೆದಿಟ್ಟಿದೆ. ಅದನ್ನು ಒಂದೊಂದಾಗಿ ಇನ್ನು ಮುಂದಿನ ಲೇಖನ ಸರಣಿಯಲ್ಲಿ ನೋಡೋಣ.

ಪಾಕಿಸ್ತಾನವು ಭಯೋತ್ಪಾದನೆ ತ್ಯಜಿಸದೆ ಜಗತ್ತಿನ ವಿಶ್ವಾಸ ಗಳಿಸದು

ಕ್ರಿಸ್ ಬ್ಲಾಕ್‌ಬರ್ನ್

ಪಾಕಿಸ್ತಾನವು ತನ್ನಲ್ಲಿರುವ ಭಯೋತ್ಪಾದಕ ಸಂಘಟನೆಗಳನ್ನು ಕ್ರೀಡಾತಂಡಗಳಂತೆ ಪೋಷಿಸುತ್ತದೆ.

ಕಳೆದ ತಿಂಗಳು ಪ್ರಮುಖ ಅಂತಾರಾಷ್ಟ್ರೀಯ ಮಾಧ್ಯಮವೊಂದರ ಹಿರಿಯ ವರದಿಗಾರ "ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಶಾಶ್ವತ ಶಾಂತಿ ನೆಲೆಸಲು ಏನು ಮಾಡಬೇಕಾಗಬಹುದು?" ಎಂಬ ಪ್ರಶ್ನೆಯನ್ನು ಕೇಳಿದ. ಆತ ಹೇಳುತ್ತಿರುವುದು ಯಾವುದೇ ತಾತ್ಕಾಲಿಕ ಕದನ ವಿರಾಮ ಅಲ್ಲ. ರಾಜತಾಂತ್ರಿಕ ಹಸ್ತಲಾಘವವೂ ಅಲ್ಲ. ಉಭಯದೇಶಗಳ ಮಧ್ಯೆ ನಿಜವಾಗಿ ಶಾಂತಿ ನೆಲೆಸಲು ಏನಾಗಬೇಕು ಎಂಬುದು. ನನ್ನ ಉತ್ತರ ಸರಳವಾಗಿತ್ತು. ಪಾಕಿಸ್ತಾನವು ಭಾರತದಲ್ಲಿ ಸಾಮೂಹಿಕ ನರಮೇಧ ನಡೆಸುವ ಭಯೋತ್ಪಾದಕ ಸಂಘಟನೆಗಳಿಗೆ ನೆರವು ನೀಡುವುದನ್ನು ನಿಲ್ಲಿಸಬೇಕು ಎಂದು ಉತ್ತರಿಸಿದೆ.

ಪಾಕಿಸ್ತಾನದಿಂದ ಕಾರ್ಯಾಚರಿಸುತ್ತಿರುವ ಜೈಶ್-ಇ-ಮೊಹಮ್ಮದ್, ಲಷ್ಕರ್-ಇ -ತೊಯ್ಬಾದಂತಹ ಸಂಘಟನೆಗಳನ್ನು ವಿಶ್ವಸಂಸ್ಥೆ ಭಯೋತ್ಪಾದಕ ಸಂಘಟನೆಗಳೆಂದು ಹೆಸರಿಸಿದ್ದು, ಅಂತಾರಾಷ್ಟ್ರೀಯ ಸಮುದಾಯ ಕೂಡ ಅವುಗಳನ್ನು ಭಯೋತ್ಪಾದಕ ಸಂಘಟನೆಗಳೆಂದೇ ಪರಿಗಣಿಸುತ್ತದೆ. ಆದರೆ ಪಾಕಿಸ್ತಾನವು ಅವುಗಳನ್ನು ಕ್ರೀಡಾತಂಡಗಳಂತೆ ಪೋಷಿಸುತ್ತದೆ. ಎಲ್ಲಾ ಅನಿಷ್ಟಗಳು ಅಲ್ಲಿಂದಲೇ ಶುರುವಾಗುತ್ತವೆ. ಭಾರತವು ಪಾಕಿಸ್ತಾನದೊಂದಿಗೆ ಉತ್ತಮ ಸಂಬಂಧವನ್ನೇನೋ ಬೆಳೆಸುತ್ತದೆ. ಬಹಳಷ್ಟು ಭಾರತೀಯರೂ ಅದನ್ನೇ ಬಯಸುತ್ತಾರೆ. ಆದರೆ ಯಾವ ದೇಶವೂ ತನ್ನ ತಲೆಗೆ ನಿರಂತರ ಬಂದೂಕು ಹಿಡಿದಿರುವ ದೇಶದೊಂದಿಗೆ ಶಾಶ್ವತ ಶಾಂತಿಯನ್ನು ಬೆಳೆಸಲಾರದು.

ದಕ್ಷಿಣ ಏಷ್ಯಾ ಬಿಕ್ಕಟ್ಟಿನ ಅತೀ ಮುಖ್ಯ ಅಂಶವಿರುವುದೇ ಈ ವಿಷಯದಲ್ಲಿ. ಯಾವುದೇ ಪ್ರಾದೇಶಿಕ ಸಮತೋಲನ, ರಹಸ್ಯ ಕಾರ್ಯಾಚರಣೆ, ವ್ಯೂಹಾತ್ಮಕ ರಣತಂತ್ರ ಮುಂತಾದವುಗಳ ಕುರಿತಂತೆ ಮಾತನಾಡುವ ಮೊದಲು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದ ಮೂಲಭೂತ ವಿಷಯವೆಂದರೆ ಜಗತ್ತಿನ ಅತ್ಯಂತ ಕುಖ್ಯಾತವಾದ ಭಯೋತ್ಪಾದಕ ಸಂಘಟನೆಗಳು ಪಾಕಿಸ್ತಾನದಲ್ಲೇ ಹುಟ್ಟಿರುವುದು, ಅಲ್ಲಿಂದಲೇ ಕಾರ್ಯಾಚರಿಸುತ್ತಿರುವುದು ಹಾಗೂ ಅಲ್ಲಿಯೇ ಆಶ್ರಯ ಪಡೆಯುತ್ತಿವೆ ಎಂಬುದನ್ನು. ಕಳೆದ ಕೆಲವು ದಶಕಗಳಿಂದ ಇದು ನಡೆಯುತ್ತಿದೆ. ಪಾಕಿಸ್ತಾನವು ತನ್ನ ಈ ಸ್ವಭಾವವನ್ನು ಬದಲಿಸಿಕೊಳ್ಳದ ಹೊರತು ಹಾಗೂ ಆ ಬಗ್ಗೆ ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳದ ಹೊರತು ಯಾವ ದೇಶವೂ ಅದನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾರದು. ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಉದ್ವಿಗ್ನತೆ ಹೆಚ್ಚುತ್ತಿರುವ ಬಗ್ಗೆ ಹೇಳಲಾಗುತ್ತದೆ. ಎರಡೂ ದೇಶಗಳಲ್ಲೂ ರಾಜಕೀಯ ಮುಖಂಡರು ಪರಿಸ್ಥಿತಿಯನ್ನು ಉದ್ವಿಗ್ನಗೊಳಿಸುವ ಮಾತನಾಡುತ್ತಿರುತ್ತಾರೆ. ಆದರೆ ಪಾಕಿಸ್ತಾನವು ಭಾರತವನ್ನು ಟೀಕಿಸುವಾಗಲೆಲ್ಲ ತನ್ನ ಕುರೂಪವನ್ನು, ಹಿನ್ನೆಲೆಯನ್ನು ಮುಚ್ಚಿಡುತ್ತದೆ. ಏಕೆಂದರೆ ಮುಖ್ಯವಾದ ಲೋಪವು ಪಾಕಿಸ್ತಾನದಲ್ಲೇ ಇದೆ. ಸುಳ್ಳುಗಳು ಅದನ್ನು ಯಾವತ್ತೂ ಬಚಾಯಿಸಲಾರದು.

ಜಗತ್ತು ಭಾರತವನ್ನು ಅಂತಾರಾಷ್ಟ್ರೀಯ ಭಯೋತ್ಪಾದನೆಯ ಯಂತ್ರವೆಂದು ಭಾವಿಸುವುದಿಲ್ಲ. ಆದರೆ ಪಾಕಿಸ್ತಾನವನ್ನು ಹಾಗೆಂದು ಪರಿಗಣಿಸುತ್ತದೆ. ಪಾಕಿಸ್ತಾನವು ಭಯೋತ್ಪಾದಕ ರಾಷ್ಟ್ರವೆಂದು ಹೇಳುವುದು ಹೊಸದಿಲ್ಲಿಯಲ್ಲಿ ಟಿವಿ ಸ್ಟುಡಿಯೋಗಳಲ್ಲಿ ಕುಳಿತವರಲ್ಲ. ಪಾಕಿಸ್ತಾನವು ದಶಕಗಳ ಕಾಲದಿಂದ ಬೆಳೆಸಿದ ಭಯೋತ್ಪಾದನಾ ಜಾಲ, ಅವರ ಮೂಲಕ ನಡೆಸಿದ ಛಾಯಾ ಸಮರ, ತಾಲಿಬಾನ್ ಕಾಲ, ಕಾಶ್ಮೀರ ಉಗ್ರವಾದ ಮುಂತಾದವುಗಳು ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವನ್ನಾಗಿ ರೂಪಿಸಿದೆ. ಸ್ವತಃ ಪಾಕಿಸ್ತಾನದ ಸೇನೆಯೇ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿದೆ. ನ್ಯಾಟೋ ಸೇನೆಯು ಅಫಘಾನಿಸ್ತಾನದಲ್ಲಿ 20 ವರ್ಷ ತಳವೂರಿತ್ತು. ಅದೇ ಸಮಯದಲ್ಲಿ ನೆರೆಯ ಪಾಕಿಸ್ತಾನದಿಂದ ತರಬೇತು ಪಡೆದ ಭಯೋತ್ಪಾದಕರು ಪಾಶ್ಚಿಮಾತ್ಯ ಸೈನಿಕರ ರಕ್ತ ಹರಿಸುವ ಕಾರ್ಯದಲ್ಲಿ ತೊಡಗಿದ್ದರು. ಪಾಶ್ಚಿಮಾತ್ಯ ರಾಜತಾಂತ್ರಿಕರು, ಅಂತಾರಾಷ್ಟ್ರೀಯ ನೆರವು ನೀಡುವ ಕಾರ್ಯಕರ್ತರು ಹಾಗೂ ನಾಗರಿಕರು ಈ ಭಯೋತ್ಪಾದಕರಿಂದ ಸಾವಿಗೀಡಾಗಿದ್ದರು. ಜಗತ್ತು ಈ ಕಹಿಸತ್ಯವನ್ನು ಮರೆತಿಲ್ಲ. ಪಾಕಿಸ್ತಾನವೂ ಅದನ್ನು ಇಷ್ಟಪಡದಿರಬಹುದು. ಆದರೆ ಇದನ್ನು ಸಾರಾಸಗಟಾಗಿ ನಿರಾಕರಿಸಲಾಗುವುದಿಲ್ಲ. ಹಾಗೆ ನಿರಾಕರಿಸಿದರೆ ಅದು ಅತೀ ದೊಡ್ಡ ವಿಡಂಬನೆ.



ಪಾಕಿಸ್ತಾನದ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಅತೀ ದೊಡ್ಡ ಪ್ರಸಂಗವೆಂದರೆ ಅಬ್ಬೊಟಾಬಾದ್ ದಾಳಿ. ಅಮೆರಿಕನ್ ಸೇನೆಯು ಅಬ್ಬೊಟಾಬಾದ್‌ನಲ್ಲಿ ಒಸಾಮಾ ಬಿನ್ ಲಾಡೆನ್‌ನನ್ನು ಪತ್ತೆ ಹಚ್ಚಿ ರಹಸ್ಯ ಕಾರ್ಯಾಚರಣೆ ನಡೆಸಿ ಅವನನ್ನು ಹತ್ಯೆಗೈದಿತ್ತು. ಪಾಕಿಸ್ತಾನಕ್ಕೆ ಇದು ಅತೀ ದೊಡ್ಡ ಮುಜುಗರದ ಪ್ರಸಂಗವಾಗಿತ್ತು. ಕೂಡಲೇ ಅದು ಅಮೆರಿಕದ ಕಾರ್ಯಾಚರಣೆಯಲ್ಲಿ ಪಾಕಿಸ್ತಾನವು ರಹಸ್ಯವಾಗಿ ನೆರವು ನೀಡಿದೆ ಎಂಬ ಸುಳ್ಳನ್ನು ಹಬ್ಬಿಸತೊಡಗಿತು.ಆದರೆ ಅದನ್ನು ಯಾರೂ ನಂಬಲಿಲ್ಲ. ಪಾಕಿಸ್ತಾನವು ತನ್ನ ಪ್ರಮುಖ ಮಿಲಿಟರಿ ಅಕಾಡೆಮಿಯ ಅತ್ಯಂತ ಸಮೀಪದಲ್ಲೇ ಜಗತ್ತಿನ ಅತ್ಯಂತ ಕುಖ್ಯಾತ ಭಯೋತ್ಪಾದಕನನ್ನು ಅಡಗಿಸಿಟ್ಟಿತ್ತು ಎಂಬುದು ಇಡೀ ಜಗತ್ತಿಗೆ ಮನವರಿಕೆಯಾಗಿದೆ. ಮತ್ತೊಂದೆಡೆಯಿಂದ ಅಮೆರಿಕದ ಗುಪ್ತಚರ ಸಂಸ್ಥೆಯನ್ನು ಮೋಸಗೊಳಿಸಲೂ ಪಾಕಿಸ್ತಾನ ಸಫಲವಾಗಿತ್ತು. ತಾನೇ ಅಮೆರಿಕಕ್ಕೆ ಲಾಡೆನ್‌ನನ್ನು ಪತ್ತೆ ಹಚ್ಚಲು ನೆರವು ನೀಡಿದ್ದೆಂದು ಜಗತ್ತಿನ ಕಣ್ಣಿಗೆ ಮಣ್ಣೆರಚಲು ಪಾಕಿಸ್ತಾನ ಯತ್ನಿಸಿತಾದರೂ ಅದರ ಹೇಳಿಕೆಯಲ್ಲಿನ ಹಲವಾರು ವೈರುಧ್ಯಗಳು ಜಗತ್ತಿಗೆ ಗೋಚರವಾಗದಿರಲಿಲ್ಲ. ಹಾಗಾಗಿಯೇ ಜಗತ್ತು ಪಾಕಿಸ್ತಾನವನ್ನು ನಂಬಲಿಲ್ಲ.

ಪಾಕಿಸ್ತಾನವು ಯಾರನ್ನು ನಂಬಿಸಲು ಹೊರಟಿದೆ ಎಂಬುದೇ ಕೆಲವೊಮ್ಮೆ ಸ್ಪಷ್ಟವಾಗುವುದಿಲ್ಲ. ಸ್ವತಃ ಅದಕ್ಕೂ ಈ ಸ್ಪಷ್ಟತೆಯಿಲ್ಲ. ಅದು ತನ್ನ ಜನರನ್ನು ಮೋಸಗೊಳಿಸಲು ಯತ್ನಿಸುತ್ತಿದೆಯೆ? ಅಥವಾ ತನ್ನ ಸ್ನೇಹಿತ ಗಲ್ಫ್ ರಾಷ್ಟ್ರಗಳನ್ನೆ ? ಅಥವಾ ಚೀನಾವನ್ನೆ? ಪಾಶ್ಚಿಮಾತ್ಯ ಸರಕಾರಗಳನ್ನೆ? ಅಥವಾ ಅಂತಾರಾಷ್ಟ್ರೀಯ ಮಾಧ್ಯಮಗಳನ್ನೇ?

ವಿಪರ್ಯಾಸವೆಂದರೆ ತಾನು ಉತ್ಪಾದಿಸಿದ ಭಯೋತ್ಪಾದನೆಗೆ ಸ್ವತಃ ಪಾಕಿಸ್ತಾನವೇ ಬಲಿಪಶುವಾಗಿದೆ. ಭಯೋತ್ಪಾದಕರ ದಾಳಿಗೆ, ಬಾಂಬು ಸ್ಫೋಟಗಳಿಗೆ ಸಾವಿರಾರು ಪಾಕಿಸ್ತಾನಿಯರು ಸತ್ತಿದ್ದಾರೆ. ಕೆಲವು ಸಮುದಾಯಗಳೇ ನಾಶಗೊಂಡಿವೆ. ಶಾಲೆಗಳ ಮೇಲೆ ದಾಳಿ ನಡೆದಿವೆ. ಮಾರುಕಟ್ಟೆಗಳನ್ನು ನಾಶಪಡಿಸಲಾಗಿದೆ. ಈ ಭಯೋತ್ಪಾದಕರ ವಿರುದ್ಧ ಪಾಕಿಸ್ತಾನದ ಮಿಲಿಟರಿ ನಡೆಸುತ್ತಿರುವ ಹೋರಾಟ ಕೂಡಾ ಭೀಕರ ರಕ್ತಪಾತಗಳಿಂದ ಕೂಡಿದೆ. ಪಾಕಿಸ್ತಾನ ಕೂಡಾ ಈಗ ಭಯೋತ್ಪಾದನೆಗೆ ತುತ್ತಾಗುತ್ತಿದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗೆಂದು ಪಾಕಿಸ್ತಾನದ ಇತಿಹಾಸವನ್ನು, ಅದು ಎಸಗಿದ ಪ್ರಮಾದವನ್ನು, ಭಯೋತ್ಪಾದನೆ ಬೆಳೆಸುವಲ್ಲಿ ಅದರ ಪಾತ್ರವನ್ನು ಯಾರೂ ನಿರಾಕರಿಸಲಾಗುವುದಿಲ್ಲ.

ಪಾಕಿಸ್ತಾನವು ಭಯೋತ್ಪಾದನೆಯಲ್ಲಿ ತನ್ನ ಪಾತ್ರವಿಲ್ಲವೆಂದು ನಿರಾಕರಿಸುತ್ತಾ ಕೂರುವುದರಲ್ಲಿ ಅರ್ಥವಿಲ್ಲ. ನಿಜವಾಗಿ ಆಗಬೇಕಾಗಿರುವುದು ಪಾಕಿಸ್ತಾನದ ಸುಧಾರಣೆ. ಅಂತರಾಷ್ಟ್ರೀಯವಾಗಿ ಮಾನ್ಯತೆ ಪಡೆಯಬೇಕಾದರೆ ಪಾಕಿಸ್ತಾನವು ತನ್ನ ಕುಟಿಲ ನೀತಿಗಳನ್ನೆಲ್ಲಾ ಕೈಬಿಡಬೇಕು. ಭಯೋತ್ಪಾದನೆಗೆ ಪ್ರೋತ್ಸಾಹ ನೀಡುವುದನ್ನು ಬಿಡಬೇಕು. ಆರ್ಥಿಕ ಸುಧಾರಣೆಗೆ, ಪ್ರಾದೇಶಿಕ ವ್ಯಾಪಾರಕ್ಕೆ ಆದ್ಯತೆ ಕೊಡಬೇಕು. ರಾಜತಾಂತ್ರಿಕ ಪ್ರಬುದ್ಧತೆಯನ್ನು ಪ್ರದರ್ಶಿಸಬೇಕು.

ಪಾಕಿಸ್ತಾನವು ವ್ಯೂಹಾತ್ಮಕವಾಗಿ ಉತ್ತಮ ಜಾಗದಲ್ಲಿದೆ. ಭಾರತೀಯ ಉಪಖಂಡ, ಮಧ್ಯ ಏಷ್ಯಾ, ಚೀನಾ ಮತ್ತು ಕೊಲ್ಲಿ ರಾಷ್ಟ್ರಗಳ ಮಧ್ಯೆ ಅದು ವಾಣಿಜ್ಯಿಕ ಸೇತುವೆಯಾಗಿ ಕಾರ್ಯಾಚರಿಸಬಲ್ಲದು. ಆದರೆ ಅದಕ್ಕಿಂತ ಮುನ್ನ ಪಾಕಿಸ್ತಾನವು ಇತರ ರಾಷ್ಟ್ರಗಳ ವಿಶ್ವಾಸಾರ್ಹತೆ ಗಳಿಸುವ ಕೆಲಸ ಮಾಡಬೇಕು. ಪಾಕಿಸ್ತಾನವು ಅಂತಹ ಕಾರ್ಯಕ್ಕಿಳಿಸುವುದೆ ಅಥವಾ ಭಯೋತ್ಪಾದನೆಗೆ ಬೆಂಬಲ ನೀಡುವ ತನ್ನ ಹಳೆಯ ಚಾಳಿಯನ್ನೆ ಮುಂದುವರಿಸುವ ಮೂಲಕ ಜಾಗತಿಕ ವಿಶ್ವಾಸವನ್ನು ಕಳೆದುಕೊಳ್ಳುವುದೆ? ಆಯ್ಕೆ ಪಾಕಿಸ್ತಾನಕ್ಕೆ ಬಿಟ್ಟದ್ದು.

ಗ್ರಾಹಕ ಹಿತರಕ್ಷಣೆ ಬಗ್ಗೆ ವಿಶೇಷ ಆದ್ಯತೆ ಅಗತ್ಯ

ಪತ್ರ ಮಿತ್ರ

ಜನರ ಕುಂದುಕೊರತೆ ಆಲಿಸುವ ಸಲುವಾಗಿ 'ಪ್ರಜಾಸೇವೆ ಇಲಾಖೆ'ಯನ್ನು ತೆರೆಯುವುದಾಗಿ ಮತ್ತು ಇದಕ್ಕಾಗಿ ಪ್ರತ್ಯೇಕ ಸಚಿವರನ್ನು ನೇಮಿಸುವುದಾಗಿ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಟವಾಗಿದೆ. ಅಲ್ಲದೆ ಸುಪ್ರೀಂ ಕೋರ್ಟಿನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದಿಲ್ಲಿಯ ಕಾನೂನು ವಿಭಾಗವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇಷ್ಟು ದಿನ ಸಾರ್ವಜನಿಕರು ಕೊಡುವ ಮನವಿ ಆಯಾ ಇಲಾಖೆಗೆ ಹೋಗುತ್ತಿತ್ತು.ಇನ್ನು ಮುಂದೆ ಪ್ರಜಾಸೇವೆ ಇಲಾಖೆಯೇ ಇದನ್ನು ಪರಿಶೀಲಿ ಸುತ್ತದೆ.ಆದೂ ಪೋಸ್ಟ್ ಮ್ಯಾನ್ ಕೆಲಸವಲ್ಲ. ಇ.ಗವರ್ನೆನ್ಸ್, ಸಕಾಲ ಕೂಡ ಇದರ ವ್ಯಾಪ್ತಿಗೆ ಬರಲಿದೆ.ಕೆಲವರು ಮಾಧ್ಯಮಗಳಲ್ಲಿ ಸಮಸ್ಯೆಗಳನ್ನು ಹೇಳುತ್ತಾರೆ.ಅದನ್ನು ಇಲಾಖೆ ಗಮನಿಸಲಿದೆ ಎಂದೂ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಹಿರಿಯ ಐಎಎಸ್‌ಅಧಿಕಾರಿಯೊಬ್ಬರನ್ನು ನೇಮಿಸಿ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಜನರು ಸಲ್ಲಿಸುವ ಮನವಿಗಳ ಶೀಘ್ರ ಇತ್ಯರ್ಥ, ಸಮಸ್ಯೆ ಹೇಳಿಬರುವ ಜನರಿಗೆ ಪರಿಹಾರ ನೀಡುವ ಹೊಣೆ, ವಿಧಾನಸಭಾ ಕ್ಷೇತ್ರದಲ್ಲಿ ವಾರಕ್ಕೊಮ್ಮೆ ಸ್ಥಳೀಯ ಶಾಸಕರೊಂದಿಗೆ ಪ್ರಜಾಸೇವೆ ಇಲಾಖೆ ಮೂಲಕ ಜನಸ್ಪಂದನ ಸಭೆ, ನಂತರ ಅದನ್ನು ಪರಿಶೀಲಿಸುವ ಕೆಲಸ, ಜನರ ಕಷ್ಟ ಭಾವನೆಗಳನ್ನು ಅರಿತು ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರಕಾರದ ಗುರಿ ಎಂಬುದು ಮುಖ್ಯಮಂತ್ರಿಗಳ ಹೇಳಿಕೆ. ಬಹಳ ಸಂತೋಷ.

ಹಿಂದೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜನರ ಸಂಕಷ್ಟಗಳನ್ನು ಪತ್ರಿಕೆಯ ಓದುಗರ ಓಲೆ ಅಂಕಣದ ಮೂಲಕ ವ್ಯಕ್ತಪಡಿಸುವಂತೆ ಜನತೆಗೆ ಕರೆ ನೀಡಿದ್ದರು. ಜೊತೆಗೆ ಪತ್ರಿಕೆಗಳಲ್ಲಿ ಬರುವ ಇಂತಹ ದೂರಿಗೆ ಅಧಿಕಾರಿಗಳು ತಪ್ಪದೇ ಸ್ಪಂದಿಸಬೇಕು ಎಂದು ಆದೇಶ ಹೊರಡಿಸಿದ್ದರು. ಆದರೆ ಆದೇಕೋ ನಿರೀಕ್ಷಿಸಿದಷ್ಟು ಫಲಕಾಣಲಿಲ್ಲ.

ಸರಕಾರವು ಗ್ರಾಹಕ ರಕ್ಷಣಾ ಇಲಾಖೆಯನ್ನು ತೆರೆದು ಜನರ ಸಂಕಷ್ಟಗಳಿಗೆ ನೆರವಾಗುವಂತೆ ಬಳಕೆದಾರರ ವೇದಿಕೆಗಳು ಹಲವು ವರ್ಷಗಳ ಹಿಂದೆಯೇ ಆಗ್ರಹಿಸಿದ್ದವು. ಅದು ನೆನೆಗುದಿಗೆ ಬಿದ್ದು ಇಂದಿಗೂ ಗ್ರಾಹಕ ಹಿತರಕ್ಷಣಾ ವಿಭಾಗದ ಹೊಣೆಯು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಅಧೀನದಲ್ಲೇ ಇದೆ. ಇದರಿಂದಾಗಿ ಗ್ರಾಹಕ ರಕ್ಷಣೆಯು ಅವಗಣನೆಗೆ ತುತ್ತಾಗಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಸ್ಥಳೀಯವಾಗಿ ಬಳಕೆದಾರರ ವೇದಿಕೆ ಎಂಬ ಪ್ರಜಾಹಿತದ ಸಂಸ್ಥೆಗಳು ಕೆಲಸ ಮಾಡುತ್ತಿದ್ದರೂ ಅದಕ್ಕೆ ಅನುದಾನವಿಲ್ಲದೆ ಸೊರಗಿ ಹೋಗಿರುವುದಲ್ಲದೆ ಕೆಲವೆಡೆ ಬಾಗಿಲು ಮುಚ್ಚಿವೆ. ಅಳಿದುಳಿದ ಕೆಲವು ವೇದಿಕೆಗಳು ಹಿರಿಯ ನಾಗರಿಕರ ಮಾರ್ಗದರ್ಶನದಲ್ಲಿ ಕೆಲವು ಉದಾರಿಗಳ ಆರ್ಥಿಕ ನೆರವಿನಲ್ಲಿ ನೊಂದ ಗ್ರಾಹಕರಿಗೆ ನೆರವಾಗುವಲ್ಲಿ ಕುಂಟುತ್ತಾ ಸಾಗಿವೆ.

ರಾಜ್ಯ ಸರಕಾರದ 21,799 ಪ್ರಕರಣಗಳು ಹೈಕೋರ್ಟ್ ನಲ್ಲಿ ಬಾಕಿ ಇವೆ. ಇವುಗಳನ್ನು ತ್ವರಿತವಾಗಿಇತ್ಯರ್ಥಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಹಿಂದಿನ ಮುಖ್ಯಮಂತ್ರಿಗಳು ಪ್ರಗತಿ ಪರಿಶೀಲನಾ ಸಭೆಯಲ್ಲಿ ನುಡಿದಿದ್ದರು. ಇವಿಷ್ಟು ಕೇವಲ ಸರಕಾರದ ಮುಂದಿರುವ ವ್ಯಾಜ್ಯ ಪ್ರಕರಣಗಳು. ದೇಶದ ಹಲವು ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು ಹಲವು ಲಕ್ಷಗಳು!

ನ್ಯಾಯದಾನವು ಎಷ್ಟು ವಿಳಂಬವಾಗಿರುತ್ತವೆ ಎಂದರೆ ಎಷ್ಟೋ ಪ್ರಕರಣಗಳಲ್ಲಿ ಕೋರ್ಟ್‌ಗಳಲ್ಲಿ ದಾವೆ ಹೂಡಿರುವ ವ್ಯಕ್ತಿಯು ಜೀವಂತವಾಗಿರುವಾಗ ಅದರ ಫಲ ಪ್ರಕಟವಾಗುವುದೇ ಇಲ್ಲ. ಆತ ಮರಣಿಸಿದ ಹಲವು ವರ್ಷಗಳ ನಂತರ ಪ್ರಕಟವಾಗುವುದಿದೆ. ಇದರಿಂದಾಗಿ ನ್ಯಾಯ ನಿರೀಕ್ಷೆಯ ಉದ್ದೇಶವೇ ಈಡೇರಿದಂತಾಗದೇ ನ್ಯಾಯಾಂಗದ ಮೇಲಿನ ವಿಶ್ವಾಸ ಕಡಿಮೆಯಾಗುವಂತಾಗಿದೆ.

ಇಂದು ಬಹುತೇಕ ಕೋರ್ಟ್‌ಗಳಲ್ಲಿ ಸಿಬ್ಬಂದಿ ಕೊರತೆ ಸರ್ವೇಸಾಮಾನ್ಯ. ಸಿಬ್ಬಂದಿ ಹಾಗೂ ಪೂರಕ ಸಲಕರಣೆಗಳಾದ ಜೆರಾಕ್ಸ್ ಯಂತ್ರ, ಇನ್ವರ್ಟರ್ ಮೊದಲಾದವುಗಳನ್ನು ಪೂರೈಸುವ ಮೂಲಕ ನ್ಯಾಯಾಲಯಗಳು ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸಿ ಜನಸಾಮಾನ್ಯರಿಗೆ ಶೀಘ್ರ ನ್ಯಾಯ ಒದಗಿಸುವಂತೆ ಆಗಬೇಕು. ಇದರ ಬಗ್ಗೆ ನಮ್ಮ ಜನಪ್ರತಿನಿಧಿಗಳೂ ಸರಕಾರದ ಮೇಲೆ ಒತ್ತಡ ತರದಿರುವುದು ಬೇಸರದ ಸಂಗತಿ. ಆದ್ದರಿಂದ ಇನ್ನಾದರೂ 'ಪ್ರಜಾಸೇವೆ ಇಲಾಖೆ'ಯನ್ನು ತೆರೆಯುವ ಜೊತೆಗೆ 'ಗ್ರಾಹಕ ಹಿತರಕ್ಷಣಾ ಕಾಯಿದೆ'ಯ ಅಧೀನದಲ್ಲಿ ಕೆಲಸ ಮಾಡುವ ಗ್ರಾಹಕ ಸ್ನೇಹಿ ಸಂಘ-ಸಂಸ್ಥೆಗಳನ್ನು ಈ ಇಲಾಖೆಯ ಅಧೀನದಲ್ಲಿ ತಂದು ಅವುಗಳಿಗೂ ಒಂದಷ್ಟು ಅನುದಾನ, ಅಧಿಕಾರ ನೀಡಿದಲ್ಲಿ ಜನಸಾಮಾನ್ಯರಿಗೆ ನೆರವಾಗಲಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಗಮನಹರಿಸಲಿ ಎಂದು ಹಾರೈಕೆ.

-ಎನ್.ರಾಮ ಭಟ್,
ವಿಶ್ವಸ್ಥರು, ಬಳಕೆದಾರರ ವೇದಿಕೆ, ಉಡುಪಿ

ಫುಟ್ಬಾಲ್: ಭಾರತವೆಲ್ಲಿ?

ವಿಶ್ವಕಪ್ ಫುಟ್ಬಾಲ್ ಈಗ ನಡೆಯುತ್ತಿದೆ. ಈ ಬಾರಿಯಂತೂ ಸ್ಪರ್ಧಿಸುತ್ತಿರುವ ರಾಷ್ಟ್ರಗಳ ಸಂಖ್ಯೆ 48ಕ್ಕೇರಿದ್ದು ಈವರೆಗೆ ಹೆಸರು ಕೇಳಿರದ ಕೆಲವು ರಾಷ್ಟ್ರಗಳೂ ಕಂಡುಬರುತ್ತಿವೆ. ಪುಟ್ಟ ಪುಟ್ಟ ರಾಷ್ಟ್ರಗಳೂ ವಿಶ್ವಕಪ್‌ನಲ್ಲಿ ಸ್ಪರ್ಧಿಸುತ್ತಿವೆ. ಬಹುತೇಕರು ಹೆಸರೇ ಕೇಳಿರದ ಕೇಪ್ ವರ್ದೆ ಎಂಬ ಹೆಸರಿನ ದೇಶವು ಬಲಿಷ್ಠ ಎರಡು ತಂಡಗಳೆದುರು ಡ್ರಾ ಸಾಧಿಸಿ ಅಚ್ಚರಿ ಮೂಡಿಸಿದೆ. ಕೇವಲ 6 ಲಕ್ಷ ಜನಸಂಖ್ಯೆ ಹೊಂದಿರುವ ದೇಶವಿದು. ಕುರಕಾವೋ, ಹೈಟಿ, ಕಾಂಗೋ, ಸೆನೆಗಲ್ ಮುಂತಾದ ದೇಶಗಳು ಕೂಡಾ ವಿಶ್ವಕಪ್‌ನಲ್ಲಿ ಉತ್ತಮ ನಿರ್ವಹಣೆ ನೀಡುತ್ತಿರುವುದು ಕಂಡುಬರುತ್ತಿದೆ.

ವಿವಿಧ ಕ್ರೀಡೆಗಳಲ್ಲಿ ವಿಶ್ವದರ್ಜೆಯ ಪ್ರದರ್ಶನ ನೀಡುವ ಭಾರತವು ಫುಟ್ಬಾಲಿನಲ್ಲಿ ಮಾತ್ರ ಈವರೆಗೆ ವಿಶ್ವಕಪ್‌ಗೆ ಏರದಿರುವುದು ದುರದೃಷ್ಟಕರ. ಫುಟ್ಬಾಲ್ ದೇಶಾದ್ಯಂತ ಜನಪ್ರಿಯತೆ ಹೊಂದಿಲ್ಲದಿರುವುದು ಕೂಡಾ ಇದಕ್ಕೆ ಕಾರಣವಾಗಿದೆ. ಭಾರತದಲ್ಲಿ ಗೋವಾ, ಪಶ್ಚಿಮ ಬಂಗಾಳ ಮತ್ತು ಕೇರಳ ಬಿಟ್ಟರೆ ಬೇರೆಡೆ ಫುಟ್ಬಾಲಿಗೆ ಹೆಚ್ಚು ಜನಪ್ರಿಯತೆ ಇಲ್ಲ.

ಜಾಗತಿಕವಾಗಿ ಅತ್ಯಂತ ಜನಪ್ರಿಯ ಕ್ರೀಡೆಯಾಗಿರುವ ಫುಟ್ಬಾಲ್ ನಲ್ಲಿ ಕೂಡಾ ಭಾರತವು ಪ್ರಸಿದ್ಧಿಗೆ ಬರಬೇಕಾಗಿದೆ. ಭಾರತದ ತಂಡವೂ ವಿಶ್ವಕಪ್ ಫುಟ್ಬಾಲಿನಲ್ಲಿ ಭಾಗವಹಿಸುವ ದಿನ ಬೇಗನೆ ಬರಲಿ.

-ಮನೋಹರ ಸಾಮಂತ್, ಬ್ರಹ್ಮಾವರ

ಸದಾ ಸುದ್ದಿಯಾಗಲು ಆರೆಸ್ಸೆಸ್ ಬಗ್ಗೆ ಮಾತನಾಡುವ ಪ್ರಿಯಾಂಕ್

ಬೆಂಗಳೂರು: ಪ್ರತಿದಿನ ಟಿವಿಯಲ್ಲಿ ಬರಲು, ಸದಾ ಸುದ್ದಿಯಲ್ಲಿರುವ ಉದ್ದೇಶದಿಂದ ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘ ಬಗ್ಗೆ ಮಾತನಾಡುತ್ತಾರೆ



ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಕ್ಷೇಪಿಸಿದ್ದಾರೆ. ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಗನಾದ ತಮ್ಮನ್ನು ಯಾರೂ ಮುಟ್ಟಲಾಗದು ಎಂಬ ಭಾವನೆ ಅವರದು. ಆರ್‌ಎಸ್‌ಎಸ್ ಅನ್ನು ಟೀಕಿಸುವುದನ್ನು ಬಿಟ್ಟು ನೀವೇನು ಮಾಡಿದ್ದೀರೆಂದು ಸ್ಪಷ್ಟಪಡಿಸಿ ಎಂದು ಆಗ್ರಹಿಸಿದರು.

ಹದಗೆಟ್ಟ ಕಾನೂನು- ಸುವ್ಯವಸ್ಥೆ ಕಡೆ ಗಮನ ಕೊಡದೇ ಅವರು ಕೇವಲ ಆರ್‌ಎಸ್‌ಎಸ್ ಬಗ್ಗೆ ಕಾಮೆಂಟ್ ಮಾಡುತ್ತ ಕೂತಿದ್ದಾರೆ. ಹಿಂದೆ ಅವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಅಲ್ಲಿಯೂ ಅವರ ಸಾಧನೆ ಶೂನ್ಯ. ಈಗ ಗೃಹ ಸಚಿವರಾಗಿ ಹೆಣ್ಮಕ್ಕಳ, ಗಂಡಸರ ನಾಪತ್ತೆ ವಿಚಾರದಲ್ಲಿ ಅವರು ಗಮನ ಕೊಡುವುದಿಲ್ಲ. ಒಂದೆಡೆ ತಂದೆಯ ಹಿಂದೆ ಅಡಗುವುದು, ನಿರಂತರ ಅಧಿಕಾರದಲ್ಲಿರುವ ಕುಟುಂಬದಿಂದ ಬಂದು ಬಲಿತರಾದರೂ ದಲಿತನೆಂಬ ನೆರಳನ್ನು ತೆಗೆದುಕೊಳ್ಳುತ್ತಾರೆ ಎಂದು ದೂರಿದರು. ಮೊದಲು ಪೊಲೀಸ್ ಇಲಾಖೆಯನ್ನು ತಹಬಂದಿಗೆ ತನ್ನಿ ಎಂದು ಶೋಭಾ ಕರಂದ್ಲಾಜೆ ಆಗ್ರಹಿಸಿದರು.

ಮೂಲಸೌಕರ್ಯ ನೀಡುತ್ತಿಲ್ಲ: ಬಿಡದಿ ಟೌನ್‌ಶಿಪ್ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಇದು ಕೇವಲ ಬಿಡದಿ ಟೌನ್‌ಶಿಪ್ ವಿಷಯ ಅಲ್ಲ; ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆಗಳನ್ನು ಮಾಡಲಾಗಿದೆ. ಎಲ್ಲಿಗೂ ಮೂಲ ಸೌಕರ್ಯ ನೀಡಿಲ್ಲ. ಇದರಿಂದ ನಿವೇಶನ ಪಡೆದವರು 10 ವರ್ಷವಾದರೂ ಬಂದಿಲ್ಲ, ಮನೆ ಕಟ್ಟಿಲ್ಲ; ಅವರಿಗೆ ಇನ್ನೊಂದು ಕಡೆ ನಿವೇಶನ ಇರಬೇಕು ಎಂದರು. ಇದರ ಸಮಸ್ಯೆ ಪರಿಹರಿಸಲು ನೀವು ಮುಂದಾಗಬೇಕು. ತರುವಾಯ ಹೊಸದರ ಯೋಚನೆ ಮಾಡಿ ಎಂದು ಒತ್ತಾಯಿಸಿದರು. ಬೆಂಗಳೂರಿನಲ್ಲಿ ವಿದ್ಯುತ್, ನೀರು, ಕಸದ ಸಮಸ್ಯೆ ಇದೆ. ಬಿಲ್ ಜಾಸ್ತಿ ಮಾಡುತ್ತೀರಿ ಎಂದು ಶೋಭಾ ಕರಂದ್ಲಾಜೆ ಆಗ್ರಹಿಸಿದರು.



ಸೋಮವಾರ ಸಂಜೆ ಲಿಂಗೈಕ್ಯರಾದ ಕನಕಪುರ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿಗಳ ಪಾರ್ಥಿವ ಶರೀರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೇಗುಲ ಮಠದ ಆವರಣದಲ್ಲಿ ಮಂಗಳವಾರ ಅಂತಿಮ ನಮನ ಸಲ್ಲಿಸಿ ಕಿರಿಯ ಸ್ವಾಮೀಜಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು.

ನೀರು ಬಿಡುವುದು ಕಷ್ಟಕರ: ಸತೀಶ

ಬೆಳಗಾವಿ: ನೆರೆ ರಾಜ್ಯ ಮಹಾರಾಷ್ಟ್ರದಲ್ಲಿಯೂ ತೀವ್ರ ನೀರಿನ ಅಭಾವ ಉಂಟಾಗಿರುವುದರಿಂದ ಅಲ್ಲಿಂದ ನೀರು ಬಿಡುವುದು ಕಷ್ಟಕರ. ಈ ಬಗ್ಗೆ ಮಹಾರಾಷ್ಟ್ರ ರಾಜ್ಯದ ಅಧಿಕಾರಿಗಳು ಈಗಾಗಲೇ



ತಮ್ಮ ಅಸಮರ್ಥತೆ ತಿಳಿಸಿರುವುದಾಗಿ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ವರ್ಷ ಮಾತ್ರವಲ್ಲದೆ ಹಿಂದಿನ ವರ್ಷಗಳಲ್ಲಿಯೂ ರಾಜ್ಯ ಸರ್ಕಾರ ಮನವಿ ಸಲ್ಲಿಸಿದ್ದರೂ ಮಹಾರಾಷ್ಟ್ರದಿಂದ ನಿರೀಕ್ಷಿತ ಪ್ರಮಾಣದಲ್ಲಿ ನೀರು ಬಿಡುಗಡೆಗೊಂಡಿಲ್ಲ. ಕೊಯ್ನಾ ಜಲಾಶಯ ಭರ್ತಿಯಾಗಿದ್ದ ಸಂದರ್ಭಗಳಲ್ಲಿಯೂ ನೀರು ಬಿಡಲು ಮಹಾರಾಷ್ಟ್ರ ಸರ್ಕಾರ ಮುಂದಾಗಿರಲಿಲ್ಲ ಎಂದು ತಿಳಿಸಿದರು.

ಪ್ರಸ್ತುತ ಮಹಾರಾಷ್ಟ್ರದಲ್ಲಿಯೂ ನೀರಿನ ಅಭಾವ ಇರುವುದರಿಂದ ಅಲ್ಲಿನ ಅಧಿಕಾರಿಗಳು ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ ಎಂದು ಈಗಾಗಲೇ ತಿಳಿಸಿದ್ದಾರೆಂದು ಹೇಳಿದರು.

ಬೆಳಗಾವಿ ನಗರದಲ್ಲಿ ಮುಂದಿನ 2 ತಿಂಗಳಿಗೆ ಸಾಕಾಗುವಷ್ಟು ಕುಡಿಯುವ ನೀರಿನ ಸಂಗ್ರಹ ಲಭ್ಯವಿದ್ದು, ಸಾರ್ವಜನಿಕರು ಯಾವುದೇ ರೀತಿಯ ಆತಂಕ ಪಡುವ ಅಗತ್ಯವಿಲ್ಲ. ನೀರಿನ ಕೊರತೆ ಎದುರಾಗುವ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದ ಸಚಿವರು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಸಮರ್ಪಕವಾಗಿ ನಡೆಯುವಂತೆ ಈಗಾಗಲೇ ಗ್ರಾಮ ಪಂಚಾಯಿತಿಗಳಿಗೆ ಸೂಚನೆ ನೀಡಲಾಗಿದೆ ಎಂದರು. ಸಚಿವ ಸಂಪುಟ ವಿಸ್ತರಣೆ ಹಾಗೂ ಮಂತ್ರಿ ಸ್ಥಾನಗಳ ಕುರಿತು ಮಾತನಾಡಿದ ಅವರು, ರಾಜಕೀಯದಲ್ಲಿ ಎಲ್ಲರೂ ಸಚಿವ ಸ್ಥಾನ ಬಯಸುವುದು ಸಹಜ. ಆದರೆ, ಎಲ್ಲರಿಗೂ ಅವಕಾಶ ದೊರೆಯುವುದಿಲ್ಲ. ಬೆಳಗಾವಿ ಜಿಲ್ಲೆಗೆ ಒಂದು ಸಚಿವ ಸ್ಥಾನ ಖಚಿತವಾಗಿದ್ದು, ಹೆಚ್ಚುವರಿ ಸ್ಥಾನ ನೀಡುವ ಅಥವಾ ನೀಡದಿರುವ ನಿರ್ಧಾರ ಹೈಕಮಾಂಡ್‌ಗೆ ಸೇರಿದೆ ಎಂದು ತಿಳಿಸಿದರು.

ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡುವ ಭರವಸೆಯ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕಿರುಸುದ್ದಿ

ಕಾಂಗ್ರೆಸ್‌ಗೆ ಬುದ್ಧಿವಾದದ ಅವಶ್ಯಕತೆ ಇಲ್ಲ: ಖಾದರ್

ಮಂಗಳೂರು: ಕಾಂಗ್ರೆಸ್‌ಗಾಗಿ ಕೆಲಸ ಮಾಡದವರಿಗೆ ಪಕ್ಷದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ಸ್ಪಷ್ಟಪಡಿಸಿದ್ದಾರೆ. ಮಂಗಳೂರಿನಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷಕ್ಕೆ ದುಡಿದವರು ಮಾತ್ರ ಪಕ್ಷದ ಬಗ್ಗೆ ಮಾತನಾಡಲಿ. ಬೇರೆ ಬೇರೆ ಹೆಸರು ಇಟ್ಟುಕೊಂಡು, ಸೂಚಿಸುತ್ತಾರೆ ಎಂದು ಹೇಳಿಕೊಂಡು ಬರುವುದು ಬೇಡ. ಕಾಂಗ್ರೆಸ್‌ಗೆ ಅಂಥವರ ಬುದ್ಧಿವಾದದ ಅವಶ್ಯಕತೆಯೂ ಇಲ್ಲ. ಪಕ್ಷವನ್ನು ವಿರೋಧ ಮಾಡಿದವರು ಇಂದು ಪಕ್ಷಕ್ಕೆ ನಿರ್ದೇಶನ ಕೊಡುವ ಅಗತ್ಯ ಇಲ್ಲ ಎಂದರು. ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತರಿಗೆ ಸಚಿವ ಸ್ಥಾನ ಮಾತ್ರ ಅಲ್ಲ, ಎಲ್ಲವನ್ನೂ ಕೊಟ್ಟಿದೆ. ಜಮೀರ್ ಅಹ್ಮದ್ ಸೇರಿದಂತೆ ಹಲವು ಮಂದಿ ಎಲ್ಲರೂ ಒಟ್ಟಿಗೆ ಇದ್ದೇವೆ. ಪಕ್ಷದ ಅಧ್ಯಕ್ಷರು, ಸಿಎಂ ಎಲ್ಲ ಸೇರಿ ಅಲ್ಪಸಂಖ್ಯಾತರಿಗೆ ಅವಕಾಶ ಕೊಡುತ್ತಾರೆ. ರಾಜಕೀಯವಾಗಿ ಇಷ್ಟೆಲ್ಲ ಬಗೆಹರಿಸಲು ಯತ್ನಿಸುವ ಕಾಂಗ್ರೆಸ್ ಮತ ಹಾಕದವರನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಖಾದರ್ ಹೇಳಿದರು.

ಮೂವರ ಆತ್ಮಹತ್ಯೆ ಪ್ರಕರಣ: ಆರೋಪಿ ಬಂಧನ

ಮೈಸೂರು: ಜಿಲ್ಲೆಯ ತಿ.ನರಸೀಪುರ ತಾಲೂಕಿನ ಹಳೆಕೆಂಪಯ್ಯನ ಹುಂಡಿ ಗ್ರಾಮದಲ್ಲಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಆರೋಪಿ ಉಲ್ಲಾಸ್‌ಗೌಡನನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆ ಬಳಿಕ ತಲೆಮರೆಸಿಕೊಂಡಿದ್ದ ಉಲ್ಲಾಸ್ ಗೌಡನ ಬಂಧನಕ್ಕೆ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ವಿಶೇಷ ತಂಡ ರಚಿಸಿದ್ದರು. ಇನ್ಸ್‌ಪೆಕ್ಟರ್ ಧನಂಜಯ್, ಶಿವಾನಂದ ಶೆಟ್ಟಿ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ಮೈಸೂರಿನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ ಬೆಂಗಳೂರಿಗೆ ಪರಾರಿಯಾಗಲು ಯತ್ನಿಸಿದಾಗ ಖಚಿತ ಮಾಹಿತಿ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು ಆತನನ್ನು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು. ನ್ಯಾಯಾಧೀಶರ ಆದೇಶದ ಮೇರೆಗೆ ಈಗ ಉಲ್ಲಾಸ್‌ಗೌಡನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ರಾಗಿ ಸಂಸ್ಕರಣೆಗೆ ಪಿಎಂಎಫ್‌ಎಂಇ ಬೆಂಬಲ

ಬೆಂಗಳೂರು: ಪಿಎಂಎಫ್‌ಎಂಇ ಯೋಜನೆಯಡಿಯಲ್ಲಿ ಕರ್ನಾಟಕವು 3,500 ರಾಗಿ ಸಂಸ್ಕರಣಾ ಘಟಕಗಳು ಮತ್ತು 10,500ಕ್ಕೂ ಹೆಚ್ಚು ಸೂಕ್ಷ್ಮ ಆಹಾರ ಉದ್ಯಮಗಳಿಗೆ ಬೆಂಬಲ ನೀಡುತ್ತದೆ ಎಂದು ಕರ್ನಾಟಕ ಕೃಷಿ ಸಂಸ್ಕರಣೆ ಮತ್ತು ರಫ್ತು ನಿಗಮ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವ ಪ್ರಕಾಶ್ ಹೇಳಿದರು. ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿ (ಬಿಸಿಐಸಿ) ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ಕೃಷಿ-ಆಹಾರ ಸಂಸ್ಕರಣೆಯನ್ನು ಮರುಕಲ್ಪಿಸುವುದು: ಎಐ ಮತ್ತು ರೊಬೊಟಿಕ್ಸ್ ಕ್ರಾಂತಿ ಕುರಿತ ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿಯವರ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಯೋಜನೆಯ ಮೂಲಕ ಕರ್ನಾಟಕವು ಉದ್ಯಮಿಗಳು, ಉತ್ಪಾದಕರ ಸಾಮೂಹಿಕ ಮತ್ತು ಆಹಾರ ಸಂಸ್ಕರಣಾ ಉದ್ಯಮಗಳನ್ನು ಬೆಂಬಲಿಸುವಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಿದರು.

ಬಿಸಿಐಸಿ ಅಧ್ಯಕ್ಷ ಪ್ರಶಾಂತ್ ಗೋಖಲೆ ಮಾತನಾಡಿ, ಭಾರತವು ಆಹಾರ ಸ್ವಾವಲಂಬನೆಯನ್ನು ಮೀರಿ ಜಾಗತಿಕ ಆಹಾರ ಶಕ್ತಿ ಕೇಂದ್ರವಾಗಿ ತನ್ನನ್ನು ತಾನು ಸ್ಥಾನಮಾನ ಮಾಡಿಕೊಳ್ಳಬೇಕು. ಭಾರತ ಇಂದು ಸುಮಾರು 350 ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸುತ್ತದೆ ಮತ್ತು 1.5 ಬಿಲಿಯನ್ ಜನರಿಗೆ ಸ್ವಾವಲಂಬನೆಯನ್ನು ಸಾಧಿಸಿದೆ ಎಂದರು.

ತೆಂಗಿನ ನಾರಿನ ಅಭಿವೃದ್ಧಿ ನಿಗಮದಿಂದ ಮಹಿಳೆಯರಿಗೆ ಉದ್ಯೋಗ

ಆರ್ಥಿಕತೆಗೆ ತೆಂಗಿನ ಬಲ

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮವು ತೆಂಗಿನ ನಾರಿನ ಉತ್ಪನ್ನಗಳಾದ ಹುರಿ, ಮ್ಯಾಟ್, ಕಾರಿಡಾರ್ ಮ್ಯಾಟ್, ಹಾಸಿಗೆ, ದಿಂಬು, ಡೆಸ್‌ಕಾರ್ಟ್‌ಗಳನ್ನು ಉತ್ಪಾದಿಸುತ್ತಾ ಗ್ರಾಮೀಣ ಪ್ರದೇಶದಲ್ಲಿ ಪ್ರಮುಖವಾಗಿ ಮಹಿಳೆಯರಿಗೆ ಉದ್ಯೋಗ ನೀಡುತ್ತಿದೆ ಎಂದು ನಿಗಮದ ಅಧ್ಯಕ್ಷ ನಟರಾಜ್ ಜಾನಕಿರಾಮ್ ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಗ್ರಾಮೀಣ ಆರ್ಥಿಕತೆಗೆ ಬಲ ನೀಡುವ ನಿಟ್ಟಿನಲ್ಲಿ ಹಾಗೂ ಮಹಿಳಾ ಸಬಲೀಕರಣದ ಆಶಯದೊಂದಿಗೆ ನಿಗಮದ 35 ಉತ್ಪಾದನಾ ಘಟಕಗಳಲ್ಲಿ, ಮುಖ್ಯಮಂತ್ರಿಗಳ ಆಶಯದಂತೆ, ಹಸ್ತಚಾಲಿತ ಮ್ಯಾಟ್ ಫ್ರೇಮ್ ಬಳಸಿ ಸುಮಾರು 700 ಗ್ರಾಮೀಣ ಉದ್ಯೋಗ ಸೃಷ್ಟಿಸಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ನಿಗಮವು ಪರಿಸರ ಸ್ನೇಹಿ ಮತ್ತು ಆಕರ್ಷಕ ತೆಂಗಿನ ನಾರಿನ ಮ್ಯಾಟ್‌ಗಳು ಹಾಗೂ ವೈವಿಧ್ಯಮಯ ಉತ್ಪನ್ನಗಳ ಮಾರಾಟ ಹೆಚ್ಚಿಸಲು ಸಮರೋಪಾದಿಯಲ್ಲಿ ಕ್ರಮವಹಿಸಲಾಗುತ್ತಿದೆ. ಈಗಾಗಲೇ ದೆಹಲಿಯ ತೆಂಗಿನ ನಾರಿನ ಉತ್ಪನ್ನಗಳ ಸರಬರಾಜು ವಾಹನಕ್ಕೆ ಮುಖ್ಯಮಂತ್ರಿಗಳು ಹಾಗೂ ಜೈಪುರಕ್ಕೆ ತೆರಳುವ ಸರಬರಾಜು ವಾಹನಕ್ಕೆ ಮುಖ್ಯ ಕಾರ್ಯದರ್ಶಿಗಳು ಹಸಿರು ನಿಶಾನೆ ನೀಡಿದ್ದು, ನಿಗಮವು ಜೈಪುರದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಒಂದು ಮಳಿಗೆಯನ್ನು ತೆರೆಯಲಾಗಿದೆ ಎಂದು ಜಾನಕಿರಾಮ್ ತಿಳಿಸಿದರು.

ಮುಂದುವರೆದು ಕಪೆಕ್ ಅನುಮೋದಿತ ಮೆ. ಶ್ರೀಸಾಸ್ತಿ ಅರೋಮಾ ಪ್ರೈ.ಲಿ., ಮಾಲ್ಗುಡಿ ಅಮೃತ್ ಚಹಾ ಬ್ರಾಂಡ್ ಮಾಲೀಕರು, ನಿಗಮದ ಗ್ರಾಮೀಣ ಮಹಿಳೆಯರಿಂದ ತಯಾರಿಸಲ್ಪಟ್ಟ ಮ್ಯಾಟ್‌ಗಳನ್ನು ತಮ್ಮ ಚಹಾ ಮಳಿಗೆಯ 89 ಶಾಖೆಗಳಲ್ಲಿ ಪ್ರದರ್ಶನ ಹಾಗೂ ಮಾರಾಟ ಮಾಡಲು ಇಟ್ಟಿರುತ್ತಾರೆ. ಇವರಿಗೆ ಅಗತ್ಯವಿರುವ ಪ್ರದರ್ಶನದ ಫ್ರೇಮ್‌ಗಳನ್ನು ಮತ್ತು ಮ್ಯಾಟ್‌ಗಳನ್ನು ಮೆ. ವೀಣಾ ಶಿವಪ್ಪ ರೈ ಸಿವಿಲ್ ಇನ್ಫ್ರಾ ಪ್ರೈ.ಲಿ. ರವರು ಪ್ರಾಯೋಜಕತ್ವ ಮಾಡಲಿದ್ದಾರೆ ಎಂದು ತಿಳಿಸಿದರು.

ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ನಿಗಮದ ಫ್ರೇಮ್ ಮತ್ತು ಮ್ಯಾಟ್‌ಗಳ ಮಾರಾಟ ಹಾಗೂ ಪ್ರದರ್ಶನಕ್ಕೆ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಚಾಲನೆ ನೀಡಿದರು. ಈ ವೇಳೆ ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರಾದ ನಟರಾಜ್ ಜಾನಕಿರಾಮ್, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ಅಧ್ಯಕ್ಷ ಡಾ. ಬಿ.ಸಿ. ಮುದ್ದುಗಂಗಾಧರ್, ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್ ಅಧ್ಯಕ್ಷ ಸಯೀದ್ ಅಹಮದ್, ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಸಿ.ಎನ್. ಶಿವಪ್ರಕಾಶ್, ಸೇರಿದಂತೆ ಉದ್ದಿಮೆದಾರರು ಉಪಸ್ಥಿತರಿದ್ದರು.



ಇ-ಕಾಮರ್ಸ್‌ಗೆ ತೆಂಗಿನ ನಾರಿನ ಅಭಿವೃದ್ಧಿ ನಿಗಮ ಲಗ್ಗೆ

ತೆಂಗಿನ ನಾರಿನ ಉತ್ಪನ್ನಗಳನ್ನು ಖರೀದಿಸುವಂತೆ ರಾಜ್ಯದ ಪ್ರಮುಖ ಮಠಾಧೀಶರು ಮತ್ತು ಕಲಾವಿದ ಸುರೇಶ ಹೆಬ್ಳಿಕರ್ ಅವರೂ ಕರೆ ನೀಡಿದ್ದು, ನಿಗಮದ ಉತ್ಪನ್ನಗಳ ಮಾರಾಟ ಹೆಚ್ಚಿಸಲು coirkarnataka.in ವೆಬ್‌ಸೈಟ್ ಸಿದ್ಧಪಡಿಸಿ ಇದರೊಂದಿಗೆ ಖಾಸಗಿ ಸಹಭಾಗಿತ್ವದಲ್ಲಿ ಡಿಜಿಟಲ್ ಮಾರಾಟ ಸಹಯೋಗದೊಂದಿಗೆ MoU ಮಾಡಿಕೊಂಡು ಇ-ಕಾಮರ್ಸ್ website coirempower.comನ್ನು ಸಿದ್ಧಪಡಿಸಲಾಗಿದೆ. ಕರ್ನಾಟಕ ಸೇರಿದಂತೆ ಹೊರ ರಾಜ್ಯಗಳಾದ ನವದೆಹಲಿ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಸಂಗ್ರಹಕಾರರು ಹಾಗೂ ಮಾರಾಟ ಏಜೆಂಟ್‌ರನ್ನು ನೇಮಿಸಲಾಗಿದೆ ಎಂದು ತಿಳಿಸಿದರು.

ಕೈ ಮತ್ತಷ್ಟು ಬಲಿಷ್ಠ: ಬಿ.ಕೆ.ಹರಿಪ್ರಸಾದ್

ಮಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ದ.ಕ.ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದೀಗ ಡಿಕೆಶಿ ನೇತೃತ್ವದ ಸರ್ಕಾರದ 2.0 ಇನ್ನಿಂಗ್ಸ್ ಶುರುವಾಗಿದೆ. ಇದರೊಂದಿಗೆ ಪಕ್ಷವನ್ನು ಬಲಪಡಿಸುವ ಕಾರ್ಯವೂ ನಡೆಯಲಿದೆ ಎಂದರು. ಕರಾವಳಿ ಸೇರಿದಂತೆ ರಾಜ್ಯಾದ್ಯಂತ ಶಾಂತಿ, ಸುವ್ಯವಸ್ಥೆ ಶೇ.99ರಷ್ಟು ನೆಲೆಸಿದೆ. ಮಾಜಿ ಸಿಎಂ ಸಿದ್ದರಾಮಯ್ಯ ಕೂಡ ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟ ಮಾಡುತ್ತೇನೆ ಎಂದಿದ್ದರು.

ಶರಣ, ಬಸವಣ್ಣ, ಅಕ್ಕಮಹಾದೇವಿಯ ಈ ನಾಡಿನಲ್ಲಿ ಹಿಂಸೆಗೆ ಎಂದೂ ಅವಕಾಶ ಇರುವುದಿಲ್ಲ. ಕಳೆದ ಒಂದು ವರ್ಷದಿಂದ ಯಾವುದೇ ಅಹಿತಕರ ಘಟನೆಗಳು ನಡೆಯದೇ ಇರುವುದು ದೊಡ್ಡ ಸಾಧನೆಯಾಗಿದೆ ಎಂದು ಅವರು ಹೇಳಿದರು.

ಮತದಾರರ ಸಮಗ್ರ ವಿಶೇಷ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಕುರಿತಂತೆ ಕಾಂಗ್ರೆಸ್ ಪಕ್ಷದಿಂದ ಬಿಎಲ್‌ಎ 2 ನೇಮಕ ನಡೆಸಲಾಗಿದೆ. ಜೂ. 30ರಿಂದ ಗಣತಿ ಆರಂಭವಾದಾಗ ಇವರೆಲ್ಲರೂ ಗಣತಿದಾರರ ಜೊತೆ ಮನೆ ಮನೆಗಳಿಗೆ ತೆರಳಲಿದ್ದಾರೆ. ಮತಪಟ್ಟಿಗಳ ಪರಿಷ್ಕರಣೆಗೆ




> ಬಡವರು, ಹಿಂದುಳಿದವರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟು ಹೋದರೆ ಅವರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಲಿದ್ದಾರೆ. ಸರ್ಕಾರದ ಸೌಲಭ್ಯಗಳಿಗೆ ಫಲಾನುಭವಿಗಳ ಹೆಸರು ಮತದಾರರ ಪಟ್ಟಿಯಲ್ಲಿ ಇರಬೇಕಾದ್ದು ಕಡ್ಡಾಯ. ಕಾಂಗ್ರೆಸ್ ಎಸ್‌ಐಆರ್‌ಗೆ ವಿರೋಧಿಯಲ್ಲ.
> ■ **ಬಿ.ಕೆ.ಹರಿಪ್ರಸಾದ್**, ಕೆಪಿಸಿಸಿ ಅಧ್ಯಕ್ಷ

ಸಹಕಾರಿಯಾಗಲಿದ್ದಾರೆ ಎಂದು ಹರಿಪ್ರಸಾದ್ ಹೇಳಿದರು.

ದಿಲ್ಲಿಯಿಂದ ಜಿಲ್ಲಾಧ್ಯಕ್ಷರ ಆಯ್ಕೆ: ರಾಜ್ಯದಲ್ಲಿ ಖಾಲಿ ಇರುವ ಜಿಲ್ಲೆಗಳಲ್ಲಿ ಪಕ್ಷದ ಜಿಲ್ಲಾಧ್ಯಕ್ಷರ ಆಯ್ಕೆ ಕುರಿತಂತೆ ಹೊಸ ಮಾನದಂಡ ರೂಪಿಸಲಾಗಿದೆ. ಈ ಹಿಂದೆ ಕೆಪಿಸಿಸಿ ಮತ್ತು ಡಿಸಿಸಿ ಪದಾಧಿಕಾರಿಗಳು ಜಿಲ್ಲಾಧ್ಯಕ್ಷರ ಆಯ್ಕೆ ನಡೆಸುತ್ತಿದ್ದರು. ಈಗ ಎಐಸಿಸಿ ವತಿಯಿಂದ ವೀಕ್ಷಕರು ಆಗಮಿಸಿ ಒಂದು ವಾರ ಕಾಲ ಆಯಾ ಜಿಲ್ಲೆ ಹಾಗೂ ಬ್ಲಾಕ್‌ಗಳಿಗೆ ತೆರಳಿ ಅಭಿಪ್ರಾಯ ಸಂಗ್ರಹಿಸುತ್ತಾರೆ. ಜಿಲ್ಲೆಯಿಂದ ಕನಿಷ್ಠ 2ರಿಂದ 6 ಹೆಸರುಗಳನ್ನು ದಿಲ್ಲಿಗೆ ಕಳುಹಿಸಬೇಕು. ಅಲ್ಲಿಂದಲೇ ಜಿಲ್ಲಾಧ್ಯಕ್ಷರ ಆಯ್ಕೆ ನಡೆಯಲಿದೆ ಎಂದು ಉತ್ತರಿಸಿದರು.

ಆತ್ಮನಿರ್ಭರ ಕಾರ್ಯಾಗಾರ



ಬೆಂಗಳೂರು: ರಕ್ಷಣಾ ವಲಯದ ಉತ್ಪಾದನೆಯಲ್ಲಿ ಭಾರತದ ಆತ್ಮನಿರ್ಭರ ಯೋಜನೆಗೆ ಸಂಬಂಧಿಸಿದ ಮಹತ್ವದ ಕಾರ್ಯಾಗಾರ ಮಂಗಳವಾರ ಖನಿಜ ಭವನದಲ್ಲಿ ನಡೆಯಿತು.

ಈ ಮುಕ್ತ ಸಂವಾದದಲ್ಲಿ ಕರ್ನಾಟಕದ ಸಾಮರ್ಥ್ಯಕ್ಕೆ ಪೂರಕವಾಗಿ ದೀರ್ಘಾವಧಿಯ ಏರೋಸ್ಪೇಸ್ ಮತ್ತು ರಕ್ಷಣಾ ನೀತಿ ರೂಪಣೆ, ಏಕಗವಾಕ್ಷಿ ವ್ಯವಸ್ಥೆಸಹಿತ ನೆರವು ಘಟಕ, ಉತ್ಪಾದನಾ ಕ್ಲಸ್ಟರ್‌ಗಳ ಅಭಿವೃದ್ಧಿ, ರಕ್ಷಣಾ ಪರೀಕ್ಷಾ ಕೇಂದ್ರ ಸ್ಥಾಪನೆ, ಸಣ್ಣ ಮತ್ತು ಮಧ್ಯಮ ಸ್ವರೂಪದ ಉದ್ಯಮಗಳ ಬಲವರ್ಧನೆ, ಬೆಂಗಳೂರು ಮೈಸೂರು ಬೆಳಗಾವಿ ರಕ್ಷಣಾ ಕಾರಿಡಾರ್ ಸ್ಥಾಪನೆ, ಇದಕ್ಕೆ ಬೆಂಬಲವಾಗಿ ಪ್ಲೇ ಅಂಡ್ ಪ್ಲಗ್ ಮಾದರಿಯಲ್ಲಿ ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆ, ಉತ್ಕೃಷ್ಟತಾ ಕೇಂದ್ರಗಳ ಆರಂಭ ಸೇರಿದಂತೆ ಇನ್ನಿತರೆ ವಿಚಾರ ವಿನಿಮಯ ನಡೆಸಲಾಯಿತು.

ಕಾರ್ಯಾಗಾರಕ್ಕೆ ಚಾಲನೆ ನೀಡಿದ ಐಟಿ ಇಲಾಖೆಯ ಕಾರ್ಯದರ್ಶಿ ಡಾ.ಎನ್.ಮಂಜುಳಾ ಮಾತನಾಡಿ, ರಾಜ್ಯವು ರಕ್ಷಣೆ ಮತ್ತು ವೈಮಾಂತರಿಕ್ಷ ವಲಯಗಳಲ್ಲಿ ಅಗ್ರಸ್ಥಾನದಲ್ಲಿರುವುದರಿಂದ ಇದಕ್ಕೆ ಅಗತ್ಯವಿರುವ ನೀತಿಯನ್ನು ರೂಪಿಸುವ ಹೊಣೆಗಾರಿಕೆಯ ನೇತೃತ್ವವನ್ನು ಕರ್ನಾಟಕಕ್ಕೆ ವಹಿಸಲಾಗಿದೆ ಎಂದರು. ಕೇಂದ್ರ ರಕ್ಷಣಾ ಮತ್ತು ಕೌಶಲ್ಯಾಭಿವೃದ್ಧಿ ಸಚಿವಾಲಯ, ರಾಜ್ಯ ಸರಕಾರದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಐಟಿ ಇಲಾಖೆ ಹಾಗೂ ರಕ್ಷಣಾ ವಲಯದ ಸಾರ್ವಜನಿಕ ಉದ್ದಿಮೆಗಳಾಗಿರುವ ಎಚ್‌ಎಎಲ್, ಬಿಡಿಎಲ್, ಬಿಇಎಂಎಲ್, ಜತೆಗೆ ರಕ್ಷಣಾ ವಲಯದ ಮುಂಚೂಣಿ ಉದ್ದಿಮೆಗಳ ಉನ್ನತ ಮಟ್ಟದ ಅಧಿಕಾರಿಗಳು ಮತ್ತು ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರವಾಸೋದ್ಯಮ ಇಲಾಖೆಯಿಂದ ನಮ್ಮ ಗೈಡ್ ಆನ್‌ಲೈನ್ ವೇದಿಕೆ

ಪ್ರವಾಸಿಗರಿಗೆ ವಿಶ್ವದರ್ಜೆಯ ಸೌಲಭ್ಯ

ಬೆಂಗಳೂರು: ಪ್ರವಾಸಿಗರಿಗೆ ವಿಶ್ವದರ್ಜೆಯ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ನಮ್ಮ ಗೈಡ್ ಎಂಬ ಹೆಸರಿನಲ್ಲಿ ನೂತನ ಆನ್‌ಲೈನ್ ವೇದಿಕೆಯನ್ನು ಸಿದ್ಧಪಡಿಸಲು ಪ್ರವಾಸೋದ್ಯಮ ಇಲಾಖೆ ಚಿಂತನೆ ನಡೆಸಿದೆ.



ಈ ಕುರಿತು ಮಾಹಿತಿ ನೀಡಿದ ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್, ಪ್ರಸ್ತುತ ವಿದೇಶಗಳಲ್ಲಿ ಪ್ರವಾಸಿಗರು ತಮಗೆ ಬೇಕಾದ ಗೈಡ್‌ಗಳನ್ನು ಆನ್‌ಲೈನ್ ಮೂಲಕವೇ ಕಾಯ್ದಿರಿಸುವ ವ್ಯವಸ್ಥೆಗಳಿವೆ. ಇದೇ ಮಾದರಿಯ ಅತ್ಯಾಧುನಿಕ ಆನ್‌ಲೈನ್ ವೇದಿಕೆಯನ್ನು ರಾಜ್ಯದಲ್ಲೂ ಪ್ರಾರಂಭಿಸುವುದು ಇಲಾಖೆ ಪ್ರಮುಖ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಹೊಸದೊಂದು ವೆಬ್‌ಸೈಟ್ ಹಾಗೂ ಆ್ಯಪ್ ರಚಿಸಲು ಮುಂದಾಗಿದೆ ಎಂದರು.

ರಾಜ್ಯದ ಯಾವುದೇ ಪ್ರವಾಸಿ ತಾಣಕ್ಕೆ ಭೇಟಿ ನೀಡುವ ದೇಶ ವಿದೇಶಗಳ ಪ್ರವಾಸಿಗರಿಗೆ ಆಯಾ ಪ್ರದೇಶದ ಇತಿಹಾಸ, ಸಂಸ್ಕೃತಿ, ಮಹತ್ವದ ಬಗ್ಗೆ ನಿಖರ ಮಾಹಿತಿ ನೀಡುವಲ್ಲಿ ಸ್ಥಳೀಯ ಗೈಡ್‌ಗಳ ಸೇವೆ ಅತ್ಯಂತ ಪ್ರಮುಖವಾಗಿದೆ. ಈ ನೂತನ ಆನ್‌ಲೈನ್ ವೇದಿಕೆಯಿಂದ ಪ್ರವಾಸಿಗರಿಗೆ ಸ್ಥಳೀಯ ಗೈಡ್‌ಗಳನ್ನು ಸುಲಭವಾಗಿ ಸಂಪರ್ಕಿಸಲು, ಪ್ರವಾಸಿ ತಾಣಗಳನ್ನು ಸರಿಯಾಗಿ ಹಾಗೂ ಅರ್ಥಪೂರ್ಣವಾಗಿ ವೀಕ್ಷಿಸಲು ಅನುಕೂಲವಾಗಲಿದೆ ಎಂದು ಸಚಿವರು ತಿಳಿಸಿದರು.

ಅಲ್ಲದೆ, ಪ್ರವಾಸಿ ಸ್ಥಳಗಳ ಸ್ವಚ್ಛತೆ ಕಾಪಾಡುವಲ್ಲಿ ಹಾಗೂ ಅವುಗಳ ಸಮರ್ಪಕ ನಿರ್ವಹಣೆಯಲ್ಲಿ ಗೈಡ್‌ಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಇದು ಸಹಕಾರಿಯಾಗಲಿದೆ. ಹಾಗೆಯೇ, ಇದರಿಂದ ಈಗಾಗಲೇ ಪ್ರವಾಸೋದ್ಯಮ ಇಲಾಖೆಯಲ್ಲಿ ನೋಂದಣಿಯಾಗಿರುವ ಗೈಡ್‌ಗಳಿಗೆ ಹೆಚ್ಚಿನ ಕೆಲಸವೂ ದೊರೆಯಲಿದೆ.

> ವಿದೇಶಗಳ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಪ್ರವಾಸಿಗರು ಸುಲಭವಾಗಿ, ಪಾರದರ್ಶಕವಾಗಿ ಗೈಡ್‌ಗಳ ಸೇವೆಯನ್ನು ಪಡೆಯಲು ಅನುವಾಗುವಂತೆ ನಮ್ಮ ಗೈಡ್ ವೆಬ್‌ಸೈಟ್ ಹಾಗೂ ಆ್ಯಪ್ ಅಭಿವೃದ್ಧಿಪಡಿಸಲಾಗುವುದು. ಇದರಿಂದ ಪ್ರವಾಸಿಗರಿಗೆ ಅತ್ಯುತ್ತಮ ಮಾಹಿತಿ ಮತ್ತು ಉತ್ತಮ ಅನುಭವ ದೊರೆಯುತ್ತದೆ.
> ■ **ಕೆ.ಜೆ.ಜಾರ್ಜ್**, ಪ್ರವಾಸೋದ್ಯಮ ಸಚಿವ

ಈ ಯೋಜನೆಯನ್ನು ತ್ವರಿತವಾಗಿ ಸಾಕಾರಗೊಳಿಸಲು ರಾಜ್ಯದಲ್ಲಿರುವ ನವೋದ್ಯಮಗಳು ಸೇರಿದಂತೆ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಿರುವ ಸಂಸ್ಥೆಗಳಿಗೆ ಆಹ್ವಾನ ನೀಡಲು ಇಲಾಖೆ ಮುಂದಾಗಿದೆ ಎಂದು ಮಾಹಿತಿ ನೀಡಿದರು. ಈ ಆನ್‌ಲೈನ್ ವೇದಿಕೆಯಿಂದ ನಮ್ಮ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳ ಸ್ವಚ್ಛತೆ ಹಾಗೂ ನಿರ್ವಹಣೆಗೂ ಹೆಚ್ಚಿನ ಬಲ ಸಿಗಲಿದೆ. ಈ ವಿನೂತನ ವೇದಿಕೆ ನಿರ್ಮಾಣಕ್ಕಾಗಿ ರಾಜ್ಯದ ಪ್ರತಿಭಾವಂತ ನವೋದ್ಯಮಗಳಿಗೆ ಅವಕಾಶ ನೀಡಲಾಗುವುದು ಎಂದು ಪ್ರವಾಸೋದ್ಯಮ ಸಚಿವ ಕೆ.ಜೆ ಜಾರ್ಜ್ ತಿಳಿಸಿದ್ದಾರೆ.

ಬಲಿದಾನ ದಿವಸ್ ಆಚರಣೆ



ಬೆಂಗಳೂರು: ಭಾರತೀಯ ಜನಸಂಘದ ಸಂಸ್ಥಾಪಕರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನ ದಿವಸದ ಅಂಗವಾಗಿ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ವಿಧಾನಪರಿಷತ್ ಸದಸ್ಯರಾದ ಸಿ.ಟಿ.ರವಿ, ಪ್ರತಾಪಸಿಂಹ ನಾಯಕ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ, ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಸರ್ಕಾರಿ ಜಮೀನಿನಲ್ಲಿ ಟೌನ್‌ಶಿಪ್ ಮಾಡಲಿ: ಬೊಮ್ಮಾಯಿ

ಗದಗ: ಬಿಡದಿ ಟೌನ್‌ಶಿಪ್ ಮಾಡುವ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಪ್ರತಿಷ್ಠೆ ಮಾಡಿಕೊಳ್ಳದೆ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ಸರ್ಕಾರಿ ಜಮೀನಿನಲ್ಲಿ ಸ್ಯಾಟಲೈಟ್ ಟೌನ್‌ಶಿಪ್ ಮಾಡಿ, ಎಲ್ಲಾ ವ್ಯವಸ್ಥೆಗಳನ್ನು ಮಾಡಿದರೆ ಆ ಒಳ್ಳೆಯ ನಿರ್ಧಾರ ಆಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಮಲೆನಾಡು ಭಾಗದಲ್ಲಿ ಹೆಚ್ಚಾದ ಹಾವು ಸಂತತಿ | ತೋಟಗಳಿಗೆ ಹೋಗಲು ಹೆದರುವ ರೈತರು

ಮಳೆಗೆ ಅಪ್ಪಟೆ ಮಂಡಲ ಕಟ್ಟು ಹಾವಿನ ಭೀತಿ

▸ ರಮೇಶ್, ಕರುವಾನೆ

ದಿಗಂತ ವಿಶೇಷ

ಶೃಂಗೇರಿ: ಹವಾಮಾನ ವೈಪರೀತ್ಯವೋ ಏನೋ ಮಲೆನಾಡು ಭಾಗದಲ್ಲಿ ಅಡಿಕೆ, ಕಾಫಿ ತೋಟಗಳಲ್ಲಿ ಎಲ್ಲೆಂದರಲ್ಲಿ ಅಪ್ಪಟೆ ಮಂಡಲ ಕಟ್ಟು ಹಾವುಗಳು ಕಾಣಸಿಗುತ್ತವೆ. ಹಿಂದೆಂದೂ ಕಂಡರಿಯದ ರೀತಿಯಲ್ಲಿ ಅಪ್ಪಟೆ ಹಾವುಗಳ ಸಂತತಿ ಜಾಸ್ತಿಯಾಗಿದ್ದು ಹಿಂದೆ ಬಾವಿಯ ಬಿಲ, ಮರದ ಪೊಟರೆಗಳಲ್ಲಿ ಅವುಗಳ ವಾಸಸ್ಥಾನವಾಗಿತ್ತು. ಈಗ ಮನೆಯ ಮರ ಮಟ್ಟುಗಳ ಮೇಲೆ ಬೆಚ್ಚಗೆ ಸುರಳಿ ಸುತ್ತಿಕೊಂಡು ಮಲಗಿರುತ್ತವೆ.

ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 20.06.2026 ರಿಂದ 02.07.2026 ರವರೆಗೆ 17.30 ಗಂಟೆಗೆ. 2) ಪ್ರೀ ಬಿಡ್ ಮೀಟಿಂಗ್ : 30.06.2026 ರಂದು ಬೆಳಿಗ್ಗೆ 11.00 ಗಂಟೆಗೆ, ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 03.07.2026 ರಂದು 17.30 ಗಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ : **After obtaining approval of technical bid from competent authority.** 5) ಕಾಲಾವಧಿ : 12 ತಿಂಗಳು (ಮಳೆಗಾಲ ಸಹಿತ). 6) ಟೆಂಡರ್‌ಗಿಟ್ಟ ಮೊತ್ತ : ರೂ. 2033.84 ಲಕ್ಷಗಳವರೆಗೆ. 7) ಇಎಂಡಿ ಮೊತ್ತ : ರೂ. 20.33 ಲಕ್ಷಗಳು. **(Rs.1.00 lakhs through e-cash and balance amt of Rs. 19.33 lakhs through e-BG).**

ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.

ಸಹಿ/-
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.

ವಾ.ಸಾ.ಸಂ.ಇ/ಶಿ/ನಂ.99-06/ ಝೋಂಕಾರ್/2026-27

ಕಿರು ಸುದ್ದಿ

ಕಿಶೋರ್ ಪುತ್ತೂರು ಮಹಾಲಿಂಗೇಶ್ವರ ದೇವಾಲಯಕ್ಕೆ ಭೇಟಿ

ಪುತ್ತೂರು: ಇತಿಹಾಸ ಪ್ರಸಿದ್ಧ ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ವಿಧಾನಪರಿಷತ್ ಚುನಾವಣಾ ಫಲಿತಾಂಶದ ರಾಜ್ಯ ಬಿಜೆಪಿಯಲ್ಲಿ ಕೆಲ ಹಿರಿಯ ನಾಯಕರು ಮತ್ತು ಕಾರ್ಯಕರ್ತರು ಪಕ್ಷ ಸಂಘಟನೆಯ ಕುರಿತು ಚಿಂತನೆ ಮಾಡಿದ್ದು, ಮುಂದಿನ ದಿನಗಳಲ್ಲಿ ರಾಜ್ಯ ಬಿಜೆಪಿ ಸಂಘಟನೆ ಶಕ್ತಿಯುತವಾಗಬೇಕು ಮತ್ತು ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಸರಕಾರ ಬರುವಂತೆ ಕಿಶೋರ್ ಕುಮಾರ್ ಅವರು ದೇವಳದಲ್ಲಿ ತುಪ್ಪದ ದೀಪ ಬೆಳಗಿಸಿ ದೇವರ ಸತ್ಯ ಧರ್ಮ ನಡೆಯಲ್ಲಿ ಪ್ರಾರ್ಥನೆ ಮಾಡಿದರು. ಈ ಸಂದರ್ಭದಲ್ಲಿ ಪುತ್ತೂರು ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿ ಶಶಿಧರ್ ನಾಯಕ್, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ನಿರಂಜನ್ ಮಾನ್ಯ, ಪುತ್ತೂರು ಕೋ ಓಪರೇಟಿವ್ ಟೌನ್ ಬ್ಯಾಂಕ್ ನಿರ್ದೇಶಕ ಚಂದ್ರಶೇಖರ್ ರಾವ್ ಬಪ್ಪಳಿಗೆ, ಸುನಿತ್, ನಾಗೇಂದ್ರ ಬಾಳಿಗ, ನಾಗೇಶ್ ಟಿ.ಎಸ್, ಪ್ರವೀಣ್ ರೈ ಮೊದಲಾದವರು ಉಪಸ್ಥಿತರಿದ್ದರು.

ಉಚಿತ ಕರುಳು ಬೇನೆ ಲಸಿಕೆ

ಮಂಗಳೂರು: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ 1ನೇ ಸುತ್ತಿನ ಕರುಳು ಬೇನೆ ಲಸಿಕಾ ಕಾರ್ಯಕ್ರಮದಡಿ ಜಿಲ್ಲೆಯಾದ್ಯಂತ ಆಡು, ಮೇಕೆ ಹಾಗೂ ಕುರಿಗಳಿಗೆ ಕರುಳು ಬೇನೆ ವಿರುದ್ಧ ಲಸಿಕೆಯನ್ನು ಜೂ.30 ರವರೆಗೆ ಉಚಿತವಾಗಿ ನೀಡಲಾಗುತ್ತದೆ. ಆಡು, ಮೇಕೆ ಮತ್ತು ಕುರಿಗಳಲ್ಲಿ ಕರುಳು ಬೇನೆ ರೋಗವು ಸಾಕಷ್ಟು ಸಾವಿಗೆ ಕಾರಣವಾಗಬಹುದಾಗಿದ್ದು, ರೈತರಿಗೆ ಆರ್ಥಿಕ ನಷ್ಟವನ್ನುಂಟು ಮಾಡುತ್ತದೆ. ಆದ್ದರಿಂದ ರೈತರು ತಮ್ಮ ಹತ್ತಿರದ ಪಶುವೈದ್ಯಕೀಯ ಸಂಸ್ಥೆಗಳನ್ನು ಸಂಪರ್ಕಿಸಿ, ತಪ್ಪದೇ ಲಸಿಕೆ ಹಾಕಿಸಬೇಕೆಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಅಲ್ಹಾಜ್ ತ್ವಾಕಾ ಅಹ್ಮದ್ ಮುಸ್ಲಿಯಾರ್

ಮಂಗಳೂರು: ದ.ಕ. ಜಿಲ್ಲಾ ಖಾಝಿ ಅಲ್ಹಾಜ್ ತ್ವಾಕಾ ಅಹ್ಮದ್ ಮುಸ್ಲಿಯಾರ್ (78) ಮಂಗಳವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಕೆಲವು ಸಮಯದಿಂದ ಅನಾರೋಗ್ಯಕ್ಕೀಡಾಗಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಕೊನೆಯುಸಿರೆಳೆದಿದ್ದಾರೆ.



ಮೃತರು ಪತ್ನಿ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರ ಸಹಿತ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. 2010ರಲ್ಲಿ ದ.ಕ. ಜಿಲ್ಲಾ ಖಾಝಿಯಾಗಿ ಅಧಿಕಾರ ಸ್ವೀಕರಿಸಿದ್ದ ತ್ವಾಕಾ ಉಸ್ತಾದ್, ದ.ಕ. ಮತ್ತು ಕೇರಳ ರಾಜ್ಯದ ಸುಮಾರು 200ಕ್ಕೂ ಅಧಿಕ ಜಮಾಅತ್‌ಗಳ ಖಾಝಿಯಾಗಿದ್ದರು. ಸಮಸ್ತ ಕಾಸರಗೋಡು ಜಿಲ್ಲಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಮಂಗಳೂರು ಕೇಂದ್ರ ಜುಮಾ ಮಸ್ಜಿದ್ ನಲ್ಲಿ ಮೃತದೇಹದ ವೀಕ್ಷಣೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ದಫನ

ಮಯ್ಯತ್ ವೀಕ್ಷಣೆ ಬಳಿಕ ಕಾಸರಗೋಡಿನ ಖಾಝಿ ಮನೆಗೆ ಮೃತದೇಹವನ್ನು ಕೊಂಡೊಯ್ಯಲಾಗುವುದು. ಬುಧವಾರ ಮಧ್ಯಾಹ್ನ ಮೂಡುಬಿದಿರೆ ಸಮೀಪದ ಕಾಶಿಪಟ್ಣ ದಾರುನ್ನೂರು ಶಿಕ್ಷಣ ಸಂಸ್ಥೆಯ ಆವರಣದಲ್ಲಿ ದಫನ ಕಾರ್ಯ ನೆರವೇರಲಿದೆ ಎಂದು ಕೇಂದ್ರ ಜುಮಾ ಮಸೀದಿಯ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಹನೀಫ್ ಹಾಜಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕೇಶವ ಮುಡಾಯಿಬೆಟ್ಟು



ಮಂಗಳೂರು: ನೀರುಮಾರ್ಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಡು ಮುಡಾಯಿಬೆಟ್ಟು ನಿವಾಸಿ ಕೇಶವ ಮುಡಾಯಿಬೆಟ್ಟು (52) ಅವರು ಅನಾರೋಗ್ಯದಿಂದ ಮಂಗಳವಾರ ಬೆಳಗ್ಗೆ ನಿಧನರಾಗಿದ್ದಾರೆ. ಇವರಿಗೆ ತಂದೆ, ತಾಯಿ, ಪತ್ನಿ, ಪುತ್ರಿ ಇದ್ದಾರೆ. ಇವರು ಪಡು ಶ್ರೀ ವಿಘ್ನೇಶ್ವರ ಗ್ರಾಮೀಣಾಭಿವೃದ್ಧಿ ಸೇವಾ ಸಮಿತಿ ಮಾಜಿ ಅಧ್ಯಕ್ಷರು ಸೇರಿದಂತೆ ನಾನಾ ಸಂಘ–ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದರು. ಬಿಜೆಪಿಯಲ್ಲಿ ಸಕ್ರಿಯರಾಗಿದ್ದು, ತಾಲೂಕು ಪಂಚಾಯತ್ ಚುನಾವಣೆಯಲ್ಲೂ ಸ್ಪರ್ಧಿಸಿದ್ದರು.

ರಾಜೇಂದ್ರ ಕೆ.ವಿ.

ಬಂಟ್ವಾಳ : ತಾಲೂಕಿನ ಪಿಲಾತಬೆಟ್ಟು ಗ್ರಾಮದ ದೈಕಿನಕಟ್ಟೆ ನಿವಾಸಿ ರಾಜೇಂದ್ರ ಕೆ.ವಿ. (64) ಅವರು ಅಸೌಖ್ಯದಿಂದ ಮಂಗಳೂರು ಆಸ್ಪತ್ರೆಯಲ್ಲಿ ಜೂ.23ರಂದು ನಿಧನ ಹೊಂದಿದರು. ಮೃತರು ತಾಯಿ, ಪತ್ನಿ, ಪುತ್ರನನ್ನು ಅಗಲಿದ್ದಾರೆ.



ರಾಜೇಂದ್ರ ಅವರು ಮಂಗಳೂರು ಪಣಂಬೂರು ನವಬಂದರು ಮರ್ಮುಗಾಂವ್ ಡಾಕ್ ಲಿಮಿಟೆಡ್ ಸಂಸ್ಥೆಯ ನಿವೃತ್ತ ಉದ್ಯೋಗಿಯಾಗಿದ್ದು, ಬಳಿಕ ಶ್ರೀ ಧರ್ಮಸ್ಥಳ ಸಿರಿ ಗ್ರಾಮೋದ್ಯೋಗ ಸಂಸ್ಥೆಯಲ್ಲಿ ಮಾರುಕಟ್ಟೆ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಕಲೆ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ ಅವರು, ಪುಂಜಾಲಕಟ್ಟೆ ಶ್ರೀ ಮುರುಘೇಂದ್ರ ಮಿತ್ರ ಮಂಡಳಿಯ ಸ್ಥಾಪಕರಲ್ಲಿ ಓರ್ವರಾಗಿದ್ದು, ಬಳಿಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಪುಂಜಾಲಕಟ್ಟೆ ಸರಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಕೋಶಾಧಿಕಾರಿಯಾಗಿದ್ದರು. ಕಲ್ಲುಬೆಟ್ಟು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಕೋಶಾಧಿಕಾರಿಯಾಗಿ, ವಲಯ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಉತ್ತಮ ಕಲಾವಿದರಾಗಿದ್ದ ಅವರು ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದರು. ಸಂಘಟಕರಾಗಿದ್ದ ಅವರು ಮಿತ್ರ ಮಂಡಳಿ ಮೂಲಕ ಯುವಜನ ಮೇಳ, ಆರೋಗ್ಯ ಶಿಬಿರ, ಆಟಿದ ಕೂಟ, ನಾಟಕ ಸ್ಪರ್ಧೆ, ಶೈಕ್ಷಣಿಕ ಕಾರ್ಯಾಗಾರ, ರಕ್ತದಾನ ಶಿಬಿರಗಳನ್ನು ಸಂಘಟಿಸಿದ್ದರು. ವಾಲಿಬಾಲ್ ಆಟಗಾರರಾಗಿದ್ದರು. ಅವರ ನಿಧನಕ್ಕೆ ಮಾಜಿ ಸಚಿವ ಬಿ.ರಮಾನಾಥ ರೈ, ಬುಡಾ ಅಧ್ಯಕ್ಷ ಬೇಬಿ ಕುಂದರ್ ಮತ್ತಿತರ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.



ಮಂಗಳೂರು ತಾಲೂಕಿನ ಗಂಜಿಮಠದಲ್ಲಿರುವ ಶ್ರೀ ಮೃತ್ಯುಂಜಯೇಶ್ವರ ಕ್ಷೇತ್ರದ ಪುನರ್ ನಿರ್ಮಾಣದ ಅಂಗವಾಗಿ ಗರ್ಭನ್ಯಾಸ್ ಕಾರ್ಯಕ್ರಮ ಬಡಗ ಎಡಪದವು ಟಿ. ಮುರಲೀಧರ ತಂತ್ರಿಗಳ ನೇತೃತ್ವದಲ್ಲಿ ಜೂ. 22 ರಂದು ನೆರವೇರಿತು. ಬಂಟ್ವಾಳ ಶಾಸಕ ರಾಜೇಶ್ ನ್ಾಯ್ಕ್ ಉಳಿಪಾಡಿಗುತ್ತು, ಪ್ರಮುಖರಾದ ಚಂದ್ರಹಾಸ್ ಶೆಟ್ಟಿ ನಾರಳ, ಭಾಸ್ಕರ್ ಭಟ್ ಗಂಜಿಮಠ, ಸೋಹನ್ ಅತಿಕಾರಿ, ಶ್ರವಣ್ ಕುಮಾರ್ ಶೆಟ್ಟಿ ಮೊಗರುಗುತ್ತು, ಸತೀಶ್ಚಂದ್ರ ಸಾಲ್ಯಾನ್ ಪಾಣೆಲ, ಹರೀಶ್ ಕಾಮತ್ ಗಂಜಿಮಠ ಹಾಗೂ ಭಕ್ತರು ಇದ್ದರು.

ಮೂಡಬಿದಿರೆ: ನಾಳೆ ಲಯನ್ಸ್ ಹರಿಭವ ಸಭಾಭವನದ ಲೋಕಾರ್ಪಣೆ ಕಾರ್ಯಕ್ರಮ

ಮೂಡುಬಿದಿರೆ: ಇಲ್ಲಿನ ಲಯನ್ಸ್ ಕ್ಲಬ್ 50 ವರ್ಷಗಳನ್ನು ಪೂರ್ಣಗೊಳಿಸಿದ್ದು, ಸುವರ್ಣ ಮಹೋತ್ಸವ ಸಂಭ್ರಮಾಚರಣೆಯಲ್ಲಿದೆ. 22 ಸದಸ್ಯರುಗಳನ್ನು ಒಳಗೊಂಡು ನೂತನವಾಗಿ ಲಯನ್ಸ್ ಸೇವಾ ಟ್ರಸ್ಟ್ ಮೂಡುಬಿದಿರೆಯನ್ನು ಸ್ಥಾಪಿಸಿ ಲಯನ್ಸಿನ ಎಲ್ಲ ಸದಸ್ಯರುಗಳ ಧನಸಹಾಯದ ಮೂಲಕವಾಗಿ ಸುಮಾರು 40 ಲಕ್ಷದ ವೆಚ್ಚದಲ್ಲಿ ಲಯನ್ಸ್ ಹರಿಭವ ಸಭಾಭವನವನ್ನು ನಿರ್ಮಿಸಿ ಸಮಾಜಕ್ಕೆ ಅರ್ಪಿಸುತ್ತಿದೆ. ಈ ಸಭಾಭವನವು ಯಾವುದೇ ಆರ್ಥಿಕ ಲಾಭವನ್ನು ನಿರೀಕ್ಷಿಸದೆ ಸಮಾಜದ ಎಲ್ಲಾ ವರ್ಗದ ಜನರಿಗೆ ಉಪಯುಕ್ತವಾಗಲಿದೆ ಎಂದು ಕ್ಲಬ್‌ನ ಅಧ್ಯಕ್ಷ ಶಿವಪ್ರಸಾದ್ ಹೆಗ್ಡೆ ಕಣಂಜಾರು ತಿಳಿಸಿದ್ದಾರೆ.

ಹಲವರ ಪ್ರಾಯೋಜಕತ್ವ

ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ಹರಿಭವ' ಸಭಾಂಗಣವನ್ನು ಶಿಮುಂಜೆ ಪರಾರಿ ಹರಿಯಪ್ಪ ಶೆಟ್ಟಿ ಮತ್ತು ಕಡಂದಲೆ ಪರಾರಿ ಭವಾನಿ ಶೆಟ್ಟಿ ಅವರ ಸ್ಮರಣಾರ್ಥ ಲಯನ್ ಡಾ. ಕೆ. ನಿತ್ಯಾನಂದ ಶೆಟ್ಟಿ ಪ್ರಾಯೋಜಿಸಿದ್ದಾರೆ. 'ಮಂಜುಶ್ರೀ ವೇದಿಕೆಯನ್ನು' ಕಣಂಜಾರು ಪಟ್ಟದ ಮನೆ ಕೃಷ್ಣ ಹೆಗ್ಡೆ ಹಾಗೂ ತಾಳಿಪಾಡಿ ಗುತ್ತು ಸವಿತಾ ಕೆ. ಹೆಗ್ಡೆಯವರ ಸ್ಮರಣಾರ್ಥ ಶಿವಪ್ರಸಾದ್ ಹೆಗ್ಡೆ ಪ್ರಾಯೋಜಿಸಿದ್ದಾರೆ. ಹಾಗೂ ಎಂ ಕೆ 'ಪದ್ಮನಾಭ ಭವಾನಿ ಡೈನಿಂಗ್ ಹಾಲ್'ನ್ನು ಎಂ. ಕೆ. ಪದ್ಮನಾಭ ಗೌಡ ಮತ್ತು ಭವಾನಿ ಕಡೆಪಲ್ಲ ಇವರ ಸ್ಮರಣಾರ್ಥ ದಿನೇಶ್ ಎಂ. ಕೆ. ಪ್ರಾಯೋಜಿಸಿದ್ದಾರೆ ಎಂದರು.

ಈ ಎಲ್ಲಾ ಯೋಜನೆಗಳು ಜೂ. 25ರಂದು ಗುರುವಾರ ಲೋಕಾರ್ಪಣೆಗೊಳ್ಳಲಿದೆ. ಉದ್ಘಾಟಕರಾಗಿ ಲಯನ್ಸ್ ಜಿಲ್ಲೆ, 317 ಡಿ ಇದರ ಜಿಲ್ಲಾ ರಾಜ್ಯಪಾಲರಾದ ಕುಡ್ಲಿ ಅರವಿಂದ ಶೆಣೈ, ಮುಖ್ಯ ಅತಿಥಿಗಳಾಗಿ ಮೂಡುಬಿದಿರೆ ಮುಲ್ಕಿ ಕ್ಷೇತ್ರದ ಶಾಸಕ ಉಮಾನಾಥ ಎ. ಕೋಟ್ಯಾನ್, ಮಾಜಿ ಸಚಿವ ಅಭಯಚಂದ್ರ ಜೈನ್, ಲಯನ್ಸ್ ಜಿಲ್ಲೆಯ ನಿಯೋಜಿತ ರಾಜ್ಯಪಾಲ ಎಚ್. ಎಂ. ತಾರನಾಥ್, ಪ್ರಥಮ ಜಿಲ್ಲಾ ಉಪ ರಾಜ್ಯಪಾಲ ಗೋವರ್ಧನ್ ಕೆ. ಶೆಟ್ಟಿ, ದ್ವಿತೀಯ ಜಿಲ್ಲಾ ಉಪರಾಜ್ಯಪಾಲ ವೆಂಕಟೇಶ್ ಹೆಬ್ಬಾರ್, ಪ್ರಾಂತೀಯ ಅಧ್ಯಕ್ಷ ಡಿ. ಕೆ. ಜಗದೀಶ್ ಚಂದ್ರ, ವಲಯಾಧ್ಯಕ್ಷ ಜೋಸ್ಸಿ ಮೆನೇಜಸ್ ಭಾಗವಹಿಸಲಿದ್ದಾರೆ ಎಂದರು.

ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಪ್ರಕ್ರಿಯೆ | ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಕರೆ

ಅರ್ಹ ಮತದಾರರು ಭಾಗವಹಿಸಿ

ಕುಂದಾಪುರ: ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಪ್ರಕ್ರಿಯೆಯಲ್ಲಿ ಹೊಸ ಮತದಾರರ ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಭಾಗವಹಿಸಿ, ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಕರೆ ನೀಡಿದರು.



ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನಲ್ಲಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ 2026 ರ ಸಂಬಂಧ ಕುಂದಾಪುರ ವಿಧಾನಸಭಾ ಕ್ಷೇತ್ರದ ಚುನಾಯಿತ ಜನಪ್ರತಿನಿಧಿಗಳು, ಮೇಲ್ವಿಚಾರಕರು, ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್ ಅವರಿಗೆ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ವಂಚಿತರಾಗಬಾರದು

ಪ್ರಜಾ ಪ್ರಾತಿನಿಧ್ಯ ಕಾಯ್ದೆ ಅಡಿಯಲ್ಲಿ ಮತದಾರರ ಪಟ್ಟಿ ತಯಾರಿಸುವುದು ಸಂವಿಧಾನಾತ್ಮಕ ಕರ್ತವ್ಯ. ಈ ನಿಟ್ಟಿನಲ್ಲಿ ದೇಶದಾದ್ಯಂತ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯಕ್ರಮವು ನಡೆಯುತ್ತಿದೆ. 2025 ರ ಮತದಾರರ ಪಟ್ಟಿಯಲ್ಲಿರುವ ಹೆಸರುಗಳಿಗೆ ಸಂಬಂಧಿಸಿದಂತೆ 2002 ರಲ್ಲಿರುವ ಮತದಾರರ ಪಟ್ಟಿಯ ಮತದಾರರ ಕುಟುಂಬದ ಸಂತತಿಗಳಿಗೆ ಮ್ಯಾಪಿಂಗ್ ಮಾಡಿ ಲಿಂಕ್ ಮಾಡಲಾಗುತ್ತಿರುವುದರಿಂದ ಯಾವ ಅರ್ಹ ಮತದಾರರು ಮತದಾನದಿಂದ ವಂಚಿತರಾಗದಂತೆ ಗಮನಹರಿಸಬೇಕು ಎಂದರು.

ಮೂರು ಬಾರಿ ಬರುತ್ತಾರೆ

ಮತಗಟ್ಟೆ ಅಧಿಕಾರಿಗಳು ಜೂ.30 ರಿಂದ ಜು.29 ರ ವರೆಗೆ 10 ದಿನಗಳ ಕಾಲ ಮನೆ ಮನೆಗೆ ಭೇಟಿ ನೀಡಿ ಪೂರ್ವದಲ್ಲಿ ಮುದ್ರಣ ಗೊಂಡಿರುವ ನಮೂನೆಯನ್ನು ದ್ವಿ ಪ್ರತಿಯಲ್ಲಿ ನೀಡುತ್ತಾರೆ. ಮತದಾರರು ಅದನ್ನು ಸಂಪೂರ್ಣವಾಗಿ ಭರ್ತಿ ಮಾಡಿ ಪ್ರಸ್ತುತ ಭಾವಚಿತ್ರ ಅಂಟಿಸಿ ಕಡ್ಡಾಯವಾಗಿ ಸಹಿ ಮಾಡಿ ಒಂದು ಪ್ರತಿಯನ್ನು ಮತಗಟ್ಟೆ ಅಧಿಕಾರಿಗೆ ಹಿಂದಿರುಗಿಸಬೇಕು. ಒಂದೊಮ್ಮೆ ನೀಡದೇ ಇದ್ದಲ್ಲಿ ಮತಗಟ್ಟೆ ಅಧಿಕಾರಿಗಳು ಮೂರು ಬಾರಿ ಮನೆ ಬಾಗಿಲಿಗೆ ಭೇಟಿ ನೀಡಲಿದ್ದಾರೆ ಎಂದರು.

ನಿಗಾ ವಹಿಸಬೇಕು

ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕುರಿತು ಗಂಭೀರವಾಗಿ ಪರಿಗಣಿಸಿ ಬೂತ್ ಮಟ್ಟದ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವುದರೊಂದಿಗೆ ಮತದಾರರ ಪಟ್ಟಿಯಿಂದ ಅರ್ಹ ಮತದಾರರು ಹೊರಗುಳಿಯದಂತೆ ನಿಗಾವಹಿಸಬೇಕು. ಫಾರ್ಮ್ ಭರ್ತಿ ಮಾಡಿ ನೀಡದೆ ಇರುವವರು ಅಥವಾ ಫಾರಂ ಅಪ್ಲೋಡ್ ಆಗದೆ ಇರುವವರ ಹೆಸರು ಮತದಾರರ ಪಟ್ಟಿಯಲ್ಲಿ ಬಿಟ್ಟು ಹೋಗುವ ಸಾಧ್ಯಗಳಿದ್ದು, ಈ ಬಗ್ಗೆ ಗಮನಹರಿಸುವಂತೆ ತಿಳಿಸಿದರು.

ಜೂ. 29ರ ವರೆಗೆ ತರಬೇತಿ

ಉಪನ್ಯಾಸಕರು ಹಾಗೂ ಜಿಲ್ಲಾ ಮಾಸ್ಟರ್ ಟ್ರೈನರ್ ಗಂಗಾಧರ್ ಮಾಹಿತಿ ನೀಡಿ ಮಾತನಾಡಿ, ಜೂನ್ 20 ರಿಂದ ಜೂನ್ 29 ವರೆಗೆ ಪೂರ್ವಸಿದ್ಧತಾ ಕಾರ್ಯಗಳು ಮತ್ತು ತರಬೇತಿ ಪ್ರಕ್ರಿಯೆಗಳು ನಡೆಯಲಿವೆ. ಜೂನ್ 30 ರಿಂದ ಜುಲೈ 29 ಬಿಎಲ್‌ಒಗಳ ಮೂಲಕ ಮನೆ ಮನೆ ಸಮೀಕ್ಷೆ ನಡೆಸಿ, ನಮೂನೆಗಳನ್ನು ಪಡೆದು ವೆಬ್ ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಜುಲೈ 29 ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ ಪ್ರಕ್ರಿಯೆ ನಡೆಯಲಿದೆ. ಆಗಸ್ಟ್ 5 ಕರಡು ಮತದಾರರ ಪಟ್ಟಿಯ ಪ್ರಕಟಣೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ಆಕ್ಷೇಪಣೆಗಳನ್ನು ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ. ಅಕ್ಟೋಬರ್ 3 ರವರೆಗೆಸ್ವೀಕೃತವಾದ ಆಕ್ಷೇಪಣೆಗಳ ಇತ್ಯರ್ಥಗೊಳಿಸಬೇಕು, ಅಕ್ಟೋಬರ್ 7 ಕ್ಕೆ ಅಂತಿಮ ಮತದಾರರ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಣೆ ಮಾಡಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ, ಸಹಾಯಕ ಕಮಿಷನರ್ ರಶ್ಮಿ, ಕುಂದಾಪುರ ತಹಸೀಲ್ದಾರ್ ಪ್ರದೀಪ್ ಕುರ್ಡೇಕರ್, ಶಿಕ್ಷಣ ಇಲಾಖೆಯ ಸಂತೋಷ್ ಕುಮಾರ್, ಸದಾನಂದ್, ಬಿ.ಎಲ್.ಓ, ಬಿ.ಎಲ್.ಎ. ಹಾಗೂ ಮತ್ತಿತರರು ಉಪಸ್ಥಿತರಿದ್ದರು.

> **4 ಬಾರಿ ಪರಿಷ್ಕರಣೆ**
> ವರ್ಷದಲ್ಲಿ ನಾಲ್ಕು ಬಾರಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1 ರಂದು ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯನಡೆಯಲಿದೆ. ಈ ಸಂದರ್ಭದಲ್ಲಿ 18 ವರ್ಷ ಪೂರೈಸಿದವರು ಹೊಸ ಅರ್ಜಿ ಸಲ್ಲಿಸಬಹುದಾಗಿದೆ. ಪ್ರಸ್ತುತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಾಗಿ ಹೊಸ ಮತದಾರರ ಪಟ್ಟಿ ತಯಾರಿಸಲಾಗುತ್ತದೆ
> ■ ಸ್ವರೂಪ ಟಿ. ಕೆ., ಜಿಲ್ಲಾಧಿಕಾರಿ

ನವೋದಯ ಪ್ರೇರಕರ ತರಬೇತಿ ಕಾರ್ಯಾಗಾರ



ಮಂಗಳೂರು: ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್ ಪ್ರವರ್ತಿತ ನವೋದಯ ಸ್ವಸಹಾಯ ಗುಂಪು ಯೋಜನೆಯ ಅವಿಭಜಿತ ದ.ಕ. ಹಾಗೂ ಉಡುಪಿ ಜಿಲ್ಲೆಯ ಹೊಸ ನಿಯೋಜಿತ ಪ್ರೇರಕರು ಹಾಗೂ ಮೇಲ್ವಿಚಾರಕರಿಗೆ ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ 3 ದಿನಗಳ ತರಬೇತಿ ಕಾರ್ಯಾಗಾರವು ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು ತರಬೇತಿ ಕೇಂದ್ರದಲ್ಲಿ ಜರಗಿತು.

ಕಾರ್ಯಾಗಾರದ ಉದ್ಘಾಟನೆಯನ್ನು ಸಹಕಾರ ಸಂಘಗಳ ಉಪನಿಬಂಧಕರಾದ ರಮೇಶ್ ದೀಪ ಬೆಳಗಿಸಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ದ.ಕ.ಜಿಲ್ಲಾಕೇಂದ್ರ ಸಹಕಾರಿ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಗೋಪಿನಾಥ ಭಟ್, ಮಹಾಪ್ರಬಂಧಕ ಸುನಿಲ್ ಕುಮಾರ್ ಹೊಳ್ಳ, ನವೋದಯ ಗ್ರಾಮ ವಿಕಾಸ ಚಾರಿಟೇಬಲ್ ಟ್ರಸ್ಟ್‌ನ ಟ್ರಸ್ಟಿ ಸುನಿಲ್ ಕುಮಾರ್ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪೂರ್ಣಿಮ ಶೆಟ್ಟಿ ಉಪಸ್ಥಿತರಿದ್ದರು.

ನವೋದಯ ಸಂಸ್ಥೆಯ ಸಿಬ್ಬಂದಿ ನಮ್ರತಾ ಸ್ವಾಗತಿಸಿ, ಕಾರ್ಯಕ್ರಮದ ನಿರೂಪಣೆಯನ್ನು ಮಿಥುನ್‌ರೈ ನೆರವೇರಿಸಿದರು. ಕಾರ್ಯಾಗಾರದಲ್ಲಿ ತರಬೇತುದಾರರಾಗಿ ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧಿಕಾರಿ ಪದ್ಮನಾಭ, ಹರಿನಾಥ್, ನವೋದಯ ಮೇಲ್ವಿಚಾರಕರಾದ ನಾರಾಯಣ ಎಂ.ಎಸ್. ಇವರುಗಳು ಭಾಗವಹಿಸಿದ್ದರು.

ವಿವಿ : ರಾಜ್ಯಶಾಸ್ತ್ರ ಅಸೋಸಿಯೇಷನ್‌ನ ಸಮಾರೋಪ

ಅಧ್ಯಯನಗಳಿಗೆ ಆದ್ಯತೆ ಅಗತ್ಯ

ಕೊಣಾಜೆ: ಇಂದಿನ ಸ್ಪರ್ಧಾತ್ಮಕ ಹಾಗೂ ಶಿಕ್ಷಣ ವ್ಯವಸ್ಥೆಗಳು ಬದಲಾಗುತ್ತಿರುವ ಕಾಲಘಟ್ಟದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯು ಕೌಶಲ, ಉದ್ಯೋಗ ಆಧಾರಿತ ಬಹುಶಿಸ್ತೀಯ ಅಧ್ಯಯನಗಳಿಗೆ ತೆರೆದುಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಜಾನಪದ ವಿದ್ವಾಂಸರಾದ ಪ್ರೊ.ಕೆ.ಚಿನ್ನಪ್ಪ ಗೌಡ ಅವರು ಹೇಳಿದರು.



ಅವರು ಸೋಮವಾರ ಮಂಗಳೂರು ವಿವಿಯ ರಾಜ್ಯಶಾಸ್ತ್ರ ವಿಭಾಗದ ರಾಜ್ಯಶಾಸ್ತ್ರ ಅಸೋಸಿಯೇಷನ್‌ನ ಸಮಾರೋಪ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಬದಲಾದ ಸಾಮಾಜಿಕ ವ್ಯವಸ್ಥೆಗೆ ಪೂರಕವಾಗಿ ಈಗಿನ ಶೈಕ್ಷಣಿಕ ವ್ಯವಸ್ಥೆಯನ್ನು ಮುರಿದು ಹೊಸ ಬಗೆಯಲ್ಲಿ ಕಟ್ಟುವ, ಬೆಳೆಸುವ ಅನಿವಾರ್ಯತೆ ಇದೆ ಎಂದರು.

ರಾಜ್ಯಶಾಸ್ತ್ರದ ವಿದ್ಯಾರ್ಥಿಗಳು ಸಾಹಿತ್ಯವನ್ನು ರಾಜಕೀಯ ಪಠ್ಯವಾಗಿ ಬಹುಶಿಸ್ತೀಯ ನೆಲೆಯಲ್ಲಿ ನೋಡಲು ಸಾಧ್ಯವಿದೆ ಎಂದು ಹೇಳಿದ ಅವರು, ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿಯು ಸಾಹಿತ್ಯ ಕೃತಿ ಮಾತ್ರವಲ್ಲ ರಾಜಕೀಯ ಚಿಂತನೆಯನ್ನೂ ಮುಂದಿಡುತ್ತದೆ. ಇದರಲ್ಲಿ ಭೂಮಾಲಕರ ಒಕ್ಕಲಿಗರ ಸಂಘರ್ಷವನ್ನು ಚರ್ಚಿಸುವ, ಭೂ ಸುಧಾರಣೆಯ ಅಂಶಗಳು ಬಿಂಬಿಸುವ ಅಂಶಗಳೂ ಇವೆ. ಕುಟುಂಬದೊಳಗಿನ ರಾಜಕೀಯ ಸಂಘರ್ಷಗಳನ್ನ ಸಿರಿ ಕಾವ್ಯಗಳಲ್ಲಿ ನೋಡಲು ಸಾಧ್ಯವಿದೆ. ಕೋಟಿ ಚೆನ್ನಯ ದಲ್ಲಿ ಅಧಿಕಾರಕ್ಕಾಗಿ ಹೋರಾಡಿದ ಕಥೆಯನ್ನು ನೋಡಲು ಸಾಧ್ಯವಿದೆ ಎಂದರು.

ರಾಜ್ಯಶಾಸ್ತ್ರ ವಿಭಾಗದ ಅಧ್ಯಕ್ಷ ಡಾ.ರಾಜ್ ಪ್ರವೀಣ್ ಅವರು ಅಧ್ಯಕ್ಷತೆ ವಹಿಸಿದ್ದರು.

ಅತಿಥಿ ಉಪನ್ಯಾಸಕ ಡಾ.ವೆಂಕಟೇಶ್, ಅಸೋಸಿಯೇಷನ್‌ನ ಕಾರ್ಯದರ್ಶಿ ನವೀನ್, ಸಂಶೋಧನಾ ವಿದ್ಯಾರ್ಥಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಸೋಸಿಯೇಶನ್ ಉಪಾಧ್ಯಕ್ಷ ಯಜ್ಞೇಶ್ ಸ್ವಾಗತಿಸಿದರು. ಆಶಾ ವಂದಿಸಿದರು. ಸಪ್ನ ಕಾರ್ಯಕ್ರಮ ನಿರೂಪಿಸಿದರು.

> ಬಹುಶಿಸ್ತೀಯ ಜ್ಞಾನ ಪರಂಪರೆಯನ್ನು ಬೆಳೆಸಿದರೆ ಅನೇಕ ಬಗೆಯ ಉದ್ಯೋಗವಕಾಶಗಳ ಸಾಧ್ಯತೆಯೂ ಹೆಚ್ಚುತ್ತದೆ.
> ■ ಪ್ರೊ.ಕೆ.ಚಿನ್ನಪ್ಪ ಗೌಡ

ನಾಗರಿಕ ಸೇವಾ ಪರೀಕ್ಷೆ – 28ರಂದು 'ಮಾರ್ಗದರ್ಶಿ' ಕಾರ್ಯಕ್ರಮ

ಮಂಗಳೂರು: ಮಂಗಳೂರು ಐಎಎಸ್, ರಚನಾ ಚೇಂಬರ್ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರಿ ಹಾಗೂ ರಾಮಕೃಷ್ಣ ಮಿಷನ್ ಸಹಯೋಗದಲ್ಲಿ ಯುಪಿಎಸ್‌ಸಿ ಪರೀಕ್ಷೆ ಉತ್ತೀರ್ಣರಾಗುವ ಕುರಿತು 'ಮಾರ್ಗದರ್ಶಿ' ವಿಶೇಷ ನಾಗರಿಕ ಸೇವಾ ಪರೀಕ್ಷಾ ಮಾರ್ಗದರ್ಶನ ಕಾರ್ಯಕ್ರಮ ಜೂ.28ರಂದು ಬೆಳಗ್ಗೆ 8.30ರಿಂದ ಮಧ್ಯಾಹ್ನ 12.30ರ ತನಕ ಮಂಗಳಾದೇವಿಯಲ್ಲಿರುವ ರಾಮಕೃಷ್ಣ ಮಿಷನ್ ಸಭಾಂಗಣದಲ್ಲಿ ನಡೆಯಲಿದೆ ಎಂದು ರಚನಾ ಅಧ್ಯಕ್ಷ ರಾಯ್ ಕ್ಯಾಸ್ಟಲಿನೋ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಗರಿಕ ಸೇವಾ ಪರೀಕ್ಷೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳು, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ, ಪ್ರೇರಣೆ ಹಾಗೂ ಸ್ಪಷ್ಟ ದಿಕ್ಕುನಿರ್ದೇಶನ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಐಎಎಸ್ ಮಾಸ್ಟರ್ ಟ್ರೈನರ್‌ಗಳಾದ ಮೋಹನ್ ಕೃಷ್ಣಮೂರ್ತಿ ಹಾಗೂ ಚಂದ್ರಮೋಹನ್ ಇನಗಂಟಿ, ಡಾ. ಸುಮನಾ ಬಿ., ಜಾಗತಿಕ ಮಟ್ಟದ ಗೂಗಲ್ ಪ್ರಮಾಣಿತ ಶಿಕ್ಷಣತಜ್ಞ ಹಾಗೂ ಮೈಕ್ರೋಸಾಫ್ಟ್ ಪ್ರಮಾಣಿತ ಶಿಕ್ಷಣ ತಜ್ಞ ಡಾನ್ ಪ್ರಕಾಶ್ ಮತ್ತು ಮಂಗಳೂರು ಐಎಎಸ್ ಸಂಸ್ಥಾಪಕ ಸಂತೋಷ್ ರಾವ್ ಸಂಪನ್ಮೂಲ ವ್ಯಕ್ತಿಗಳಾಗಿ ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಎಲ್ಲಾ ಅಧಿವೇಶನಗಳಿಗೆ ಪ್ರವೇಶ, ಊಟ, ಇ-ಪ್ರಮಾಣಪತ್ರ ಹಾಗೂ ಭವಿಷ್ಯದ ವಿದ್ಯಾರ್ಥಿವೇತನ ಮತ್ತು ಮಾರ್ಗದರ್ಶನ ಕಾರ್ಯಕ್ರಮಗಳ ಅವಕಾಶಗಳು ಲಭ್ಯವಾಗಲಿವೆ. ನಾಗರಿಕ ಸೇವೆ ಹಾಗೂ ಸರ್ಕಾರಿ ಉದ್ಯೋಗ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ. ನೋಂದಣಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ ಎಂದವರು ತಿಳಿಸಿದರು.

ಐಎಎಸ್ ಸಂಸ್ಥಾಪಕ ಸಂತೋಷ್ ರಾವ್, ಸಂದೇಶ ಪ್ರತಿಷ್ಠಾನದ ಫಾ. ರೋಶನ್ ರೊಸಾರಿಯೊ, ಆ್ಯಲ್ರನ್ ರಾಡ್ರಿಗಸ್, ಜೆನಿಫರ್ ಜಾಸ್ಮಿನ್ ಲೋಬೊ ಉಪಸ್ಥಿತರಿದ್ದರು.

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಯೋಗೋತ್ಸವ ಯೋಗ ಪ್ರಾತ್ಯಕ್ಷಿಕೆ

ದೇಹದ ಸ್ವಾಸ್ಥ್ಯ ಕಾಪಾಡಲು ಯೋಗ ಬಹಳ ಸಹಕಾರಿ

ಪುತ್ತೂರು: ಶರೀರವನ್ನು ಮತ್ತು ಮನಸ್ಸನ್ನು ಸರಿಯಾಗಿ ಬಳಸಿಕೊಂಡಷ್ಟು ಶ್ರೇಯಸ್ಸು ಹೆಚ್ಚುತ್ತದೆ. ಇದಕ್ಕೆ ಯೋಗ ಸಹಾಯ ಮಾಡುತ್ತದೆ. ಮನಸ್ಸಿನ ಹಿಡಿತ ಇಟ್ಟುಕೊಳ್ಳಲು ಮತ್ತು ದೇಹದ ಸ್ವಾಸ್ಥ್ಯ ಕಾಪಾಡಲು ಯೋಗ ಸಹಕಾರಿ. ಏಕಾಗ್ರತೆಯನ್ನು ಪಡೆದುಕೊಳ್ಳಲು ಯೋಗ ಅತ್ಯುತ್ತಮ ಸಾಧನ. ಹಾಗೆಯೇ ನಮ್ಮನ್ನು ನಾವು ಯಾವುದಾದರೂ ಒಂದು ವಿಷಯಕ್ಕೆ ಸಮರ್ಪಿಸಿಕೊಳ್ಳುವುದು ಸಹ ಯೋಗವೇ ಎಂದು ವಿವೇಕಾನಂದ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ವೇದವ್ಯಾಸ ರಾಮಕುಂಜ ಹೇಳಿದರು.



ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ (ಸ್ವಾಯತ್ತ) ಕಾಲೇಜಿನ ವಿವೇಕಾನಂದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದೈಹಿಕ ಶಿಕ್ಷಣ ವಿಭಾಗ ಮತ್ತು ಐಕ್ಯೂಎಸಿ ಘಟಕದ ಸಂಯೋಜನೆಯಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ಆಯೋಜಿಸಲಾದ 'ಯೋಗೋತ್ಸವ' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಪ್ರೊ. ಶ್ರೀಪತಿ ಕಲ್ಲೂರಾಯ ಯೋಗ ಬದುಕಿನ ಅನುಷ್ಠಾನದ ವಿಧಾನ. ಯೋಗಕ್ಕೆ ಪ್ರಾಚೀನ ಭಾರತದಲ್ಲಿ ವಿಶಿಷ್ಟ ಸ್ಥಾನಮಾನ ಇತ್ತು. ಹಿಂದೆ ದಿನನಿತ್ಯದ ಜೀವನದಲ್ಲಿ ಯೋಗ ಪ್ರಮುಖ ಪಾತ್ರ ವಹಿಸಿತ್ತು. ಇಂದು ಯೋಗ ವಿಜ್ಞಾನದ ಮೂಲಕ ಬದುಕು ರೂಪಿಸಿಕೊಳ್ಳಬಹುದು. ಯೋಗಕ್ಕೆ ಮನಸ್ಥಿತಿಯೂ ಅತಿ ಮುಖ್ಯ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ್ ಭಟ್ ಶುಭಾಶಂಸನೆಗೈದರು. ಈ ಸಂದರ್ಭ ವೇದಿಕೆಯಲ್ಲಿ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥೆ ಡಾ. ವಿಜಯ ಸರಸ್ವತಿ ಹಾಗೂ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ರವಿಶಂಕರ್ ಉಪಸ್ಥಿತರಿದ್ದರು.

ಯೋಗಾರೋಗ್ಯ ಮತ್ತು ಯೋಗ ವಸಿಷ್ಠ ಯೋಗ ಥೆರಪಿ ಸಂಸ್ಥೆಯ ನಿರ್ದೇಶಕ ಡಾ. ಮಹಾಬಲ ಭಟ್ ಯೋಗ ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿದರು.

ಎನ್.ಸಿ.ಸಿ. ಕೆಡೆಟ್ ಸ್ಫೂರ್ತಿ ಮತ್ತು ಬಳಗದವರು ಪ್ರಾರ್ಥಿಸಿದರು. ಎನ್.ಸಿ.ಸಿ. ಕೆಡೆಟ್ ಭೂಮಿಕಾ ಸ್ವಾಗತಿಸಿ, ರೋವರ್ ಮತ್ತು ರೇಂಜರ್ ಘಟಕದ ಹರ್ಷಿತ ಟಿ. ವಂದಿಸಿದರು. ಎನ್ನೆಸ್ಸೆಸ್ ಘಟಕದ ನಾಯಕಿ ಕೆ. ಕೃತಿಕಾ ಕಾರ್ಯಕ್ರಮ ನಿರ್ವಹಿಸಿದರು.

> ಏಕಾಗ್ರತೆಯನ್ನು ಪಡೆದುಕೊಳ್ಳಲು ಯೋಗ ಅತ್ಯುತ್ತಮ ಸಾಧನ. ಹಾಗೆಯೇ ನಮ್ಮನ್ನು ನಾವು ಯಾವು ದಾದರೂ ಒಂದು ವಿಷಯಕ್ಕೆ ಸಮರ್ಪಿಸಿ ಕೊಳ್ಳುವುದು ಸಹ ಯೋಗವೇ.
> ■ ವೇದವ್ಯಾಸ ರಾಮಕುಂಜ

ಬುಧವಾರದ ಪಂದ್ಯಗಳು

ಕೊಲಂಬಿಯಾ-ಡಿಆರ್ ಕಾಂಗೊ (ಬೆಳಗ್ಗೆ 7:30)

ಸ್ವಿಟ್ಜರ್ಲೆಂಡ್-ಕೆನಡಾ (ಮಧ್ಯರಾತ್ರಿ 12:30)

ಬೋಸ್ನಿಯಾ ಮತ್ತು ಹರ್ಜೆಗೋವಿನಾ-ಕತಾರ್, (ಮಧ್ಯರಾತ್ರಿ 12:30)

ಮೊರೊಕ್ಕೊ-ಹೈಟಿ, (ಮಧ್ಯರಾತ್ರಿ 3:30)

ಸ್ಕಾಟ್ಲೆಂಡ್-ಬ್ರೆಜಿಲ್, (ಮಧ್ಯರಾತ್ರಿ 3:30)

ಕಿರುಸುದ್ದಿ

ಹಾಕಿ: ಭಾರತಕ್ಕೆ ಪಾಕ್ ವಿರುದ್ಧ ರೋಚಕ ಜಯ

ಹೊಸದಿಲ್ಲಿ: ಕೊನೆ ಕ್ಷಣದ ಥ್ರಿಲ್ ಗೆದ್ದಿರುವ ಭಾರತ ಪುರುಷರ ಹಾಕಿ ತಂಡವು ಪಾಕಿಸ್ತಾನ ತಂಡದ ಸದೆಬಡಿದಿದೆ. ಇಲ್ಲಿ ನಡೆಯುತ್ತಿರುವ ಎಫ್‌ಐಎಚ್ ಹಾಕಿ ಪ್ರೋ ಲೀಗ್ ಪಂದ್ಯಾವಳಿಯ ಲೀಗ್ ಪಂದ್ಯದಲ್ಲಿ 3-2ರಿಂದ ಮಣಿಸಿರುವ ಭಾರತೀಯರು ಭಾರೀ ಮುನ್ನಡೆ ಸಾಧಿಸಿದ್ದಾರೆ. ಮೊದಲನೇ ಕ್ವಾರ್ಟರ್‌ನಲ್ಲಿ 3 ಪೆನಾಲ್ಟಿ ಕಾರ್ನರ್ ಪಡೆದ ಪಾಕಿಸ್ತಾನ ತಂಡ ನದೀಮ್ ಖಾನ್ 14ನೇ ನಿಮಿಷದಲ್ಲಿ ಗೋಲು ಗಳಿಸಿದರು. ಇದರೊಂದಿಗೆ ಪಾಕಿಸ್ತಾನ ಮುನ್ನಡೆ ಪಡೆಯಿತು. ಎರಡನೇ ಕ್ವಾರ್ಟರ್‌ವರೆಗೂ ಪೆನಾಲ್ಟಿ ಕಾರ್ನರ್ ಗಳನ್ನು ಪಡೆದ ಭಾರತ 22ನೇ ನಿಮಿಷಕ್ಕೆ ಮೊದಲ ಗೋಲು ಗಳಿಸಿತು. ಅಭಿಷೇಕ್ ಭಾರತದ ಸ್ಕೋರ್ ಅನ್ನು ಸಮಬಲಕ್ಕೆ ತಂದರು. 2 ನಿಮಿಷ ಬಳಿಕ ನೀಲಕಂಠ ಶರ್ಮ ಮತ್ತೊಂದು ಗೋಲು ಗಳಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಮೂರನೇ ಕ್ವಾರ್ಟರ್‌ನಲ್ಲಿ ಮತ್ತೊಂದು ಗೋಲು ಗಳಿಸಿದ ಭಾರತ ಗೆಲುವಿನತ್ತ ಸಾಗಿತ್ತು. 51.39ನೇ ನಿಮಿಷಕ್ಕೆ ರಾಜೇಂದ್ರ ಮತ್ತೊಂದು ಗೋಲು ಗಳಿಸಿ ಮುನ್ನಡೆಯನ್ನು 4-1ಕ್ಕೆ ಹಿಗ್ಗಿಸಿದರು. ಆದಾಗ್ಯೂ ಅಂತಿಮ ಕ್ವಾರ್ಟರ್‌ನಲ್ಲಿ 52ನೇ ನಿಮಿಷಕ್ಕೊಂದು, 60ನೇ ನಿಮಿಷಕ್ಕೊಂದು ಗೋಲು ಗಳಿಸಿದ ಪಾಕಿಸ್ತಾನ ಅಂತರ 3-4ಕ್ಕೆ ಕುಗ್ಗಿಸಿತು.

ವಿಂಬಲ್ಡನ್ ಚಾಂಪಿಯನ್ ಮಾರ್ಕೆಟಾ ಅಮಾನತು

ದುಬೈ: ಡೋಪಿಂಗ್ ವಿರೋಧಿ ಪರೀಕ್ಷೆಗೆ ನಿರಾಕರಿಸಿದ್ದಕ್ಕಾಗಿ ವಿಂಬಲ್ಡನ್ ಚಾಂಪಿಯನ್ ಮಾರ್ಕೆಟಾ ವೊಂಡ್ರೌಸೋವಾ ಅವರನ್ನು ನಾಲ್ಕು ವರ್ಷಗಳ ಅಮಾನತುಗೊಳಿಸಲಾಗಿದೆ. ಡಿಸೆಂಬರ್ 2025 ರಲ್ಲಿ ತನ್ನ ಮನೆಯಲ್ಲಿ ಸ್ಪರ್ಧೆಯ ಹೊರಗಿನ ಪರೀಕ್ಷಾ ಪ್ರಯತ್ನದ ಸಮಯದಲ್ಲಿ ಡೋಪಿಂಗ್ ನಿಯಂತ್ರಣ ಅಧಿಕಾರಿಯೊಬ್ಬರು ವೊಂಡ್ರೌಸೋವಾ ಮಾದರಿಯನ್ನು ಸಲ್ಲಿಸಲಿಲ್ಲ. 2023 ರಲ್ಲಿ ವಿಂಬಲ್ಡನ್ ಗೆದ್ದ 26 ವರ್ಷದ ಜೆಕ್, ಒತ್ತಡ ಮತ್ತು ಕಳಪೆ ಮಾನಸಿಕ ಆರೋಗ್ಯವು ತನ್ನ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದರು, ಸ್ವತಂತ್ರ ನ್ಯಾಯಮಂಡಳಿಯು ವೊಂಡ್ರೌಸೋವಾ ಅವರ ಹಕ್ಕುಗಳನ್ನು ಮತ್ತು ಪರೀಕ್ಷೆಯನ್ನು ನಡೆಸಲು ಪ್ರಯತ್ನಿಸಿದ ಡೋಪಿಂಗ್ ನಿಯಂತ್ರಣ ಅಧಿಕಾರಿಯ ಸಾಕ್ಷ್ಯವನ್ನು ಪರಿಗಣಿಸಿದೆ.

ಅಮಾನತು ವಾಪಸ್‌ಗೆ ಫೆನ್ಸರ್ ಭವಾನಿ ಮನವಿ

ಹೊಸದಿಲ್ಲಿ: ಏಷ್ಯನ್ ಫೆನ್ಸಿಂಗ್ ಚಾಂಪಿಯನ್‌ಶಿಪ್‌ನ ತಂಡದ ಈವೆಂಟ್‌ನಲ್ಲಿ ತನ್ನ ವರ್ತನೆಗೆ ಬೇಷರತ್ ಕ್ಷಮೆಯಾಚಿಸಿರುವ ಭಾರತದ ಪ್ರಮುಖ ಫೆನ್ಸರ್ ಭವಾನಿ ದೇವಿ, ತಮ್ಮ ಮೇಲೆ ವಿಧಿಸಲಾದ ಎರಡು ತಿಂಗಳ ಅಮಾನತು ಶಿಕ್ಷೆಯನ್ನು ಮರುಪರಿಶೀಲಿಸುವಂತೆ ಮನವಿ ಮಾಡಿದ್ದಾರೆ. ಕೂಟವೊಂದರಲ್ಲಿ ಅನುಚಿತ ವರ್ತನೆಗೈದಿರುವ ನಿಟ್ಟಿನಲ್ಲಿ, ಭವಾನಿಗೆ ಕಪ್ಪು ಕಾರ್ಡ್ ತೋರಿಸಲಾಯಿತು, ಇದರ ಪರಿಣಾಮವಾಗಿ ಅನ್ವಯವಾಗುವ ಶಿಸ್ತಿನ ನಿಯಮಗಳ ಅಡಿಯಲ್ಲಿ ಎರಡು ತಿಂಗಳ ಅಮಾನತು ವಿಧಿಸಲಾಯಿತು. ವಿಷಯದ ಗಂಭೀರತೆಯನ್ನು ಗುರುತಿಸಿ, ಭವಾನಿ ದೇವಿ ಅವರು ಕ್ಷಮೆಯಾಚಿಸಿದ್ದಾರೆ ಮತ್ತು ಕ್ರೀಡೆಯ ನಿಯಮಗಳು, ಅಧಿಕಾರಿಗಳು ಮತ್ತು ಮೌಲ್ಯಗಳ ಬಗ್ಗೆ ತಮ್ಮ ಆಳವಾದ ಗೌರವವನ್ನು ವ್ಯಕ್ತಪಡಿಸಿದ್ದಾರೆ ಎಂದು ಫೆನ್ಸಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ (ಎಫ್‌ಎಐ) ಮಾಧ್ಯಮ ಪ್ರಕಟಣೆ ತಿಳಿಸಿದೆ.

ಶೇ. 60ರಷ್ಟು ಕಡಿಮೆ ವೆಚ್ಚದಲ್ಲಿ ಕಾಮನ್‌ವೆಲ್ತ್

ಹೊಸದಿಲ್ಲಿ: ಅಹಮದಾಬಾದ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್ ಕೂಟದಲ್ಲಿ 17 ಕ್ರೀಡೆಗಳು ಇರಲಿವೆ. ಹಿಂದಿನ ಮಹಾಕೂಟಗಳಲ್ಲಿ ಖರ್ಚು ಮಾಡಲಾಗಿರುವ ಮೊತ್ತಕ್ಕಿಂತಲೂ ಶೇ. 60ರಷ್ಟು ಕಡಿಮೆ ವೆಚ್ಚದಲ್ಲಿ ಕೂಟ ನಡೆಯಲಿದೆ. 2032ರ ಒಲಿಂಪಿಕ್ಸ್ ಆಯೋಜನೆಗೂ ಮುನ್ನ ಭಾರತ 2030ರ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಆತಿಥ್ಯ ನೀಡಲಿದೆ. ಅಹಮದಾಬಾದ್ ಇದಕ್ಕೆ ಹೋಸ್ಟಿಂಗ್ ಸಿಟಿಯಾಗಿ ಆಯ್ಕೆಯಾಗಿದೆ. ತಯಾರಿ ಕುರಿತಂತರ ಮಾತನಾಡಿರುವ ಕಾಮನ್‌ವೆಲ್ತ್ ಗೇಮ್ಸ್ ಸಿಇಒ ಕೇಟೀ ಸ್ಯಾಡ್ಲೀರ್ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಕೂಟಕ್ಕೆ 4 ವರ್ಷಗಳಿರುವಾಗಲೇ ನಾವು ಸಿದ್ಧತೆಗಳನ್ನು ಶುರು ಮಾಡಿಕೊಂಡಿದ್ದೇವೆ. ಹೋಸ್ಟಿಂಗ್ ಮಾದರಿಯೊಂದನ್ನು ಸಿದ್ಧಪಡಿಸಲಾಗಿದೆ. ಈ ಮಾದರಿಯ ಪ್ರಕಾರ ಹಿಂದಿನ ಕ್ರೀಡಾಕೂಟಗಳಿಗಿಂತಲೂ ಕಡಿಮೆ ಮೊತ್ತದಲ್ಲಿ ನಡೆಸಲಾಗುವುದು ಎಂದಿದ್ದಾರೆ.

ಶ್ರೀಲಂಕಾಗೆ ಗೆಲುವು

ಬ್ರಿಸ್ಟಾಲ್(ಇಂಗ್ಲೆಂಡ್): ತಂಡದ ಸಾಂಘಿಕ ಬೌಲಿಂಗ್ ದಾಳಿ ಮತ್ತು ನಾಯಕಿ ಚಮಾರಿ ಅನಂತಪ್ರಭು ಅವರ ಸ್ಫೋಟಕ ಶತಕದ ನೆರವಿನೊಂದಿಗೆ ಮಿಂಚಿರುವ ಶ್ರೀಲಂಕಾ ಮಹಿಳೆಯರ ತಂಡವು ಇಲ್ಲಿ ನಡೆಯುತ್ತಿರುವ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯ ತನ್ನ ಎರಡನೇ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ.

ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆಹ್ವಾನ ಕೊಟ್ಟಿತು. ಗ್ಯಾಬಿ ಲೇವಿಸ್ ಅವರ 59 ರನ್ ಬ್ಯಾಟಿಂಗ್ ಆಸರೆ ಪಡೆದ ಐರ್ಲೆಂಡ್ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 130 ರನ್ ಗಳಿಸಿತು. ಶ್ರೀಲಂಕಾ ಪರ ಮಿಥಾಲಿ, ಕುಮಾರಿ, ಚಮಾರಿ ಮತ್ತು ಸಿಲ್ವಾ ತಲಾ ಒಂದು ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಶ್ರೀಲಂಕಾ ಯಾವುದೇ ಅಡೆತಡೆ ಎದುರಿಸದರೆ, ಒಂದು ವಿಕೆಟ್ ಕಳೆದುಕೊಂಡು 15.1 ಓವರ್‌ಗಳಲ್ಲಿ 134 ರನ್ ಗಳಿಸಿ ಪಂದ್ಯ ಮುಗಿಸಿತು. ನಾಯಕಿ ಚಮಾರಿ(106) ಸ್ಫೋಟಕ ಶತಕ ಬಾರಿಸಿದರು.



18 ಗೋಲು

ಫಿಫಾ ವಿಶ್ವಕಪ್‌ನಲ್ಲಿ 18 ಗೋಲು ಬಾರಿಸಿ ಲಿಯೋನೆಲ್ ಇತಿಹಾಸ

ಕೈಲಿಯನ್ ಎಂಬಾಪ್ಪೆ ದ್ವಿಗೋಲು, ಫ್ರಾನ್ಸ್ ಗೆ ಸತತ 2ನೇ ಗೆಲುವು

ಮೆಸ್ಸಿ ಮಹಾದಾಖಲೆ!

ಆರ್ಲಿಂಗ್ಟನ್: ಇನ್ಮುಂದೆ ಲಿಯೋ ಅಭಿಮಾನಿಗಳೆಲ್ಲರೂ, ಫುಟ್‌ಬಾಲ್ ವಿಶ್ವಕಪ್ ಇತಿಹಾಸದಲ್ಲಿ ಲಿಯೋನೆಲ್ ಮೆಸ್ಸಿಗಿಂತಲೂ ಹೆಚ್ಚು ಗೋಲು ಗಳಿಸಿದ ಆಟಗಾರರೆ ಇಲ್ಲ. ನನ್ನ ನೆಚ್ಚಿನ ಆಟಗಾರನೇ ಬೆಸ್ಟ್ ಎಂದೆಲ್ಲಾ ಹೇಳಿಕೊಳ್ಳಬಹುದು. ಏಕೆಂದರೆ 18 ಗೋಲು ಪೂರೈಸಿಕೊಂಡಿರುವ ಮೆಸ್ಸಿ ಫುಟ್‌ಬಾಲ್‌ನಲ್ಲಿ ಮಾಡಬಹುದಾದ ಅತ್ಯುನ್ನತ ಸಾಧನೆಯನ್ನೇ ಸೋಮವಾರ ಮಾಡಿಬಿಟ್ಟರು! ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಅಭಿಮಾನಿಗಳಿಗೆ ಮತ್ತೊಮ್ಮೆ ಹಬ್ಬ. ಹಾಲಿ ಚಾಂಪಿಯನ್ ಅರ್ಜೆಂಟೀನಾ ಮತ್ತು ಹಾಲಿ ರನ್ನರ್-ಅಪ್‌ಗ ಫ್ರಾನ್ಸ್ ಎದುರು-ಬದುರು ಆಗದಿದ್ದರೂ ತಮ್ಮ ತಮ್ಮ ಪಂದ್ಯದಲ್ಲಿ ವಿಶ್ವ ಕ್ರೀಡಾಪಟುಗಳನ್ನು ರಂಜಿಸಿದವು. ಅರ್ಜೆಂಟೀನಾದಲ್ಲಿ ಲಿಯೋನೆಲ್ ಮೆಸ್ಸಿ, ಫ್ರಾನ್ಸ್‌ನಲ್ಲಿ ಎಂಬಾಪ್ಪೆ. ಹೀಗೆ ಸ್ಟಾರ್‌ಗಳು ಮಿಂಚುತ್ತಿದ್ದರೆ, ಅಭಿಮಾನಿಗಳು ಖುಷಿಯಲ್ಲಿ ತೇಲಾಡುತ್ತಿದ್ದರು.

2-0
ಅರ್ಜೆಂಟೀನಾ ಆಸ್ಟ್ರಿಯಾ

ನಾಕೌಟ್‌ಗೆ ಹಾಲಿ ಚಾಂಪಿಯನ್ಸ್!

ಆರ್ಲಿಂಗ್ಟನ್: ಫುಟ್‌ಬಾಲ್ ದಂತಕಥೆ ಲಿಯೋನೆಲ್ ಮೆಸ್ಸಿ ವಿಶ್ವಕಪ್ ಇತಿಹಾಸದ ಗರಿಷ್ಠ ಗೋಲುಗಳ ಹೊಸ ದಾಖಲೆ ನಿರ್ಮಿಸಿದರೆ, ಹಾಲಿ ಚಾಂಪಿಯನ್ ಅರ್ಜೆಂಟೀನಾ ಆಸ್ಟ್ರಿಯಾ ವಿರುದ್ಧ 2-0 ಅಂತರದ ಗೆಲುವು ಸಾಧಿಸಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು.

ಜರ್ಮನಿಯ ಮಿರೋಸ್ಲಾವ್ ಕ್ಲೋಸೆ ಅವರ 16 ಗೋಲುಗಳ ದಾಖಲೆಯನ್ನು ಸಮಗೊಳಿಸಿಕೊಂಡಿದ್ದ ಮೆಸ್ಸಿ, ಈ ಪಂದ್ಯದಲ್ಲಿ ಎರಡು ಗೋಲುಗಳನ್ನು ದಾಖಲಿಸುವ ಮೂಲಕ ತನ್ನ ವಿಶ್ವಕಪ್ ಗೋಲುಗಳ ಸಂಖ್ಯೆಯನ್ನು 18ಕ್ಕೆ ಏರಿಸಿದರು. ಇದರೊಂದಿಗೆ ವಿಶ್ವಕಪ್ ಇತಿಹಾಸದ ಅಗ್ರ ಗೋಲುಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು.ಪಂದ್ಯದ 9ನೇ ನಿಮಿಷದಲ್ಲೇ ಪೆನಾಲ್ಟಿ ಅವಕಾಶ ಸಿಕ್ಕಿದ್ದರೂ ಮೆಸ್ಸಿ ಗುರಿ ತಪ್ಪಿಸಿದರು. ಆದರೆ 38ನೇ ನಿಮಿಷದಲ್ಲಿ ಥಿಯಾಗೊ ಅಲ್ಮಾಡಾ ಮತ್ತು ಫಾಕುಂಡೊ ಮೆಡಿನಾ ರೂಪಿಸಿದ ಸುಂದರ ಚಲನೆಯ ಅಂತ್ಯದಲ್ಲಿ ಮೆಸ್ಸಿ ಗೋಲು ಬಾರಿಸಿ ಅರ್ಜೆಂಟೀನಾಗೆ ಮುನ್ನಡೆ ನೀಡಿದರು.

ಮೆಸ್ಸಿ ಸಾಧನೆಗಳು: ಹೆಚ್ಚುವರಿ ಸಮಯದ ಕೊನೆಯ ಕ್ಷಣಗಳಲ್ಲಿ ಮತ್ತೊಮ್ಮೆ ಮಿಂಚಿದ ಮೆಸ್ಸಿ, ತನ್ನ ಮೊದಲ ಪ್ರಯತ್ನವನ್ನು ಗೋಲ್‌ಕೀಪರ್ ಅಲೆಕ್ಸಾಂಡರ್ ಶ್ಲಾಗರ್ ತಡೆದ ಬಳಿಕ ರೀಬೌಂಡ್ ಚೆಂಡನ್ನು ಜಾಲಕ್ಕಟ್ಟಿ ದಾಖಲೆಯ ಗೋಲಿನ ಸಂಭ್ರಮ ಆಚರಿಸಿದರು. ಇಷ್ಟೇ ಅಲ್ಲದೆ, ಮೆಸ್ಸಿ ಸತತ ಆರು ವಿಶ್ವಕಪ್ ಪಂದ್ಯಗಳಲ್ಲಿ ಗೋಲು ಗಳಿಸಿದ ವಿಶ್ವದ ಕೇವಲ ಮೂರನೇ ಆಟಗಾರರಾದರು. ಈ ಹಿಂದೆ ಜಸ್ಟ್ ಫಾಂಟೈನ್ ಮತ್ತು ಜೈರ್ಜಿನ್ಹೋ ಮಾತ್ರ ಈ ಸಾಧನೆ ಮಾಡಿದ್ದರು.

- ಲಿಯೋನೆಲ್ ಮೆಸ್ಸಿಯಿಂದಲೇ 2 ಗೋಲು
- ಮೆಸ್ಸಿ ಗೋಲುಗಳ ಸಂಖ್ಯೆ 18ಕ್ಕೆ ಏರಿಕೆ
- ಮಿರೋಸ್ಲಾವ್ ದಾಖಲೆ ಹಿಂದಿಕ್ಕಿದ ಮೆಸ್ಸಿ
- ಅರ್ಜೆಂಟೀನಾ ನಾಕೌಟ್ ಹಂತಕ್ಕೆ ಅರ್ಹತೆ



ಅಲ್ಜೇರಿಯಾ, ನಾರ್ವೆಗೆ ಗೆಲುವು

ಇರ್ಲಿಂಗ್ ಹಾಲೆಂಡ್ ಅವರ ದ್ವಿಗೋಲು ಪ್ರದರ್ಶನದೊಂದಿಗೆ ನಾರ್ವೆ ತಂಡವು ಸೆನೆಗಲ್ ಅನ್ನು 3-2ರಿಂ ಸೋಲಿಸಿತು. ಪಂದ್ಯದಲ್ಲಿ ಮೊದಲಿನಿಂದಲೂ ರಕ್ಷಣಾ ಆಟಗಾರರು ಉತ್ತಮ ಪ್ರದರ್ಶನ ನೀಡುತ್ತಾ ಬಂದರು. 43ನೇ ನಿಮಿಷದಲ್ಲಿ ಮಾರ್ಕಸ್ ಪಿಡರ್‌ಸೆನ್ ಗೋಲು ಗಳಿಸಿ ಫ್ರಾನ್ಸ್‌ಗೆ ಮುನ್ನಡೆ ತಂದರು. ಐದು ನಿಮಿಷ ಬಳಿಕ 48ನೇ ನಿಮಿಷ ಹಾಲೆಂಡ್ ಮತ್ತೊಂದು ಗೋಲು ಗಳಿಸಿ ಮುನ್ನಡೆಯನ್ನು 2ಕ್ಕೆ ವಿಸ್ತರಿಸಿದರು. 53ನೇ ನಿಮಿಷದ ವೇಳೆ ಇಸ್ಮೈಲಾ ಸಾರ್ ಸೆನೆಗಲ್ ಪರ ಮೊದಲ ಗೋಲು ಗಳಿಸಿದರು. ಆದರೆ 58ನೇ ನಿಮಿಷದ ವೇಳೆ ಮಿಂಚಿದ ಹಾಲೆಂಡ್ ಮತ್ತೊಂದು ಗೋಲು ಗಳಿಸಿ ಪಂದ್ಯ ಕಸಿದರು. ಸೆನೆಗಲ್ ಪರ 90+3ನೇ ನಿಮಿಷಕ್ಕೆ ಸಾರ್ ಮತ್ತೊಂದು ಗೋಲ್ ಗಳಿಸಿ ಅಂತರ ಕುಗ್ಗಿಸಿದರು.

ಅತ್ತ ಮತ್ತೊಂದು ಪಂದ್ಯದಲ್ಲಿ ಜಾರ್ಡನ್ ತಂಡವನ್ನು ಅಲ್ಜೇರಿಯಾ ಮಣಿಸಿತು. ಮೊದಲನೇ ಗೋಲು ಎದುರಾಳಿ ಗಳಿಸಿದ್ದಾದರೂ ಹೋಪ್ ಬಿಡದ ಅಲ್ಜೇರಿಯಾ 69ನೇ ನಿಮಿಷದಲ್ಲಿ ಕಂಬ್ಯಾಕ್ ಮಾಡಿತು. ಪಂದ್ಯದ 36ನೇ ನಿಮಿಷಕ್ಕೆ ನಿಝಾರ್ ಅಲ್ ಗೋಲು ಗಳಿಸಿ ಜಾರ್ಡನ್‌ಗೆ ಮುನ್ನಡೆ ತಂದುಕೊಟ್ಟರು. ನಾಧೀರ್ ಅವರ ಕರಾರುವಾಕ್ ಪ್ರದರ್ಶನದ ಮೂಲಕ ಅಲ್ಜೇರಿಯಾ 69ನೇ ನಿಮಿಷದಲ್ಲಿ ಕಂಬ್ಯಾಕ್ ಮಾಡಿತು. ಅಮಿನ್ 82ನೇ ನಿಮಿಷದಲ್ಲಿ ಭರ್ಜರಿ ಗೋಲೊಂದನ್ನು ಬಾರಿಸಿ ಪಂದ್ಯ ತಿರುಗಿಸಿದರು.



ಮಳೆ ಮಧ್ಯೆಯೂ ಎಂಬಾಪ್ಪೆ ಮ್ಯಾಜಿಕ್

ಫಿಲಡೆಲ್ಫಿಯಾ: ಕೈಲಿಯನ್ ಎಂಬಾಪ್ಪೆ ಅವರ ಎರಡು ಗೋಲುಗಳ ಅದ್ಭುತ ಪ್ರದರ್ಶನದ ನೆರವಿನಿಂದ ಫ್ರಾನ್ಸ್ ತಂಡ ಇರಾಕ್ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಮಳೆ ಯಿಂದಾಗಿ ಎರಡು ಗಂಟೆಗಳಿಗೂ ಅಧಿಕ ಕಾಲ ಪಂದ್ಯ ಸ್ಥಗಿತಗೊಂಡಿದ್ದರೂ, ಫ್ರಾನ್ಸ್ ತನ್ನ ಪ್ರಾಬಲ್ಯ ಮೆರೆದಿತು.

ಎಂಬಾಪ್ಪೆ ದಾಖಲೆ: ಬ್ಯಾಲನ್ ಡಿ ಓರ್ ವಿಜೇತ ಉಸ್ಮಾನ್ ಡೆಂಬೆಲೆ ಒಂದು ಗೋಲು ದಾಖಲಿಸಿ ಫ್ರಾನ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ತನ್ನ 100ನೇ ಅಂತಾರಾಷ್ಟ್ರೀಯ ಪಂದ್ಯವಾಡಿದ ಎಂಬಾಪ್ಪೆ, 14ನೇ ಮತ್ತು 54ನೇ ನಿಮಿಷಗಳಲ್ಲಿ ಗೋಲು ಬಾರಿಸಿದರು. ಹ್ಯಾಟ್ರಿಕ್ ಅವಕಾಶವೂ ಎಂಬಾಪ್ಪೆಗೆ ಸಿಕ್ಕಿತಾದರೂ ಕೊನೆಯ ಕ್ಷಣದಲ್ಲಿ ಗುರಿ ತಪ್ಪಿಸಿಕೊಂಡರು. ಆ ಮೂಲಕ ಕಿಲಿಯನ್ ವಿಶ್ವಕಪ್‌ನಲ್ಲಿ ತನ್ನ ಒಟ್ಟು ಗೋಲುಗಳ ಸಂಖ್ಯೆಯನ್ನು 16ಕ್ಕೆ ಏರಿಸಿದರು. ಈ ಮೂಲಕ ಜರ್ಮನಿಯ ಮಿರೋಸ್ಲಾವ್ ಕ್ಲೋಸೆ ಅವರ ದಾಖಲೆಯನ್ನು ಸರಿಗಟ್ಟಿದ ಎಂಬಾಪ್ಪೆ, ವಿಶ್ವಕಪ್ ಇತಿಹಾಸದ ಎರಡನೇ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಜಂಟಿ ಸ್ಥಾನಕ್ಕೇರಿದರು. ಈಗ ಅವರು ಅರ್ಜೆಂಟೀನಾದ ಲಿಯೋನೆಲ್ ಮೆಸ್ಸಿ (18) ದಾಖಲೆಯ ಬೆನ್ನಟ್ಟುತ್ತಿದ್ದಾರೆ.

ಪಂದ್ಯಕ್ಕೆ ಮಳೆ ಅಡ್ಡಿ: ಮೊದಲಾರ್ಧದ ಅಂತ್ಯದಲ್ಲಿ ಭಾರೀ ಮಳೆ ಹಾಗೂ ಗುಡುಗು-ಮಿಂಚಿನ ಕಾರಣ ಪಂದ್ಯ ಸುಮಾರು ಎರಡು ಗಂಟೆಗಳ ಕಾಲ ಸ್ಥಗಿತಗೊಂಡಿತು. ಪ್ರೇಕ್ಷಕರನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲಾಯಿತು. ವಿರಾಮದ ಬಳಿಕವೂ ಫ್ರಾನ್ಸ್‌ನ ದಾಳಿಯ ಆಟ ಮುಂದುವರಿಯಿತು.



ಮುಖ್ಯಾಂಶಗಳು

- ಫ್ರಾನ್ಸ್ 3-0 ಇರಾಕ್
- ಕೈಲಿಯನ್ ಎಂಬಾಪ್ಪೆ 2 ಗೋಲು
- ಉಸ್ಮಾನ್ ಡೆಂಬೆಲೆ 1 ಗೋಲು

ಗೋಲು

- 14ನೇ ನಿಮಿಷ: ಕೈಲಿಯನ್ ಎಂಬಾಪ್ಪೆ
- 54ನೇ ನಿಮಿಷ: ಕೈಲಿಯನ್ ಎಂಬಾಪ್ಪೆ
- 82ನೇ ನಿಮಿಷ: ಉಸ್ಮಾನ್ ಡೆಂಬೆಲೆ

ಮರಳಿ ಗೂಡಿಗೆ ರಿಷಭ್ ಪಂತ್

- ಕುಲ್ದೀಪ್ ಈಗ ಲಖನೌಗೆ
- ಐಪಿಎಲ್ ಮುಗಿದ ಒಂದೇ ತಿಂಗಳಲ್ಲಿ ಟ್ರೇಡ್!

ಹೊಸದಿಲ್ಲಿ: ವಿಕೆಟ್-ಕೀಪರ್, ಬ್ಯಾಟರ್ ರಿಷಭ್ ಪಂತ್ ತಮ್ಮ ತವರು ತಂಡ ದಿಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮರಳಿದ್ದಾರೆ. ಕುಲ್ದೀಪ್ ಯಾದವ್ ತಮ್ಮ ತವರೂರಿನ ಫ್ರಾಂಚೈಸಿ ಲಖನೌ ಸೂಪರ್ ಜೇಂಟ್ಸ್ ಸೇರಿಕೊಂಡಿದ್ದಾರೆ. ಐಪಿಎಲ್ ಮುಗಿದ ಒಂದೇ ತಿಂಗಳ ಒಳಗೆ ಐತಿಹಾಸಿಕ ಟ್ರೇಡ್ ಒಂದು ನಡೆದಿದೆ.

ಎರಡು ಪಂದ್ಯಾವಳಿಗಳಲ್ಲಿ ನಿರಂತರ ವೈಫಲ್ಯ ಅನುಭವಿಸಿದ್ದ ತುಟ್ಟಿ ಆಟಗಾರ ರಿಷಭ್ ಪಂತ್ ಎಲ್ಲಿ ಶುರು ಮಾಡಿದ್ದರೋ ಅಲ್ಲೆ ಬಂದಿದ್ದಾರೆ. ಕೆಲವು ದಿನಗಳಿಂದ ಓಡಾಡುತ್ತಿದ್ದ ವರದಿಗಳಂತೆ ಒಪ್ಪಂದ ಮಾಡಿಕೊಂಡಿರುವ ದಿಲ್ಲಿ ಹಾಗೂ ಲಖನೌ ಫ್ರಾಂಚೈಸಿಗಳು ಅಧಿಕೃತ ಘೋಷಣೆ ಮಾಡಿದ್ದಾರೆ. ತಮ್ಮ ಸಂಬಳದಲ್ಲಿ ಕಡಿತ ಕಂಡಿರುವ ರಿಷಭ್ ಪಂತ್ ಈಗ ದುಬಾರಿ ಆಟಗಾರರಾಗಿ ಆಡುವುದಿಲ್ಲ. 15 ಕೋಟಿ ರೂ.ಗೆ ಅವರನ್ನು ದಿಲ್ಲಿ ಟ್ರೇಡ್ ಮಾಡಿಕೊಂಡಿದೆ. ಮತ್ತೊಂದೆಡೆ ಇಷ್ಟು ದಿನ ದಿಲ್ಲಿಯಲ್ಲೇ ಆಡಿದ್ದ ಚೈನಾಮನ್ ಬೌಲರ್ ಕುಲ್ದೀಪ್ ಯಾದವ್ 13.5 ಕೋಟಿ ರೂ.ಗೆ ಲಖನೌ ಸೂಪರ್ ಜೇಂಟ್ಸ್ ಸೇರಿಕೊಂಡಿದ್ದಾರೆ.

ಕೆ.ಎಲ್. ರಾಹುಲ್ ಅವರಿಗೆ ನಾಯಕತ್ವ ಸಿಗುವ ಎಲ್ಲಾ ಲಕ್ಷಣಗಳು ಕಾಣಿಸುತ್ತಿವೆ. ಅದರಂತೆ ಮ್ಯಾನೇಜ್ಮೆಂಟ್‌ಗೆ ಸೌರವ್ ಗಂಗೂಲಿ ಮತ್ತು ಯುವರಾಜ್ ಕೂಡ ಬರಲಿದ್ದಾರೆ ಎಂಬ ಮಾತು ಹರಿದಾಡುತ್ತಲೇ ಇದೆ. ಆದರೆ ಇನ್ನೂ ಖಚಿತವಾಗಿಲ್ಲ. ಪಂತ್ 2016ರಲ್ಲಿ ದಿಲ್ಲಿ ತಂಡದ ಮೂಲಕವೇ ಐಪಿಎಲ್‌ಗೆ ಲಗ್ಗೆ ಹಾಕಿದ್ದರು. 111 ಪಂದ್ಯದಲ್ಲಿ ದಿಲ್ಲಿ ತಂಡವನ್ನು ಪ್ರತಿನಿಧಿಸಿರುವ ಅವರು, ಆ ಫ್ರಾಂಚೈಸಿ ಪರ ಅತಿ ಹೆಚ್ಚು ಪಂದ್ಯ ಆಡಿದ ಆಟಗಾರ ಅನಿಸಿಕೊಂಡಿದ್ದಾರೆ.

ಐರ್ಲೆಂಡ್-ಇಂಗ್ಲೆಂಡ್ ಸರಣಿ: ನಿತೀಶ್ ಔಟ್, ಸೂರ್ಯಾಂಶ್‌ಗೆ ಅವಕಾಶ

ನೀಲಿ ಜೆರ್ಸಿ ಪಡೆದ ಸೂರ್ಯವಂಶಿ

ಮುಂಬೈ: ಐರ್ಲೆಂಡ್ ಹಾಗೂ ಇಂಗ್ಲೆಂಡ್ ಸರಣಿಗಳಿಗಾಗಿ ಭಾರತ ಕ್ರಿಕೆಟ್ ತಂಡ ವಿಮಾನ ಹತ್ತಿದ್ದಾಗಿದೆ. ಪಂದ್ಯಗಳ ಆರಂಭಕ್ಕೂ ಮುನ್ನವೇ ಇತಿಹಾಸದಲ್ಲಿ ಕೆಲವೊಮ್ಮೆ ಮಾತ್ರ ನಡೆಯುವ ವಿಸ್ಮಯದಂತೆ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ನೀಲಿ ಜೆರ್ಸಿ ಪಡೆದರು. ಈ ತುಣುಕನ್ನು ಹಂಚಿಕೊಂಡಿರುವ ಬಿಸಿಸಿಐ ವಿಜೃಂಭಣೆಯಿಂದ ಆಚರಿಸಿದೆ. ಇತಿಹಾಸದ ಪುಟಗಳಲ್ಲಿ ಸಚಿನ್ ತೆಂಡೂಲ್ಕರ್ ಅತಿ ಕಿರಿಯರಾಗಿ ಅಂತಾರಾಷ್ಟ್ರೀಯ ಪಂದ್ಯವನ್ನಾಡಿದ್ದರು. ಈ ದಾಖಲೆಯನ್ನು ಅಳಿಸಲು 15 ವರ್ಷದ ವೈಭವ್ ಸೂರ್ಯವಂಶಿ ಸಜ್ಜಾಗಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಮರಳಿರುವ ದೃಷ್ಟಿಯಿಂದ ಅಭ್ಯಾಸ ನಡೆಸಲು ಭಾರತ ತಂಡ ಐರ್ಲೆಂಡ್ ಮತ್ತು ಇಂಗ್ಲೆಂಡ್ ಜತೆಗೆ ಟಿ20 ಸರಣಿಗಳನ್ನಾಡಲು ಪ್ರವಾಸ ಮಾಡಿದೆ. ಮಂಗಳವಾರದಂದು ತಂಡವು ವಿಮಾನದ ಮೂಲಕ ಪ್ರಯಾಣಿಸಿತು. ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಹೊಸ ತಂಡ ಪ್ರಕಟಿಸಿರುವ ಬಿಸಿಸಿಐ ವೈಭವ್ ಸೂರ್ಯವಂಶಿಗೆ ಅವಕಾಶ ನೀಡಿದೆ. ಜೂನ್ 26 ಮತ್ತು 28ರಂದು ಭಾರತ ಐರ್ಲೆಂಡ್‌ನೊಂದಿಗೆ ಪಂದ್ಯವನ್ನಾಡಲಿದೆ, ಬಳಿಕ ಇಂಗ್ಲೆಂಡ್‌ಗೆ ತೆರಳಲಿದೆ.



ನಿತೀಶ್ ಬದಲಿಗೆ ಶೇಡ್ಗೆ

ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಗಾಯಗೊಂಡಿರುವ ನಿಟ್ಟಿನಲ್ಲಿ ಅವರ ಬದಲಿಗೆ ಸೂರ್ಯಾಂಶ್ ಶೆಡ್ಗೆ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಇತ್ತೀಚೆಗಷ್ಟೆ ನಡೆದ ಭಾರತ ಎ, ಅಫ್ಘಾನಿಸ್ತಾನ ಎ ಮತ್ತು ಶ್ರೀಲಂಕಾ ಎ ತಂಡಗಳ ನಡುವಿನ ತ್ರಿಕೋನ ಸರಣಿಯಲ್ಲಿ ಅವರು ತಂಡದ ಭಾಗವಾಗಿದ್ದರು. ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡದ ಪರ ಉತ್ತಮ ಪ್ರದರ್ಶನ ನೀಡಿದ್ದ ಶೇಡ್ಗೆ ಫಿನಿಶರ್ ಆಗಿ ಕಾರ್ಯ ನಿರ್ವಹಿಸುತ್ತಾರೆ. ಅಫ್ಘನ್ ವಿರುದ್ಧ ನಡೆದಿದ್ದ ಕೊನೆ ಏಕದಿನ ಪಂದ್ಯದ ವೇಳೆ ನಿತಿಶ್ ಕುಮಾರ್ ಗಾಯಗೊಂಡಿದ್ದರು.





ಕ್ರಿಕೆಟಿಗ ರೋಹಿತ್ ಶರ್ಮ ಮತ್ತು ಹಾಕಿ ಆಟಗಾರ್ತಿ ಸವಿತಾ ಪುನಿಯಾ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿದರು.

ಸ್ಕಾಟ್ಲೆಂಡ್ ವಿರುದ್ಧ ಗೆದ್ದ ನ್ಯೂಜಿಲೆಂಡ್

ಲೀಡ್ಸ್: ಮೊದಲ ಪಂದ್ಯದಲ್ಲಿ ಸೋತ ನಂತರ ಕಳೆದ ಪಂದ್ಯದಲ್ಲಿ ಜಯ ಸಾಧಿಸಿರುವ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಸ್ಕಾಟ್ಲೆಂಡ್ ತಂಡವನ್ನು ಮಣಿಸಿದೆ. ಡರ್ಸಿ ಕಾರ್ಟರ್ ಅವರ ಸ್ಫೋಟಕ ಬ್ಯಾಟಿಂಗ್ ಹೊರತಾಗ್ಯೂ ಸೋತ ಸ್ಕಾಟ್ಲೆಂಡ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 131 ರನ್ ಗಳಿಸಿತು. ಡರ್ಸಿ 52 ಬಾಲ್‌ಗಳಲ್ಲಿ ಔಟಾಗದೆ 72 ರನ್ ಗಳಿಸಿದರು. ಸಾರಾ ಬ್ರೇಸ್ 25 ರನ್ ಗಳಿಸಿದರು. ನ್ಯೂಜಿಲೆಂಡ್ ಪರ ಮೀಲಿ ಕೇರ್ 17 ರ‌ನ್‌ಗೆ 3 ವಿಕೆಟ್ ಪಡೆದರೆ, ಸೋಫಿ ಡಿವೈನ್ 19 ರನ್‌ಗೆ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 18.2 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 132 ರನ್ ಗಳಿಸಿ ಪಂದ್ಯ ಗೆದ್ದುಕೊಂಡಿದೆ. ಇಝಿ ಶಾರ್ಪ್ 43 ಬಾಲ್‌ಗಳಲ್ಲಿ 68 ರನ್ ಗಳಿಸಿದರು. ಬ್ರೂಕ್ 38 ಬಾಲ್‌ಗಳಲ್ಲಿ 41 ರನ್ ಗಳಿಸಿದರು. ಸ್ಕಾಟ್ಲೆಂಡ್ ಪರ ಕ್ಯಾಥರೀನ್ 13 ರನ್‌ಗೆ 2, ಸ್ಲಾಟರ್ 22ಕ್ಕೆ 2 ವಿಕೆಟ್ ಕಿತ್ತರು.

ಇಂದು ಇಂಗ್ಲೆಂಡ್-ವಿಂಡೀಸ್ ಪಂದ್ಯ: ಬುಧವಾರದ ಏಕೈಕ ಪಂದ್ಯದಲ್ಲಿ ಆತಿಥ್ಯ ಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ತಂಡಗಳು ಎದುರಾಗಲಿವೆ.

ಗುಲ್ಬರ್ಗಾ ಪುನರಾಗಮನ


ಮೈಸೂರು: ಸೋಮವಾರ ರಾತ್ರಿ ಪಂದ್ಯದಲ್ಲಿ ಸೋತಿರುವ ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡವು ಮಂಗಳವಾರದ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಮಹಾರಾಜ ಟ್ರೋಫಿಯಲ್ಲಿ ಯುವಕರು ಮತ್ತು ಸ್ಟಾರ್‌ಗಳು ಮಿಂಚುತ್ತಿದ್ದು ತಂಡಗಳ ನಡುವಿನ ಪೈಪೋಟಿ ದುಪ್ಪಟ್ಟುಗೊಂಡಿದೆ.

ನಾಯಕ ಮನೀಷ್ ಪಾಂಡೆ ಅವರ ಭರ್ಜರಿ ಅರ್ಧಶತಕದ ಹೊರತಾಗ್ಯೂ ಸೋಮವಾರದಂದು ಗುಲ್ಬರ್ಗಾ ಕೋಸ್ಟಲ್ ಮಂಗಳೂರು ತಂಡದೊಂದಿಗೆ ಸೋತಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಗುಲ್ಬರ್ಗಾ 19.5 ಓವರ್‌ಗಳಲ್ಲಿ 177 ರನ್‌ಗಳಿಗೆ ಆಲೌಟ್ ಆಗಿತ್ತು. ಮನೀಷ್ ಪಾಂಡೆ 34 ಬಾಲ್‌ಗಳಲ್ಲಿ 70 ರನ್ ಗಳಿಸಿದ್ದರು. ಮಂಗಳೂರು ಪರ ಶ್ರೇಯಸ್ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಮಂಗಳೂರು 16.3 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿ ಪಂದ್ಯ ಗೆದ್ದಿತು. ನಿಕಿನ್ ಜೋಸ್ 47 ಬಾಲ್‌ಗಳಲ್ಲಿ ಭರ್ಜರಿ ಶತಕ ಬಾರಿಸಿದರು. ಕರುಣ್ ನಾಯರ್ 36 ಬಾಲ್‌ಗಳಲ್ಲಿ 56 ರನ್ ಗಳಿಸಿದರು. ಸೋಮವಾರದ ಸೋಲಿನ ನಡುವೆ ಮಂಗಳವಾರ ಗುಲ್ಬರ್ಗಾ, ಶಿವಮೊಗ್ಗ ತಂಡದ ವಿರುದ್ಧ ಗೆದ್ದು ಕಂಬ್ಯಾಕ್ ಮಾಡಿತು.

ಸಾಂಘಿಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ ಗುಲ್ಬರ್ಗಾ ಮೊದಲು ಬ್ಯಾಟಿಂಗ್ ಮಾಡಿ ಬರೋಬ್ಬರಿ 232 ರನ್ ಗಳಿಸಿತು. ಲೋಚನ್ 21 ಬಾಲ್‌ಗಳಲ್ಲಿ 47 ರನ್, ಶರತ್ 10 ಬಾಲ್‌ಗಳಲ್ಲಿ 24, ಪ್ರಖರ್ 19 ಬಾಲ್‌ಗಳಲ್ಲಿ 45 ರನ್ ಗಳಿಸಿದರು. ಶಿವಮೊಗ್ಗ ಪರ ನವೀನ್, ಭೀಮ್‌ರಾವ್ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ಶಿವಮೊಗ್ಗ 137 ರನ್‌ಗಳಿಗೆ ಆಲೌಟ್ ಆಯಿತು. ಲವನೀತ್ 30 ರನ್ ಗಳಿಸಿದರು. ಗುಲ್ಬರ್ಗಾ ಪರ ಗೌತಂ ಮಿಶ್ರಾ 3, ರೋನಿತ್, ಕ್ರಾಂತಿ ಮತ್ತು ಸುಹಾಸ್ ತಲಾ 2 ವಿಕೆಟ್ ಕಿತ್ತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6024

ಎಡದಿಂದ ಬಲಕ್ಕೆ
1.ಕಾಣಿಸುವಿಕೆ-ಆಡಂಬರವಿದು (3)
3.ತೀವ್ರವಾದ ಪರಿಮಳ ಹೊಂದಿದ ಹೂವು (5)
5.ಹಿತವಾದದ್ದು ಜೊತೆಯಲ್ಲಿಯೇ ಇದೆ (3)
7.ಖಾಲಿ-ಬರಿದಾದುದು ಇಲ್ಲಿದೆ (2)
8.ಸಂಖ್ಯಾತ್ಮಕ-ಲೆಕ್ಕಾಚಾರದಲ್ಲಿ ಜ್ಞಾನಿಯೀತ (4)
9.ವಿವಿಧ ಹಣ್ಣುಗಳ ಮಿಶ್ರಣವಿದು (4)
11.ಮಥುರೆಯ ಒಬ್ಬ ಕ್ರೂರ ರಾಜ (2)
13.ನವಕಟ್ಟು ಕಟ್ಟಿಕೊಂಡ ಅಭಿನಯಗಾರ (3)
15.ಹಲ್ಲುಗಳನ್ನು ಉಜ್ಜುವಿಕೆಯಿದೆ (5)
16.ಧಾರಾಳ ಸ್ವಭಾವದವನೀತ (3)

ಮೇಲಿನಿಂದ ಕೆಳಕ್ಕೆ
1.ತೋಪುಗಳಲ್ಲಿ ಬೆಳೆಯುತ್ತಿರುವ ಮಾವಿನ ಒಂದು ಬಗೆ (4)
2.ಉದ್ಯೋಗ ಅಥವಾ ವೃತ್ತಿಯನ್ನು ಹೀಗೆನ್ನುತ್ತೇವೆ (3)
3.ಸುತನು ಓದುತ್ತಿರುವ ಹದಿನಾಲ್ಕು ಸಾಲುಗಳ ಪದ್ಯ (3)
4.ಮತ್ತೊಂದು ರಾಜ್ಯಕ್ಕೆ ಕಳಿಸುವ ಪ್ರತಿನಿಧಿ(4)
6.ಹಿತ-ನರಿ ಒಳಗೊಂಡ ದೊಡ್ಡಸ್ತಿಕೆ (4)
8.ನಡುಗು-ಕಂಪಿಸುವಿಕೆಯಿದು (4)
10.ಅಲಂಕಾರದಿಂದ ಕೂಡಿದ-ಚೆನ್ನಾಗಿ ಅಲಂಕರಿಸಲ್ಪಟ್ಟದ್ದು (4)
12.ಸಮಾನವಾದ ಮನಸ್ಥಿತಿ-ಸ್ಥಿತಪ್ರಜ್ಞತೆ (4)
13.ಗುರು-ಹಿರಿಯರಿಗೆ ಭಕ್ತಿಯ ಗೌರವ ಸಲ್ಲಿಸುವುದು (3)
14.ಭವ ಕಡೆಯಲ್ಲಿರುವ ಹುಟ್ಟುವಿಕೆ ತಲೆಕೆಳಗಾಗಿದೆ (3)

6023 ಉತ್ತರ

ಎಡದಿಂದ ಬಲಕ್ಕೆ:
1.ಸುಜಲ 3.ಬಲಭಾಗ
5.ಕೋದಂಡ 7.ಸುಗತ
8.ಮಾಯ 10.ನಗ
12.ವಿವರ್ಣ 13.ಪಾನೀಯ
15.ರತ್ನಾಕರ 16.ಹಸಿರು

ಮೇಲಿನಿಂದ ಕೆಳಕ್ಕೆ :
1.ಸುಗ್ಗಿಗೆಳೆಯ 2.ಕೋಮಲ
3.ಬಗ್ಗಡ 4.ಗಟ್ಟಿಗತನ
6.ದಂತಚೂರ್ಣ
7.ಸುಹಾಸಿನೀ
9.ಮಾವಿನಮರ
11.ಗಡಸುನೀರು
13.ಪಾಮರ 14.ಹರೆಯ

ಕಿರುಸುದ್ದಿ

ಚಿಮಿಣಿ ಕಾಮಗಾರಿ ವೇಳೆ ಕಾರ್ಮಿಕ ಸಾವು

ಮಂಗಳೂರು: ಎಂಆರ್‌ಪಿಎಲ್ ಮೂರನೇ ಹಂತದ ಚಿಮಿನಿಯ ಕಾಮಗಾರಿ ನಡೆಯುತ್ತಿದ್ದ ವೇಳೆ ಕಾರ್ಮಿಕನೊಬ್ಬ ಅವಘಡಕ್ಕೀಡಾಗಿ ಮೃತಪಟ್ಟ ಘಟನೆ ನಡೆದಿದೆ. ಉತ್ತರ ಪ್ರದೇಶದ ಲಕ್ನೊ ಮೂಲದ ಸೂರಜ್ (29) ಮೃತ ಯುವಕ. ಎಂಆರ್‌ಪಿಎಲ್ ಪವರ್ ಪ್ಲಾಂಟ್‌ನ ಚಿಮಿಣಿ ಘಟಕದ 130 ಅಡಿ ಎತ್ತರದಲ್ಲಿ ಕಬ್ಬಿಣದ ರಾಡ್‌ಗಳನ್ನು ಜೋಡಿಸಿ ಪೈಂಟಿಂಗ್ ಕೆಲಸ ನಡೆಯುತ್ತಿತ್ತು. ಸಂಜೆ 7 ಗಂಟೆ ಸುಮಾರಿಗೆ ಕೆಲಸ ಮುಗಿಸಿದ ಕಾರ್ಮಿಕರು ಕಬ್ಬಿಣದ ರಾಡ್‌ಗಳನ್ನು ಹಗ್ಗದ ಸಹಾಯದಿಂದ ಕೆಳಗೆ ಇಳಿಸುತ್ತಿದ್ದರು. ಈ ವೇಳೆ ಕೆಳಗಿನಿಂದ ಹಗ್ಗ ಬಿಡುತ್ತಿದ್ದವರ ಕೈಯಿಂದ ಹಗ್ಗ ಜಾರಿದ್ದು, ಈ ಹಗ್ಗ ಕಾಲಿಗೆ ಸಿಲುಕಿ ಸೂರಜ್ ಎತ್ತರಕ್ಕೆ ಚಿಮ್ಮಿದ್ದಾರೆ. ಪರಿಣಾಮ ಗಂಭೀರ ಗಾಯಗಳಾಗಿ ಮೃತಪಟ್ಟಿದ್ದಾರೆ. ಸುರತ್ಕಲ್ ಪೊಲೀಸರು ತನಿಖೆ ನಡೆಸಿದ್ದಾರೆ.

ನದಿಗೆ ಹಾರಿ ಸಹಕಾರಿ ಸಂಸ್ಥೆಯ ನೌಕರ ಆತ್ಮಹತ್ಯೆ

ಉಡುಪಿ: ಇಲ್ಲಿನ ಉದ್ಯಾವರ ಪಾಪನಾಶಿನಿ ನದಿಯ ಸೇತುವೆಯಿಂದ ಕೆಳಗೆ ಹಾರಿ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಸೋಮವಾರ ನಡೆದಿದೆ. ಉದ್ಯಾವರ ಪಿತ್ರೋಡಿ ನಿವಾಸಿ, ಮಲ್ಪೆಯ ಸಹಕಾರಿ ಸಂಸ್ಥೆಯೊಂದರ ಉದ್ಯೋಗಿ ಹರ್ಷಿತ್ ಶೆಟ್ಟಿ (28) ಮೃತಪಟ್ಟ ಯುವಕ. ಸೋಮವಾರ ಮುಂಜಾನೆ 5 ಗಂಟೆಯ ಸುಮಾರಿಗೆ ಬೋಳಾರುಗುಡ್ಡೆ ಮೈದಾನದಲ್ಲಿ ಕ್ರಿಕೆಟ್ ಆಡಲು ಹೋಗುವುದಾಗಿ ಹೇಳಿ ಮನೆಯಿಂದ ಹೊರಟಿದ್ದ ಹರ್ಷಿತ್, ತಡವಾದರೂ ಮರಳಿ ಬಂದಿರಲಿಲ್ಲ. ಆತನಿಗಾಗಿ ಕುಟುಂಬಸ್ಥರು ಫೋನ್ ಮೂಲಕ ಸಂಪರ್ಕಿಸಲು ಯತ್ನಿಸಿದಾಗ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಇದರಿಂದ ಆತಂಕಗೊಂಡ ಮನೆಯವರು ಹುಡುಕಾಟ ನಡೆಸಿದಾಗ, ಉದ್ಯಾವರ ಪಾಪನಾಶಿನಿ ನದಿಯ ಸೇತುವೆಯ ಮೇಲೆ ಹರ್ಷಿತ್ ಅವರ ದ್ವಿಚಕ್ರ ವಾಹನ ಅನಾಥವಾಗಿ ನಿಂತಿರುವುದು ಪತ್ತೆಯಾಗಿದೆ.ಯುವಕ ನದಿಗೆ ಹಾರಿರುವ ಶಂಕೆ ವ್ಯಕ್ತವಾದ ತಕ್ಷಣ ಸ್ಥಳಕ್ಕೆ ಧಾವಿಸಿದ ಕಾಪು ಪೊಲೀಸರು ಮತ್ತು ಸ್ಥಳೀಯರು ಭಾರಿ ಶೋಧ ಕಾರ್ಯಾಚರಣೆ ಹಮ್ಮಿಕೊಂಡಿದ್ದರು. ಮುಳುಗು ತಜ್ಞ ಈಶ್ವರ್ ಮಲ್ಪೆ ನೇತೃತ್ವದ ತಂಡ ಹಾಗೂ ಸ್ಥಳೀಯ ಈಜುಗಾರರು ನದಿಯಲ್ಲಿ ಹಲವು ಗಂಟೆಗಳ ಕಾಲ ನಡೆಸಿದ ತೀವ್ರ ಹುಡುಕಾಟದ ಬಳಿಕ ಸಂಜೆ ವೇಳೆಗೆ ಹರ್ಷಿತ್ ಶೆಟ್ಟಿ ಅವರ ಮೃತದೇಹ ಪತ್ತೆಯಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲವಾಗಿದ್ದು, ಈ ಕುರಿತು ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ತನಿಖೆ ಮುಂದುವರಿದಿದೆ.



ಬೈಕಿನೊಂದಿಗೆ ಪರಾರಿಯಾದಾತ ಸೆರೆ

ಉಪ್ಪಿನಂಗಡಿ: ಸ್ನೇಹಾಚಾರದ ಸಲುಗೆಯನ್ನು ನಟಿಸಿ ದೇಗುಲಕ್ಕೆ ಹೋಗಿ ಬರುವೆನೆಂದು ತಿಳಿಸಿ ಬೈಕ್ ಪಡೆದು ಹೋದಾತ ಬೈಕಿನೊಂದಿಗೆ ಪರಾರಿಯಾದ ಪ್ರಕರಣಕ್ಕೆ ಸಂಬಂಧಿಸಿ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಉಪ್ಪಿನಂಗಡಿ ಪೊಲೀಸರು ಕೊನೆಗೂ ಯಶಸ್ವಿಯಾಗಿದ್ದಾರೆ. ಆರೋಪಿ ಕರ್ನಾಟಕ ಕೇರಳ ರಾಜ್ಯಗಳ ಗಡಿ ಪ್ರದೇಶವಾದ ಗಾಳಿಮುಖ ಎಂಬಲ್ಲಿ ತಲೆಮರೆಯಿಸಿಕೊಂಡಿದ್ದು, ಆರೋಪಿಯನ್ನು ಬೈಕ್ ಸಮೇತ ವಶಕ್ಕೆ ಪಡೆದುಕೊಳ್ಳಲಾಗಿದೆ. ಇಲ್ಲಿನ ರಾಜಧಾನಿ ಟವರ್ಸ್‌ನಲ್ಲಿರುವ ಶ್ರೀದೇವಿ ಸ್ಟಿಕ್ಕರ್ ಕಂಟಿಂಗ್ಸ್ ಸೆಂಟರ್ ಮಾಲಕ ಶೀನಪ್ಪ ಮುಗೇರ ಎಂಬವರಿಂದ ಅದೇ ಕಟ್ಟಡದಲ್ಲಿನ ಲಾಡ್ಜ್‌ನಲ್ಲಿ ವಾಸ್ತವ ಹೂಡಿದ್ದ, ಶ್ಯಾಮ್ ಜಿ. ಕೃಷ್ಣನ್ (31) ಎಂಬಾತ ಜೂ.16ರಂದು ಬೈಕಿನೊಂದಿಗೆ ಪರಾರಿಯಾದಾತ ನಾಪತ್ತೆಯಾಗಿದ್ದ. ಈ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದ್ದರೂ ಆರೋಪಿಯ ಪತ್ತೆಯಾಗಿರಲಿಲ್ಲ. ಆದರೆ, ಆರೋಪಿ ದಿನ ನಿತ್ಯ ಶೀನಪ್ಪ ಅವರಿಗೆ ಫೋನಾಯಿಸಿ ಹಣಕ್ಕಾಗಿ ಬೇಡಿಕೆಯನ್ನಿಡುತ್ತಿದ್ದ. ಉಪ್ಪಿನಂಗಡಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಸುತೇಶ್ ಅವರ ನೇತೃತ್ವದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ.



ಹಳೆಯಂಗಡಿ: ರೈಲಿನಡಿಗೆ ಬಿದ್ದು ಸಾವನ್ನಪ್ಪಿದ ವ್ಯಕ್ತಿಯ ಗುರುತು ಪತ್ತೆ

ಮುಲ್ಕಿ: ಪೊಲೀಸ್ ಠಾಣಾ ವ್ಯಾಪ್ತಿಯ ಹಳೆಯಂಗಡಿ ಸಮೀಪದ ಕೊಪ್ಪಲ ರೈಲ್ವೇ ಗೇಟ್ ಬಳಿ ಭಾನುವಾರ ಸಂಜೆ ರೈಲಿನಡಿಗೆ ಬಿದ್ದು ಸಾವನ್ನಪ್ಪಿದ ವ್ಯಕ್ತಿಯ ಗುರುತು ಪತ್ತೆಯಾಗಿದ್ದು ಮೃತರನ್ನು ಸುರತ್ಕಲ್ ಸದಾಶಿವ ನಗರದ ನಿವಾಸಿ ಶ್ಯಾಮ ಸಫಲಿಗ (81) ಎಂದು ಗುರುತಿಸಲಾಗಿದೆ. ಅಪಘಾತದ ತೀವ್ರತೆಗೆ ಮೃತ ವ್ಯಕ್ತಿಯ ಮುಖ ಗುರುತಿಸಲಾಗದ ಸ್ಥಿತಿಯಲ್ಲಿದ್ದು ಬಳಿಕ ಪೊಲೀಸರು ತನಿಖೆ ನಡೆಸಿದಾಗ ಮೃತರ ಮಗ ರಾಜೇಶ್ ಸಫಲಿಗ ಶವ ಗುರುತಿಸಿದ್ದು ರೈಲ್ವೇ ಟ್ರ್ಯಾಕ್ ಮ್ಯಾನ್ ಚಂದ್ರಹಾಸ ಅಮೀನ್ ನೀಡಿದ ದೂರಿನಂತೆ ಮುಲ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಘನ ತ್ಯಾಜ್ಯ ನಿರ್ವಹಣಾ ನಿಯಮ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ದ.ಕ. ಜಿಲ್ಲಾಧಿಕಾರಿ

ಸತತ ಜಾಗೃತಿಯಿಂದ ಬದಲಾವಣೆ ಸಾಧ್ಯ



ಮಂಗಳೂರು: ಸ್ವಚ್ಛತೆಯ ಕುರಿತಂತೆ ಜನತೆಯಲ್ಲಿ ನಿರಂತರವಾಗಿ ಜಾಗೃತಿ ಮೂಡಿಸುವುದರಿಂದ ಮಾತ್ರ ಬದಲಾವಣೆ ಸಾಧ್ಯ. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಸೂಚಿಸಿದ್ದಾರೆ.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026ರ ಅನುಷ್ಠಾನದ ಪ್ರಗತಿ ಪರಿಶೀಲನೆ ಹಾಗೂ ಜಿಲ್ಲೆಯ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಯನ್ನುಮತ್ತಷ್ಟುಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ನಡೆದ ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲಾ ಸ್ಥಳೀಯ ಸಂಸ್ಥೆಗಳು ಘನ ತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲುಕಾಲಬದ್ಧ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಸರಿಸಬೇಕು. ಮನೆ–ಮನೆ ಕಸ ಸಂಗ್ರಹಣೆ ಮತ್ತು ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಶೇ.100ರಷ್ಟು ಗುರಿ ಸಾಧಿಸಲು ಕ್ರಮವಹಿಸುವಂತೆ ಅವರು ಸೂಚನೆ ನೀಡಿದರು.

ಸ್ಥಳೀಯ ಸಂಸ್ಥೆಗಳು ಸಾರ್ವಜನಿಕರಲ್ಲಿ ತ್ಯಾಜ್ಯ ವಿಂಗಡಣೆ ಮತ್ತು ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲು ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನಗರ ಪ್ರದೇಶಗಳಲ್ಲಿ ಘನ ತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಅಗತ್ಯ ಭೂಮಿಯನ್ನು ಗುರುತಿಸಿ ಅಭಿವೃದ್ಧಿಪಡಿಸುವುದು ಹಾಗೂ ಬಲ್ಕ್ ವೇಸ್ಟ್ ಜನರೇಟರ್‌ಗಳ ಮಾಹಿತಿಯನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹವಾಗಿರುವ ಲೆಗಸಿ ವೇಸ್ಟ್ ವೈಜ್ಞಾನಿಕ ನಿರ್ವಹಣೆ ಮತ್ತು ವಿಲೇವಾರಿಗಾಗಿ ಕೈಗೊಂಡಿರುವ ಕ್ರಮಗಳನ್ನುಪರಿಶೀಲಿಸಿ ಬಾಕಿ ಇರುವ ಲೆಗಸಿ ತ್ಯಾಜ್ಯದ ವಿಲೇವಾರಿಯನ್ನು ತ್ವರಿತಗೊಳಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ್ ಕಾರ್ಬಾರಿ ಮಾತನಾಡಿ, ಗ್ರಾಮ ಪಂಚಾಯತ್‌ಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026 ಅನ್ನು ಕಟ್ಟುನಿಟ್ಟಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಿದರು. ಗ್ರಾಮ ಪಂಚಾಯತ್‌ಗಳು ತಮ್ಮ ವ್ಯಾಪ್ತಿಯಲ್ಲಿನ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವುದನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದರೊಂದಿಗೆ, ಸಾರ್ವಜನಿಕರಲ್ಲಿ ಸ್ವಚ್ಛತೆ ಮತ್ತು ತ್ಯಾಜ್ಯ ವಿಂಗಡಣೆ ಕುರಿತು ನಿರಂತರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಡಾ.ಸಂತೋಷ್ ಕುಮಾರ್, ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ತ್ಯಾಜ್ಯ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಹಾಗೂ ವಿಲೇವಾರಿಯ ಪ್ರತಿಯೊಂದು ಹಂತದಲ್ಲಿಯೂ ನಿಯಮಗಳ ಪಾಲನೆಯನ್ನು ಖಚಿತ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಘನ ತ್ಯಾಜ್ಯ ನಿರ್ವಹಣಾ ಘಟಕಗಳ ಪರಿಣಾಮಕಾರಿ ನಿರ್ವಹಣೆ, ಲೆಗಸಿ ತ್ಯಾಜ್ಯದ ತ್ವರಿತ ವಿಲೇವಾರಿ, ಬಲ್ಕ್ ವೇಸ್ಟ್ ಜನರೇಟರ್‌ಗಳ ನೋಂದಣಿ ಮತ್ತು ಮೇಲ್ವಿಚಾರಣೆ, ಸ್ವಚ್ಛತಾ ಸಿಬ್ಬಂದಿಗೆ ಅಗತ್ಯ ಸುರಕ್ಷತಾ ಸಾಧನಗಳ ಒದಗಿಕೆ ಹಾಗೂ ನಿಯಮಿತ ಪ್ರಗತಿ ವರದಿಗಳ ಸಲ್ಲಿಕೆ ಕುರಿತು ಅಗತ್ಯ ನಿರ್ದೇಶನಗಳನ್ನು ನೀಡಿದರು. ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳು ನಿಗದಿತ ಗುರಿಗಳನ್ನು ಕಾಲಮಿತಿಯೊಳಗೆ ಸಾಧಿಸುವಂತೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳು ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026ರ ಪ್ರಮುಖ ಅಂಶಗಳು, ಸ್ಥಳೀಯ ಸಂಸ್ಥೆಗಳ ಜವಾಬ್ದಾರಿಗಳು ಹಾಗೂ ನಿಯಮಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ವಿವರವಾಗಿ ಮಾಹಿತಿ ನೀಡಿದರು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಲ ಕಾಯ್ದೆ ಮತ್ತು ವಾಯು ಕಾಯ್ದೆಹಾಗೂ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026ರನ್ವಯ ಪಡೆಯಬೇಕಾದ ಸಮ್ಮತಿ ಪತ್ರಗಳನ್ನು ಸ್ಥಳೀಯ ಸಂಸ್ಥೆಗಳು ಪಡೆದುಕೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್, ಮಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಇಲಾಖೆ, ಶಿಕ್ಷಣ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳು, ತಾಲೂಕು ಪಂಚಾಯತ್, ಪರಿಸರ ತಜ್ಞರು ಹಾಗೂ ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು.

ಪರಿಸರ ಅಧಿಕಾರಿ ಹಾಗೂ ಸಮಿತಿಯ ಸದಸ್ಯ ಕಾರ್ಯದರ್ಶಿ ಡಾ. ಮಂಜು ಆರ್. ವಂದಿಸಿದರು. ಘನ ತ್ಯಾಜ್ಯಗಳ 4 ರೀತಿಯ ವಿಂಗಡಣೆ ಕುರಿತು ಜಾಗೃತಿ ಮೂಡಿಸುವ ಪೋಸ್ಟರ್‌ಗಳನ್ನು ಸಭೆಯಲ್ಲಿ ಬಿಡುಗಡೆಗೊಳಿಸಲಾಯಿತು.

- ಮನೆ–ಮನೆ ಕಸ ಸಂಗ್ರಹಣೆ ಮತ್ತು ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಶೇ.100ರಷ್ಟು ಗುರಿ ಸಾಧಿಸಲು ಕ್ರಮವಹಿಸುವಂತೆ ಅವರು ಸೂಚನೆ
- ವಿವಿಧ ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹವಾಗಿರುವ ಲೆಗಸಿ ವೇಸ್ಟ್ ವೈಜ್ಞಾನಿಕ ನಿರ್ವಹಣೆ ಮತ್ತು ವಿಲೇವಾರಿಗಾಗಿ ಕೈಗೊಂಡಿರುವ ಕ್ರಮಗಳನ್ನು ಪರಿಶೀಲಿಸಿ ಬಾಕಿ ಇರುವ ಲೆಗಸಿ ತ್ಯಾಜ್ಯದ ವಿಲೇವಾರಿಯನ್ನು ತ್ವರಿತಗೊಳಿಸುವಂತೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ.

ಉಡುಪಿ ನಗರಸಭೆಯಿಂದ ₹5.14 ಲಕ್ಷಕ್ಕೂ ಅಧಿಕ ದಂಡ ವಸೂಲಿ!

ಎಲ್ಲೆಂದರಲ್ಲಿ ಕಸ ಎಸೆದರೆ ಬೀಳುತ್ತೆ ಭಾರಿ ದಂಡ

ಉಡುಪಿ: ಪವಿತ್ರ ನಗರಿ, ಸ್ವಚ್ಛ ನಗರಿ ಎಂಬ ಹೆಗ್ಗಳಿಕೆಯ ಉಡುಪಿಯಲ್ಲಿ ಇನ್ನು ಮುಂದೆ ಎಲ್ಲೆಂದರಲ್ಲಿ ಕಸ ಎಸೆದು ಪರಾರಿಯಾಗುವ ಕಿಡಿಗೇಡಿಗಳಿಗೆ ನಗರಸಭೆ ಬಿಗ್ ಶಾಕ್ ನೀಡಲು ಆರಂಭಿಸಿದೆ. ಕಳೆದ ಆಗಸ್ಟ್ 2025 ರಿಂದ 2026 ರ ಜೂನ್ ವರೆಗಿನ ಅವಧಿಯಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಿಗೆ ತ್ಯಾಜ್ಯ ತಂದು ಹಾಕುತ್ತಿದ್ದವರ ವಿರುದ್ಧ ತೀವ್ರ ನಿಗಾ ವಹಿಸಲಾಗಿದ್ದು, ಬರೋಬ್ಬರಿ ರೂ. 5.14 ಲಕ್ಷಕ್ಕೂ ಅಧಿಕ ಮೊತ್ತದ ದಂಡ ಸಂಗ್ರಹಿಸಲಾಗಿದೆ. ನಗರದ ಸೌಂದರ್ಯಕ್ಕೆ ಧಕ್ಕೆ ತರುತ್ತಿದ್ದ ಬ್ಲ್ಯಾಕ್ ಸ್ಪಾಟ್‌ಗಳನ್ನು ಮುಕ್ತಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವ ಉಡುಪಿ ನಗರಸಭೆ ಅಧಿಕಾರಿಗಳು, ಕಸ ಎಸೆಯುವವರನ್ನು ಪತ್ತೆ ಹಚ್ಚಲು ಹೈಟೆಕ್ ತಂತ್ರಜ್ಞಾನ ಹಾಗೂ ತನಿಖಾ ಶೈಲಿಯನ್ನು ಅಳವಡಿಸಿಕೊಂಡಿದ್ದಾರೆ. ನಗರಸಭೆಯ ಈ ಖಡಕ್ ಕಾರ್ಯಾಚರಣೆಯಿಂದಾಗಿ ಸಾರ್ವಜನಿಕ ಸ್ಥಳಗಳಲ್ಲಿ ಕಸ ಸುರಿಯುವವರ ಸಂಖ್ಯೆ ಇಳಿಮುಖವಾಗುತ್ತಿದೆ. ಹಸಿ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ನಗರಸಭೆಯ ಕಸ ಸಂಗ್ರಹಣಾ ವಾಹನಗಳಿಗೇ ನೀಡಬೇಕು ಎಂಬ ನಿಯಮ ತರಲಾಗಿದ್ದು, ಅದರ ಪಾಲನೆಯತ್ತ ನಗರಸಭೆ ಗಮನ ಹರಿಸಿದೆ.

ವಿಳಾಸ, ಸಿಸಿ ಕ್ಯಾಮರಾ ಆಧರಿಸಿ ತಪಾಸಣೆ

ಸಾಮಾನ್ಯವಾಗಿ ಸಾರ್ವಜನಿಕರು ರಾತ್ರಿ ಅಥವಾ ಮುಂಜಾನೆಯ ವೇಳೆ ಬೈಕ್ ಹಾಗೂ ಕಾರುಗಳಲ್ಲಿ ಬಂದು ರಸ್ತೆ ಬದಿ ಕಸದ ಚೀಲಗಳನ್ನು ಎಸೆದು ಹೋಗುತ್ತಿದ್ದರು. ಇದನ್ನು ತಡೆಯಲು ನಗರಸಭೆ ಪ್ರಮುಖ ಸ್ಥಳಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದು, ಅದರ ದೃಶ್ಯಾವಳಿಗಳನ್ನು ಆಧರಿಸಿ ವಾಹನಗಳ ನಂಬರ್ ಪತ್ತೆ ಹಚ್ಚಿ ದಂಡ ವಿಧಿಸುತ್ತಿದೆ. ಅಷ್ಟೇ ಅಲ್ಲದೆ, ರಸ್ತೆ ಬದಿ ಬಿದ್ದಿರುವ ಕಸದ ಚೀಲಗಳನ್ನು ಬಿಚ್ಚಿ ತಪಾಸಣೆ ನಡೆಸುವ ಸಿಬ್ಬಂದಿ, ಅದರಲ್ಲಿ ಸಿಗುವ ಕೊರಿಯರ್ ಬಿಲ್, ಬ್ಯಾಂಕ್ ರಶೀದಿ, ಆಮಂತ್ರಣ ಪತ್ರಿಕೆ ಅಥವಾ ಇನ್ಯಾವುದೇ ಕಾಗದಪತ್ರಗಳಲ್ಲಿನ ವಿಳಾಸ ಮತ್ತು ಮೊಬೈಲ್ ಸಂಖ್ಯೆಗಳನ್ನು ಪತ್ತೆ ಹಚ್ಚಿ ನೇರವಾಗಿ ಅವರ ಮನೆಗೇ ದಂಡದ ನೋಟಿಸ್ ತಲುಪಿಸುತ್ತಿದ್ದಾರೆ.



ಬಾರ್‌ಗಳಲ್ಲಿ ಅಗ್ನಿ ಸುರಕ್ಷತೆ ಕಡ್ಡಾಯ: ಉಲ್ಲಂಘಿಸಿದರೆ ಲೈಸೆನ್ಸ್ ನವೀಕರಣವಿಲ್ಲ

ಉಡುಪಿ: ಮೈಸೂರಿನ ಬಾರ್ ಒಂದರಲ್ಲಿ ಇತ್ತೀಚೆಗೆ ಸಂಭವಿಸಿದ ಅಗ್ನಿ ಅವಘಡದ ಹಿನ್ನೆಲೆಯಲ್ಲಿ ಎಚ್ಚೆತ್ತಿರುವ ಉಡುಪಿ ಜಿಲ್ಲಾ ಅಬಕಾರಿ ಇಲಾಖೆಯು, ಜಿಲ್ಲೆಯ ಎಲ್ಲಾ ಸನ್ನದುದಾರರು ಹಾಗೂ ಬಾರ್ ಮಾಲೀಕರು ಕಡ್ಡಾಯವಾಗಿ ಅಗ್ನಿ ಸುರಕ್ಷತಾ ನಿಯಮಗಳನ್ನು ಪಾಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಅಬಕಾರಿ ಇಲಾಖೆಯ ವತಿಯಿಂದ ಜಿಲ್ಲೆಯ ಬಾರ್ ಮಾಲೀಕರಿಗಾಗಿ ಆಯೋಜಿಸಲಾಗಿದ್ದ ಅಗ್ನಿ ಸುರಕ್ಷತೆ ಕುರಿತ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ಅಬಕಾರಿ ಉಪ ಆಯುಕ್ತ (ಡಿಸಿ) ಟಿ.ಎಂ. ಶ್ರೀನಿವಾಸ್ ಅವರು ಮಾತನಾಡಿ, ಇಂತಹ ದುರಂತಗಳನ್ನು ತಪ್ಪಿಸಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ಇದೇ ವೇಳೆ ಜಿಲ್ಲೆಯ ಕೆಲ ಬಾರ್‌ಗಳು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಹಾಗೂ ಅವಧಿ ಮೀರಿ ವ್ಯಾಪಾರ ನಡೆಸುತ್ತಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಕಳೆದ ಒಂದು ವರ್ಷದಲ್ಲಿ ಇಂತಹ ನಿಯಮ ಉಲ್ಲಂಘನೆಗೆ ಸಂಬಂಧಿಸಿ 500ಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದರು. ಅಲ್ಲದೆ, ಎಂ.ಆರ್.ಪಿ ಗಿಂತ ಹೆಚ್ಚಿನ ದರ ವಸೂಲಿ ಮಾಡುವ ದೂರುಗಳು ಕೇಳಿಬರುತ್ತಿದ್ದು, ಸರ್ಕಾರ ನಿಗದಿಪಡಿಸಿದ ದರದಲ್ಲೇ ಮದ್ಯ ಮಾರಾಟ ಮಾಡಬೇಕು, ಇಲ್ಲದಿದ್ದರೆ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.



ಜುಲೈ ತಿಂಗಳಿಂದ ಮದ್ಯ ಮಾರಾಟ ಪರವಾನಗಿ (ಲೈಸೆನ್ಸ್) ನವೀಕರಣ ಪ್ರಕ್ರಿಯೆ ಆರಂಭವಾಗಲಿದ್ದು, ಈ ಬಾರಿ ಅಗ್ನಿ ಸುರಕ್ಷತೆ ಸೇರಿದಂತೆ ಎಲ್ಲಾ ನಿಯಮಗಳ ಸಮಗ್ರ ಪರಿಶೀಲನೆ ನಡೆಸಿದ ಬಳಿಕವೇ ನವೀಕರಣಕ್ಕೆ ಅನುಮತಿ ನೀಡಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು, ತುರ್ತು ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ವಿಧಾನಗಳ ಕುರಿತು ಸನ್ನದು ದಾರರಿಗೆ ತರಬೇತಿ ನೀಡಿದರು. ಪ್ರತಿಯೊಂದು ಬಾರ್‌ನಲ್ಲೂ ಗ್ರಾಹಕರಿಗೆ ಸುಲಭವಾಗಿ ಕಾಣುವಂತೆ ಕಡ್ಡಾಯವಾಗಿ ಅಗ್ನಿಶಾಮಕ ಉಪಕರಣಗಳನ್ನು ಅಳವಡಿಸಬೇಕು ಎಂದು ಈ ಸಂದರ್ಭದಲ್ಲಿ ಸೂಚಿಸಲಾಯಿತು.

ವಿವಾಹ ನಿರಾಕರಣೆ: ಮನೆಗೆ ನುಗ್ಗಿ ದಾಂಧಲೆ

ಉಪ್ಪಿನಂಗಡಿ: ಪ್ರೀತಿಸುತ್ತಿದ್ದಾಕೆ ಮದುವೆಯಾಗಲು ನಿರಾಕರಿಸಿದ್ದಾಳೆಂದು ಯುವಕನೋರ್ವ ಯುವತಿಯ ಮನೆಗೆ ನುಗ್ಗಿ ದಾಂಧಲೆ ಮಾಡಿ ಮಾನಭಂಗಕ್ಕೆ ಯತ್ನಿಸಿದ್ದಾನೆಂದು ಮಹಿಳೆಯೋರ್ವರು ಉಪ್ಪಿನಂಗಡಿ ಪೊಲೀಸರಿಗೆ ದೂರು ನೀಡಿದ ಘಟನೆ ವರದಿಯಾಗಿದೆ.

ಬೆಳ್ತಂಗಡಿ ತಾಲೂಕಿನ ಮೊಗ್ರು ಗ್ರಾಮದ ಪಿಲಿಕುಡೇಲು ಎಂಬಲ್ಲಿನ ನಿವಾಸಿಯಾಗಿರುವ ಮಹಿಳೆ ದೂರು ನೀಡಿದ್ದು, ತನ್ನ ಮಗಳ ಸಹಪಾಠಿಯಾಗಿರುವ ಚುವಿಶಾಂತ್ ಎಂಬಾತ ನನ್ನ ಮನೆಗೆ ನುಗ್ಗಿ ಮಗಳ ಮಾನಭಂಗಕ್ಕೆ ಯತ್ನಿಸಿದ್ದಾನೆಂದೂ, ಮಾತ್ರವಲ್ಲದೆ ಮನೆಯ ಟಿವಿ, ಸ್ಕೂಟರ್, ವಿದ್ಯುತ್ ಸಂಪರ್ಕವನ್ನು ಹಾನಿಗೊಳಿಸಿ, ಮನೆಯ ಹಿಂಭಾಗದ ಮತ್ತು ಮುಂಭಾಗದ ಸಿಮೆಂಟ್ ಶೀಟ್‌ಗಳನ್ನು ಪುಡಿಗೈದು ದಾಂಧಲೆ ನಡೆಸಿದ್ದಾನೆಂದೂ ಆರೋಪಿಸಿರುವ ಆಕೆ, ಆತನ ಈ ಕೃತ್ಯಕ್ಕೆ ಆತನ ಹೆತ್ತವರೂ ಸಹಕರಿಸಿ ತಮ್ಮ ಜಾತಿಯನ್ನು ನಿಂದಿಸಿದ್ದಾರೆಂದು ದೂರಿದ್ದಾರೆ.

ಸಂತ್ರಸ್ತ ಯುವತಿಯ ಕುಟುಂಬವು ಪರಿಶಿಷ್ಠ ಪಂಗಡಕ್ಕೆ ಸೇರಿದ ಹಿನ್ನೆಲೆಯಲ್ಲಿ ಪರಿಶಿಷ್ಠ ಜಾತಿ ಪಂಗಡಗಳ ದೌರ್ಜನ್ಯ ತಡೆ ಕಾಯಿದೆಯನ್ವಯ ಪ್ರಕರಣ ದಾಖಲಿಸಿದ ಪೊಲೀಸರು ಆರೋಪಿ ಚುವಿಶಾಂತ್‌ನನ್ನು ಬಂಧಿಸಿದ್ದಾರೆ.

ಮಡಿಕೇರಿ ಜಿಲ್ಲಾ ನ್ಯಾಯಾಲಯಕ್ಕೆ ಬಂತು ಬಾಂಬ್ ಬೆದರಿಕೆ ಸಂದೇಶ!


ಮಡಿಕೇರಿ: ಇಲ್ಲಿನ ಜಿಲ್ಲಾ ನ್ಯಾಯಾಲಯಕ್ಕೆ ಮಂಗಳವಾರ ಬೆಳ್ಳಂಬೆಳಗ್ಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದೆ.

ಸಹನಾ ಟಿ. ಎಂಬ ಇಮೈಲ್ ಐಡಿಯಿಂದ ಮಂಗಳವಾರ ಬೆಳಗ್ಗೆ 8.10 ಗಂಟೆಗೆ ಈ ಸಂದೇಶ ಇಲ್ಲಿನ ವಿದ್ಯಾನಗರದಲ್ಲಿರುವ ಜಿಲ್ಲಾ ನ್ಯಾಯಾಲಯಕ್ಕೆ ರವಾನೆಯಾದ ಹಿನ್ನೆಲೆಯಲ್ಲಿ ನ್ಯಾಯಾಲಯ ಸಂಕೀರ್ಣದಲ್ಲಿರುವ ಮೂರು ಮಹಡಿಗಳಲ್ಲಿ ಹಾಗೂ ನ್ಯಾಯಾಲಯದ ಆವರಣದಲ್ಲಿ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿಗಳು ಶೋಧ ನಡೆಸಿದರು.

ಕಾರ್ಯಾಚರಣೆ ಪೂರ್ಣಗೊಳ್ಳುವ ವರೆಗೂ ನ್ಯಾಯಾಲಯದ ಆವರಣವನ್ನು ಸಾರ್ವಜನಿಕರ ಹಾಗೂ ಸಿಬ್ಬಂದಿಗಳ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು.

ಸಂದೇಶದಲ್ಲೇನಿದೆ?

ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರ ಇಮೈಲ್ ಐಡಿಗೆ ಬಂದಿರುವ ಈ ಸಂದೇಶದಲ್ಲಿ ' ನಿಮ್ಮ ನ್ಯಾಯಾಲಯವು ಮಧ್ಯಾಹ್ನ 2 ಗಂಟೆಗೆ ಸೈನೈಡ್ ಬಾಂಬ್‌ಗಳನ್ನು ಬಳಸಿ ಸ್ಫೋಟಿಸಲಿದೆ. ವೇಶ್ಯೆ ದುರ್ಗಾ ಸ್ಟಾಲಿನ್ ಪ್ರವಾದಿ ಮುಹಮ್ಮದ್ ಅವರನ್ನು ಅವಮಾನಿಸಿದ್ದಾರೆ, ಎಲ್ಲಾ ಸಾರ್ವಜನಿಕರನ್ನು ಸ್ಥಳಾಂತರಿಸಿ. 2 ಐಸಿಸ್ ಆತ್ಮಹತ್ಯಾ ಬಾಂಬರ್‌ಗಳು ಸಹ ಬರಬಹುದು!



ಗೌರವಾನ್ವಿತ ನ್ಯಾಯಾಧೀಶರೇ, ಭಾರತದ ಮುಸ್ಲಿಮರಿಗೆ ಇಂದು ಪವಿತ್ರ ಮಂಗಳವಾರ!

ತಮಿಳುನಾಡಿನ ಶಿವಗಂಗಾದಲ್ಲಿ ಪೊಲೀಸ್ ಕಸ್ಟಡಿಯಲ್ಲಿ ಅಜಿತ್ ಕುಮಾರ್ (27 ವರ್ಷದ ದೇವಾಲಯದ ಭದ್ರತಾ ಸಿಬ್ಬಂದಿ) ನಿಧನರಾದರು. ಚಿನ್ನದ ಕಳ್ಳತನದ ಆರೋಪದ ಮೇಲೆ ವಿಚಾರಣೆಗಾಗಿ ಅವರನ್ನು ಕರೆದೊಯ್ಯಲಾಯಿತು. ಅಲ್ಲಿ ಪೊಲೀಸರು ಅವರನ್ನು ಕ್ರೂರವಾಗಿ ಚಿತ್ರಹಿಂಸೆ ನೀಡಿದರು. ಮೂಲ ಕಳ್ಳತನದ ದೂರು ನಂತರ ಸುಳ್ಳು ಎಂದು ಪರಿಗಣಿಸಲಾಯಿತು ಮತ್ತು ಸಿಬಿಐ ತನಿಖೆಯನ್ನು ವಹಿಸಿಕೊಂಡಿತು.

ಹೊಡೆದು ಸಾಯಿಸಲು ಕಾರಣ

ಉದಯನಿಧಿಯ ಉಪಪತ್ನಿ ತನ್ನ ಚೀಲವನ್ನು ಕಳೆದುಕೊಂಡಳು, ಅದರಲ್ಲಿ ಅವನು ಅವಳಿಗೆ ಉಡುಗೊರೆಯಾಗಿ ನೀಡಿದ್ದ ಚಿನ್ನವಿತ್ತು. ಅವರು ಕಾವಲುಗಾರರಾಗಿದ್ದರು, ಆದ್ದರಿಂದ ಡಿಎಸ್ಪಿ ವಿಶೇಷ ತಂಡಗಳು ಅವರನ್ನು ಹೊಡೆದು ಕೊಂದರು. ವಿಚಾರಣೆ ಇಲ್ಲ. ವಕೀಲರು ಇಲ್ಲ. ತೀರ್ಪು ಇಲ್ಲ. ಕೇವಲ ನಾವು ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ತನ್ನದೇ ಆದ ನಾಗರಿಕನನ್ನು ಕೊಂದಿತು ಶ್ರೀ ಅಜಿತ್ ಕುಮಾರ್, ಅವರ ಕುಟುಂಬವು ಮತ್ತೆ ಎಂದಿಗೂ ಒಂದೇ ಆಗುವುದಿಲ್ಲ.

ಆದರೆ, 5 ಬಾರಿ ಮರಣದಂಡನೆ ವಿಧಿಸಲಾದ ಪಾಕಿಸ್ತಾನಿ ನಾಗರಿಕ ಮತ್ತು ಭಯೋತ್ಪಾದಕ ಅಜ್ಮಲ್ ಕಸಬ್‌ಗೆ ನ್ಯಾಯಯುತ ವಿಚಾರಣೆ, ಕಾನೂನು ನೆರವು, ಉತ್ತಮ ಆಹಾರ ಮತ್ತು ಸಮಾಲೋಚನೆಯನ್ನು ಸಹ ನೀಡಲಾಯಿತು.

ಹಾಗಾದರೆ ಉದಯನಿಧಿ ತನ್ನ ಉಪಪತ್ನಿ ಮತ್ತು ಅವನ ಸಲಿಂಗಕಾಮಿ ಮಗ ಇನ್ಬನಿಧಿಯೊಂದಿಗೆ ನರಕದಲ್ಲಿ ಸುಡಬೇಕೇ?

ಈ ಸ್ಫೋಟವು ಮುಂಬರುವ ಘಟನೆಗಳಿಗೆ ಸಂಕೇತವಾಗಲಿ. ಜೈ ಜಕ್ಕಮಾ' ಎಂದು ಬರೆಯಲಾಗಿತ್ತು.

ಜಿಲ್ಲಾ ನ್ಯಾಯಾಲಯಕ್ಕೆ ಬಂದಿರುವ ಎರಡನೇ ಬಾಂಬ್ ಬೆದರಿಕೆ ಸಂದೇಶ ಇದಾಗಿದ್ದು, ಫೆ.16ರಂದು ಕೂಡಾ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು.

ತೀವ್ರ ಶೋಧದ ಬಳಿಕ ಇದೊಂದು ಹುಸಿ ಬಾಂಬ್ ಬೆದರಿಕೆ ಸಂದೇಶ ಎಂಬುದು ದೃಢಪಟ್ಟಿತು.

ಬಸ್ಸು ಚಲಿಸುತ್ತಿದ್ದಾಗಲೇ ಬಿಪಿ ಲೋ ಆಗಿ ಕುಸಿದ ಚಾಲಕ: ಡಿವೈಡರ್ ಏರಿ ನಿಂತ ಬಸ್ಸು

ಉಳ್ಳಾಲ: ಬಸ್ಸು ಚಲಿಸುತ್ತಿದ್ದಾಗಲೇ ಚಾಲಕನಿಗೆ ಬಿಪಿ ಲೋ ಆದ ಪರಿಣಾಮ ನಿಯಂತ್ರಣ ತಪ್ಪಿದ ಬಸ್ಸು ರಸ್ತೆಯ ಡಿವೈಡರ್ ಏರಿ ನಿಂತಿದ್ದು,ಅದೃಷ್ಟವಶಾತ್ ಬಸ್ಸಿನಲ್ಲಿದ್ದ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾದ ಘಟನೆ ಮಂಗಳವಾರ ಬೆಳಿಗ್ಗೆ ದೇರಳಕಟ್ಟೆಯ ಯೆನೆಪೋಯ ಆಸ್ಪತ್ರೆಯ ಮುಂಭಾಗ ನಡೆದಿದೆ.

ಮುಡಿಪು–ಸ್ಟೇಟ್ ಬ್ಯಾಂಕಿನ ನಡುವೆ ಸಂಚರಿಸುವ ಗೋಪಾಲಕೃಷ್ಣ ಹೆಸರಿನ ಖಾಸಗಿ ಸರ್ವಿಸ್ ಬಸ್ಸು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಮಧ್ಯದ ಡಿವೈಡರ್ ಏರಿದೆ. ಬಸ್ಸು ಮುಡಿಪುವಿನಿಂದ ದೇರಳಕಟ್ಟೆ ತಲುಪಿದಾಗ ಚಾಲಕ ಜನಾರ್ಧನ್ ಅವರಿಗೆ ಬಿಪಿ ಲೋ ಆದ ಪರಿಣಾಮ ಅವರು ಸ್ಟೇರಿಂಗ್ ಮೇಲೆಯೇ ಕುಸಿದಿದ್ದರೆನ್ನಲಾಗಿದೆ. ಈ ವೇಳೆ ನಿಯಂತ್ರಣ ತಪ್ಪಿದ ಬಸ್ಸು ರಸ್ತೆ ಮಧ್ಯದ ಡಿವೈಡರ್ ಏರಿ ನಿಂತಿದೆ.

ಅದೃಷ್ಟವಶಾತ್ ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ಯಾವುದೇ ಅನಾಹುತ ಸಂಭವಿಸಿಲ್ಲ.ಯೆನೆಪೋಯ ಆಸ್ಪತ್ರೆ ಮುಂಭಾಗದ ರಸ್ತೆಯಲ್ಲಿ ವಾಹನ ಚಾಲಕರು ದಿನನಿತ್ಯಲೂ ವಿರುದ್ಧ ದಿಕ್ಕಿನಲ್ಲಿ ಚಲಿಸಿ ಯೂ–ಟರ್ನ್ ಹೊಡೆಯುತ್ತಿರುತ್ತಾರೆ. ಆದರೆ ಘಟನೆ ನಡೆದ ಸಂದರ್ಭದಲ್ಲಿ ಬಸ್ಸಿಗೆ ಯಾವುದೇ ವಾಹನಗಳು ಅಡ್ಡ ಸಿಗದ ಕಾರಣ ಸಂಭವನೀಯ ಭಾರೀ ಅನಾಹುತವೊಂದು ತಪ್ಪಿದಂತಾಗಿದೆ.



ಬಿಪಿ ಲೋ ಆಗಿ ಗಂಭೀರ ಸ್ಥಿತಿಯಲ್ಲಿದ್ದ ಚಾಲಕ ಜನಾರ್ಧನ ಅವರನ್ನು ಅಲ್ಲೇ ಇದ್ದ ಯೆನೆಪೋಯ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆಯ ಬಳಿಕ ಅವರು ಚೇತರಿಸಿಕೊಂಡಿದ್ದಾರೆ.

ಮಂಗಳೂರು ದಕ್ಷಿಣ ಸಂಚಾರಿ ಠಾಣಾ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ

ಬಜ್ಪೆಗೆ ಆಗಮಿಸಿದ ಎನ್‌ಐಎ ತಂಡ

ಮಂಗಳೂರು: ಹಿಂದೂ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆ ಚುರುಕುಗೊಂಡಿದ್ದು, ಎನ್‌ಐಎ ಅಧಿಕಾರಿಗಳು ದಿಢೀರ್ ಆಗಿ ಮತ್ತೆ ಬಜ್ಪೆ ಠಾಣೆಗೆ ಬಂದಿದ್ದಾರೆ. ಡಿವೈಎಸ್ಪಿ ರಾಜೀವ್ ಸಿಂಗ್, ಇನ್‌ಸ್ಪೆಕ್ಟರ್ ಮಲ್ಲಿಕಾರ್ಜುನ್ ಸೇರಿದಂತೆ ಐವರು ಅಧಿಕಾರಿಗಳ ತಂಡ ಬಜ್ಪೆಗೆ ಆಗಮಿಸಿದೆ.

ಕೆಲವರಿಗೆ ನೋಟೀಸ್ ನೀಡಿ ವಿಚಾರಣೆಗೆ ಬರುವಂತೆ ಸೂಚಿಸಿದೆ. ಅಧಿಕಾರಿಗಳು ಠಾಣೆಯಲ್ಲಿ ಬೀಡು ಬಿಟ್ಟಿದ್ದು, ಕೆಲವು ದಾಖಲಾತಿಗಳನ್ನು ಮುಂದಿಟ್ಟು ಶಂಕಿತರ ಮೇಲೆ ನಿಗಾ ಇಟ್ಟಿದ್ದಾರೆ. ಕಳೆದ ವರ್ಷ 2025ರ ಆಗಸ್ಟ್ 2ರಂದು ಮಂಗಳೂರು ಹೊರವಲಯದ ಸುರತ್ಕಲ್ ಮತ್ತು ಬಜ್ಪೆ ಠಾಣೆ ವ್ಯಾಪ್ತಿಯ 14 ಸ್ಥಳಗಳ ಮೇಲೆ ದಾಳಿ ನಡೆಸಿದ್ದ ಎನ್‌ಐಎ ಅಧಿಕಾರಿಗಳು ಮಹತ್ವದ ದಾಖಲೆಗಳನ್ನು ಒಯ್ದಿದ್ದರು ಎನ್ನಲಾಗಿತ್ತು. ಇದೀಗ ಒಂದು ವರ್ಷದ ಬಳಿಕ ತಂಡ ಮರಳಿದ್ದು ನಿಷೇಧಿತ ಪಿಎಫ್‌ಐ ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವ ಕೆಲವರನ್ನು ವಿಚಾರಣೆಗೆ ಕರೆಸಿದೆ.



ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಪಿಎಫ್‌ಐ ಕಾರ್ಯಕರ್ತರು ಸೇರಿ 12 ಮಂದಿಯನ್ನು ಬಂಧಿಸಲಾಗಿತ್ತು. ಪ್ರಕರಣದಲ್ಲಿ ವಿದೇಶದಿಂದ ಫಂಡಿಂಗ್ ಆಗಿರುವ ಬಗ್ಗೆ ಮಾಹಿತಿ ಹಿನ್ನೆಲೆಯಲ್ಲಿ ಎನ್‌ಐಎ ತನಿಖೆಗೆ ವಹಿಸಲಾಗಿತ್ತು. ಪ್ರಕರಣದಲ್ಲಿ ಬಂಧಿತ ಆರೋಪಿಗಳ ಬ್ಯಾಂಕ್ ಖಾತೆಗಳನ್ನು ತನಿಖೆಗೆ ಒಳಪಡಿಸಿದ್ದು ಸಂಶಯ ಬಂದ ಅಂಶಗಳನ್ನು ಆಧರಿಸಿ ತನಿಖೆ ಮುಂದುವರಿಸಲಾಗಿತ್ತು.

ಬಜಪೆ ಠಾಣೆ ವ್ಯಾಪ್ತಿಯ 10 ಕಡೆ ಹಾಗೂ ಸುರತ್ಕಲ್ ಠಾಣೆ ವ್ಯಾಪ್ತಿಯ ನಾಲ್ಕು ಕಡೆಗಳಲ್ಲಿ ಕೊಲೆ ಆರೋಪಿಗಳ ಮನೆ ಹಾಗೂ ಎಸ್ ಡಿಪಿಐ ಮುಖಂಡರ ಮನೆಗಳಿಗೆ ದಾಳಿ ನಡೆಸಿದ್ದರು. ವಶಕ್ಕೆ ಪಡೆದಿದ್ದ ಹಲವು ದಾಖಲೆಗಳನ್ನು ಪರಿಶೀಲಿಸಿರುವ ಅಧಿಕಾರಿಗಳು ವರ್ಷದ ನಂತರ ತನಿಖೆ ಸಕ್ರಿಯಗೊಳಿಸಿದ್ದಾರೆ. 2025 ರ ಮೇ 1ರಂದು ಬಜಪೆ ಬಳಿಯ ಕಿನ್ನಿಪದವು ಎಂಬಲ್ಲಿ ರಾತ್ರಿ ಎಂಟು ಗಂಟೆ ವೇಳೆಗೆ ಸುಹಾಸ್ ಶೆಟ್ಟಿ ಬರ್ಬರ ಹತ್ಯೆಯಾಗಿತ್ತು.

- ಪ್ರಕರಣದಲ್ಲಿ ಪಿಎಫ್‌ಐ ಕಾರ್ಯಕರ್ತರು ಸೇರಿ 12 ಮಂದಿಯನ್ನು ಬಂಧಿಸಲಾಗಿತ್ತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 27⁰ 24⁰ | ಉಡುಪಿ 28⁰ 24⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಬುಧವಾರ 24, ಜೂನ್ 2026 e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 2
ಬೋರ್ಡೋ ದ್ರಾವಣ ಬಿಟ್ಟ ಮೂರೇ ದಿನದಲ್ಲಿ ಕರಟಿ ಹೊಯ್ತು ಅಡಿಕೆ ತೋಟ


ಪುಟ 3
ಮುಖರ್ಜಿ ಆದರ್ಶಗಳು ಪ್ರತಿ ಕಾರ್ಯಕರ್ತನಿಗೂ ಪ್ರೇರಣೆ

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಮಳೆ ಇಲ್ಲದೆ ಒಡಲಿನಲ್ಲಿ ಜೀವಕಳೆ ಕಳೆದುಕೊಂಡಿದ್ದಾಳೆ ಕರಾವಳಿಯ ಜೀವನದಿ ನೇತ್ರಾವತಿ...


ಈ ಬಾರಿ ಜೂನ್ ತಿಂಗಳಿನಲ್ಲಿ ಮುಂಗಾರು ದುರ್ಬಲವಾದ ಹಿನ್ನೆಲೆಯಲ್ಲಿ ಪಶ್ಚಿಮಘಟ್ಟದ ತಪ್ಪಲಿನಿಂದ ಹರಿಯುವ ನೇತ್ರಾವತಿ ನದಿಯು ತನ್ನ ಮಳೆಗಾಲದ ಸೌಂದರ್ಯ ಕಳೆದುಕೊಂಡಿದೆ. ಉಪ್ಪಿನಂಗಡಿ ಭಾಗದಲ್ಲಿ ನದಿಯ ಹರಿವು ಕ್ಷೀಣಿಸಿದ್ದು ಮರಳುಗಳು ಕಾಣುವ ದುಃಸ್ಥಿತಿಗೆ ಬಂದು ತಲುಪಿದೆ. ಕಳೆದ ವರ್ಷ ಇದೇ ಸಮಯದಲ್ಲಿ ನೇತ್ರಾವತಿ ಹಾಗೂ ಕುಮಾರಧಾರಾ ಎರಡೂ ನದಿಗಳು ಮೈದುಂಬಿ ಹರಿಯುತ್ತಿತ್ತು.

ಸುತ್ತಮುತ್ತ

ಕರಾವಳಿ ಜಿಲ್ಲೆಗಳಲ್ಲಿ ಮತ್ತಷ್ಟು ಚುರುಕುಗೊಂಡ ಮುಂಗಾರು ಮಳೆ!

ಮಂಗಳೂರು: ಮಂಗಳವಾರ ಬೆಳಗ್ಗೆ 8.30ಕ್ಕೆ ಅಂತ್ಯಗೊಂಡ ಹಿಂದಿನ 24 ತಾಸುಗಳಲ್ಲಿ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿಯ ವಿವಿಧ ಭಾಗಗಳಲ್ಲಿ ಮಳೆಯಾಗಿದೆ. ಉಡುಪಿ ಜಿಲ್ಲೆಯ ಕೋಟದಲ್ಲಿ ಗರಿಷ್ಠ 8 ಸೆಂ.ಮೀ ಮಳೆಯಾಗಿದೆ. ಉಳಿದಂತೆ ಕುಂದಾಪುರದಲ್ಲಿ 5, ಮಂಗಳೂರಿನಲ್ಲಿ 4, ಮೂಡುಬಿದಿರೆ, ಮಾಣಿ, ಭಾಗಮಂಡಲ, ಉಡುಪಿಯಲ್ಲಿ 2, ಬಂಟ್ವಾಳದಲ್ಲಿ 1 ಸೆಂ.ಮೀ ಮಳೆ ಪ್ರಮಾಣ ದಾಖಲಾಗಿದೆ.

ಸುಳ್ಯ : ಚಾಲಕನ ನಿಯಂತ್ರಣ ಕಳೆದು ಮನೆ ಮೇಲೆ ಬಿದ್ದ ಪಿಕಪ್

ಸುಳ್ಯ: ಸುಳ್ಯ ಕುರುಂಜಿಗುಡ್ಡೆಗೆ ಹೋಗುತ್ತಿದ್ದ ಪಿಕ್ ಅಪ್ ವಾಹನವೊಂದು ಚಾಲಕನ ನಿಯಂತ್ರಣ ಕಳೆದು ಹಿಮ್ಮುಖವಾಗಿ ಚಲಿಸಿ ಮನೆಯ ಮೇಲೆ ಬಿದ್ದ ಘಟನೆ ಮಂಗಳವಾರ ನಡೆದಿದೆ. ಸುಳ್ಯ ಪಟ್ಟಣದಲ್ಲಿ ಅಮೃತ್ ಯೋಜನೆಯ ಕಾಮಗಾರಿ ನಿರ್ವಹಿಸುವ ಕಾಮಗಾರಿಯ ಪಿಕಪ್ ಆಗಿದ್ದು ಮನೆಯ ಮೇಲೆ ಬಿದ್ದ ಪರಿಣಾಮ ಮನೆ ಒಂದು ಬದಿ ಜಖಂಗೊಂಡಿದ್ದು ಘಟನೆಯಲ್ಲಿ ಯಾವುದೇ ಗಾಯಗಳಿಲ್ಲದೇ ಪಾರಾಗಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಕೆಲವೆಡೆ ಇಂದು ಭಾರೀ ಮಳೆಯ ಸಾಧ್ಯತೆ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಇಂದು (ಜೂ.24) ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಳೆಯ ಜೊತೆ ಗಾಳಿಯ ತೀವ್ರತೆ ಕೂಡಾ ಇರಲಿದ್ದು, ಗಂಟೆಗೆ 60 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ. ಕಡಲ ತೀರದ ನಿವಾಸಿಗಳು ಹಾಗೂ ಪ್ರವಾಸಿಗರು ಎಚ್ಚರಿಕೆ ವಹಿಸುವಂತೆ ಇಲಾಖೆ ಸೂಚಿಸಿದೆ.

ಭಾರೀ ಗಾಳಿಮಳೆ: ಕುಂದಾಪುರದಲ್ಲಿ ಮನೆ ಮೇಲೆ ಉರುಳಿದೆ ಮರ

ಕುಂದಾಪುರ: ಭಾರೀ ಗಾಳಿಮಳೆಗೆ ತಾಲೂಕಿನ ಬೀಜಾಡಿ ಗ್ರಾಮದ ಗುಲಾಬಿ ಎಂಬವರ ಮನೆಯ ಮೇಲೆ ಮರ ಉರುಳಿಬಿದ್ದಿದ್ದು, ಘಟನೆಯಲ್ಲಿ ಸುಮಾರು 30 ಸಾವಿರ ರೂ. ನಷ್ಟ ಸಂಭವಿಸಿದೆ.

ಅರಣ್ಯರೋಧನವಾಗಿದೆ ಅಶಕ್ತರ ಕೂಗು
ಹೆಗಲೇ ಆ್ಯಂಬುಲೆನ್ಸ್!
ಇಲ್ಲಿ ರೋಗಿಯ ಹೊತ್ತು ಸಾಗಿಸುವ ಸ್ಥಿತಿ

ಕಾಸರಗೋಡು: ಒಂದೆಡೆ ಅಭಿವೃದ್ಧಿಯನ್ನೇ ಮೂಲಮಂತ್ರವಾಗಿ ವಿವಿಧ ರಾಜಕೀಯ ಪಕ್ಷಗಳು ಘೋಷಿಸುತ್ತಿದ್ದರೆ, ಇನ್ನೊಂದೆಡೆ ಮೂಲಭೂತ ಸೌಲಭ್ಯಗಳೇ ಇಲ್ಲದೆ ಕೆಲವು ಊರಿನಲ್ಲಿ ಜನಸಾಮಾನ್ಯರು ಸಂಕಷ್ಟಪಡುತ್ತಿರುವುದು ಕಂಡುಬರುತ್ತಿದೆ. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಜನರ ಆಕ್ರೋಶಕ್ಕೂ ಕಾರಣವಾಗುತ್ತಿದೆ.

ಇಂದಿಗೂ ರಸ್ತೆ ಸೌಕರ್ಯವಿಲ್ಲ

ಕಾರಡ್ಕ ಗ್ರಾಮ ಪಂಚಾಯತ್‌ನ 7ನೇ ವಾರ್ಡ್ ವ್ಯಾಪ್ತಿಯ ಮಾಯಿಲಂಕೋಟೆ ಬಳಿಯ ಕೆಲವು ಕುಟುಂಬಗಳು ಈಗಲೂ ಕೂಡಾ ಮೂಲಭೂತ ಸೌಕರ್ಯ ವಂಚಿತವಾಗಿವೆ. ಕುಂಟಾರು ಶಾಲೆಯಿಂದ ಸುಮಾರು ಒಂದು ಕಿಲೋ ಮೀಟರ್ ದೂರದ ಮಾಯಿಲಂಕೋಟೆ ಪ್ರದೇಶಕ್ಕೆ ಇಂದಿಗೂ ರಸ್ತೆ ಸೌಕರ್ಯವಿಲ್ಲದ ಕಾರಣ ಆ ಭಾಗದಿಂದ ಅಸೌಖ್ಯ ಪೀಡಿತರನ್ನು ಆಸ್ಪತ್ರೆಗಳಿಗೆ ಸಾಗಿಸಬೇಕಾದರೆ ಜನರು ಹೊತ್ತೊಯ್ಯಬೇಕಾಗುತ್ತದೆ. ಇಲ್ಲಿ ರಸ್ತೆ ನಿರ್ಮಾಣಕ್ಕೆ ಎದುರಾಗಿರುವ ತೊಡಕನ್ನು ಪರಿಹರಿಸಬೇಕೆಂದು ಆಗ್ರಹಿಸಿ ಗ್ರಾಮ ಪಂಚಾಯತ್‌ನ 7ನೇ ವಾರ್ಡ್ ಸದಸ್ಯೆ ಬೇಬಿ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದು ಯಾವುದೇ ಪ್ರತಿಕ್ರಿಯೆ ಲಭಿಸಿಲ್ಲವೆಂದು ತಿಳಿಸಿದ್ದಾರೆ. »ಪುಟ 6



ಇಲ್ಲಿ ಯಾಕೆ ರಸ್ತೆ ನಿರ್ಮಾಣವಾಗುತ್ತಿಲ್ಲ?

ಗೇರುಬೀಜ ಪ್ಲಾಂಟೇಶನ್‌ನ ಸ್ಥಳವಾದ ಕಾರಣ ಈ ಭಾಗದಲ್ಲಿ ರಸ್ತೆ ನಿರ್ಮಾಣಕ್ಕೆ ಒಪ್ಪಿಗೆ ಲಭಿಸುತ್ತಿಲ್ಲವೆಂದು ತಿಳಿದುಬಂದಿದೆ. ಈ ಮಾಯಿಲಂಕೋಟೆ ಪ್ರದೇಶದಲ್ಲಿ ಎಸ್‌ಸಿ ಮತ್ತು ಎಸ್‌ಟಿ ವಲಯಗಳ ಕುಟುಂಬಗಳು ಹೆಚ್ಚಾಗಿ ವಾಸಿಸುತ್ತಿದ್ದು, ಆಡಳಿತದ ಈ ನಿರ್ಧಾರದಿಂದಾಗಿ ಈ ಕುಟುಂಬಗಳಿಗೆ ರಸ್ತೆ ಸೌಕರ್ಯವಿಲ್ಲದೆ ಭಾರೀ ಸಮಸ್ಯೆ ತಲೆದೋರಿದೆ.

ಕಿಲೋ ಮೀಟರ್ ಹೊತ್ತೊಯ್ಯಬೇಕು

ಮಾಯಿಲಂಕೋಟೆ ಪ್ರದೇಶದ ಸುಮಾರು 60 ವರ್ಷ ಪ್ರಾಯದ ಈಶ್ವರ ನಾಯ್ಕ ಎಂಬವರು ಕಳೆದ ನಾಲ್ಕು ವರ್ಷಗಳಿಂದ ನಡೆದಾಡಲು ಸಾಧ್ಯವಾಗದೆ ಮಲಗಿದ ಸ್ಥಿತಿಯಲ್ಲೇ ಇದ್ದಾರೆ. ಅವರಿಗೆ ರೋಗ ಉಲ್ಬಣವಾದಾಗ ಆಸ್ಪತ್ರೆಗೆ ಕರೆದೊಯ್ಯಲು ಸ್ಥಳೀಯ ಯುವಕರ ಸಹಾಯ ಅನಿವಾರ್ಯವಾಗಿದೆ. ಹೆಚ್ಚಿನ ದಿನಗಳಲ್ಲಿ ಕೆಲವೊಮ್ಮೆ ರಾತ್ರಿ ವೇಳೆಯಲ್ಲೂ ಅನಾರೋಗ್ಯ ಉಲ್ಬಣಗೊಂಡಾಗ ಆಸ್ಪತ್ರೆಗೆ ಸಾಗಿಸಲು ಸುಮಾರು ಒಂದು ಕಿಲೋ ಮೀಟರ್ ದೂರದ ತನಕ ಸ್ಟ್ರೆಚರ್‌ನಲ್ಲಿ ಮಲಗಿಸಿ ಹೆಗಲಲ್ಲಿ ಕೊಂಡೊಯ್ಯಬೇಕಾದ ದಾರುಣ ಪರಿಸ್ಥಿತಿಯಿದೆ.

ಮಂಚಿಯಲ್ಲಿ ಮೆಸ್ಕಾಂ 'ಮ್ಯಾಜಿಕ್'
ಸುತ್ತಲೂ ಬೆಳಕು ನಡುವೆ ಕತ್ತಲು!
'ಕತ್ತಲು ಭಾಗ್ಯ'ಕ್ಕೆ ವರ್ಷ ಪೂರ್ಣ

ಬಂಟ್ವಾಳ: ಒಂದೇ ಗ್ರಾಮ, ಸುತ್ತಲೂ ವಿದ್ಯುತ್ ಬೆಳಕು ಕಾಣಸುತ್ತದೆ. ಆದರೆ ಅದೇ ಗ್ರಾಮದ 300ರಿಂದ 400 ಮೀಟರ್‌ಗಳ ವ್ಯಾಪ್ತಿಯಲ್ಲಿ ಮಾತ್ರ ಆಗಾಗ ಕತ್ತಲು. ಸಂಜೆಯ ಬಳಿಕ ವಿದ್ಯುತ್ ಸ್ಥಗಿತವಾದರೆ ಮತ್ತೆ ಮರು ಪೂರೈಕೆ ಮರುದಿನ ಬೆಳಗ್ಗೆಯೇ! ಹಾಗಾಗಿ ಈ ಭಾಗದಲ್ಲಿ ನಿತ್ಯ ಎಷ್ಟು ಸಮಯ ವಿದ್ಯುತ್ ಇರುತ್ತದೆ ಎಂಬುದೇ ದೊಡ್ಡ ಯಕ್ಷಪ್ರಶ್ನೆ! ಈ ವಿಚಿತ್ರ ಸಮಸ್ಯೆ ಇರುವುದು ಎಲ್ಲಿಯೋ ಬೆಟ್ಟ ಗುಡ್ಡಗಳಿರುವ ಪ್ರದೇಶದಲ್ಲಿ ಅಲ್ಲ. ಇಲ್ಲಿನ ಮಂಚಿ –ಕೊಳ್ನಾಡು ಗ್ರಾಮದಲ್ಲಿ.

2025ರ ಮೇ ತಿಂಗಳಿನಿಂದ ಸಮಸ್ಯೆಯಿದೆ

ತಾಜಾ ಉದಾಹರಣೆ ಎಂದರೆ ಸಣ್ಣ ಮಳೆಗೆ ಸೋಮವಾರ ರಾತ್ರಿ ಕಡಿತಗೊಂಡ ವಿದ್ಯುತ್, ಬಳಿಕ ಈ ಭಾಗದಲ್ಲಿ ಬೆಳಗಿದ್ದು ಮಂಗಳವಾರ ಮಧ್ಯಾಹ್ನ. ಇನ್ನೂ ವಿಶೇಷವೆಂದರೆ ಇಲ್ಲಿನ ಜನರಿಗೆ 2025ರ ಮೇ ತಿಂಗಳಿನಿಂದ ಈ 'ಕತ್ತಲು ಭಾಗ್ಯ' ಆರಂಭವಾಗಿದೆ. ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮಾತ್ರ ಸ್ಥಳೀಯ ಮೆಸ್ಕಾಂ ಸಿಬ್ಬಂದಿಗಳಿಗೆ ಸಾಧ್ಯವಾಗಿಲ್ಲ ಎಂಬುದು ವಿಪರ್ಯಾಸ ಎನ್ನುತ್ತಿದ್ದಾರೆ ಸ್ಥಳೀಯರು.

ಶಾಲೆ, ಧಾರ್ಮಿಕ ಕೇಂದ್ರ, ಅಂಗಡಿಗಳಿವೆ

ಈ ಪರಿಸರದಲ್ಲಿ ಧಾರ್ಮಿಕ ಕೇಂದ್ರ, ಸರ್ಕಾರಿ ಶಾಲೆ, ಅಂಗನವಾಡಿ, ಅಂಗಡಿ ಮುಂಗಟ್ಟು ಹತ್ತಾರು ಮನೆ ಇವೆ. ಹಾಲು, ಐಸ್‌ಕ್ರೀಮ್ ಮಾರಾಟ ಮಾಡುವ ಸ್ಥಳೀಯ ವ್ಯಾಪಾರಸ್ಥರು ನಿತ್ಯ ಸಾಕಷ್ಟು ನಷ್ಟ ಮಾಡಿಕೊಳ್ಳುತ್ತಿದ್ದಾರೆ. ವಿದ್ಯುತ್ ಕಡಿತದ ತಕ್ಷಣ ಜೆಇ, ಲೈನ್‌ಮ್ಯಾನ್ ಸಂಪರ್ಕಿಸಲು ಯತ್ನಿಸಿದರೆ ಅವರು ಕರೆಯನ್ನೇ ಸ್ವೀಕರಿಸುತ್ತಿಲ್ಲ. ಕರೆ ಸ್ವೀಕರಿಸಿದರೆ ಗೆಲ್ಲು ಬಿದ್ದಿದೆ, ತಂತಿ ಕಡಿದಿದೆ ಎಂಬ ಸಿದ್ಧ ಉತ್ತರ ಕೇಳಿ ಜನ ಸುಸ್ತಾಗಿದ್ದಾರೆ. ಸದ್ಯ ಸ್ಥಳೀಯಾಡಳಿತ ಸಂಸ್ಥೆ ಜನಪ್ರತಿನಿಧಿಗಳು ಇಲ್ಲದಿದ್ದು, ಅಧಿಕಾರಿಗಳು ನಡೆದದ್ದೇ ಹಾದಿ ಎಂಬಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಕಳೆದ ಒಂದು ವರ್ಷದಿಂದ ಇಲ್ಲಿನ ವಿದ್ಯುತ್ ಸಮಸ್ಯೆ ಮೂಲ ಕಂಡುಹಿಡಿದು ಬಗೆಹರಿಸಲು ಸಾಧ್ಯವಾಗಿಲ್ಲವೆಂದರೆ ಇಲ್ಲಿ ಜೆಇ, ಲೈನ್‌ಮ್ಯಾನ್ ಯಾವ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂಬ ಆರೋಪ ಸ್ಥಳೀಯರಿಂದ ವ್ಯಕ್ತವಾಗಿದೆ. »ಪುಟ 6



ಸಂಗಮ ವಿಶೇಷ

ಹೀಗಿದೆ ಪರಿವರ್ತಕದ ಸ್ಥಿತಿ

ಜನ ಸಹಜವಾಗಿ ರೋಸಿಹೋಗಿದ್ದಾರೆ

ಸಮಸ್ಯೆ ಬಗ್ಗೆ ದೂರು ನೀಡಿದರೆ ಜೆಇ, ಲೈನ್‌ಮ್ಯಾನ್‌ನಿಂದ ಉಡಾಫೆ ಉತ್ತರ ಬಿಟ್ಟರೆ ಶಾಶ್ವತ ಪರಿಹಾರ ಸಿಕ್ಕಿಲ್ಲ. 2025 ಮೇ ಯಿಂದ ಇಲ್ಲಿ ಸಮಸ್ಯೆ ಕಾಡುತ್ತಿದೆ. ಮೆಸ್ಕಾಂನ ಹೆಲ್ಪ್‌ಲೈನ್ 1912ರಲ್ಲಿ ದಾಖಲಾದ ದೂರು ಪರಿಶೀಲಿಸಿಯೂ ಕ್ರಮವಾಗಿಲ್ಲದ ಕಾರಣ ಜನರು ಸಹಜವಾಗಿ ರೋಸಿಹೋಗಿದ್ದಾರೆ. ಈ ಬಗ್ಗೆ ಮೇಲಾಧಿಕಾರಿಗಳು, ಮೆಸ್ಕಾಂ ನಿಗಮದ ಅಧ್ಯಕ್ಷರ ಗಮನಕ್ಕೆ ತರಲಾಗುವುದು.

● **ಇಕ್ಬಾಲ್ ಮಂಚಿ,** ಸಾಮಾಜಿಕ ಕಾರ್ಯಕರ್ತರು

ಕೊಟ್ಟಿರುವ ದೂರಿಗೆ ಲೆಕ್ಕವಿಲ್ಲ

2025ರಿಂದ ಇದುವರೆಗೆ ಪ್ರತಿನಿತ್ಯ ವಿದ್ಯುತ್ ಕಡಿತವಾದ ತಕ್ಷಣ 1912 ನಂಬರಿನಲ್ಲಿ ದೂರು ದಾಖಲಿಸಿರುವ ಪಟ್ಟಿಯೇ ಸಾಕಷ್ಟು ಉದ್ದವಿದೆ. ಸಾಲದೆಂಬಂತೆ ಸಾಲೆತ್ತೂರಿನಲ್ಲಿರುವ ಮೆಸ್ಕಾಂ ಉಪವಿಭಾಗ ಕಚೇರಿಗೂ ಸ್ಥಳೀಯರು ತೆರಳಿ ಸಮಸ್ಯೆ ಬಗೆಹರಿಸುವಂತೆ ಕೇಳಿಕೊಂಡಿದ್ದಾರೆ. ಆದರೆ ಸಮಸ್ಯೆ ಮಾತ್ರ ಯಥಾಸ್ಥಿತಿಯಲ್ಲಿದೆ.

ಕಾಣೆಯಾದ ದೇಸಿ ಶ್ವಾನ ಪತ್ತೆಗೆ ಬ್ಯಾನರ್ | ಫಲ ನೀಡಿತು ಮಾಲಕನ ಶ್ರಮ
'ಚಿನ್ನು' ಹುಡುಕಿ ಕೊಟ್ಟವರಿಗೆ ಸಿಕ್ಕಿತು ರೂ.50 ಸಾವಿರ!

ಅನೇಕರಿಗೆ ಶ್ವಾನವೆಂದರೆ ಎಲ್ಲಿಲ್ಲದ ಪ್ರೀತಿ, ಕಾಳಜಿ. ಸಾಕಷ್ಟು ಮಂದಿ ಸ್ವಾಮಿ ನಿಷ್ಠೆಯುಳ್ಳ ಶ್ವಾನಕ್ಕೆ ಸಾವಿರಾರು ರೂ. ಖರ್ಚು ಮಾಡಿ ಸಾಕಿ ಸಲಹುವವರನ್ನು ನಿಮ್ಮ ಸುತ್ತಮುತ್ತಲೇ ಕಾಣಬಹುದು. ಅದೇ ರೀತಿ ತನ್ನ ಪ್ರೀತಿಯ ದೇಸಿ ತಳಿಯ ಶ್ವಾನ ಕಳೆದು ಹೋದಾಗ ಮರುಗಿದ ಮಾಲಕ ಅದನ್ನು ಹುಡುಕಿ ಕೊಟ್ಟವರಿಗೆ ಭಾರೀ ಮೊತ್ತದ ಬಹುಮಾನ ನೀಡಿರುವ ವಿದ್ಯಮಾನ ಪುತ್ತೂರಿನಲ್ಲಿ ನಡೆದಿದೆ.

ಪುತ್ತೂರು: ಕಬಕ ಸಮೀಪದ ಪೋಳ್ಯ ನಿವಾಸಿ ಗಣೇಶ್ ಕೇರ ಎಂಬವರ ಮನೆಯ ದೇಸಿ ತಳಿಯ ಶ್ವಾನ 'ಚಿನ್ನು' ಒಂದು ದಿನ ಇದ್ದಕ್ಕಿದ್ದಂತೆಯೇ ನಾಪತ್ತೆಯಾಯಿತು. ಆದರ ಪತ್ತೆ ಸಲುವಾಗಿ ಗಣೇಶ್, ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿ ಹಂಚಿಕೊಂಡಿದ್ದಲ್ಲದೇ, ನಗರದ ವಿವಿಧೆಡೆ ಶ್ವಾನದ ಮಾಹಿತಿ ಇರುವ ಬ್ಯಾನರ್ ಅಳವಡಿಸಿದ್ದರು. ಹುಡುಕಿ ಕೊಟ್ಟವರಿಗೆ ಅಥವಾ ಸುಳಿವು ನೀಡಿದವರಿಗೆ ರೂ.50 ಸಾವಿರ ಬಹುಮಾನ ನೀಡುವುದಾಗಿ ಘೋಷಿಸಿದ್ದರು. ಆದರೆ ನಾಪತ್ತೆಯಾಗಿದ್ದ ಚಿನ್ನು ಗಣೇಶ್ ಕೇರ ಅವರ ಮನೆಯ ಸುಮಾರು 2 ಕಿ.ಮೀ. ಸುತ್ತಮುತ್ತಲಲ್ಲೇ ತಿರುಗಾಡುತ್ತಿತ್ತು. ನಾಪತ್ತೆಯಾಗಿದ್ದ ಮೂರು ದಿನಗಳ ಬಳಿಕ ನಾಯಿಯನ್ನು ಪೋಳ್ಯ ನಿವಾಸಿ ಪುರಂದರ ಎಂಬವರು ನೋಡಿದ್ದರು. ತಕ್ಷಣ ಅವರು ಗಣೇಶ್ ಅವರಿಗೆ ಮಾಹಿತಿ ನೀಡಿದ್ದರೂ ಅಂದು ಚಿನ್ನು ಮತ್ತೆ ಕಣ್ಣು ತಪ್ಪಿಸಿಕೊಂಡಿತ್ತು. ಎರಡು ದಿನಗಳ ಹಿಂದೆ ನಾಯಿ ಮತ್ತೆ ಪುರಂದರ ಅವರ ಕಣ್ಣಿಗೆ ಬಿದ್ದಿತ್ತು. ತಕ್ಷಣವೇ ಅವರು ಶ್ವಾನವನ್ನು ಅಲ್ಲೇ ಹಿಡಿದು ಗಣೇಶ ಅವರಿಗೆ ಒಪ್ಪಿಸಿದ್ದರು. ಚಿನ್ನುವನ್ನು ಹುಡುಕಿಕೊಟ್ಟ ಪುರಂದರ ಅವರನ್ನು ಗಣೇಶ್ ತನ್ನ ಮನೆಗೆ ಕರೆಸಿ ರೂ.50 ಸಾವಿರ ಚೆಕ್ ವಿತರಿಸಿ ಪುರಂದರ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ.



ಚಿನು ಕಾಲಿನ ಸ್ವಾಧೀನ ಕಳೆದುಕೊಂಡಿತ್ತು...

ಗಣೇಶ್ ಕೇರ, ಮನೆಯಲ್ಲಿ 30 ನಾಯಿಗಳನ್ನು ಸಾಕುತ್ತಿದ್ದಾರೆ. ಅವುಗಳಲ್ಲಿ 'ಚಿನ್ನು' ಫಿಟ್ಸ್‌ನಿಂದಾಗಿ ಕಾಲಿನ ಸ್ವಾಧೀನ ಕಳೆದುಕೊಂಡಿತ್ತು. ಮೂರು ವಾರಗಳ ಹಿಂದೆ ಅದು ಕಾಣೆಯಾಗಿತ್ತು. ಈ ಬಗ್ಗೆ ಮಾಧ್ಯಮಗಳಲ್ಲಿ ಚಿನ್ನುವಿನ ಫೋಟೋ ಹಾಕಿ ಹುಡುಕಿ ಕೊಟ್ಟವರಿಗೆ ಬಹುಮಾನ ನೀಡುವುದಾಗಿ ಘೋಷಿಸಿದ್ದರು.

ಗುಳಿಕಾನ ಗುಡ್ಡದ ಪ್ರಾಕೃತಿಕ ವಿಕೋಪಕ್ಕೆ ತುಂಬಿತು ಎಂಟು ವರ್ಷ | ಇನ್ನೂ ಸಮಸ್ಯೆಯ ಸುಳಿಯಲ್ಲಿ ಮರೆಯಾಗಿದೆ ಸಂತ್ರಸ್ತರ ಹರ್ಷ
ಸಿಕ್ಕಿಲ್ಲ ಪರ್ಯಾಯ ನಿವೇಶನ, ಇಲ್ಲಿ ನಿರೀಕ್ಷೆಯಲ್ಲೇ ಸಾಗುತ್ತಿದೆ ಸಂಕಷ್ಟದ ಜೀವನ

ಸುಬ್ರಹ್ಮಣ್ಯ: 2018ರ ಭೀಕರ ಮಳೆಗಾಲದಲ್ಲಿ ಬಿರುಕು ಬಿಟ್ಟಿದ್ದ ಕಲ್ಮಕಾರು ಗ್ರಾಮದ ಗುಳಿಕಾನ ಗುಡ್ಡದ ನಿವಾಸಿಗಳ ಸಂಕಷ್ಟ ವರ್ಷ ಎಂಟು ಉರುಳಿ ದರೂ ಇನ್ನೂ ಮುಗಿದಿಲ್ಲ. ಗುಡ್ಡದ ಭೂಭಾಗ ಅಪಾಯ ಕಾರಿಯಾಗಿದೆ ಎಂದು ತಜ್ಞರು ವರದಿ ನೀಡಿದ್ದರೂ, ಪರ್ಯಾಯ ವ್ಯವಸ್ಥೆಗಳು ಸಿಗದ ಕಾರಣ ಹಲವು ಕುಟುಂಬಗಳು ಇಂದಿಗೂ ಅದೇ ಪ್ರದೇಶದಲ್ಲಿ ಜೀವ ಭಯದ ನಡುವೆ ಬದುಕು ಸಾಗಿಸುತ್ತಿವೆ.

ಒಂದು ಮೀಟರ್‌ಗೂ ಅಧಿಕ ಅಗಲದ ಬಿರುಕು

ಗುಳಿಕಾನ ಗುಡ್ಡದಲ್ಲಿ ಒಂದು ಮೀಟರ್‌ಗೂ ಅಧಿಕ ಅಗಲದ ಬಿರುಕು ಕಾಣಿಸಿಕೊಂಡಿತ್ತು. ಸುಮಾರು ಅರ್ಧ ಕಿಲೋಮೀಟರ್ ವ್ಯಾಪ್ತಿಯಲ್ಲಿ ಭೂಮಿ ಬಾಯಿ ಬಿಟ್ಟಂತಾಗಿದ್ದ ದೃಶ್ಯ ಸ್ಥಳೀಯರಲ್ಲಿ ಆತಂಕ ಮೂಡಿಸಿತ್ತು. ಬಳಿಕ ಸ್ಥಳಕ್ಕೆ ಭೇಟಿ ನೀಡಿದ ಭೂ ವಿಜ್ಞಾನಿಗಳು ಮತ್ತು ತಜ್ಞರು ಈ ಪ್ರದೇಶ ವಾಸಕ್ಕೆ ಯೋಗ್ಯವಲ್ಲ ಎಂದು ಅಭಿಪ್ರಾಯಪಟ್ಟಿದ್ದರು. ತಜ್ಞರ ವರದಿ ಸರ್ಕಾರಕ್ಕೂ ಸಲ್ಲಿಸಲಾಗಿದ್ದರೂ, ಅಪಾಯದ ವಲಯದಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಇದುವರೆಗೆ ಶಾಶ್ವತ ಪುನರ್ವಸತಿ ಕಲ್ಪಿಸಲಾಗಿಲ್ಲ. ಪನ್ನೆಯ ಮಡಿವಾಳ ಪಡ್ಪು ಎಂಬಲ್ಲಿ ಸರ್ಕಾರಿ ಸ್ಥಳವಿದ್ದು ಅಲ್ಲಿ ಕೊಡುವುದಾಗಿ ನಿರ್ಧರಿಸಲಾಗಿ ಪ್ರಕ್ರಿಯೆ ಆರಂಭಿಸಲಾಯಿತು. ಅಲ್ಲಿಯೂ ಅರಣ್ಯ ಇಲಾಖೆ ಅದು ಭಾಗಶ ಅರಣ್ಯ ಬರುವುದಾಗಿ ಆಕ್ಷೇಪ ವ್ಯಕ್ತಪಡಿಸಿದ ಕಾರಣ ಗುಳಿಕಾನದ ಸಂತ್ರಸ್ತರಿಗೆ ನಿವೇಶನ ಕೊಡುವ ವಿಚಾರ ಮಾತ್ರ ಹಳ್ಳ ಹಿಡಿಯಲಾರಂಭಿಸಿತು. »ಪುಟ 6


ಸಂಗಮ ವಿಶೇಷ

ಪದಡ್ಕದಲ್ಲಿ ನಿವೇಶನ ನೀಡಲು ಅರಣ್ಯ ಇಲಾಖೆಯ ಆಕ್ಷೇಪ

ಮೊದಲಾಗಿ ಕಲ್ಮಕಾರಿನ ಪದಡ್ಕ ಎಂಬಲ್ಲಿ ಸರ್ಕಾರಿ ಜಾಗವಿದ್ದು ಸಂತ್ರಸ್ತರಿಗೆ ಅಲ್ಲಿ ಕೊಡುವುದಾಗಿ ನಿರ್ಧರಿಸಲಾಯಿತು. ಆದರೆ, ಆ ಸ್ಥಳ ಅರಣ್ಯ ಪ್ರದೇಶವಾಗಿದ್ದು ಅದು ಅರಣ್ಯ ಇಲಾಖೆ ಸೇರಿರುವುದಾಗಿ ಅರಣ್ಯ ಇಲಾಖೆ ಆಕ್ಷೇಪ ಎತ್ತಿದ ಕಾರಣ ಆ ಸ್ಥಳದ ವಿಚಾರ ಕೈ ಬಿಡಲಾಯಿತು.

ಈಗ ಅಂಗನವಾಡಿಯಲ್ಲಿ ಪುನರ್ವಸತಿ ಕೂಡಾ ಇಲ್ಲ...

ಆರಂಭದ ಕೆಲವು ಮಳೆಗಾಲದಲ್ಲಿ ತೀವ್ರ ಮಳೆಯಾದಾಗ ಮುನ್ನೆಚ್ಚರಿಕಾ ಕ್ರಮವಾಗಿ ಗುಳಿಕಾನದ ಅಪಾಯದಲ್ಲಿರುವವರಿಗೆ ಕಲ್ಮಕಾರು ಅಂಗನವಾಡಿಯಲ್ಲಿ ಪುನರ್ವಸತಿ ಒದಗಿಸಲಾಯಿತು. ಆದರೆ, ಇತ್ತೀಚಿನ ಕೆಲ ವರ್ಷಗಳಿಂದ ಅದೂ ನಿಂತು ಹೋಗಿದೆ ಎನ್ನುತ್ತಿದ್ದಾರೆ ಇಲ್ಲಿನ ಸಂತ್ರಸ್ತರು.

- ಎಂಟು ವರ್ಷ ಕಳೆದರೂ ಸಿಗದ ಪರಿಹಾರ, ಗುಳಿಕಾನ ಗುಡ್ಡದ ಜನರ ಬದುಕು ಇನ್ನೂ ಆತಂಕದಲ್ಲಿ
- ಬಿರುಕು ಬಿಟ್ಟ ಗುಡ್ಡ, ಭಯದಲ್ಲೇ ಸಾಗಿದೆ ಬದುಕು, ಪುನರ್ವಸತಿಗಾಗಿ ಕಾಯುತ್ತಿರುವ ಕುಟುಂಬಗಳು
- ವಾಸಯೋಗ್ಯವಲ್ಲ ಎಂದು ತಜ್ಞರು ವರದಿ ಮಾಡಿದರೂ, ಅದೇ ಜಾಗದಲ್ಲಿ ಬದುಕುತ್ತಿರುವ ಜನರು

ಜಟಿಲ ಸಮಸ್ಯೆ ಪರಿಹರಿಸಲು ಜಂಟಿ ಸರ್ವೆ ಕೂಡಾ ನಡೆದಿತ್ತು

ಈ ಜಟಿಲ ಸಮಸ್ಯೆ ಸರಿ ಪಡಿಸಲು ಎರಡು ವರ್ಷಗಳ ಹಿಂದೆ ಮತ್ತೆ ಪನ್ನೆಯಲ್ಲಿ ಸರ್ಕಾರಿ ಸ್ಥಳ ನೀಡಲು ಯೋಜನೆ ಸಿದ್ಧವಾಯಿತು. ಕಂದಾಯ ಮತ್ತು ಅರಣ್ಯ ಇಲಾಖೆ ಸೇರಿ ಜಂಟಿ ಸರ್ವೆ ಮಾಡಿತು. ಬಳಿಕ ಅರಣ್ಯ, ಕಂದಾಯ ಭೂಮಿ ವಿಭಾಗ ಮಾಡಿ ಭೂಮಿ ಕೊಡುವ ವಿಚಾರದಲ್ಲಿಗೆ ಬಂದು ನಿಂತಿದೆ. ಇಲ್ಲಿ ಸುಮಾರು 50 ಸೆಂಟ್ಸ್ ಜಾಗವಿದ್ದು ಇದರ ಕಡತದಲ್ಲಿ ಸಣ್ಣ ತಿದ್ದುಪಡಿ ಆಗಿ ಬರಬೇಕಾಗಿದೆ. ಇದಾದರೆ ಬಳಿಕ ಭೂಮಿ ಗ್ರಾ.ಪಂ. ಒಡೆತನಕ್ಕೆ ಬಂದು ಬಳಿಕ ಗುಳಿಕಾನದವರಿಗೆ ಅಲ್ಪ ಜಾಗ ಸಿಗಲಿದೆ.

ಸುಳ್ಯ ತಾಲೂಕಿನಲ್ಲಿ 29 ಮಳೆ ಮಾಪನ ಕೇಂದ್ರಗಳ ಪೈಕಿ 12 ಘಟಕಗಳು ಸುಸ್ಥಿತಿ 2
ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಯೋಗ ದಿನಾಚರಣೆಯ ಸಂಭ್ರಮ 4
ಕಾಸರಗೋಡು ಜಿಲ್ಲಾ ಬಿಜೆಪಿಯಿಂದ ವಿಕಸಿತ ಭಾರತ ಸಮಾವೇಶ ಆಯೋಜನೆ 5
ರಸ್ತೆ, ಚರಂಡಿ, ಜಂಕ್ಷನ್ ಅಭಿವೃದ್ಧಿಗೆ ಅಂದಾಜು ಪಟ್ಟಿ ತಯಾರಿಸಲು ಯಶ್‌ಪಾಲ್ ಸೂಚನೆ 6

ಹೊಸ ಘಟಕ ಸ್ಥಾಪನೆ ಮನವಿಗೆ ಕಂಪೆನಿ ಸ್ಪಂದಿಸಿಲ್ಲ | ವರದಿ ಪಡೆಯಲು ಮೇಲ್ವಿಚಾರಣಾ ಸಮಿತಿ ಸೂಚನೆ

29 ಮಳೆ ಮಾಪನ ಕೇಂದ್ರಗಳ ಪೈಕಿ 12 ಘಟಕಗಳು ಸುಸ್ಥಿತಿ

ಸುಳ್ಯ: ಸುಳ್ಯ ತಾಲೂಕಿನಲ್ಲಿ 29 ಸ್ವಯಂಚಾಲಿತ ಹವಾಮಾನ ಕೇಂದ್ರ ಹಾಗೂ ಮಳೆ ಮಾಪನ ಕೇಂದ್ರಗಳ ಪೈಕಿ 12 ಸುಸ್ಥಿಯಲ್ಲಿದೆ. ಉಳಿದ ಕೇಂದ್ರಗಳ ಪರಿಶೀಲನೆ ನಡೆಸಿ ವರದಿ ನೀಡುವಂತೆ ಸ್ಪಟಿಕ ಕಂಪನಿಗೆ ಪತ್ರ ಬರೆಯಲು ತಾಲೂಕು ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಸಮಿತಿ ಅಧ್ಯಕ್ಷೆ ಮಂಜುಳಾ ಎಂ. ತೋಟಗಾರಿಕಾ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಮಂಗಳವಾರ ಸುಳ್ಯ ಸ್ವಯಂಚಾಲಿತ ಹವಮಾನ ಕೇಂದ್ರ ಹಾಗೂ ಮಳೆ ಮಾಪನ ಕೇಂದ್ರಗಳ ಮೇಲ್ವಿಚಾರಣೆ ಸಮಿತಿ ಸಭೆಯಲ್ಲಿ ಮಾತನಾಡಿ, ಮಳೆ ಮಾಪನ ಕೇಂದ್ರಗಳನ್ನು ಪ್ರತಿ ವಾರಕ್ಕೊಂದು ಬಾರಿ ಸ್ಥಳೀಯ ಪಂಚಾಯತ್ ಹಾಗೂ ಗ್ರಾಮ ಆಡಳಿತಾಧಿಕಾರಿಗಳು ಪರಿಶೀಲಿಸಿ ಮಾಪನ ಕೇಂದ್ರದ ಮೇಲೆ ಮಳೆ ಬೀಳಲು ಯಾವುದೇ ಅಡಚಣೆ ಆಗದಂತೆ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.



ಅಧಿಕಾರಿಗಳ ದೂರು

ತರಬೇತಿ ಪಡೆದ ಆಲೆಟ್ಟಿ ಗ್ರಾಮ ಆಡಳಿತಾಧಿಕಾರಿ ಶರತ್ ಎಸ್. ಮಾತನಾಡಿ, ಆಲೆಟ್ಟಿಯ ಮಳೆ ಮಾಪನ ಕೇಂದ್ರ ವರ್ಕಿಂಗ್‌ನಲ್ಲಿದೆಯೋ ಎಂಬ ಕುರಿತು ನಮಗೆ ಇನ್ನೂ ಸ್ಪಟಿಕ ಕಂಪನಿಯವರಿಂದ ಸ್ಪಷ್ಟ ಮಾಹಿತಿ ಸಿಕ್ಕಿಲ್ಲ ಎಂದು ಹೇಳುತ್ತಿದ್ದಂತೆಯೇ ಇತರ ಗ್ರಾಮಗಳ ಆಡಳಿತಾಧಿಕಾರಿಗಳು ಮತ್ತು ಅಭಿವೃದ್ಧಿ ಅಧಿಕಾರಿಗಳು ಅದಕ್ಕೆ ಧ್ವನಿಗೂಡಿಸಿದರು. ಫೆಬ್ರವರಿಯಲ್ಲಿ ಮನವಿ ಸಲ್ಲಿಸಿದ್ದರೂ ಮಾಪನ ಕೇಂದ್ರ ಸ್ಥಾಪನೆ ಮಾಡಿಲ್ಲ ಎಂದು ಪಿಡಿಒ ಮಾಹಿತಿ ನೀಡಿದರು. ಪ್ರತಿ ಗ್ರಾಮಗಳಲ್ಲಿ ಎಷ್ಟು ಮಳೆ ಆಗುತ್ತದೆ ಎಂಬ ಕುರಿತು ವರದಿ ನಮಗೆ ಸಿಗುತ್ತಿಲ್ಲ ಎಂದು ಅಭಿವೃದ್ಧಿ ಅಧಿಕಾರಿಗಳು ದೂರಿಕೊಂಡರು. ಸಭೆಯಲ್ಲಿ ನಿರ್ಣಯಿಸಲಾದಂತೆ ಸ್ಪಟಿಕ ಕಂಪನಿಗೆ ಪತ್ರ ಬರೆದು ಎಲ್ಲಾ ಮಾಪನ ಕೇಂದ್ರ ಚಾಲನೆಯಾಗುವಂತೆ ಮಾಡಲು ಸೂಚನೆ ನೀಡುವುದಾಗಿ ತಹಶೀಲ್ದಾರ್ ಹೇಳಿದರು.

ತಾಂತ್ರಿಕ ವರದಿ ಸಿಕ್ಕಿಲ್ಲ

ತೋಟಗಾರಿಕಾ ಹಿರಿಯ ಸಹಾಯಕ ನಿರ್ದೇಶಕ ಪ್ರಮೋದ್ ಮಾತನಾಡಿ, ಸುಳ್ಯ ವ್ಯಾಪ್ತಿಯಲ್ಲಿ ಇರುವ ಮಳೆ ಮಾಪನ ಕೇಂದ್ರಗಳ ಪರಿಶೀಲನೆ ನಡೆಸಲಾಗಿದ್ದು, 12 ಕಡೆಗಳಲ್ಲಿ ಮೇಲ್ನೋಟಕ್ಕೆ ಮಳೆ ಮಾಪನ ಕೇಂದ್ರ ಸರಿಯಾಗಿರುವುದಾಗಿ ಕಂಡು ಬಂದಿದೆ. 16 ಗಂಟೆಗಳಲ್ಲಿ ಬೇರೆ ಬೇರೆ ದುರಸ್ತಿ ಕಾರ್ಯಗಳು ನಡೆಯಬೇಕಾಗಿದೆ. ಆದರೆ, ಇವೆಲ್ಲದರ ತಾಂತ್ರಿಕ ವರದಿ ಇನ್ನಷ್ಟೇ ಸಿಗಬೇಕಾಗಿದೆ. ಈ ಬಾರಿಯೂ ಸ್ಪಟಿಕ ಕಂಪೆನಿ ಇದರ ಉಸ್ತುವಾರಿ ವಹಿಸಿಕೊಂಡಿದ್ದು, ಅವರು ಅದನ್ನು ಸರಿಪಡಿಸಬೇಕಾಗಿದೆ ಎಂದು ಹೇಳಿದರು.

ಅಜ್ಜಾವರ, ಅರಂತೋಡು, ಐವರ್ನಾಡು, ಕೊಡಿಯಾಳ, ಪೆರುವಾಜೆ, ಸುಳ್ಯ ಗ್ರಾಮಗಳಲ್ಲಿ ಮಳೆ ಮಾಪನ ಯಂತ್ರಗಳು ಮೇಲ್ನೋಟಕ್ಕೆ ಸುಸ್ಥಿರವಾಗಿ ಕಾಣಿಸಿಕೊಂಡರೆ ಇನ್ನುಳಿದಂತೆ ಆಲೆಟ್ಟಿ, ಅಮರಮುಡ್ನೂರು, ಬೆಳ್ಳಾರೆ, ಜಾಲ್ಸೂರು, ಕಳಂಜ, ಮಡಪ್ಪಾಡಿ, ಮಂಡೆಕೋಲು, ಮರ್ಕಂಜ, ನೆಲ್ಲೂರು ಕೆಮ್ರಾಜೆಗಳಲ್ಲಿ ತುಕ್ಕು ಹಿಡಿದಿರುವ ಯಂತ್ರಗಳಾಗಿವೆ. ಬಾಳಿಲ, ಕನಕಮಜಲು, ಸಂಪಾಜೆ, ಉಬರಡ್ಕ ಮಿತ್ತೂರು, ದೇವಚಳ್ಳ, ಗುತ್ತಿಗಾರು, ಹರಿಹರಪಳ್ಳತ್ತಡ್ಕ, ಕಲ್ಮಡ್ಕ, ಕೊಲ್ಲಮೊಗ್ರ, ಪಂಜ, ಬಲ್ಪ, ಎಡಮಂಗಲಗಳಲ್ಲಿ ಬ್ಯಾಟರಿ, ಬಕೇಟ್ ಹಾಗೂ ಯಂತ್ರಗಳು ತುಕ್ಕು ಹಿಡಿದಿರುವ ಸ್ಥಿತಿಯಲ್ಲಿವೆ. ಸುಬ್ರಹ್ಮಣ್ಯ ಹಾಗೂ ಮುರುಳ್ಯ ಗ್ರಾಮದಲ್ಲಿ ಮಾಪನ ಯಂತ್ರವೇ ಇರುವುದಿಲ್ಲ ಎಂದು ಅವರು ಸಭೆಗೆ ತಿಳಿಸಿದರು. ಈ ಕುರಿತು ತುರ್ತು ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಸೂಚಿಸಿದರು.

ವೇದಿಕೆಯಲ್ಲಿ ಸಹಾಯಕ ಕೃಷಿ ಉಪನಿರ್ದೇಶಕ ಗುರುಪ್ರಸಾದ್ ಎಂ.ಎಸ್. ಉಪಸ್ಥಿತರಿದ್ದರು. ಆರಬಣ್ಣ ಪೂಜೇರ್ ಸ್ವಾಗತಿಸಿ, ಸಹಾನ ವಂದಿಸಿದರು.

ತಕ್ಷಣ ಪಾವತಿಗೆ ಸೂಚನೆ

ಹಿಂದಿನ ಬೆಳೆ ವಿಮೆ ಪಾವತಿಗೆ ಸಂಬಂಧಿಸಿದಂತೆ ರೈತರು ಆಕ್ರೋಶ ವ್ಯಕ್ತಪಡಿಸಿದ ಬಳಿಕ ಪಾವತಿಯಾಗಿದ್ದು 2024-25ನೇ ಸಾಲಿನ ಪಾವತಿ ಉಳಿಕೆಯಾಗಿರುವುದನ್ನು ತಕ್ಷಣವೇ ಪಾವತಿಗೆ ಕ್ರಮ ಕೈಗೊಳ್ಳಬೇಕು ಎಂದು ತಹಶೀಲ್ದಾರ್ ಟಾಟಾ ಎಐಜಿ ಕಂಪನಿ ಸಿಬ್ಬಂದಿಗಳಿಗೆ ಸೂಚನೆ ನೀಡಿದರು.

ಸುತ್ತಮುತ್ತ

ಜೂ. 24ರಂದು ಜಂಬೋ ಸರ್ಕಸ್ ಕಲಾವಿದರಿಗೆ ಸನ್ಮಾನ

ಪುತ್ತೂರು: ಸರ್ಕಸ್ ಎಂಬುದು ಕೇವಲ ಮನರಂಜನೆಯ ಮಾಧ್ಯಮವಲ್ಲ; ಅದು ಅಪಾರ ಪರಿಶ್ರಮ, ಸಾಹಸ, ಶಿಸ್ತು ಹಾಗೂ ಕಲಾತ್ಮಕ ಪ್ರತಿಭೆಯ ಸಂಗಮವಾಗಿದೆ. ಇಂತಹ ಅಪರೂಪದ ಕಲೆಯನ್ನು ಉಳಿಸಿ ಬೆಳೆಸುತ್ತಿರುವ ಕಲಾವಿದರನ್ನು ಗೌರವಿಸುವ ಉದ್ದೇಶದಿಂದ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರೋಟರಿ ಕ್ಲಬ್ ಪುತ್ತೂರು ಯುವ ಜಂಟಿಯಾಗಿ ಜೂ.24ರಂದು ಸಂಜೆ 7 ಗಂಟೆಗೆ ಜಂಬೋ ಸರ್ಕಸ್ ಟೆಂಟ್‌ನಲ್ಲಿ ಜಂಬೋ ಸರ್ಕಸ್ ಕಲಾವಿದರ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಸಂದರ್ಭದಲ್ಲಿ ಜಂಬೋ ಸರ್ಕಸ್‌ನ ಸುಮಾರು 40 ಕಲಾವಿದರು ಹಾಗೂ 60 ಸಿಬ್ಬಂದಿ ಸೇರಿದಂತೆ ಒಟ್ಟು 120 ಮಂದಿಯನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಗುವುದು. ಇದರ ಜೊತೆಗೆ, ಪುತ್ತೂರಿನ ಪ್ರತಿಷ್ಠಿತ ಮುಳಿಯ ಸಂಸ್ಥೆಯ ವತಿಯಿಂದ ಎಲ್ಲಾ 120 ಕಲಾವಿದರು ಹಾಗೂ ಸಿಬ್ಬಂದಿಗೆ ವಿಶೇಷ ನೆನಪಿನ ಉಡುಗೊರೆ ನೀಡಿ ಗೌರವಿಸಲಾಗುತ್ತಿದೆ. ಮೂಲತಃ ಕೇರಳ ಮೂಲದ ಮಾಲಕತ್ವದ ಜಂಬೋ ಸರ್ಕಸ್ ಆಗಿದ್ದರೂ, ಕರ್ನಾಟಕದಲ್ಲಿ ಪ್ರದರ್ಶನ ನೀಡುವಾಗ ಕನ್ನಡದಲ್ಲಿ ವೀಕ್ಷಕ ವಿವರಣೆ, ಕನ್ನಡ ಹಾಡುಗಳ ಪ್ರಸಾರ ಹಾಗೂ ಕನ್ನಡ ನಾಮಫಲಕಗಳ ಬಳಕೆಯ ಮೂಲಕ ಕನ್ನಡ ಭಾಷೆಗೆ ವಿಶೇಷ ಗೌರವ ಸಲ್ಲಿಸುತ್ತಿರುವುದು ಅಭಿನಂದನಾರ್ಹ. ಕನ್ನಡದ ಮೇಲಿನ ಈ ಅಭಿಮಾನವನ್ನು ಗುರುತಿಸಿ, ಜೊತೆಗೆ ಕಷ್ಟ ಸವಾಲುಗಳ ನಡುವೆಯೂ ಸರ್ಕಸ್ ಕಲೆಯನ್ನು ಜೀವಂತವಾಗಿರಿಸಿರುವ ಕಲಾವಿದರ ಪರಿಶ್ರಮವನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇದು ಕೇವಲ ಸನ್ಮಾನ ಕಾರ್ಯಕ್ರಮವಲ್ಲ, ಕಲೆಗೆ ಗೌರವ, ಕಲಾವಿದರಿಗೆ ಕೃತಜ್ಞತೆ ಮತ್ತು ಕನ್ನಡದ ಮೇಲಿನ ಅಭಿಮಾನಕ್ಕೆ ಸಲ್ಲಿಸುವ ನಮನವಾಗಿದೆ ಎಂದು ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಉಮೇಶ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಧ್ಯಪಾಡಿ ದೇಗುಲದಲ್ಲಿ ಪುಷ್ಪರುದ್ರ ಸೂಕ್ತ ಪಠಣ

ಬಂಟ್ವಾಳ: ಶ್ರೀ ರುದ್ರ ಪಠಣ ಸಮಿತಿ ಬಂಟ್ವಾಳ ಇದರ ವತಿಯಿಂದ ಅಧ್ಯಪಾಡಿ ಮಹತೋಬಾರ ಶ್ರೀ ಆದಿನಾಥೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಶ್ರೀ ರುದ್ರ ಚಮಕನಮಕ, ಗಣಪತಿ ಸೂಕ್ತ, ಭಾಗ್ಯ ಸೂಕ್ತ ಸೌರ ಸೂಕ್ತ, ಶ್ರೀ ದೇವಿ ಸೂಕ್ತ, ಅಘ ಮರ್ಷಣ ಸೂಕ್ತ, ಪುರುಷ ಸೂಕ್ತ ಮಂತ್ರ ಪುಷ್ಪ ರುದ್ರ ಸೂಕ್ತ ಪಠಿಸಲಾಯಿತು. ಸಜೀಪಮಾಗಣೆ ತಂತ್ರಿ ಎಂ. ಸುಬ್ರಹ್ಮಣ್ಯ ಭಟ್, ಅರ್ಚಕ ಮಹೇಶ ಕೇಕುಣಾಯ, ಎ. ರವಿಶಂಕರ ಮಯ್ಯ, ಎಸ್ ವಿ ಎಸ್ ಕಾಲೇಜ್ ನಿವೃತ್ತ ಪ್ರಿನ್ಸಿಪಾಲ್ ಸೀತಾರಾಮ ಮಯ್ಯ, ಉಜಿರೆ ಎಸ್ ಡಿಎಂ ಕಾಲೇಜಿನ ಉಪನ್ಯಾಸಕ ರವಿಶಂಕರ್ ಕಾರಂತ, ನಿವೃತ್ತ ಪಿಡಬ್ಲ್ಯೂಡಿ ಇಂಜಿನಿಯರ್ ಶ್ರೀನಿವಾಸ ಹೊಳ್ಳ ಮಕಾರು, ಎ.ಕೃಷ್ಣ ಕುಮಾರ ಸೋಮಯಾಜಿ, ಎಂ. ಶಾಂತಾರಾಮ ರಾವ್, ಎಂ. ಜಯರಾಮ ಮಯ್ಯ, ಚಂದ್ರಮೋಹನ ರಾವ್, ರಾಮಚಂದ್ರ ಮಯ್ಯ, ಕೆ. ರಾಜರಾಮ ಐತಾಳ, ಹರೀಶ್ ಭಟ್ ಮೊದಲಾದವರು ವೇದ ಸೂಕ್ತ ಪಠಣದಲ್ಲಿ ಭಾಗವಹಿಸಿದ್ದರು

ರೇಬಿಸ್ ಲಸಿಕಾ ಶಿಬಿರ

ಕಿನ್ನಿಗೋಳಿ: ಜನನಿ ಜನ ಸೇವಾ ಸಂಸ್ಥೆ ಉಲ್ಲಂಜೆ ಕೊಡೆತ್ತೂರು, ಕಿನ್ನಿಗೋಳಿ ಪಶುಪಾಲನ ಪಶು ವೈದ್ಯಕೀಯ ಸೇವಾ ಇಲಾಖೆ ಪಶು ಆಸ್ಪತ್ರೆ ಹಾಗೂ ಪಟ್ಟಣ ಪಂಚಾಯತ್ ಆಶ್ರಯದಲ್ಲಿ ಉಚಿತ ರೇಬಿಸ್ ಲಸಿಕಾ ಕಾರ್ಯಕ್ರಮ ಉಲ್ಲಂಜೆ ಶ್ರೀ ಕ್ಷೇತ್ರ ಕೊರಗಜ್ಜ ಮಂತ್ರ ದೇವತಾ ಸನ್ನಿಧಾನದಲ್ಲಿ ನಡೆಯಿತು.



ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪಶುವೈದ್ಯಾಧಿಕಾರಿ ಡಾ. ವಿಶ್ವಾರಾಧ್ಯ ರೇಬಿಸ್ ಲಸಿಕಾ ಬಗ್ಗೆ ಮಾಹಿತಿ ನೀಡಿದರು. ಜನನಿ ಜನ ಸೇವಾ ಸಂಸ್ಥೆಯ ಅಧ್ಯಕ್ಷ ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯ ಪ್ರಕಾಶ್, ಹರೀಶ್ ಪೂಜಾರಿ ,ಕಿನ್ನಿಗೋಳಿ ಪಟ್ಟಣ ಪಂಚಾಯತ್ ಸದಸ್ಯರಾದ ಶೈಲೇಶ್ ಅಂಚನ್, ಸಂತಾನ್ ಡಿಸೋಜ ಕೋಕಿಲ ಡಿ ಅಮೀನ್ , ಸುನಿತಾ ರೋಡ್ರಿಗಸ್, ಕೊಡೆತ್ತೂರು ಬರ್ಕೆ ಫ್ರೆಂಡ್ಸ್‌ನ ಅಧ್ಯಕ್ಷ ಪ್ರೇಮ್ ರಾಜ್ ಶೆಟ್ಟಿ ಮಾಧವ ಪೂಜಾರಿ ನಿತಿನ್ ಉಲ್ಲಂಜೆ ನವೀನ್ ಪ್ರಮೀಳಾ ಆಚಾರ್ಯ ಇದ್ದರು. ಶರತ್ ಶೆಟ್ಟಿ ಕಿನ್ನಿಗೋಳಿ ನಿರೂಪಿಸಿದರು. ಸುಮಾರು 132 ನಾಯಿಗಳಿಗೆ 42 ಬೆಕ್ಕುಗಳಿಗೆ ರೇಬಿಸ್ ಲಸಿಕೆ ನೀಡಲಾಯಿತು.

ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆ ನೂತನ ವಿದ್ಯಾರ್ಥಿಗಳಿಗೆ ಆಗತ-ಸ್ವಾಗತ

ಶಿಕ್ಷಣದ ಜೊತೆ ಸಂಸ್ಕಾರ ಅಗತ್ಯ: ಡಾ. ಭಟ್

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ 2026-27ನೇ ಸಾಲಿನ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಆಗತ-ಸ್ವಾಗತ ಕಾರ್ಯಕ್ರಮ ಮಧುಕರ ಸಭಾಂಗಣದಲ್ಲಿ ನಡೆಯಿತು.

ಆರಂಭದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಆರತಿ ಬೆಳಗುವುದರ ಮೂಲಕ ಸ್ವಾಗತಿಸಲಾಯಿತು. ಅತಿಥಿ ಅಭ್ಯಾಗತರು ದೀಪ ಪ್ರಜ್ವಲನೆ ಮತ್ತು ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿದರು.

ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕ ಹಾಗೂ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಣದ ಜೊತೆ ಸಂಸ್ಕಾರ ಅಗತ್ಯ. ಜ್ಞಾನದ ಮೂಲ ಭಾರತ ಅದು ನಮಗೆ ಮಾದರಿಯಾಗಲಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಮುಖ್ಯ ಅತಿಥಿಯಾಗಿದ್ದ ವಿಧಾನಪರಿಷತ್ ಸದಸ್ಯ ಶಾಂತರಾಮ ಬುಡ್ನಾ ಸಿದ್ದಿ ಮಾತನಾಡಿ, ಸಮಾಜವು ನಮಗೆ ಎಲ್ಲವನ್ನು ನೀಡಿದೆ. ನಮ್ಮಿಂದ ಸಮಾಜಕ್ಕೆ ಏನಾದರೂ ನೀಡುವ ಪ್ರಜೆಗಳಾಗಬೇಕು ಎಂದರು.

ಮೈಸೂರು ಎಸ್‌ಎಲ್‌ವಿ ಗ್ರೂಪ್‌ನ ಚೇರ್ ಮ್ಯಾನ್ ದಿವಾಕರದಾಸ್, ಚಿಕ್ಕಮಗಳೂರು ಬನ್ಯಾನ್ ಎಂಟರ್ ಪ್ರೈಸಸ್‌ನ ಮ್ಯಾನೇಜಿಂಗ್ ಪಾರ್ಟನರ್ ನಿತೀಶ್ ಗೌಡ, ಮೋನಿಶಾ ನರಸಿಂಹ ಮೂರ್ತಿ ಚಿಕ್ಕಮಗಳೂರು, ಆಲಕೋಡ್ ಬೇಕಲ ಗೋಕುಲಂ ಗೋಶಾಲೆ ಪರಂಪರಾ ವಿದ್ಯಾಪೀಠಂನ ನಾಗರತ್ನ ವಿಷ್ಣು ಹೆಬ್ಬಾರ್, ಉದ್ಯಮಿ ಸಂಜಯ್ ಮೇಲಾಂಟ, ಮಂಗಳೂರು ಸಾವಿತ್ರಿ ಮೆಮೋರಿಯಲ್ ಟ್ರಸ್ಟ್ ನ ವಿಶ್ವಾಸ ರಾವ್, ರಾಮದಾಸ್ ಶೆಟ್ಟಿ ಅತಿಥಿಗಳಾಗಿದ್ದರು.

ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯಕಾರಣಿ ಸದಸ್ಯರಾದ ಕಮಲಾ ಪ್ರಭಾಕರ್ ಭಟ್, ವಿದ್ಯಾಕೇಂದ್ರದ ಸಂಚಾಲಕ ವಸಂತ ಮಾಧವ ಶ್ರೀಮಾನ್, ಶ್ರೀರಾಮ ಪ್ರೌಢಶಾಲೆಯ ಮುಖ್ಯ ಗುರು ಗೋಪಾಲ್ ಎಂ. ಮತ್ತು ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಗೌರವಾರ್ಪಣೆ

2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಭುವಿ ಗೀತೆಯನ್ನು ಹಾಡಿದಳು. ತೃಪ್ತಿ ನಿರೂಪಿಸಿದಳು, ಭೂಮಿಕಾ ಸ್ವಾಗತಿಸಿದಳು. ಪೂಜಿತ ವಂದಿಸಿದಳು.



ವಿದ್ಯಾರ್ಥಿಗಳಿಂದ ಅಗ್ನಿಹೋತ್ರಕ್ಕೆ ಘೃತಾಹುತಿ

ಕಾರ್ಯಕ್ರಮದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ಅಗ್ನಿಹೋತ್ರಕ್ಕೆ ಘೃತಾಹುತಿಯನ್ನು ಮಾಡಿ, ಭಾರತಾಂಬೆಗೆ ಪುಷ್ಪಾರ್ಚನೆ ಮತ್ತು ಹಿರಿಯರಿಂದ ತಿಲಕ ಧಾರಣೆ ಯೊಂದಿಗೆ ಆಶೀರ್ವಾದ ಪಡೆದರು.

ಉಳ್ಳಾಲಬೈಲಿನಲ್ಲಿ ಮಳೆ ನೀರಿನ ಚರಂಡಿ ಉದ್ಘಾಟನೆ | ಶಾಸಕ ಕಿಶೋರ್ ವಿಶ್ವಾಸ

ಕಟ್ಟಕಡೆಯ ವ್ಯಕ್ತಿಗೂ ಬಿಜೆಪಿಯಿಂದ ನ್ಯಾಯ

ಉಳ್ಳಾಲ: ರಸ್ತೆ ಕಾಂಕ್ರೀಟೀಕರಣ, ಹೆದ್ದಾರಿ, ಚರಂಡಿ ನಿರ್ಮಾಣದಿಂದ ಮಾತ್ರ ಅಭಿವೃದ್ಧಿ ಸಾಧ್ಯವಿಲ್ಲ, ದೇಶದ ಪ್ರತಿಯೊಂದು ಗಲ್ಲಿಗಳೂ ಅಭಿವೃದ್ಧಿಗೊಂಡು, ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ಅಂತ್ಯೋದಯ ಪರಿಕಲ್ಪನೆಯಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕುವಂತಾಗುವುದೇ ಭಾರತೀಯ ಜನತಾಪಾರ್ಟಿಯ ಧ್ಯೇಯೋದ್ದೇಶವಾಗಿದೆ ಎಂದು ವಿಧಾನ ಪರಿಷತ್ ಶಾಸಕ ಕಿಶೋರ್ ಕುಮಾರ್ ಪುತ್ತೂರು ಹೇಳಿದರು.

ಉಳ್ಳಾಲ ಬೈಲು ವೈದ್ಯನಾಥ ನಗರ ಒಂದನೇ ಅಡ್ಡ ರಸ್ತೆಯಲ್ಲಿ ವಿಧಾನ ಪರಿಷತ್‌ನ ಶಾಸಕ ನಿಧಿಯ 8 ಲಕ್ಷ ಅನುದಾನದಲ್ಲಿ ನಿರ್ಮಾಣಗೊಂಡ ಮಳೆ ನೀರಿನ ಚರಂಡಿಯನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ ಭಾರಿ ವರುಣನ ಆರ್ಭಟದಿಂದ ಉಳ್ಳಾಲಬೈಲ್ ಪ್ರದೇಶದ ಅನೇಕ ಮನೆಗಳು ಜಲಾವೃತಗೊಂಡು ಅಪಾರ ನಷ್ಟ ಸಂಭವಿಸಿ ಜನ ಸಾಮಾನ್ಯರು ಕಂಗಾಲಾಗಿದ್ದರು. ಈ ಪ್ರದೇಶದ ಜನರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಚರಂಡಿ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆಯೆಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಮಾತನಾಡಿದರು. ಉಳ್ಳಾಲ ಚೀರುಂಭ ಭಗವತಿ ಕ್ಷೇತ್ರದ ಪ್ರಧಾನ ಅರ್ಚಕ ಮಂಜಪ್ಪ ಕಾರ್ನವರ್, ಬಿಜೆಪಿ ಕ್ಷೇತ್ರಾಧ್ಯಕ್ಷ ಜಗದೀಶ ಆಳ್ವ ಕುವೆತ್ತಬೈಲು, ಉಪಾಧ್ಯಕ್ಷ ರವಿಶಂಕರ್ ಸೋಮೇಶ್ವರ, ಪ್ರಧಾನ ಕಾರ್ಯದರ್ಶಿ ಮೋಹನ್ ರಾಜ್ ಕೆ.ಆರ್., ಮುಖಂಡರಾದ ಬಾಬು ಬಂಗೇರ, ಯಶವಂತ ಅಮೀನ್, ಮೀರಾ, ಮಹಿಳಾ ಮೋರ್ಚಾದ ಮಂಡಲ ಅಧ್ಯಕ್ಷೆ ಮಾಧವಿ ಉಳ್ಳಾಲ್, ಯುವ ಮೋರ್ಚಾದ ಅಧ್ಯಕ್ಷ ಮುರಳಿ ಕೊಣಾಜೆ, ರೈತ ಮೋರ್ಚಾದ ಪದ್ಮನಾಭ ಗಟ್ಟಿ ಪ್ರಮುಖರಾದ ಜಿತೇಂದ್ರ ಶೆಟ್ಟಿ ತಲಪಾಡಿಗುತ್ತು, ಸುಜಾತಾ ಶೆಟ್ಟಿ ಉದಯ ಆರ್.ಕೆ., ಪ್ರಕಾಶ್, ವಿಜಯ್, ಗುಣವತಿ ರೋಹಿದಾಸ್ ಬಂಗೇರ, ಜೀವನ್ ಉಳ್ಳಾಲ್, ಸೋಮೇಶ್ವರ ಪುರಸಭಾ ಸದಸ್ಯೆ ಸ್ವಪ್ನ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಬಿಜೆಪಿ ಮಂಡಲ ಪ್ರ.ಕಾ ದಯಾನಂದ ತೊಕ್ಕೊಟ್ಟು ಸ್ವಾಗತಿಸಿದರು. ಜಿಲ್ಲಾ ವಕ್ತಾರ ಜೀವನ್ ಕುಮಾರ್ ತೊಕ್ಕೊಟ್ಟು ನಿರೂಪಿಸಿದರು.



18 ಲಕ್ಷ ರೂ. ಅನುದಾನ

ಸಂಸದರ ನಿಧಿಯಿಂದ ರಸ್ತೆ ನಿರ್ಮಾಣಕ್ಕೆ ಹತ್ತು ಲಕ್ಷ, ವಿಧಾನ ಪರಿಷತ್ ಶಾಸಕ ನಿಧಿಯಿಂದ ಚರಂಡಿ ನಿರ್ಮಾಣಕ್ಕೆ 8 ಲಕ್ಷ ರೂ. ಸಹಿತ ಒಟ್ಟು 18 ಲಕ್ಷ ರೂ. ಅನುದಾನವನ್ನು ಉಳ್ಳಾಲಬೈಲ್ ವಾರ್ಡ್ ಒಂದಕ್ಕೆ ನೀಡಲಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಮತ್ತಷ್ಟು ಅಭಿವೃದ್ಧಿ ಕಾಮಗಾರಿ ನಡೆಸಲಾಗುವುದು.

- **ಜಗದೀಶ ಆಳ್ವ ಕುವೆತ್ತಬೈಲು, ಅಧ್ಯಕ್ಷರು, ಬಿಜೆಪಿ ಮಂಗಳೂರು ಮಂಡಲ**

ಪಟ್ಲ ಫೌಂಡೇಶನ್‌ನಿಂದ ವಿವೇಕಾನಂದ ಕಾಲೇಜಿನಲ್ಲಿ ಯಕ್ಷ ಶಿಕ್ಷಣ ತರಗತಿ ಆರಂಭ



ಕೈಕಂಬ: ಮಂಗಳೂರುಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ಯಕ್ಷಧ್ರುವ-ಯಕ್ಷಶಿಕ್ಷಣ ಯೋಜನೆಯನ್ವಯ ಎಡಪದವಿನ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ಯಕ್ಷಗಾನ ತರಗತಿಯನ್ನು ಸೋಮವಾರ ಉದ್ಘಾಟಿಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಯಕ್ಷಗಾನ ತರಗತಿಯ ಗುರು ದಿನೇಶ್ ಬಂಗೇರ ಮಾತನಾಡಿ, ಯಕ್ಷಗಾನ ಕೇವಲ ಜನಪದ ಕಲೆಯಲ್ಲ, ಅದು ಶಾಸ್ತ್ರೀಯ ಮತ್ತು ದೈವಿಕ ಕಲೆಯಾಗಿದೆ. ವಿದ್ಯಾರ್ಥಿಗಳು ಯಕ್ಷಗಾನ ಕಲಿಯುವುದರಿಂದ ವ್ಯಕ್ತಿತ್ವ ವಿಕಸನ, ಸಂವಹನ ಚಾತುರ್ಯ, ಅಸ್ಖಲಿತ ಮಾತುಗಾರಿಕೆ ಮತ್ತು ಧೈರ್ಯವನ್ನು ತಂದುಕೊಡುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕ ಪ್ರೇಮಾನಾಥ ಶೆಟ್ಟಿ ಮಾತನಾಡಿ, ವಿದ್ಯಾರ್ಥಿಗಳು ಉಚಿತವಾಗಿ ದೊರೆಯುವ ಈ ಯಕ್ಷಗಾನ ತರಬೇತಿಯನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾಲೇಜು ಆಡಳಿತ ಮಂಡಳಿಯ ಸದಸ್ಯ ಪ್ರಸಾದ್ ಕುಮಾರ್ ಎಡಪದವು, ಯಕ್ಷಧ್ರುವ ಪಟ್ಲ ಫೌಂಡೇಶನ್ ಮೂಡುಬಿದಿರೆ ಘಟಕದ ಅಧ್ಯಕ್ಷ ದಿವಾಕರ್ ಶೆಟ್ಟಿ ಸಂಚಾಲಕ ಮನೋಜ್ ಕುಮಾರ್ ಶೆಟ್ಟಿ ಯಕ್ಷಧ್ರುವ ಪಟ್ಲ ಫೌಂಡೇಶನ್ ಪೊಳಲಿ ಕೈಕಂಬ ಘಟಕದ ಅಧ್ಯಕ್ಷ ಉಮೇಶ್ ಭಂಡಾರಿ ಇದ್ದರು. ಪ್ರಾಂಶುಪಾಲೆ ಗಾಯತ್ರಿ ಎಸ್. ಪ್ರಭು ಸ್ವಾಗತಿಸಿ ಯಕ್ಷಧ್ರುವ ಫೌಂಡೇಶನ್‌ನ ಧ್ಯೇಯ, ಉದ್ದೇಶ, ನೆರವು, ಸಾಧನೆ, ಸಾಗಿ ಬಂದ ಪಯಣದ ಮಾಹಿತಿಯನ್ನು ನೀಡಿದರು. ಪ್ರೌಢಶಾಲಾ ವಿಭಾಗದ ದೈಹಿಕ ಶಿಕ್ಷಣ ಶಿಕ್ಷಕ ಶಾಂತರಾಮ ರೈ ಡಿ.ವಿ. ನಿರೂಪಿಸಿ, ಮುಖ್ಯ ಶಿಕ್ಷಕ ಶ್ರೀವಾಸು ಕೆ. ವಂದಿಸಿದರು.

ಬೋರ್ಡೋ ದ್ರಾವಣ ಬಿಟ್ಟ ಮೂರೇ ದಿನದಲ್ಲಿ ಕರಟಿ ಹೋಯ್ತು ಅಡಿಕೆ ತೋಟ

ಸುಬ್ರಹ್ಮಣ್ಯ: ಕೊಳೆ ರೋಗ ನಿಯಂತ್ರಣಕ್ಕೆ ರೈತರೊಬ್ಬರು ತೋಟದ ಅಡಿಕೆ ಗಿಡಗಳಿಗೆ ಮೈಲುತುತ್ತು ದ್ರಾವಣ ಸಿಂಪಡಿಸಿದ ಕೇವಲ ಮೂರೇ ದಿನದಲ್ಲಿ ಸುಮಾರು 300ಕ್ಕೂ ಹೆಚ್ಚು ಅಡಿಕೆ ಗಿಡ ಮತ್ತು ಮರಗಳು ಸಂಪೂರ್ಣವಾಗಿ ಕರಟಿ ಹೋಗಿರುವ ಘಟನೆ ಕಡಬ ತಾಲೂಕಿನ ಯೇನೆಕಲ್ಲು ಗ್ರಾಮದಲ್ಲಿ ನಡೆದಿದೆ. ತೋಟದ ಮಾಲಕ ಒಂದು ಬ್ಯಾರೆಲ್‌ನ ದ್ರಾವಣವನ್ನು 300ರಷ್ಟು ಅಡಿಕೆ ಸಸಿ ಮತ್ತು ಮರಗಳ ಎಲೆಗಳು ಸಿಂಪಡಿಸಿದ್ದರು. ಜೂ.21ರ ಭಾನುವಾರ ಬೆಳಗ್ಗೆ ನೋಡುವಾಗ ಸಂಪೂರ್ಣವಾಗಿ ಕರಟಿ ಹೋಗಿತ್ತು. ಆದರೆ, ಅದೇ ತೋಟದ ಇತರ ಭಾಗಗಳಿಗೆ ಬೇರೆ ಬ್ಯಾರೆಲ್‌ನಿಂದ ಸಿಂಪಡಿಸಿದ ಮರಗಳಿಗೆ ಯಾವುದೇ ತೊಂದರೆಯಾಗಿಲ್ಲ.



ಕೇವಲ ಆರಂಭದ ಒಂದು ಡ್ರಮ್ ದ್ರಾವಣವನ್ನು ಎಲ್ಲೆಲ್ಲಿ ಸಿಂಪಡಿಸಲಾಗಿದೆಯೋ ಅಲ್ಲಿ ಮಾತ್ರ ಈ ಸಮಸ್ಯೆ ಕಾಣಿಸಿಕೊಂಡಿದೆ. ಆರಂಭದ ಒಂದು ಡ್ರಮ್ ದ್ರಾವಣವನ್ನು ಸಿಂಪಡಿಸಿದ ಜಾಗದ ಗಿಡಗಳು ಮಾತ್ರ ಕರಟಿ ಹೋಗಿರುವುದರಿಂದ ಯಾರೋ ಉದ್ದೇಶಪೂರ್ವಕವಾಗಿ ಮರಗಳು ಮತ್ತು ಹುಲ್ಲು ಸಾಯಿಸಲು ಬಳಸುವ ರೌಂಡಪ್ ಎಂಬ ಅಪಾಯಕಾರಿ ರಾಸಾಯನಿಕ ಪುಡಿಯನ್ನು ಆ ಡ್ರಮ್‌ಗೆ ಬೆರೆಸಿರಬಹುದು ಎಂಬ ಸಂಶಯವನ್ನು ಮನೆಯವರು ಮತ್ತು ಪಕ್ಕದ ತೋಟದ ನೆರೆಹೊರೆಯವರು ವ್ಯಕ್ತಪಡಿಸುತ್ತಿದ್ದಾರೆ.

ಇದು ಮೈಲುತುತ್ತಿನಿಂದ ಉಂಟಾಗಿರುವ ಸಮಸ್ಯೆಯಂತೆ ಕಾಣುವುದಿಲ್ಲ, ಆರಂಭದಲ್ಲಿ ಬಳಸಿದ ಒಂದು ಡ್ರಮ್ ದ್ರಾವಣ ಸಿಂಪಡಿಸಿದ ಭಾಗದಲ್ಲಷ್ಟೇ ಸಮಸ್ಯೆ ಕಂಡು ಬಂದಿದೆ. ದ್ರಾವಣಕ್ಕೆ ರಾಸಾಯನಿಕ ಬೆರೆತಿರುವ ಸಾಧ್ಯತೆಯೂ ಇದೆ. ಪರಿಶೀಲನೆ ಬಳಿಕ ಕಾರಣ ತಿಳಿಯಲಿದೆ. ಯಾರ ಮೇಲೂ ಅನುಮಾನ ಇಲ್ಲ ಎಂದು ತೋಟದ ಮಾಲಕರು ಹೇಳಿದ್ದಾರೆ.

ಕಲಾವಿದ ರಾಮ್ ಪ್ರಸಾದ್ ವಿನ್ಯಾಸದ ವಿಬಿಜಿರಾಮ್ ಜಿ ಲೋಗೋ ಪ್ರಶಸ್ತಿಗೆ ಆಯ್ಕೆ

ಪುತ್ತೂರು: ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆಯು ವಿಕಸಿತ್ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಅಜೀವಿಕಾ ಮಿಷನ್ (ಗ್ರಾಮೀಣ) ವಿಬಿ-ಗ್ರಾಮ್ ಜಿ ಕಾಯ್ದೆಯ ಪ್ರಚಾರ- ಜಾಗೃತಿಯ ನಿಟ್ಟಿನಲ್ಲಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಲೋಗೋ ಸ್ಪರ್ಧೆಯಲ್ಲಿ ಪುತ್ತೂರಿನ ಕಲಾವಿದ ರಾಮ್ ಪ್ರಸಾದ್ ಕೆ. ಅವರು ವಿನ್ಯಾಸಗೊಳಿಸಿ ಸಲ್ಲಿಸಿದ ವಿಬಿಜಿರಾಮ್ ಜಿ ಲೋಗೋ ಪ್ರಶಸ್ತಿಗೆ ಆಯ್ಕೆಯಾಗಿದೆ. ಗ್ರಾಮೀಣಾಭಿವೃದ್ಧಿ ಇಲಾಖೆ ಜೂ. 28 ಮತ್ತು 29ರಂದು ಹೊಸದಿಲ್ಲಿಯ ಪೂಸಾದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಗ್ರಾಮೀಣ ವಿಕಾಸ ಸಮ್ಮೇಳನ- 2026ರಲ್ಲಿ ಅವರಿಗೆ ಗೌರವಾರ್ಪಣೆ ನಡೆಯಲಿದ್ದು, ಅವರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸಿ ಹೊಸದಿಲ್ಲಿಗೆ ಕರೆ ತರುವಂತೆ ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯು ದ.ಕ. ಜಿ.ಪಂ. ಸಿಇಒಗೆ ಸೂಚಿಸಿದೆ.



ಕಿಲ್ಪಾಡಿ: ಶಾಲಾ ಸಂಸತ್ತು, ಕ್ಲಬ್‌ಗಳಿಗೆ ಚಾಲನೆ



ಮುಲ್ಕಿ: ಬಳಿಯ ಕಿಲ್ಪಾಡಿ ವ್ಯಾಸ ಮಹರ್ಷಿ ವಿದ್ಯಾಪೀಠದ ಶಾಲಾ ಚಟುವಟಿಕೆ ಕೇಂದ್ರದಲ್ಲಿ ಶಾಲಾ ಸಂಸತ್ತು, ಕ್ಲಬ್‌ಗಳಿಗೆ ಚಾಲನೆ ನೀಡಲಾಯಿತು. ನಿವೃತ್ತ ಮುಖ್ಯೋಪಾಧ್ಯಾಯ ಜಿನರಾಜ್ ಸಿ. ಸಾಲ್ಯಾನ್, ಸಂಚಾಲಕ ಪಾಂಡುರಂಗ ಭಟ್, ಮುಖ್ಯೋಪಾಧ್ಯಾಯ ಕಾಮಾಕ್ಷಿ ಆರ್. ನಾಯಕ್ ಇದ್ದರು. ಶಿಕ್ಷಕ ಮಲ್ಲಿಕಾ ಸ್ವಾಗತಿಸಿದರು. ರಮ್ಯಶ್ರೀ ವಂದಿಸಿದರು. ಶ್ರೀ ಲಕ್ಷ್ಮಿ ಕಾಮತ್ ನಿರೂಪಿಸಿದರು.

ಸೋಮೇಶ್ವರ ಪುರಸಭೆ ಸಾಮಾನ್ಯಸಭೆಯಲ್ಲಿ ಶೋಭಲಕ್ಷ್ಮೀ ಭರವಸೆ | ನೀರಿನ ಸಂಪರ್ಕ ಬಿಟ್ಟು ಹೋಗಿದ್ದರೆ ಮಾಹಿತಿ ನೀಡಲು ಮನವಿ

ಎರಡು ವಾರದಲ್ಲಿ ಅಮೃತ್ 2.0 ಕುಡಿಯುವ ನೀರಿನ ಯೋಜನೆ ಪೈಪ್ ಲೈನ್ ಕಾಮಗಾರಿ ಪೂರ್ಣ

ಉಳ್ಳಾಲ: ಅಮೃತ್ 2.0 ಕುಡಿಯುವ ನೀರಿನ ಯೋಜನೆ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದ್ದು ಕೆಲವು ಕಡೆಗಳಲ್ಲಿ ಬಾಕಿ ಉಳಿದಿರುವ ಕಾಮಗಾರಿಯನ್ನು ಎರಡು ವಾರದೊಳಗಡೆ ಪೂರ್ಣಗೊಳಿಸಲಾಗುವುದೆಂದು ಕೆಯುಡಬ್ಲ್ಯುಎಸ್ ಸಹಾಯಕ ಕಾರ್ಯಪಾಲ ಅಭಿಯಂತರ ಶೋಭಲಕ್ಷ್ಮೀ ಭರವಸೆ ನೀಡಿದರು.

ಸೋಮೇಶ್ವರ ಪುರಸಭಾ ಅಧ್ಯಕ್ಷೆ ಕಮಲಾ ಅಧ್ಯಕ್ಷತೆಯಲ್ಲಿ ಸೋಮೇಶ್ವರ ಪುರಸಭೆಯಲ್ಲಿ ಮಂಗಳವಾರ ನಡೆದ ಸಾಮಾನ್ಯಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಬಗಂಬಿಲದಲ್ಲಿ 18 ಲಕ್ಷ ಲೀಟರ್ ಸಾಮರ್ಥ್ಯದ ಒಂದು ಟ್ಯಾಂಕ್ ಕಾಮಗಾರಿ ಪೂರ್ಣಗೊಂಡಿದ್ದು 10 ಲಕ್ಷ ಲೀಟರ್ ಸಾಮರ್ಥ್ಯದ ಇನ್ನೊಂದು ಟ್ಯಾಂಕ್ ನಿರ್ಮಾಣ ಹಂತದಲ್ಲಿದೆ.



ಸೋಮೇಶ್ವರ ರೈಲು ನಿಲ್ದಾಣ ಬಳಿ 500 ಮೀ., ರಾಷ್ಟ್ರೀಯ ಹೆದ್ದಾರಿ ಬಳಿ 3.5 ಕಿ.ಮೀ. ಕಾಮಗಾರಿ ಬಾಕಿ ಇದೆ. 300ಕ್ಕೂ ಅಧಿಕ ಮನೆಗಳಿಗೆ ಪೈಪ್‌ಲೈನ್ ಸಂಪರ್ಕ ಬಾಕಿ ಉಳಿದಿದೆ. ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿ ಸಂಪರ್ಕ ಬಿಟ್ಟು ಹೋಗಿರುವ ಮನೆಗಳ ಬಗ್ಗೆ ಮಾಹಿತಿ ನೀಡಿದರೆ ಶೀಘ್ರ ಸಂಪರ್ಕ ಒದಗಿಸಲಾಗುವುದೆಂದರು.

30 ಮನೆಗಳಿಗೆ ಪೈಪ್‌ಲೈನ್

ಪಿಲಾರ್‌ನಲ್ಲಿ ಕಾಮಗಾರಿ ಬಾಕಿ ಉಳಿದಿದೆ. ಸರಸ್ವತಿ ಕಾಲನಿಯಲ್ಲಿ ಪೈಪ್‌ಲೈನ್ ಕಾಮಗಾರಿಯೇ ನಡೆದಿಲ್ಲ, 30 ಮನೆಗಳಿಗೆ ಪೈಪ್ ಲೈನ್ ಸಂಪರ್ಕ ನೀಡಿಲ್ಲ, ಪೈಪ್ ಲೈನ್ ಕಾಮಗಾರಿ ಸಂಪರ್ಕ ಆದ ಕಡೆ ಜೋಡಣೆ ಸರಿಯಾಗಿಲ್ಲ ಪ್ರಕಾಶ್ ನಗರ, ಲಕ್ಷ್ಮೀಗುಡ್ಡೆ ಪರಿಸರದಲ್ಲಿ ಪೈಪ್ ಲೈನ್‌ಗೆ ಸಮರ್ಪಕ ವಾಲ್ ಜೋಡಿಸಿ ನೀರಿನ ಸೋರಿಕೆಯನ್ನು ಸರಿಪಡಿಸಬೇಕೆಂದು ಪುರಸಭಾ ಸದಸ್ಯ ಜಯ ಪೂಜಾರಿ ಆಗ್ರಹಿಸಿದರು.

ಗುತ್ತಿಗೆದಾರರಿಗೆ ಸೂಚನೆ

2 ವಾರದಲ್ಲಿ ಎಲ್ಲಾ ವಾರ್ಡ್ ಹಾಗೂ ಮನೆಗಳಿಗೆ ನೀರಿನ ಪೈಪ್ ಲೈನ್ ಸಂಪರ್ಕ ಕಾಮಗಾರಿ ಸಂಪೂರ್ಣಗೊಳ್ಳಬೇಕೆಂದು ಗುತ್ತಿಗೆದಾರರಿಗೆ ಅಭಿಯಂತರೆ ಶೋಭಲಕ್ಷ್ಮಿ ಈ ವೇಳೆ ತಾಕೀತು ಮಾಡಿದರು. ಪುರಸಭೆ ಮುಖ್ಯಾಧಿಕಾರಿ ಮತ್ತಡಿ, ಉಪಾಧ್ಯಕ್ಷ ರವಿಶಂಕರ್, ಸ್ಥಾಯಿ ಸಮಿತಿ ಅಧ್ಯಕ್ಷ ಪುರುಷೋತ್ತಮ ಗಟ್ಟಿ ಪರ್ಯತ್ತೂರು ಇದ್ದರು.

ನಮ್ಮ ಕ್ಲಿನಿಕ್‌ಗಳನ್ನು ಬೆಳಕಿಗೆ ತನ್ನಿ

ನಮ್ಮ ಕ್ಲಿನಿಕ್‌ಗಳು ಪ್ರಾಥಮಿಕ ಆರೋಗ್ಯ ಕೇಂದ್ರದ ಉಪಕೇಂದ್ರಗಳಾಗಿವೆ.ಇಲ್ಲಿ ಲ್ಯಾಬ್ ಇನ್ನಿತರ ಸೌಲಭ್ಯಗಳಿದ್ದರೂ ಸಹ ಆಪರೇಟರ್, ಸಿಬ್ಬಂದಿ ಇಲ್ಲದಿರುವುದು ಇಲಾಖೆಯ ವೈಫಲ್ಯವಲ್ಲವೇ ಎಂದು ಪುರಸಭಾ ಸದಸ್ಯ ಹರೀಶ್ ಕುಂಪಲ, ಕೋಟೆಕಾರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಸವಿತ ಅವರಲ್ಲಿ ಪ್ರಶ್ನಿಸಿದರು. ಇಂತಹ ಕೇಂದ್ರಗಳಲ್ಲಿ ಆಶಾ ಕಾರ್ಯಕರ್ತೆಯರ ಸಭೆ, ಆರೋಗ್ಯ ಸಂಬಂಧಿ ಶಿಬಿರಗಳನ್ನು ನಡೆಸಿದಾಗ ನಮ್ಮ ಕ್ಲಿನಿಕ್‌ಗಳು ಬೆಳಕಿಗೆ ಬರುತ್ತವೆ. ಆ ಮೂಲಕ ಸರಕಾರದ ಸೌಲಭ್ಯಗಳನ್ನು ಜನರು ಸದುಪಯೋಗಗೊಳಿಸಲು ಅಧಿಕಾರಿಗಳು ಪ್ರಯತ್ನಿಸಬೇಕೆಂದರು.

ಸೋಮೇಶ್ವರದಲ್ಲಿ ಆರೋಗ್ಯ ಕೇಂದ್ರ ಸ್ಥಾಪನೆಗೆ ಆಗ್ರಹ

ನಮ್ಮ ಕ್ಷೇತ್ರದ ಶಾಸಕ ಯು.ಟಿ.ಖಾದರ್ ಈಗ ಆರೋಗ್ಯ ಸಚಿವರಾಗಿದ್ದಾರೆ. ಸೋಮೇಶ್ವರ ಪುರಸಭೆ ವ್ಯಾಪ್ತಿಗೆ ಪ್ರತ್ಯೇಕ ಪ್ರಾಥಮಿಕ ಆರೋಗ್ಯ ಕೇಂದ್ರದ ಬಹು ದಿನಗಳ ಬೇಡಿಕೆ ಈಡೇರಿಕೆಗೆ ಇದು ಸಕಾಲವೆಂದು ಸದಸ್ಯ ಮನೋಜ್ ಕಟ್ಟೆಮನೆ ಸಭೆಯಲ್ಲಿ ವಿಚಾರ ಪ್ರಸ್ತಾಪಿಸಿದರು. ಹರೀಶ್ ಕುಂಪಲ, ಪುರಸಭೆ ವ್ಯಾಪ್ತಿಯ ಕುಂಪಲದ ಸರ್ವೆ ಸಂಖ್ಯೆ 200/7 ರಲ್ಲಿ ಐವತ್ತು ಸೆಂಟ್ಸ್ ಸರಕಾರಿ ಜಾಗ ಮಂಜೂರು ಮಾಡಬೇಕೆಂದು ಸಭೆಯಲ್ಲಿ ಆಗ್ರಹಿಸಿದರು. ಉಪಾಧ್ಯಕ್ಷ ರವಿಶಂಕರ್, ಈ ಬಗ್ಗೆ ಇಲಾಖೆಗೆ ಪ್ರಸ್ತಾವನೆ ಕಳಿಸುವ ಎಂದರು.

ಸುತ್ತಮುತ್ತ

ಉಡುಪಿ: ಪುನರ್ವಸತಿ ಕಾರ್ಯಕರ್ತರಿಗೆ ಮಾಹಿತಿ ಕಾರ್ಯಾಗಾರ

ಉಡುಪಿ: ಜಿಲ್ಲೆಯ ಉಡುಪಿ, ಕಾಪು, ಬ್ರಹ್ಮಾವರ ತಾಲೂಕಿನ ಗ್ರಾಮೀಣ ಮತ್ತು ನಗರ ಪುನರ್ವಸತಿ ಕಾರ್ಯಕರ್ತರಿಗಾಗಿ ಜೂ. 24 ರಂದು ಅಜ್ಜರಕಾಡಿನ ಡಾ.ಜಿ. ಶಂಕರ್ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಎ.ವಿ. ಹಾಲ್‌ನಲ್ಲಿ ವಿಕಲಚೇತನರಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು, ವಿಕಲಚೇತನರ ಇಲಾಖೆಯ ಯೋಜನೆಗಳು ಹಾಗೂ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದಲ್ಲಿ ದೊರೆಯುವ ಸೇವೆಗಳ ಬಗ್ಗೆ ಮಾಹಿತಿ ನೀಡಲು ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದ ಪ್ರಕಟಣೆ ತಿಳಿಸಿದೆ.

ಸಾಲಿಗ್ರಾಮ ದೇಗುಲದಲ್ಲಿ ಪುರುಷೋತ್ತಮ ಮಾಸದ ಮಂಗಲ ಕಾರ್ಯಕ್ರಮ

ಕೋಟ: ಕೂಟ ಮಹಾಜಗತ್ತು ಸಾಲಿಗ್ರಾಮ ಅಂಗ ಸಂಸ್ಥೆ ಇದರ ಮಹಿಳಾ ವೇದಿಕೆ ವತಿಯಿಂದ ಪುರುಷೋತ್ತಮ ಮಾಸದ ಪುಣ್ಯ ದಿನಗಳಲ್ಲಿ ಉಡುಪಿ ಜಿಲ್ಲೆಯ ವಿಷ್ಣು ಸಾನಿಧ್ಯದ 33 ದೇವಾಲಯಗಳ ದರ್ಶನ ,ವಿಷ್ಣು ಸಹಸ್ರನಾಮ ಪಠಣ ಮತ್ತು ಭಜನೆ ಆಯೋಜಿಸಿತು.

ಈ ಹಿನ್ನಲೆಯಲ್ಲಿ ಶ್ರೀ ಗುರು ನರಸಿಂಹ ದೇವಸ್ಥಾನದ ಪ್ರಾಂಗಣದಲ್ಲಿ ಮಂಗಲ ಕಾರ್ಯಕ್ರಮ ನೆರವೇರಿಸಿಕೊಂಡಿತು.ಬೆಳಿಗ್ಗೆ ಶ್ರೀ ದೇವರಿಗೆ ಪ್ರಾರ್ಥನೆ, 33 ವಿಶೇಷ ರಂಗೋಲಿಗಳನ್ನು 33 ಬಾರಿ ಗಾಯತ್ರಿ ಹೊಳ್ಳ ,ಗಾಯತ್ರಿ ಕಾರಂತ ,ಸುಜಾತಬಾಯರಿ ಇವರ ಮಾರ್ಗದರ್ಶನದಲ್ಲಿ ಅನೇಕ ಭಕ್ತರಿಂದ ಬಿಡಿಸಲಾಯಿತು. ಭಕ್ತಿ ಭಾವದಲ್ಲಿ ಸ್ಥಳೀಯ ಮತ್ತು ವಿವಿಧ ಭಾಗದ ಒಟ್ಟು 13 ಭಜನಾ ತಂಡಗಳಿಂದ ಭಜನಾ ಕಾರ್ಯಕ್ರಮ ನಡೆಸಿ ಮಂಗಲದೊಂದಿಗೆ ಶ್ರೀ ದೇವರಿಗೆ ಸಮರ್ಪಿಸಲಾಯಿತು.ಭಜನೆಗೆ ಗಣೇಶ ಅಡಿಗ ಮತ್ತು ದಯಾನಂದ ವಾರಂಬಳ್ಳಿ ಹಿಮ್ಮೇಳದಲ್ಲಿ ಸಹಕರಿಸಿದರು. ಕೂಟ ಮಹ ಜಗತ್ತಿನ ಅಧ್ಯಕ್ಷ ಎಚ್ ಸತೀಶ್ ಹಂದೆ, ಅಂಗ ಸಂಸ್ಥೆಯ ಅಧ್ಯಕ್ಷ ಪಿ .ಸಿ .ಹೊಳ್ಳ ಉಡುಪಿ ಅಂಗ ಸಂಸ್ಥೆಯ ಸದಾರಾಮ ಹೇರ್ಳೆ ದೇವಸ್ಥಾನದ ಧರ್ಮದರ್ಶಿಗಳಾದ ಚಂದ್ರಶೇಖರ ಉಪಾಧ್ಯ ತಾರನಾಥ ಹೊಳ್ಳ ಹಾಗೂ ಶ್ರೀನಿವಾಸ ಉಪಾಧ್ಯ, ಸೀತಾರಾಮ ಧನ್ಯ ಮುಂತಾದ ಗಣ್ಯರು ಅನೇಕ ಊರ ಭಕ್ತರು ಭಾಗವಹಿಸಿದರು. ಮಹಿಳಾ ವೇದಿಕೆ ಅಧ್ಯಕ್ಷೆ ಯಶೋದ. ಸಿ.ಹೊಳ್ಳ, ಕಾರ್ಯದರ್ಶಿ ಲತಾ ಹೊಳ್ಳ ಸಲಹಾ ಸಮಿತಿ ಅಧ್ಯಕ್ಷೆ ಮಾಲತಿ ಜೆ. ಅಡಿಗ ಕಾರ್ಯಕ್ರಮ ಸಂಯೋಜಿಸಿ ಮಹಿಳಾ ವೇದಿಕೆಯ ಸರ್ವ ಕಾರ್ಯಕರ್ತರು ಸಹಕರಿಸಿದರು.

ಕೊಲ್ಲೂರು ಶಾಲೆಯಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನ

ಕುಂದಾಪುರ: ಮಾದಕ ವಸ್ತುಗಳನ್ನು ಸೇವನೆ ಮಾಡುವುದರಿಂದ ಆರ್ಥಿಕವಾಗಿ ದೈಹಿಕವಾಗಿ ಮಾನಸಿಕವಾಗಿ ದುರ್ಬಲರಾಗುತ್ತೇವೆ ಹಾಗೂ ಖಿನ್ನತೆಗೆ ಒಳಗಾಗುತ್ತೇವೆ ಎಂದು ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಉಪನಿರೀಕ್ಷಕ ಶಂಕರ್ ಹೇಳಿದರು.

ಗುಲ್ವಾಡಿ ಗ್ರಾಮದ ಮಾವಿನಕಟ್ಟೆಯ ಕೊಲ್ಲೂರು ಶ್ರೀಮೂಕಾಂಬಿಕಾ ದೇವಳದ ಪ್ರೌಢಶಾಲೆಯಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ಸೇವನೆ ಮತ್ತು ಅಕ್ರಮ ಸಾಗಾಟ ವಿರೋಧಿ ದಿನದ ಅಂಗವಾಗಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಮಾಹಿತಿ ನೀಡಿ ಅವರು ಮಾತನಾಡಿದರು.

ಶಾಲಾ ಮಕ್ಕಳಿಗೆ ರಸ್ತೆ ಸುರಕ್ಷತೆಯ ಕುರಿತು, ಪೋಕ್ಸೋ ಕಾಯ್ದೆ ಮತ್ತು ಸಂಚಾರ ನಿಯಮಗಳ ಬಗ್ಗೆ ಮಕ್ಕಳ ಸಹಾಯವಾಣಿ 1098 ಬಗ್ಗೆ ಹಾಗೂ ಸೈಬರ್ ಅಪರಾಧಗಳ ಸಹಾಯವಾಣಿ 1930 ಕುರಿತು ಮತ್ತು ಪೊಲೀಸ್ ಸಹಾಯವಾಣಿ 112 ಬಗ್ಗೆ ಶಾಲಾ ಮಕ್ಕಳಿಗೆ ಮಾಹಿತಿ ನೀಡಿ ಜಾಗೃತಿ ಮೂಡಿಸಿದರು. ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹಳ್ನಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾಹಿತಿ ಕಾರ್ಯಾಗಾರ

ಕುಂದಾಪುರ: ಕುಂದಾಪುರ ಗ್ರಾಮಾಂತರ ಠಾಣಾ ವ್ಯಾಪ್ತಿಯ ಹಳ್ನಾಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ರಸ್ತೆ ಸುರಕ್ಷತೆಯ ಕುರಿತು, ಸಂಚಾರ ನಿಯಮಗಳ ಬಗ್ಗೆ ಹಾಗೂ ಸೈಬರ್ ಅಪರಾಧಗಳು, ಸಹಾಯವಾಣಿ 1930 ಕುರಿತು, ಮಹಿಳಾ ಸಹಾಯವಾಣಿ 1091, ಪೊಲೀಸ್ ಸಹಾಯವಾಣಿ 112 ಬಗ್ಗೆ ಮಾಹಿತಿ ಕಾರ್ಯಾಗಾರ ಭಾನುವಾರ ನಡೆಯಿತು. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಉಪನಿರೀಕ್ಷಕ ಶಂಕರ್ ಮಾಹಿತಿ ನೀಡಿದರು.



ಮಂಗಳೂರು ಉತ್ತರ ಮಂಡಲ ಬಿಜೆಪಿ



ಪುತ್ತೂರು ಬಿಜೆಪಿ



ಸುಳ್ಯ ಬಿಜೆಪಿ ಮಂಡಲ

ದ. ಕ. ಜಿಲ್ಲಾದ್ಯಂತ ಬಿಜೆಪಿಯಿಂದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಬಲಿದಾನ ದಿನದ ಸಂಸ್ಮರಣೆ

ಮುಖರ್ಜಿ ಆದರ್ಶಗಳು ಪ್ರತಿ ಕಾರ್ಯಕರ್ತನಿಗೂ ಪ್ರೇರಣೆ

ಮಂಗಳೂರು/ಪುತ್ತೂರು/ಸುಳ್ಯ: ದಕ್ಷಿಣ ಕನ್ನಡ ಜಿಲ್ಲಾದ್ಯಂತ ಭಾರತೀಯ ಜನತಾ ಪಾರ್ಟಿ ವತಿಯಿಂದ ಮಂಗಳವಾರ ರಾಷ್ಟ್ರದ ಏಕತೆ, ಅಖಂಡತೆ ಮತ್ತು ಸ್ವಾಭಿಮಾನದ ಸಂಕೇತರಾದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನದ ಸಂಸ್ಮರಣ ಕಾರ್ಯಕ್ರಮವು ನಡೆಯಿತು.

ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಕಚೇರಿ

ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮುಡಾದ ನಿಕಟಪೂರ್ವ ಅಧ್ಯಕ್ಷ ರವಿಶಂಕರ್ ಮಿಜಾರ್, ಒಂದೇ ದೇಶದಲ್ಲಿ ಎರಡು ಸಂವಿಧಾನ, ಇಬ್ಬರು ಪ್ರಧಾನಿ ಇರಲು ಸಾಧ್ಯವಿಲ್ಲ ಎಂದು ಸಂಸತ್ತಿನಲ್ಲಿ ಮೊಳಗಿದ ಮುಖರ್ಜಿಯವರ ಸಿಂಹಘರ್ಜನೆ ಭಾರತದ ಇತಿಹಾಸವನ್ನು ಬದಲಿಸಿತು. ಕಾಶ್ಮೀರದಲ್ಲಿ ಜಾರಿಯಲ್ಲಿದ್ದ ಪರ್ಮಿಟ್ ವ್ಯವಸ್ಥೆಯನ್ನು ವಿರೋಧಿಸಿ ಅವರು ಮಾಡಿದ ಬಲಿದಾನವೇ ಇಂದು ಕಾಶ್ಮೀರ ಭಾರತದೊಂದಿಗೆ ಸಂಪೂರ್ಣವಾಗಿ ವಿಲೀನಗೊಳ್ಳಲು ಪ್ರೇರಣೆಯಾಯಿತು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ 370 ವಿಧಿ ರದ್ದುಗೊಳಿಸುವ ಮೂಲಕ ಮುಖರ್ಜಿಯವರ ಕನಸನ್ನು ನನಸು ಮಾಡಿದೆ ಎಂದರು.



ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು, ಪ್ರಧಾನ ಕಾರ್ಯ ದರ್ಶಿ ಪ್ರೇಮಾನಂದ ಶೆಟ್ಟಿ ಸೇರಿದಂತೆ ಹಿರಿಯ ಮುಖಂಡರು, ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಹಾಗೂ ಪ್ರಕೋಷ್ಠಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಂಗಳೂರು ಉತ್ತರ ಮಂಡಲ ಬಿಜೆಪಿ

ಬಿಜೆಪಿ ಮಂಗಳೂರು ನಗರ ಉತ್ತರ ಮಂಡಲದ ವತಿಯಿಂದ ಕಾವೂರು ಬಿಜೆಪಿ ಕಾರ್ಯಾಲಯದಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರ ಬಲಿದಾನ ದಿನದ ಸಂಸ್ಮರಣ ಕಾರ್ಯಕ್ರಮವು ನಡೆಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಸಕ ಡಾ. ವೈ. ಭರತ್ ಶೆಟ್ಟಿ ಮಾತನಾಡಿ, ಡಾ. ಮುಖರ್ಜಿಯವರ ಜೀವನ, ದೇಶಭಕ್ತಿ ಹಾಗೂ ತ್ಯಾಗವು ಪ್ರತಿಯೊಬ್ಬ ಕಾರ್ಯಕರ್ತನಿಗೂ ಪ್ರೇರಣೆಯಾಗಿದೆ. ಪಕ್ಷ ಸಂಘಟನೆಯನ್ನು ಬಲಪಡಿಸುವಲ್ಲಿ ಅವರ ಆದರ್ಶಗಳು ನಮಗೆಲ್ಲ ದಾರಿದೀಪವಾಗಿವೆ ಎಂದು ಹೇಳಿದರು.

ಈ ಸಂದರ್ಭ ಬಿಜೆಪಿ ಮಂಗಳೂರು ನಗರ ಉತ್ತರ ಮಂಡಲದ ಅಧ್ಯಕ್ಷ ರಾಜೇಶ್ ಕೊಟ್ಟಾರಿ, ಜಿಲ್ಲಾ ಪ್ರಮುಖರು, ರಾಜ್ಯ ಬಿಜೆಪಿಯಿಂದ ಮಂಗಳೂರು ನಗರ ಉತ್ತರಕ್ಕೆ ನಿಯುಕ್ತಿಗೊಂಡ ಎಸ್‌ಐಆರ್ ಪ್ರಮುಖರಾದ ನಿತಿನ್ ಕುಮಾರ್, ಬಿಜೆಪಿ ಉಪಾಧ್ಯಕ್ಷೆ ಪೂಜಾ ಪೈ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಸಂದೀಪ್ ಪಚ್ಚನಾಡಿ ಹಾಗೂ ರಂದೀಪ್ ಕಾಂಚನ್ ಸೇರಿದಂತೆ ಪ್ರಮುಖರು, ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಡಾ. ಮುಖರ್ಜಿಯವರ ದೇಶಸೇವೆ, ರಾಷ್ಟ್ರ ಏಕತೆಗಾಗಿ ಅವರು ನೀಡಿದ ಕೊಡುಗೆ ಹಾಗೂ ಅವರ ತತ್ವಾದರ್ಶಗಳ ಕುರಿತು ಸ್ಮರಣೆ ಮಾಡಲಾಯಿತು.

ಪುತ್ತೂರು ಬಿಜೆಪಿಯಿಂದ ಸಂಸ್ಮರಣೆ

ಭಾರತೀಯ ಜನತಾ ಪಕ್ಷದ ಪುತ್ತೂರು ನಗರ ಹಾಗೂ ಗ್ರಾಮಾಂತರ ಮಂಡಲದ ವತಿಯಿಂದ ಬಿಜೆಪಿ ಕಚೇರಿಯಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಅವರ ದೇಶಸೇವೆ ಹಾಗೂ ರಾಷ್ಟ್ರನಿರ್ಮಾಣಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು. ಬಿಜೆಪಿ ಜಿಲ್ಲಾ ಹಾಗೂ ನಗರ ಮಂಡಲ, ಗ್ರಾಮಾಂತರ ಮಂಡಲದ ಪದಾಧಿಕಾರಿಗಳು, ಜನಪ್ರತಿನಿಧಿಗಳು, ಕಾರ್ಯಕರ್ತರು ಮತ್ತು ಹಿತೈಷಿಗಳು ಭಾಗವಹಿಸಿದರು.

ಸುಳ್ಯ ಬಿಜೆಪಿ ಮಂಡಲ

ಸುಳ್ಯ ಬಿಜೆಪಿ ಮಂಡಲ ವತಿಯಿಂದ ಜನಸಂಘದ ಸ್ಥಾಪಕರಾದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನವನ್ನು ಆಚರಿಸಲಾಯಿತು.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ. ಮುಖರ್ಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಸಲ್ಲಿಸಿ, ಅವರ ದೇಶಸೇವೆ ಹಾಗೂ ರಾಷ್ಟ್ರನಿರ್ಮಾಣಕ್ಕೆ ನೀಡಿದ ಕೊಡುಗೆಯನ್ನು ಸ್ಮರಿಸಲಾಯಿತು.

ಈ ಸಂದರ್ಭ ಮಾತನಾಡಿದ ಎಸ್‌ಐಆರ್ ಸುಳ್ಯ ಪ್ರಭಾರಿ ಗೋಪಾಲಕೃಷ್ಣ ಹೇರಳೆ, ಮುಖರ್ಜಿ ಅವರ ಸಾಧನೆಗಳು, ಜೀವನ ಶೈಲಿ, ಸಾರ್ಥಕತೆಯ ಸಮಾಜ ಸೇವೆ ಮತ್ತು ಅವರ ರಾಜಕೀಯ ಜೀವನದ ವಿಚಾರಗಳನ್ನು ತಿಳಿಸಿ ಕಾಶ್ಮೀರ ಭಾರತದ ಜೊತೆ ಅಖಂಡವಾಗಿ ಉಳಿಯಲು ಮುಖರ್ಜಿಯವರ ಬಲಿದಾನವೇ ಕಾರಣ ಎಂದು ತಿಳಿಸಿದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ, ಮಂಡಲ ಅಧ್ಯಕ್ಷ ವೆಂಕಟ್ ವಳಲಂಬೆ, ಪ್ರಧಾನ ಕಾರ್ಯದರ್ಶಿ ಪ್ರದೀಪ್ ರೈ, ವಿನಯ್ ಕುಮಾರ್ ಕಂದಡ್ಕ ಜಿಲ್ಲಾ ಕಾರ್ಯದರ್ಶಿ ಪುಷ್ಪಮೇದಪ್ಪ ಬಿಎಲ್ ಒ–1 ಹರೀಶ ಕಂಜಿಪಿಲಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.

ಶಿರೂರು ಪಿಎಂಶ್ರೀ ಶಾಲೆಯ ನೂತನ ತರಗತಿ ಕೊಠಡಿ ಉದ್ಘಾಟಿಸಿದ ಶಾಸಕ ಗಂಟಿಹೊಳೆ

ಸರ್ಕಾರಿ ಶಾಲೆ ಉಳಿದರೆ ಸುಮಧುರ ಬಾಂಧವ್ಯ ಶಾಶ್ವತ

- ಪಿಎಂಶ್ರೀ ಯೋಜನೆಯಡಿ ನೂತನ ತರಗತಿ ನಿರ್ಮಾಣ
- ಕರ್ನಾಟಕ ಪಬ್ಲಿಕ್ ಸ್ಕೂಲ್ ಆಗಿ ಪಿಎಂಶ್ರೀ ಶಾಲೆ ಪರಿವರ್ತನೆ
- ಗುತ್ತಿಗೆದಾರರಿಗೆ ಗೌರವ


ಬೈಂದೂರು: ಸರ್ಕಾರಿ ಶಾಲೆ ಉಳಿದ ಮಾತ್ರ ನಮ್ಮ ಖುಷಿ, ನೆನಪು ಹಾಗೂ ಸುಮಧುರ ಬಾಂಧವ್ಯ ಶಾಶ್ವತವಾಗಿರಲಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿ, ಸೂಕ್ತ ಸೌಲಭ್ಯ ಕಲ್ಪಿಸುವ ದೊಡ್ಡ ಕಾರ್ಯ ಆಗಬೇಕಿದೆ. ಇದಕ್ಕೆ ಸ್ಥಳೀಯರ ಪ್ರೋತ್ಸಾಹದ ಜೊತೆಗೆ ಶಾಲಾ ಶಿಕ್ಷಕರು ಹಳೆ ವಿದ್ಯಾರ್ಥಿಗಳ ಉತ್ಸಾಹವು ಅಗತ್ಯವಾಗಿದೆ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.




ಶಿರೂರು ಪಿಎಂಶ್ರೀ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಿಎಂಶ್ರೀ ಯೋಜನೆಯಡಿ ನಿರ್ಮಿಸಲಾದ ನೂತನ ತರಗತಿ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದರು. ಜಿಲ್ಲೆಯ ಕೆಲವೇ ಸರ್ಕಾರಿ ಶಾಲೆಗಳು ನಾವಿನ್ಯಯುತ ಶೈಕ್ಷಣಿಕ ಚಟುವಟಿಕೆಯೊಂದಿಗೆ ಅತ್ಯುತ್ತಮ ಕಾರ್ಯನಿರ್ವಹಿಸುತ್ತ ಉತ್ತಮ ಅಭಿವೃದ್ಧಿಯನ್ನು ಹೊಂದುತ್ತಿದೆ. ಪ್ರಸ್ತುತ ಶಿರೂರಿನ ಪಿಎಂಶ್ರೀ ಶಾಲೆ ಈಗ ಕರ್ನಾಟಕ ಪಬ್ಲಿಕ್ ಸ್ಕೂಲ್ ಆಗಿ ಪರಿವರ್ತನೆಯಾಗಿದ್ದು ಹೊಸ ತನಕ್ಕೆ ನಾಂದಿಯಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು, ಪಾಲಕರು ಸಂಪೂರ್ಣ ಪ್ರಯೋಜನವನ್ನು ಪಡೆಯುವಂತೆ ಕರೆ ನೀಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ಬಿ. ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಕಟ್ಟಡ ನಿರ್ಮಾಣದ ಗುತ್ತಿಗೆದಾರರನ್ನು ಗೌರವಿಸಲಾಯಿತು. ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ರವೀಂದ್ರ ಆರ್. ಶೆಟ್ಟಿ ಹೊಸ್ಮನೆ, ಎಸ್‌ಡಿಸಿ ಅಧ್ಯಕ್ಷ ಚಿಕ್ಕು ಪೂಜಾರಿ, ಬೆಹರಿನ್ ಕುಂದಾಪುರ ಕನ್ನಡದ ಅಧ್ಯಕ್ಷ ಸಾಧನದಾಸ್, ತಾಪಂ ಮಾಜಿ ಸದಸ್ಯ ಪುಷ್ಪರಾಜ್ ಶೆಟ್ಟಿ ಗ್ರಾಪಂ ಮಾಜಿ ಅಧ್ಯಕ್ಷೆ ನಾಗರತ್ನ ಆಚಾರ್, ಮಾಜಿ ಸದಸ್ಯರಾದ ಪ್ರಸನ್ನಕುಮಾರ್ ಶೆಟ್ಟಿ ಉಷಾ ಜನಾರ್ದನ್, ಶಿರೂರು ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಜಯಂತಿ ಶೆಟ್ಟಿ ಮೊದಲಾದವರು ಇದ್ದರು. ಮುಖ್ಯ ಶಿಕ್ಷಕ ಶಂಕರ್ ಶಿರೂರು ಸ್ವಾಗತಿಸಿದರು. ಸಹ ಶಿಕ್ಷಕ ರಾದ ಸಿ. ಎನ್. ಬಿಲ್ಲವ ಕಾರ್ಯಕ್ರಮ ನಿರೂಪಿಸಿ, ಗೋವಿಂದ ಎಂ. ಹೊಸೂರು ವಂದಿಸಿದರು.

ಗಾಳಿ ಮಳೆಗೆ ಮನೆಗೆ ಹಾನಿ





ಬಂಟ್ವಾಳ: ಸೋಮವಾರ ರಾತ್ರಿ ಬೀಸಿದ ಗಾಳಿ, ಮಳೆಗೆ ತಾಲೂಕಿನ ಕೆಲವಡೆ ಹಾನಿ ಉಂಟಾಗಿರುವ ಬಗ್ಗೆ ವರದಿ ಯಾಗಿದೆ. ತಾಲೂಕಿನ ಸಂಗ ಬೆಟ್ಟು ಗ್ರಾಮದ ಕುಮರೊಟ್ಟು ಎಂಬಲ್ಲಿ ಲೀಲಾ ಎಂಬವರ ಮನೆಯ ಹಿಂಭಾಗಕ್ಕೆ ತೀವ್ರ ಹಾನಿಯಾಗಿರುತ್ತದ್ದು, ಯಾವುದೇ ಜೀವ ಹಾನಿ ಉಂಟಾಗಿರುವುದಿಲ್ಲ. ಮನೆಯವರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳುವಂತೆ ಕಂದಾಯ ಇಲಾಖೆ ಸೂಚಿಸಿದೆ. ನಾವೂರು ಗ್ರಾಮದ ಕನಪಾದೆ ನಿವಾಸಿ ನೋಣಯ್ಯ ಪೂಜಾರಿ ಅವರ ಮನೆಯ ಹಂಚಿನ ಮೇಲ್ಛಾವಣಿಗೆ ತೀವ್ರ ಹಾನಿ ಆಗಿದೆ.ಸ್ಥಳೀಯ ಕಂದಾಯಾಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಪತ್ರಿಕಾ ಭವನದಲ್ಲಿ ಮೂಳೆ ಖನಿಜಾಂಶ ಸಾಂದ್ರತೆ ಉಚಿತ ತಪಾಸಣಾ ಶಿಬಿರ



ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘ ಮತ್ತು ಮಂಗಳೂರು ಪ್ರೆಸ್ ಕ್ಲಬ್ ವತಿಯಿಂದ ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್ ಸಹಯೋಗದಲ್ಲಿ ಪತ್ರಕರ್ತರು ಹಾಗೂ ಸಾರ್ವಜನಿಕರಿಗೆ ಮೂಳೆ ಖನಿಜಾಂಶ ಸಾಂದ್ರತೆ ಉಚಿತ ತಪಾಸಣಾ ಶಿಬಿರ ನಗರದ ಪತ್ರಿಕಾ ಭವನದಲ್ಲಿ ಸೋಮವಾರ ನಡೆಯಿತು.

ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್‌ನ ನಿಯೋಜಿತ ಅಧ್ಯಕ್ಷ ರವೀಂದ್ರ ಬಿ.ಎನ್. ಶಿಬಿರ ಉದ್ಘಾಟಿಸಿದರು. ಆಯುರ್ವೇದ ತಜ್ಞೆ ಡಾ.ಜ್ಯೋತಿ ಕೆ. ಮಾತನಾಡಿ, ಮೂಳೆ ಖನಿಜ ಸಾಂದ್ರತೆ ಕುರಿತು ಜಾಗೃತಿ ಮೂಡಿಸುವುದು ಅಗತ್ಯ. ನಿಯಮಿತ ತಪಾಸಣೆಯಿಂದ ಯಾವುದೇ ಆರೋಗ್ಯ ಸಮಸ್ಯೆಯನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಲು ಸಾಧ್ಯ ಎಂದರು.

ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ, ಪತ್ರಿಕಾ ಭವನ ಟ್ರಸ್ಟ್ ಅಧ್ಯಕ್ಷ ಅನ್ನು ಮಂಗಳೂರು, ದ.ಕ.ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಪುಷ್ಪರಾಜ್ ಬಿ.ಎನ್, ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀನಿವಾಸ ನಾಯಕ್ ಇಂದಾಜೆ, ರೋಟರಿ ಕ್ಲಬ್ ಮಂಗಳೂರು ಸೆಂಟ್ರಲ್‌ನ ಕಾರ್ಯದರ್ಶಿ ವಿಕಾಸ್ ಕೋಟ್ಯಾನ್, ಬೆಂಗಳೂರಿನ ಮೆಡಿಲ್ಯಾಬ್ ಇಂಡಿಯಾ ಫಾರ್ಮಾ ಸಂಸ್ಥೆಯ ಪ್ರತಿನಿಧಿ ಅರುಣ್ ಮೊದಲಾದವರು ಉಪಸ್ಥಿತರಿದ್ದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಮಹಮ್ಮದ್ ಆರಿಫ್ ಪಡುಬಿದ್ರಿ ಕಾರ್ಯಕ್ರಮ ನಿರೂಪಿಸಿದರು.

ಪರಿಶುದ್ಧವಾದ ಮಾತುಗಳಿಂದ ನಾಯಕತ್ವ ಬೆಳೆಯಲು ಸಾಧ್ಯ: ಪ್ರಭು



ಬಂಟ್ವಾಳ: ಪ್ರತಿಯೊಬ್ಬ ವ್ಯಕ್ತಿ ತನಗೆ ಸಿಕ್ಕಿದ ಅವಕಾಶವನ್ನು ಜವಾಬ್ದಾರಿ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸಿಕೊಂಡು, ಪರಿಶುದ್ಧವಾದ ಮಾತುಗಳಿಂದ ಸಮಾಜದೊಂದಿಗೆ ಬೆರೆತಾಗ ನಾಯಕತ್ವದ ಗುಣಗಳನ್ನು ಬೆಳೆಸಲು ಸಾಧ್ಯ ಎಂದು ಸಿದ್ದಕಟ್ಟೆ ಪ್ರಾ. ಕೃ. ಪ. ಸ. ಸಂಘದ ಅಧ್ಯಕ್ಷ, ಸಿದ್ದಕಟ್ಟೆ ಸರಕಾರಿ ಪ.ಪೂ. ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ಪ್ರಭಾಕರ ಪ್ರಭು ಹೇಳಿದರು.

ಸಿದ್ದಕಟ್ಟೆ ಸರಕಾರಿ ಪದವಿ ಪೂರ್ವ ಕಾಲೇಜಿನ 2026–27ನೇ ಸಾಲಿನ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೇಣೂರು ಕುಂಭಶ್ರೀ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಶ್ರೀನಿವಾಸ ನಾಯ್ಕ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಸಿಕ್ಕಿದ ಅವಕಾಶಗಳನ್ನು ಬಳಸಿ ಉನ್ನತ ಹುದ್ದೆ ಪಡೆದುಕೊಂಡು ಸಮಾಜದಲ್ಲಿ ಗೌರವಯುತ ವ್ಯಕ್ತಿಯಾಗಿ ಬದುಕಬೇಕು ಮತ್ತು ವಿದ್ಯಾರ್ಥಿ ಜೀವನದಲ್ಲಿಯೇ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಸಂಸ್ಥೆಯ ಪ್ರಾಂಶುಪಾಲ ಉದಯ ಕುಮಾರ್ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಿಗೆ ಪ್ರಮಾಣವಚನ ಬೋಧಿಸಿದರು. ಅರ್ಥಶಾಸ್ತ್ರ ಉಪನ್ಯಾಸಕ ಭಾಸ್ಕರ ಎಂ. ಸ್ವಾಗತಿಸಿದರು. ವ್ಯವಹಾರ ಅಧ್ಯಯನ ಉಪನ್ಯಾಸಕಿ ರೇಖಾ ಬಾಳಿಗಾ ಅತಿಥಿಗಳನ್ನು ಪರಿಚಯಿಸಿದರು. ಉಪನ್ಯಾಸಕ ಸಂಜಯ್ ಬಿ. ಎಸ್. ಕಾರ್ಯಕ್ರಮ ನಿರೂಪಿಸಿದರು.

ಶ್ರೀ ರಾಮಕುಂಜೇಶ್ವರ ಪಿಯು ಕಾಲೇಜಿನಲ್ಲಿ ಪೋಷಕರ ಸಭೆ



ಮಂಗಳೂರು: ಶ್ರೀ ರಾಮಕುಂಜೇಶ್ವರ ಪ. ಪೂ. ಕಾಲೇಜಿನಲ್ಲಿ ವಿಜ್ಞಾನ ವಿಭಾಗದ ಪೋಷಕರ ಸಭೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಡೆಯಲಿರುವ ತರಬೇತಿ ತರಗತಿಗಳ ಕುರಿತು ಮಾಹಿತಿ ಕಾರ್ಯಕ್ರಮವು ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಪುತ್ತೂರಿನ ನಿವೃತ್ತ ಪ್ರಾಂಶುಪಾಲ ಬಿ.ವಿ. ನಾರಾಯಣ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳಾದ ಸಿಇಟಿ, ನೀಟ್, ಜೆಇಇಗಳಲ್ಲಿ ಯಶಸ್ಸನ್ನ ಸಾಧಿಸಲು ನಿರಂತರವಾದ ಕಲಿಕೆ, ತರಬೇತಿ ಅತ್ಯಗತ್ಯ. ವಿದ್ಯಾರ್ಥಿಗಳು ಪ್ರತಿನಿತ್ಯ ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಉನ್ನತ ಸ್ಥಾನಕ್ಕೆ ಏರಲು ಸಾಧ್ಯ. ಪಿಯುಸಿ ಆದ ಬಳಿಕ ವಿಪುಲ ಅವಕಾಶಗಳು ಇದೆ. ಅವನೆಲ್ಲ ಅಧ್ಯಯನ ಮಾಡಿದಾಗ ಸಾಧನೆಯ ಶಿಖರವನ್ನು ಏರಬಹುದು ಎಂದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ವಹಿಸಿದ್ದ ಆಡಳಿತ ಮಂಡಳಿಯ ಕಾರ್ಯದರ್ಶಿ ರಾಧಾಕೃಷ್ಣ ಕೆ.ಎಸ್. ಅಧ್ಯಕ್ಷತೆ ವಹಿಸಿ, ನಮ್ಮ ಕಾಲೇಜಿನಲ್ಲಿ ನೀಟ್ ಸಿಇಟಿ ಜೆಇಇ ಕೋಚಿಂಗ್ ತರಗತಿಗಳು ನಿರಂತರವಾಗಿ ನಡೆಯುತ್ತದೆ. ಪ್ರತಿ ವಿಷಯದಲ್ಲಿಯೂ ನುರಿತ ಉಪನ್ಯಾಸಕರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತಾರೆ. ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಬಳಸಿ ಕೊಂಡು ಯಶಸ್ಸನ್ನು ಕಾಣುವಂತಾಗಲಿ ಎಂದರು.

ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ ಕೆ., ಮತ್ತು ಉಪನ್ಯಾಸಕರು ಉಪಸ್ಥಿತರಿದ್ದರು. ಭೌತಶಾಸ್ತ್ರ ಉಪನ್ಯಾಸಕ ಸುಬ್ರಹ್ಮಣ್ಯ ಕಾರಂತ ಸ್ವಾಗತಿಸಿ, ನಿರೂಪಿಸಿದರು. ರಸಾಯನ ಶಾಸ್ತ್ರ ಉಪನ್ಯಾಸಕ ಅಕ್ಷತಾ ವಂದಿಸಿದರು.

ಮಂಗಳೂರಿನಲ್ಲಿ ಡಿಸೇಬಲಿಟಿ ಎನ್.ಜಿ.ಒ. ಅಲೆಯನ್ಸ್ ಕರಾವಳಿ ಧ್ವನಿ ಕಾರ್ಯಕ್ರಮ ಉದ್ಘಾಟನೆ | ಸರಕಾರದ ಮಟ್ಟದಲ್ಲಿ ಸಮಿತಿ ರಚಿಸುವ ಭರವಸೆ

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಉಚಿತ ವೈದ್ಯಕೀಯ ಸೇವೆ ನೀಡುವ ಚಿಂತನೆ: ಸಚಿವ ಖಾದರ್

ಮಂಗಳೂರು: ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಕೌಶಲಾಭಿವೃದ್ಧಿಗೆ ನೆರವು ನೀಡುವ ಹಾಗೂ ಉಚಿತ ವೈದ್ಯಕೀಯ ಸೇವೆ ನೀಡುವ ಕುರಿತು ಸರಕಾರದ ಮಟ್ಟದಲ್ಲಿ ಸಮಿತಿ ರಚಿಸಿ, ಅಭಿಪ್ರಾಯ ಕ್ರೋಢೀಕರಿಸಿ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದ್ದಾರೆ.

ಮಂಗಳೂರು ಕದ್ರಿಯ ಸರ್ಕ್ಯೂಟ್ ಹೌಸ್ ಪಕ್ಕವಿರುವ ಲಯನ್ಸ್ ಅಶೋಕ ಸೇವಾ ಭವನದಲ್ಲಿ ಮಂಗಳವಾರ ಡಿಸೇಬಲಿಟಿ ಎನ್.ಜಿ.ಒ. ಅಲೆಯನ್ಸ್ (ಡಿ.ಎನ್.ಎ.) ಬೆಂಗಳೂರು, ಮಾಯಾ ಪೇರೆಂಟ್ಸ್ ಫಾರ್ ಇನ್ ಕ್ಲೂಸಿವ್ ಡೆವಲಪ್ ಮೆಂಟ್ ಬೆಂಗಳೂರು, ಅರಿವು ಅರ್ಲಿ ಇಂಟರ್ವೆನ್ಶನ್ ಸೆಂಟರ್ ಮಂಗಳೂರು ವತಿಯಿಂದ ಲಯನ್ಸ್ ಕ್ಲಬ್ ಅಶೋಕ ನಗರ ಚಾರಿಟೇಬಲ್ ಟ್ರಸ್ಟ್ ಮತ್ತು ಲಯನ್ಸ್ ಕ್ಲಬ್ ಮಂಗಳೂರು ಅಶೋಕನಗರ ಸಹಯೋಗದಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳ ಪೋಷಕರ, ಎನ್.ಜಿ.ಒ.ಗಳ ಹಾಗೂ ವೈದ್ಯರ ಸಮಾವೇಶವಾದ ಡಿ.ಎನ್.ಎ. ಕರಾವಳಿ ಧ್ವನಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ತಾನು ಆರೋಗ್ಯ ಸಚಿವನಾಗಿ ಅಧಿಕಾರ ವಹಿಸಿಕೊಂಡ ಸಂದರ್ಭವೇ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಗೆ ಹಲವು ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದ್ದೇನೆ. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಆರೋಗ್ಯ ಸೇವೆ ನೀಡುವ ವಿಚಾರಕ್ಕೆ ಸಂಬಂಧಿಸಿ ಸಮಿತಿಯನ್ನು ರಚಿಸಿ, ಎಲ್ಲ ಅಭಿಪ್ರಾಯಗಳನ್ನು ಕ್ರೋಢೀಕರಿಸಿ, ಸರಕಾರ ಉಚಿತವಾಗಿ ವೈದ್ಯಕೀಯ ಸೇವೆ ನೀಡುವ ಕುರಿತು ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದರು.

> **ಮಂಗಳೂರಿನಲ್ಲಿ ಪ್ರತ್ಯೇಕ ಪಾರ್ಕ್**
>
> ಭಿನ್ನ ಸಾಮರ್ಥ್ಯದ ಮಕ್ಕಳಿಗೆ ಅನುಕೂಲವಾಗುವಂತೆ ಮಂಗಳೂರಿನಲ್ಲಿ ಪ್ರತ್ಯೇಕ ಪಾರ್ಕ್ ಒಂದನ್ನು ಮೀಸಲಿರಿಸುವ ಕುರಿತು ಪೋಷಕರ ಬೇಡಿಕೆಗೆ ಸ್ಪಂದಿಸಿದ ಸಚಿವ ಖಾದರ್, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಪ್ರತ್ಯೇಕ ಪಾರ್ಕ್ ಒಂದನ್ನು ಮೀಸಲಿಡಲಾಗುವುದು ಎಂದು ತಿಳಿಸಿದರು.

ಸಂಪೂರ್ಣ ಸಹಕಾರ: ಕಾಮತ್

ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಡಿ. ವೇದವ್ಯಾಸ ಕಾಮತ್ ಮಾತನಾಡಿ, ತನ್ನ ವತಿಯಿಂದ ಭಿನ್ನ ಸಾಮರ್ಥ್ಯದ ಮಕ್ಕಳ ನೆರವಿಗೆ ಸಂಬಂಧಿಸಿ ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು.

ಡಿಎನ್‌ಎ ಸಲಹಾ ಸಮಿತಿ ಹಾಗೂ ಮಾಯಾ ಸಿಇಒ ವಿ.ಎಸ್. ಬಸವರಾಜ, ಪ್ರಸ್ತುತ ಸನ್ನಿವೇಶದಲ್ಲಿ ಪೋಷಕರು ಹಾಗೂ ಮಕ್ಕಳು ಎದುರಿಸುತ್ತಿರುವ ಸವಾಲುಗಳ ಕುರಿತು ವಿವರಿಸಿದರು.

ಲಯನ್ಸ್ ಕ್ಲಬ್ ಅಶೋಕನಗರ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಜಿಲ್ಲಾ ಪಿಯು ಕಾಲೇಜು ಪ್ರಿನ್ಸಿಪಾಲರ ಸಂಘದ ಅಧ್ಯಕ್ಷ ಡಾ. ನವೀನ್ ಶೆಟ್ಟಿ ಕೆ. ಅಧ್ಯಕ್ಷತೆ ವಹಿಸಿದ್ದರು.

ಲಯನ್ಸ್ ಜಿಲ್ಲೆ 317ಡಿ ಜಿಲ್ಲಾ ಗವರ್ನರ್ ಕುಡ್ಪಿ ಅರವಿಂದ ಶೆಣೈ, ಲಯನ್ಸ್ ಕ್ಲಬ್ ಅಶೋಕನಗರ ಅಧ್ಯಕ್ಷ ಪ್ರಶಾಂತ್ ಬಿ. ಶೆಟ್ಟಿ, ಮಂಗಳಾ ಆಸ್ಪತ್ರೆ ಮತ್ತು ಕಿಡ್ನಿ ಫೌಂಡೇಶನ್ ಚೇರ್ಮನ್ ಡಾ. ಗಣಪತಿ ಪಿ., ಎ.ಜೆ.ಮೆಡಿಕಲ್ ಕಾಲೇಜಿನ ಮಕ್ಕಳ ವಿಭಾಗದ ಮುಖ್ಯಸ್ಥ ಡಾ. ಸಂತೋಷ್ ಸೋನ್ಸ್, ಯೆನೆಪೋಯಾ ಡೆಂಟಲ್ ಕಾಲೇಜು ಡೀನ್ ಡಾ. ಶಾಮ್ ಎಸ್. ಭಟ್, ಭಾರತೀ ಸಮೂಹ ಸಂಸ್ಥೆಗಳ ಡಾ. ರಾಜೇಂದ್ರ ಪ್ರಸಾದ್, ಎ.ಬಿ.ಶೆಟ್ಟಿ ಡೆಂಟಲ್ ಕಾಲೇಜು ಮುಖ್ಯಸ್ಥೆ ಡಾ. ಅಮರಶ್ರೀ, ಸಿಡಿಪಿಒ ಶ್ವೇತಾ ಹಾಗೂ ರಶ್ಮಿ, ಅರಿವು ಟ್ರಸ್ಟ್ ಅಧ್ಯಕ್ಷ ಡಾ. ಕೆ. ಸುಂದರ ಭಟ್, ಮನಪಾ ಮಾಜಿ ಉಪ ಮೇಯರ್ ಶಕೀಲಾ ಕಾವ, ಡಿಎನ್‌ಎ ಜಂಟಿ ಕಾರ್ಯದರ್ಶಿ ಹಂಪಣ್ಣ, ಮಾಯಾದ ಟ್ರಸ್ಟಿ ಆಲ್ವಿನ್ ಟ್ರೊ, ಡಿಎನ್‌ಎ ಸದಸ್ಯೆ ಸವಿತಾ ಶುಭ ಹಾರೈಸಿದರು. ಅರಿವು ಸ್ಥಾಪಕ ನಿರ್ದೇಶಕಿ ಪೂರ್ಣಿಮಾ ಆರ್. ಭಟ್ ಸ್ವಾಗತಿಸಿದರು. ಲಯನ್ಸ್ ಕ್ಲಬ್ ಅಶೋಕನಗರ ಅಧ್ಯಕ್ಷ ಪ್ರಶಾಂತ್ ಬಿ. ಶೆಟ್ಟಿ ವಂದಿಸಿದರು. ಎಂ.ಆರ್.ಡಬ್ಲ್ಯು ಜಯಪ್ರಕಾಶ್ ಕಾರ್ಯಕ್ರಮ ನಿರ್ವಹಿಸಿದರು.

ಸುತ್ತಮುತ್ತ

ವಿವಿಧೆಡೆ ಯೋಗ ದಿನಾಚರಣೆಯ ಸಂಭ್ರಮ

ಬ್ರಹ್ಮಕುಮಾರಿ ಸೇವಾ ಕೇಂದ್ರ



ಕಾಸರಗೋಡು: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಕಾಸರಗೋಡು ಸೇವಾ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಮಹೋತ್ಸವವನ್ನು ಆಯೋಜಿಸಲಾಯಿತು. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಸಂಚಾಲಕಿ ಬ್ರಹ್ಮಕುಮಾರಿ ವಿಜಯಲಕ್ಷ್ಮಿ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೇರಳ ವಿದ್ಯುತ್ ಪ್ರಸರಣ ಆಯೋಗದ ಹಿರಿಯ ಇಂಜಿನಿಯರ್ ನಾಗರಾಜ್ ಭಟ್ ಹಾಗೂ ಯೋಗ ಫಾರ್ ಕಿಡ್ಸ್ ಸಂಸ್ಥೆಯ ಯೋಗ ಶಿಕ್ಷಕಿ ತೇಜಕುಮಾರಿ ಭಾಗವಹಿಸಿದರು. ಸಂಸ್ಥೆಯ ಬಿ.ಕೆ.ಪ್ರದೀಪ್ ಶುಭಹಾರೈಸಿದರು. ಬ್ರಹ್ಮಕುಮಾರ ನಿತ್ಯಾನಂದ ಸ್ವಾಗತಿಸಿ, ಬಿ.ಕೆ.ವಿಜಯಲಕ್ಷ್ಮಿ ಪರಿಚಯಿಸಿದರು. ಬ್ರಹ್ಮಕುಮಾರಿ ಕೃಪಾ ಯೋಗನೃತ್ಯ ಪ್ರದರ್ಶಿಸಿದರು. ಬ್ರಹ್ಮಕುಮಾರ ಡಾ.ಸುಬ್ರಹ್ಮಣ್ಯ ಸಿಪಿಸಿಆರ್‌ಐ ವಂದಿಸಿದರು. ಬ್ರಹ್ಮಕುಮಾರಿ ಕವಿತಾ ನಿರೂಪಿಸಿದರು. ಈ ಸಂದರ್ಭ ಬ್ರಹ್ಮಕುಮಾರಿ ಮಂಗಳ ಮತ್ತು ಪ್ರೇಮಾ ಅವರು ಅತಿಥಿಗಳಿಗೆ ಈಶ್ವರೀಯ ಕಾಣಿಕೆ ನೀಡಿ ಸನ್ಮಾನಿಸಿದರು.

ಜ್ಞಾನಗಂಗಾ ವಸತಿ ಶಾಲೆ

ಮಡಿಕೇರಿ: ಕುಶಾಲನಗರ ಸಮೀಪದ ಜ್ಞಾನಗಂಗಾ ವಸತಿ ಶಾಲೆಯಲ್ಲಿ ಯೋಗ ದಿನಾಚರಣೆ ನಡೆಯಿತು. ಸೋಮವಾರಪೇಟೆಯ ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಜ್ಯೋತಿ ಬೆಳಗಿಸಿ ಯೋಗ ದಿನವನ್ನು ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಆಡಳಿತ ಮಂಡಳಿಯ ಅಧ್ಯಕ್ಷ ಟಿ.ಕೆ ಸುಧೀರ್ ಮಾತನಾಡಿದರು. ಯೋಗ ದಿನದ ಅಂಗವಾಗಿ ಶಾಲೆಯ ಯೋಗ ಶಿಕ್ಷಕ ಶಿವರಾಮ ಯೋಗಾಭ್ಯಾಸ ಮಾಡಿಸಿದರು. ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿ ಬಿ.ಎಸ್. ನಿಂಗಪ್ಪ ಪ್ರಾಯವಾಲ ಸತ್ಯಸುಲೋಚನ, ಶಿಕ್ಷಕ ಶಿಕ್ಷಕೇತರು, ಉಪಸ್ಥಿತರಿದ್ದರು

ಕಲ್ಲಡ್ಕ ಶ್ರೀರಾಮ ಹಿ.ಪ್ರಾ. ಶಾಲೆ

ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ವೇದವ್ಯಾಸ ಧ್ಯಾನಮಂದಿರದಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು.



ವಿಟ್ಲ ಶಾಖೆಯ ಪತಂಜಲಿ ಯೋಗ ಶಿಕ್ಷಣದ ಸಹ ಪ್ರಮುಖರಾದ ಗೀತಾ ಅವರು ಭಾಗವಹಿಸಿ, ಯೋಗದ ಪ್ರಯೋಜನ ತಿಳಿಸಿದರು. ಕಾರ್ಯಕ್ರಮದ ಮೊದಲು ಅತಿಥಿಗಳು ದೀಪ ಪ್ರಜ್ವಲಿಸಿ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿದರು. ನಂತರ 7ನೇ ತರಗತಿ ವಿದ್ಯಾರ್ಥಿ ಯಶವಂತ ರಮೇಶ್ ಉಪ್ಪಾರ್ ರಿದಮಿಕ್ ಯೋಗ ಮಾಡಿದರು. ಪ್ರಾಥಮಿಕ ಶಾಲೆಯ ಯೋಗ ಶಿಕ್ಷಕಿ ದೇವಕಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕಿ ಸ್ನೇಹ ತರಗತಿವಾರು ಯೋಗವನ್ನು ಮಾಡಿಸಿದರು. ಕೆಲಿಂಜ ಶ್ರೀನಿಕೇತನ ಶಾಖೆ ಸಂಚಾಲಕರು ರಾಮಣ್ಣ ವಿಟ್ಲ ಶಾಖೆಯ ಪತಂಜಲಿ ಯೋಗ ಸಂಘಟನಾ ಪ್ರಮುಖರಾದ ಪ್ರಕಾಶ್ , ಮುಖ್ಯೋಪಾಧ್ಯಾಯ ರವಿರಾಜ್ ಕಣಂತೂರು ಉಪಸ್ಥಿತರಿದ್ದರು. ಆರಾಧ್ಯ.ಕೆ ಸ್ವಾಗತಿಸಿ, ಪುಣ್ಯಶ್ರೀ ನಿರೂಪಿಸಿ, ವೈಷ್ಣವಿ ವಂದಿಸಿದರು.

ಎಸ್‌ಎಸ್ ಪಿಯು ಕಾಲೇಜ್

ಸುಬ್ರಹ್ಮಣ್ಯ: ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಎಸ್‌ಎಸ್‌ಪಿಯು ಕಾಲೇಜಿನಲಿ ವಿಶ್ವಯೋಗ ದಿನಾಚರಣೆ ನಡೆಯಿತು. ಕಾಲೇಜಿನ ಪ್ರಾಚಾರ್ಯ ಸೋಮಶೇಖರ ನಾಯಕ್ ಯೋಗದ ಮಹತ್ವದ ಬಗ್ಗೆ ತಿಳಿಸಿದರು. 1008 ವಿದ್ಯಾರ್ಥಿಗಳಿಂದ ಯೋಗ ಕಾಲೇಜಿನ ಮೇಲ್ಭಾಗದ ಕ್ರೀಡಾಂಗಣ ಮತ್ತು ಕೆಳಭಾಗದ ಕ್ರೀಡಾಂಗಣದಲ್ಲಿ ಪಿಯುಸಿ ಮತ್ತು ಹೈಸ್ಕೂಲ್ ಸೇರಿ ಒಟ್ಟು 1008 ವಿದ್ಯಾರ್ಥಿಗಳು ಏಕಕಾಲದಲ್ಲಿ ಯೋಗಾಸನ ಮಾಡಿದರು. ಯೋಗ ಗುರು ಹಿರಿಯ ಸಹಶಿಕ್ಷಕ ಎಂ. ಕೃಷ್ಣ ಭಟ್, ಉಪನ್ಯಾಸಕಿ ಸೌಮ್ಯಾ ದಿನೇಶ್ ಯೋಗಾಭ್ಯಾಸ ಮಾಡಿಸಿದರು. ಆರಂಭದಲ್ಲಿ ಯೋಗ ಮಂತ್ರ, ಪತಂಜಲಿ ಸ್ಮರಣಾ ಮಂತ್ರ ಪಠಿಸಲಾಯಿತು. ಬಳಿಕ ವೃಕ್ಷಾಸನ, ಪದ್ಮಾಸನ, ಮಂತ್ರ ಸಹಿತ ಸೂರ್ಯ ನಮಸ್ಕಾರ, ಭುಜಂಗಾಸನ, ಸರ್ವಾಂಗಾಸನ ಸೇರಿದಂತೆ ವಿವಿಧ ಆಸನಗಳನ್ನು ವಿದ್ಯಾರ್ಥಿಗಳು ಮಾಡಿದರು. ಬಳಿಕ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಯೋಗ ನೃತ್ಯ ಪ್ರದರ್ಶಿಸಿದರು.

ಬೈಂದೂರು ಬಿಜೆಪಿ ಮಂಡಲ

ಕುಂದಾಪುರ: ಬಿಜೆಪಿ ಬೈಂದೂರು ಮಂಡಲದ ಯುವ ಮೋರ್ಚಾದ ನೇತೃತ್ವದಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ತ್ರಾಸಿ ಅಣ್ಣಪ್ಪಯ್ಯ ಸಭಾಭವನದಲ್ಲಿ ಭಾನುವಾರ ನಡೆಯಿತು. ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ, ಮಂಡಲ ಅಧ್ಯಕ್ಷೆ ಅನಿತಾ ಆರ್. ಕೆ., ಯುವಮೋರ್ಚಾ ಅಧ್ಯಕ್ಷ ವೇಣುಗೋಪಾಲ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಪ್ರಿಯದರ್ಶಿನಿ ದೇವಾಡಿಗ, ಮಂಡಲ ಪ್ರಧಾನ ಕಾರ್ಯದರ್ಶಿಗಳು, ಯುವಮೋರ್ಚಾ ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಗೂ ಮಂಡಲದ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ರಾಜ್ಯ ಮಟ್ಟದ ಯೋಗ ಪಟು ಕಲಾಶ್ರೀ ತನ್ನ ಯೋಗ ತರಬೇತಿ ನೀಡಿದರು. ಈ ಸಂದರ್ಭ ಯುವ ಮೋರ್ಚಾದಿಂದ ಯೋಗ ತರಬೇತುದಾರರನ್ನು ಸನ್ಮಾನಿಸಿ ಗೌರವಿಸಲಾಯಿತು.

ಶಿಶು ಮಂದಿರ

ಕುಂದಾಪುರ: ಗಂಗೊಳ್ಳಿಯ ಸೇವಾ ಸಂಗಮ ನಿವೇದಿತಾ ಶಿಶು ಮಂದಿರದ ವತಿಯಿಂದ ಶಿಶು ಮಂದಿರದ ಎನ್.ಜಯವಂತ ನಾಯಕ್ ಸಭಾಭವನದಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ಶಿಶು ಮಂದಿರದ ಮಾತಾಜಿ ಪ್ರೇಮಾ ಮತ್ತು ಸಹಾಯಕಿ ರತ್ನಾ ಅವರ ಮಾರ್ಗದರ್ಶನದಲ್ಲಿ ಪುಟಾಣಿಗಳು ಯೋಗಾಸನ ನಡೆಸಿ ಗಮನ ಸೆಳೆದರು.

ನೇತ್ರಜ್ಯೋತಿ ಕಾಲೇಜಿನಲ್ಲಿ ಯೋಗ ದಿನಾಚರಣೆ ಸಂಭ್ರಮ

ಯೋಗ ಪ್ರಾಚೀನ ಭಾರತದ ಕೊಡುಗೆ



ಉಡುಪಿ: ಇಲ್ಲಿನ ಪ್ರತಿಷ್ಠಿತ ನೇತ್ರಜ್ಯೋತಿ ಕಾಲೇಜು ಹಾಗೂ ಮಣಿಪಾಲದ ಮುನಿಯಾಲ್ ಇನ್‌ಸ್ಟಿಟ್ಯೂಟ್ ಆಫ್ ಯೋಗಾ ಆ್ಯಂಡ್ ನ್ಯಾಚುರೋಪತಿ ಕಾಲೇಜಿನ ಸಹಯೋಗದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ, ಕರ್ನಾಟಕದ ಸುತ್ತೋಲೆಯಂತೆ 10 ದಿನಗಳ ಯೋಗ ಶಿಬಿರ ಆಯೋಜಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮುನಿಯಾಲ್ ಇನ್‌ಸ್ಟಿಟ್ಯೂಟ್ ಆಫ್ ಯೋಗಾ ಆ್ಯಂಡ್ ನ್ಯಾಚುರೋಪತಿ ಕಾಲೇಜಿನ ಉಪಪ್ರಾಂಶುಪಾಲ ಡಾ. ಸಾತಪ್ಪ ಉದ್ಘಾಟಿಸಿ, ಯೋಗದ ಮಹತ್ವದ ಬಗ್ಗೆ ವಿವರಿಸಿದರು.

ಸಮಾರೋಪ ಸಮಾರಂಭ

ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮುನಿಯಾಲ್ ಇನ್‌ಸ್ಟಿಟ್ಯೂಟ್ ಆಫ್ ಯೋಗಾ ಆ್ಯಂಡ್ ನ್ಯಾಚುರೋಪತಿ ಕಾಲೇಜಿನ ಪ್ರಾಂಶುಪಾಲ ಡಾ. ಅಪರ್ಣಾ ಸುರೇಂದ್ರ ಮಾತನಾಡಿ, ಯೋಗ ಯೋಗವು ಭಾರತದ ಪ್ರಾಚೀನ ಸಂಸ್ಕೃತಿಯ ಅಮೂಲ್ಯ ಕೊಡುಗೆ ಎಂದು ಹೇಳಿದರು.

ನೇತ್ರಜ್ಯೋತಿ ಕಾಲೇಜಿನ ಅಧ್ಯಕ್ಷೆ ರಶ್ಮಿ ಕೃಷ್ಣ ಪ್ರಸಾದ್ ಅಧ್ಯಕ್ಷತೆ ವಹಿಸಿ, ಇಂದಿನ ಯಾಂತ್ರಿಕ ಜೀವನದಲ್ಲಿ ಯೋಗವು ಒತ್ತಡವನ್ನು ಕಡಿಮೆ ಮಾಡಿ ಏಕಾಗ್ರತೆ ಯನ್ನು ಹೆಚ್ಚಿಸುವುದರೊಂದಿಗೆ ಉತ್ತಮ ಜೀವನ ಶೈಲಿಯನ್ನು ರೂಪಿಸಲು ಸಹಕಾರಿಯಾಗಿದೆ. ಯೋಗವು ಒಂದು ದಿನಕ್ಕೆ ಸೀಮಿತವಾಗದೆ ಪ್ರತಿಯೊಬ್ಬರೂ ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾಲೇಜಿನ ಸಿಒಒ ಡಾ. ಗೌರಿ ಪ್ರಭು ಇದ್ದರು. ಕಾಲೇಜಿನ ಕೋ- ಆರ್ಡಿನೇಟರ್ ಮಾಧವ ಪೂಜಾರಿ ಸ್ವಾಗತಿಸಿ, ಉಪನ್ಯಾಸಕಿ ಶಿವಾನಿ ವಂದಿಸಿದರು. ಮುನಿಯಾಲ್ ಕಾಲೇಜ್ ಆಫ್ ಯೋಗಾ ಆ್ಯಂಡ್ ನ್ಯಾಚುರೋಪತಿ, ಮಣಿಪಾಲದ ವಿದ್ಯಾರ್ಥಿಗಳಾದ ಕುಮಾರಿ ಅನನ್ಯ ಶೆಟ್ಟಿ ಹಾಗೂ ಕುಮಾರ್ ಬಾಗೇಶ್ ಯೋಗ ಶಿಬಿರ ನಡೆಸಿಕೊಟ್ಟರು.

ಕೋಟೇಶ್ವರ ಕಾಲೇಜ್: ಯೋಗ ದಿನಾಚರಣೆ

ಕುಂದಾಪುರ: ಕೋಟೇಶ್ವರದ ಶ್ರೀ ಕಾಳಾವರ ವರದರಾಜ ಎಂ. ಶೆಟ್ಟಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಆಂತರಿಕ ಗುಣಮಟ್ಟ ಭರವಸಾ ಕೋಶ ಇದರ ವತಿಯಿಂದ ಕಾಲೇಜಿನಲ್ಲಿ ನಡೆದ ವಿಶ್ವ ಯೋಗ ದಿನಾಚರಣೆ ನಡೆಯಿತು. ಕುಂದಾಪುರ ರೂರಲ್ ಆಯುರ್ವೇದ ಮೆಡಿಕಲ್ ಕಾಲೇಜಿನ ಸ್ವಸ್ಥವೃತ್ತ ಮತ್ತು ಯೋಗ ಸಹ ಪ್ರಾಧ್ಯಾಪಕಿ ಡಾ. ಪ್ರೀತಿಕಾ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ನಾಗರಾಜ ವೈದ್ಯ ಎಂ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಯೋಗದ ಮಹತ್ವದ ಬಗ್ಗೆ ತಿಳಿಸಿದರು. ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಾದ ರಾಜೇಶ್ ಮತ್ತು ಚಿನ್ಮಯಿ ಯೋಗದ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು. ಅನುಷಾ ಮತ್ತು ತಂಡದವರು ಪ್ರಾರ್ಥಿಸಿದರು. ವಿದ್ಯಾರ್ಥಿ ಕ್ಷೇಮಪಾಲನಾಕಾರಿ ಡಾ. ಉದಯ ಶೆಟ್ಟಿ ಕೆ. ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತಿಸಿದರು. ನಾಗೇಂದ್ರ ಕಾರ್ಯಕ್ರಮ ನಿರೂಪಿಸಿದರು. ಪ್ರತಿಮಾ ವಂದಿಸಿದರು.

ಆತ್ಮಶಕ್ತಿಯಿಂದ ಯೋಗ ದಿನಾಚರಣೆ



ಮಂಗಳೂರು: ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ಉಳ್ಳಾಲದ ಕಿನ್ಯಾದ ದೇವಿ ನಗರದ 'ಜೀವನ್ ಫಾರ್ಮ್' ನಲ್ಲಿ ಯೋಗ ದಿನಾಚರಣೆ ನಡೆಯಿತು.

ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಅಧ್ಯಕ್ಷತೆ ವಹಿಸಿದ್ದರು. ಯೋಗ ಶಿಕ್ಷಕ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೋನಪ್ಪ ಪೂಜಾರಿ ಅವರು ಮಾಹಿತಿ ನೀಡಿದರು. ಸಂಘದ ಉಪಾಧ್ಯಕ್ಷ ನೇಮಿರಾಜ್. ಪಿ , ನಿರ್ದೇಶಕ ಜಿ. ಪರಮೇಶ್ವರ ಪೂಜಾರಿ, ಆನಂದ್ ಎಸ್. ಕೊಂಡಾಣ, ರಮಾನಾಥ್ ಸನಿಲ್, ಬಿ.ಪಿ. ದಿವಾಕರ್, ಗೋಪಾಲ್ ಎಂ. ಉಮಾವತಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೌಮ್ಯ ವಿಜಯ್, ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಪ್ರಕಾಶನ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಗೌರವಾಧ್ಯಕ್ಷ ವಾಮನ್ ಕೆ., ಜೀವನ್ ಫಾರ್ಮ್‌ನ ಮಾಲಕ ಧರ್ಮರಾಜ್ ಮತ್ತಿತರರಿದ್ದರು.

ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆ



ಮಂಜೇಶ್ವರ: ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಮಂಗಲ್ಪಾಡಿ ಗ್ರಾಮ ಪಂಚಾಯತ್ ಸದಸ್ಯೆ ನಸಿಯಾ ಅಜೀಜ್ ಉದ್ಘಾಟಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಚಿತ್ರಾವತಿ ಚಿಗುರುಪಾದೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಪನ್ಮೂಲ ವ್ಯಕ್ತಿಯಾಗಿ ಮಂಗಲ್ಪಾಡಿ ಗ್ರಾ.ಪಂ. ಸರಕಾರಿ ಹೋಮಿಯೋ ಡಿಸ್ಪೆನ್ಸರಿ ಆಯುಷ್ಮಾನ್ ಆರೋಗ್ಯ ಮಂದಿರದ ಯೋಗ ತರಬೇತುದಾರೆ ತಾರಾ ಎ.ಕೆ. ಭಾಗವಹಿಸಿದರು. ಬಿಆರ್‌ಸಿ ಟ್ರೈನರ್ ಸಜಿತ್ ಹಾಗೂ ಶಾಲೆಯ ಹಿರಿಯ ಶಿಕ್ಷಕ ರಿಯಾಜ್ ಎಂ.ಎಸ್. ಪೆರಿಂಗಡಿ ಶುಭಹಾರೈಸಿದರು. ಶಾಲಾ ಶಿಕ್ಷಕಿ ಐಷತ್ ಸೈನಾರುಫ್ ಮಾತನಾಡಿದರು. ಇದೇ ಸಂದರ್ಭ ಶಾಲಾ ಅರೇಬಿಕ್ ಕ್ಲಬ್ ವತಿಯಿಂದ ಯೋಗದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು ಹಾಗೂ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ಆಯೋಜಿಸಲಾಗಿದ್ದ ಬಣ್ಣ ಹಚ್ಚುವ, ಕ್ವಿಜ್ ಮುಂತಾದ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಶಿಕ್ಷಕ ಅಬ್ದುಲ್ ಬಶೀರ್ ನಿರೂಪಿಸಿದರು. ಶಿಕ್ಷಕಿ ಐಶ್ವರ್ಯ ವಂದಿಸಿದರು.

ಅಂಬಿಕಾ ವಿದ್ಯಾಲಯದಲ್ಲಿ ಯೋಗ ದಿನ



ಪುತ್ತೂರು: ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ಪದವಿ ಪೂರ್ವ ವಿದ್ಯಾಲಯದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಯೋಜಿಸಲಾಯಿತು.

ಮುಖ್ಯ ಅತಿಥಿಯಾಗಿ ಯೋಗ ತರಬೇತುದಾರ ಪ್ರೊ. ಕೃಷ್ಣಾನಂದ ಭಾಗವಹಿಸಿ, ಯೋಗವು ಕೇವಲ ವ್ಯಾಯಾಮವಲ್ಲ, ವಿವಿಧ ಆಸನಗಳು, ಪ್ರಾಣಾಯಾಮ ಹಾಗೂ ಧ್ಯಾನದ ವಿಧಾನಗಳನ್ನು ಪ್ರದರ್ಶಿಸಿದರು. ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಹ್ಮಣ್ಯ ನಟ್ಟೋಜ ಮಾತನಾಡಿದರು. ವೇದಿಕೆಯಲ್ಲಿ ಬಪ್ಪಳಿಗೆ ಅಂಬಿಕಾ ಪ.ಪೂ. ವಿದ್ಯಾಲಯದ ಪ್ರಾಂಶುಪಾಲ ಗಣೇಶ ಪ್ರಸಾದ್ ಡಿ.ಎಸ್, ಉಪಪ್ರಾಂಶುಪಾಲ ಪ್ರದೀಪ್ ಕೆ.ವೈ. ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಧನ್ಯಶ್ರೀ ಹಾಗೂ ತಂಡದವರು ಪ್ರಾರ್ಥಿಸಿದರು. ಅತಿಥಿ ಪರಿಚಯವನ್ನು ರಕ್ಷಾ ನಡೆಸಿಕೊಟ್ಟರು. ವಿದ್ಯಾರ್ಥಿನಿ ಲಾಸ್ಯ ವಂದಿಸಿದರು. ವಿದ್ಯಾರ್ಥಿನಿ ಶ್ರೀಧಾತ್ರಿ ಕಾರ್ಯಕ್ರಮ ನಿರ್ವಹಿಸಿದರು.

ಹಠಯೋಗ ಸಮಿತಿ, ಪಡುಬಿದ್ರಿ ಬಂಟರ ಸಂಘ: ಅಂತಾರಾಷ್ಟ್ರೀಯ ಯೋಗ ದಿನ



ಉಡುಪಿ: ಪಡುಬಿದ್ರಿ ಹಠಯೋಗ ಸಮಿತಿ ಆಯುಷ್ ಫೆಡರೇಶನ್ ಆಫ್ ಇಂಡಿಯಾ ಬಂಟರ ಸಂಘ ಪಡುಬಿದ್ರಿ ಮತ್ತು ಎಂ–11 ಎನರ್ಜಿ ಟ್ರಾಸಿಷನ್ ಪ್ರಾಯೋಜಕತ್ವದಲ್ಲಿ ಬಂಟರ ಭವನದ ತೆರೆದ ಸಭಾ ಭವನದಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು.

ಪ್ರಧಾನ ಯೋಗ ತರಬೇತಿದಾರ ಡಾ. ಮನೋಜ್ ಕುಮಾರ್ ಶೆಟ್ಟಿ ಮತ್ತು ಮಕರಂದ ಸಾಲ್ಯಾನ್ ತರಬೇತಿ ನೀಡಿದರು. ರೋಟರಿ ಅಧ್ಯಕ್ಷ ಸುನಿಲ್ ಕುಮಾರ್ ಮತ್ತು ಇನ್ನರ್ ವೀಲ್ ಅಧ್ಯಕ್ಷೆ ಸ್ನೇಹಾಪ್ರವೀಣ್ ಕಾರ್ಯಕ್ರಮ ಉದ್ಘಾಟಿಸಿದರು. ಎಂ–11 ಸಂಸ್ಥೆಯ ಮಾನವ ಸಂಪನ್ಮೂಲ ಅಧಿ ಕಾರಿ ಅನಿಲ್ ಪಾಲನ್, ಉಡುಪಿ ಜಿಲ್ಲಾ ಆಯುಷ್ ಫೆಡೆರೇಶನ್ ಆಫ್ ಇಂಡಿಯಾ ಇದರ ಅಧ್ಯಕ್ಷ ಡಾ. ಎನ್.ಟಿ.ಅಂಚನ್ ಹಾಗೂ ಪಡುಬಿದ್ರಿ ಲಯನ್ಸ್ ಅಧ್ಯಕ್ಷ ಮ್ಯಾಕ್ಸಿಂ ಡಿ'ಸೋಜ, ಪೂರ್ವಾಧ್ಯಕ್ಷರು ಸಂಪತ್ ಕುಮಾರ್, ವಿಹಿಂಪ ಜಿಲ್ಲಾ ಅಧ್ಯಕ್ಷ ವಿಷ್ಣುಮೂರ್ತಿ ಆಚಾರ್ ಇದ್ದರು. ಪಡುಬಿದ್ರಿ ಹಠಯೋಗ ಶಿಕ್ಷಣ ಸಮಿತಿಯ ಸದಸ್ಯ ಜಗದೀಶ್ ಆಚಾರ್, ಸಂತೋಷ್ ಆಚಾರ್, ಜ್ಯೋತಿ ಪಿಂಟೋ, ಗೀತಾರಾವ್, ಸುಕೇಶ್, ಶಾಲೆಟ್ ಫುರ್ಟಾಡೊ, ಸತೀಶ್ ಆಚಾರ್ ಭಾಗವಹಿಸಿದ್ದಾರೆ. ಡಾ. ಎನ್. ಟಿ.ಅಂಚನ್ ಯೋಗದ ಮಹತ್ವದ ಬಗ್ಗೆ ಮಾಹಿತಿ ನೀಡಿದರು.

ಕೊಡಗು ವಿದ್ಯಾಲಯದಲ್ಲಿ ಯೋಗ ದಿನಾಚರಣೆ



ಮಡಿಕೇರಿ: ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕೊಡಗು ವಿದ್ಯಾಲಯದಲ್ಲಿ ವಿಶೇಷ ಕಾರ್ಯಕ್ರಮ ಆಯೋಜಿಸಲಾಯಿತು.

ಕಾರ್ಯಕ್ರಮವು ಪ್ರಾಂಶುಪಾಲ ಕೆ. ಎಸ್. ಸುಮಿತ್ರಾ ಉಪಸ್ಥಿತಿಯಲ್ಲಿ ನಡೆಯಿತು. ಯೋಗ ಶಿಕ್ಷಕಿ ವಿದ್ಯಾ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ವಿವಿಧ ಯೋಗಾಸನಗಳು, ಪ್ರಾಣಾಯಾಮಗಳು ಹಾಗೂ ಧ್ಯಾನಾಭ್ಯಾಸಗಳನ್ನು ಪ್ರದರ್ಶಿಸಿದರು. ವಿದ್ಯಾರ್ಥಿಗಳಿಂದ ನಡೆದ ಯೋಗ ಪ್ರದರ್ಶನಗಳು ಗಮನ ಸೆಳೆದವು. ಈ ಸಂದರ್ಭದಲ್ಲಿ ಯೋಗದ ಮಹತ್ವ ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಅದರ ಸಕಾರಾತ್ಮಕ ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ, ಯೋಗವನ್ನು ತಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳುವ ಸಂಕಲ್ಪ ಕೈಗೊಂಡರು.



ಪುತ್ತೂರು ನಗರದ ತೆಂಕಿಲದಲ್ಲಿರುವ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ನಡೆಯಿತು. ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಸಂಚಾಲಕ ವಸಂತ ಸುವರ್ಣ, ಪ್ರೌಢ ಶಾಲಾ ಮುಖ್ಯ ಗುರು ಆಶಾ ಬೆಳ್ಳಾರೆ, ಪ್ರಾಥಮಿಕ ವಿಭಾಗದ ಮುಖ್ಯ ಗುರು ನಳಿನಿ ವಾಗ್ಲೆ, ಅನುರಾಧ, ವೀಣಾ ಸರಸ್ವತಿ ಮಾತಾಜಿ, ಶಾಲಾ ಸ್ವಾಸ್ಥ್ಯ ಸಂಘ ಸಂಯೋಜಕಿ ಶಾಲಾ ದೈಹಿಕ ಶಿಕ್ಷಣ ಶಿಕ್ಷಕಿ ನಮಿತಾ ಕೆ.ಕೆ. ಮೊದಲಾದವರಿದ್ದರು.

ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಯೋಗ ದಿನ

ಯೋಗ ಶ್ರೇಷ್ಠ ಜೀವನ ಪದ್ಧತಿ: ಜ್ಞಾನೇಶ್

ಪುತ್ತೂರು: ಯೋಗವು ಕೇವಲ ದೈಹಿಕ ಆರೋಗ್ಯಕ್ಕೆ ಸೀಮಿತವಲ್ಲ, ಅದು ದೇಹ, ಮನಸ್ಸು ಮತ್ತು ಆತ್ಮದ ಸಮನ್ವಯವನ್ನು ಸಾಧಿಸುವ ಒಂದು ಮಹತ್ತರ ಜೀವನ ಪದ್ಧತಿಯಾಗಿದೆ ಎಂದು ಆರ್ವಿ ಇಂಟರ್ ಗ್ರಾಫಿಕ್ಸ್ ಪುತ್ತೂರು ಸಂಸ್ಥೆಯ ಮಾಲೀಕರು ಹಾಗೂ ಯೋಗ ತರಬೇತುದಾರರಾದ ಜ್ಞಾನೇಶ್ ವಿಶ್ವಕರ್ಮ ಹೇಳಿದರು.

ನಗರದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವೈದೇಹಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಅಂತರಷ್ಟ್ರೀಯ ಯೋಗ ದಿನಾಚರಣೆಯ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.



ಒತ್ತಡ ನಿವಾರಣೆ

ಆಧುನಿಕ ಜೀವನ ಶೈಲಿಯಿಂದ ಉಂಟಾಗುತ್ತಿರುವ ಒತ್ತಡ, ಆತಂಕ ಹಾಗೂ ಆರೋಗ್ಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯೋಗದ ಪಾತ್ರ ಅತ್ಯಂತ ಮುಖ್ಯವಾಗಿದೆ. ನಿಯಮಿತ ಯೋಗಾಭ್ಯಾಸದಿಂದ ವ್ಯಕ್ತಿತ್ವ ವಿಕಸನವಾಗುತ್ತದೆ. ಯೋಗವು ವ್ಯಕ್ತಿಯ ಏಕಾಗ್ರತೆ, ಮಾನಸಿಕ ಸ್ಥಿರತೆ, ದೈಹಿಕ ಕ್ಷಮತೆ ಹಾಗೂ ಆತ್ಮ ಶಿಸ್ತನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಹೇಳಿದರು.

ಈ ಸಂದರ್ಭ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಯೋಗ ಶಿಕ್ಷಕರಾದ ಸುಮ ಹಾಗೂ ರವೀಂದ್ರ ಅವರು ವಿದ್ಯಾರ್ಥಿಗಳಿಗೆ ಯೋಗ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಕಾಲೇಜಿನ ಪ್ರಾಂಶುಪಾಲ ದೇವಿಚರಣ್ ರೈ ಎಂ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪನ್ಯಾಸಕರು, ವಿದ್ಯಾರ್ಥಿಗಳು ಭಾಗವಹಿಸಿದರು. ದೈಹಿಕ ಶಿಕ್ಷಣ ನಿರ್ದೇಶಕಿ ಡಾ. ಜ್ಯೋತಿ ಸ್ವಾಗತಿಸಿ, ಉಪನ್ಯಾಸಕಿ ದಿವ್ಯಾ ಜಿ. ಕಾರ್ಯಕ್ರಮ ವಂದಿಸಿದರು.

ಪ್ರೇರಣಾ ಶಾಲೆ: ಯೋಗ ದಿನಾಚರಣೆ

ಮೂಡುಬಿದಿರೆ: ಪ್ರೇರಣಾ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯೋಗ ದಿನಾಚರಣೆ ನಡೆಯಿತು. ಮೂಡುಬಿದಿರೆಯ ಪತಂಜಲಿಯ ಯೋಗ ಶಿಕ್ಷಕ ಶರತ್ ಕಾರ್ಯಕ್ರಮ ಉದ್ಘಾಟಿಸಿದರು. ಶಾಲಾ ಸಂಚಾಲಕ ಎಂ.ಶಾಂತರಾಮ ಕುಡ್ವ ಅಧ್ಯಕ್ಷತೆ ವಹಿಸಿದ್ದರು. ಯೋಗ ಶಿಕ್ಷಕಿ ಪವಿತ್ರಾ, ಜ್ಯೋತಿ ಹಾಗೂ ಶಾಲಾ ಮುಖ್ಯ ಮಾತಾಜಿ ಶ್ರೀಮತಿ ವತ್ಸಲಾ ರಾಜೇಶ್ ಉಪಸ್ಥಿತರಿದ್ದರು . ನಂತರದಲ್ಲಿ ಶಾಲಾ ಮೈದಾನದಲ್ಲಿ 280 ವಿದ್ಯಾರ್ಥಿಗಳಿಂದ ಪಾರಂಪರಿಕ ಯೋಗಾಭ್ಯಾಸ ನಡೆಯಿತು. ಯೋಗ ಶಿಕ್ಷಕ ಶರತ್ ಮಾರ್ಗದರ್ಶನದಲ್ಲಿ ಪವಿತ್ರಾ ಹಾಗೂ ಜ್ಯೋತಿ ಅವರು ವಿದ್ಯಾರ್ಥಿಗಳಿಂದ ಯೋಗಾಸನ ಮಾಡಿಸಿದರು.

ಅಲ್ಲಲ್ಲಿ ವಿಶ್ವ ಯೋಗ ದಿನಾಚರಣೆ



ಬಿಜೆಪಿ ಕುಂಬ್ಡಾಜೆ ಪಂಚಾಯತ್ ಸಮಿತಿ ನೇತೃತ್ವದಲ್ಲಿ ಯೋಗ ದಿನಾಚರಣೆ ನಡೆಯಿತು. ಬಿಜೆಪಿ ರಾಜ್ಯ ಸಮಿತಿ ಸದಸ್ಯ ಹರೀಶ್ ನಾರಂಪಾಡಿ, ಬಿಜೆಪಿ ಪಂಚಾಯತ್ ಸಮಿತಿ ಅಧ್ಯಕ್ಷ ಶಶಿಧರ ತೆಕ್ಕೆಮೂಲೆ, ಪ್ರಮುಖರಾದ ರವೀಂದ್ರ ರೈ ಗೋಸಾಡ, ಯೋಗ ಶಿಕ್ಷಕ ಸೀತಾರಾಮ ಭಟ್ ಮವ್ವಾರು, ಪ್ರಮೋದ್ ಭಂಡಾರಿ, ಪ್ರಿಯಾಂಕ ಎ.ಸಿ., ಮಹೇಶ್ ಅಜ್ಜಿಮೂಲೆ, ಸೌಭಾಗ್ಯಲಕ್ಷ್ಮಿ, ಕೊರಗಪ್ಪ ಬೆಳ್ಳಿಗೆ, ಹರೀಶ್ ಪೆರಿಂಜೆ, ಜನಾರ್ದನ ಪೊಡಿಪ್ಪಳ್ಳ ಗಣೇಶ್ ರೈ ಬೆಳ್ಳಿಗೆ ಮತ್ತಿತರರಿದ್ದರು.



ಕಾಸರಗೋಡು ಜಿಎಂಆರ್‌ಎಸ್‌ಎಸ್ ಫಾರ್ ಗರ್ಲ್ಸ್ ಕಾಸರಗೋಡು ಶಾಲೆಯಲ್ಲಿ ಎನ್‌ಎಸ್‌ಎಸ್ ನೇತೃತ್ವದಲ್ಲಿ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿನಿ ಮಾನುಷಿ ಕಾಸರಗೋಡು ಯೋಗ ಪ್ರಾತ್ಯಕ್ಷಿಕೆ ನೀಡಿದರು.ಈ ಸಂದರ್ಭ ಪ್ರಾಂಶುಪಾಲ ಅರುಣ್‌ಕುಮಾರ್ ಹಾಗೂ ಪ್ರೋಗ್ರಾಂ ಆಫೀಸರ್ ಶ್ರೀಜಾ ಅವರು ಸನ್ಮಾನಿಸಿ, ಗೌರವಿಸಿದರು.



ಮಂಜೇಶ್ವರದ ಧರ್ಮತ್ತಡ್ಕ ಶ್ರೀ ದುರ್ಗಾಪರಮೇಶ್ವರಿ ಹೈಸ್ಕೂಲ್‌ನಲ್ಲಿ ಸೋಮವಾರ ವಿಶ್ವ ಯೋಗ ದಿನಾಚರಣೆ ನಡೆಯಿತು. ನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ನೇತೃತ್ವ ವಹಿಸಿತ್ತು. ಮುಖ್ಯೋಪಾಧ್ಯಾಯ ಶಶಿಕುಮಾರ್ ಪಿ., ಸ್ಕೌಟ್ ಮಾಸ್ಟರ್ ಹರ್ಷಿತ್ ಐಲ, ಗೈಡ್ ಕ್ಯಾಪ್ಟನ್ ವಿನೀತ ಬಿ., ಕೇಶವ ಪ್ರಸಾದ್ ಎಡಕ್ಕಾನ ಹಾಗೂ ವಿದ್ಯಾರ್ಥಿಗಳು ಸಹಕರಿಸಿದರು.



ವಿಟ್ಲದ ವಿಟ್ಠಲ ಎಜುಕೇಶನ್ ಸೊಸೈಟಿಯ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು. ಪುತ್ತೂರು ಮಾತೃಛಾಯಾ ಯೋಗ ಶಾಖೆಯ ಹರಿಪ್ರಸಾದ್ ಯೋಗಾಭ್ಯಾಸ ನಡೆಸಿಕೊಟ್ಟರು. ಸಂಚಾಲಕ ರಾಧಾಕೃಷ್ಣ ನಾಯಕ್, ವೃಂದಾ ಜೆ.ರೈ, ಮಂಟ್ಯಯ್ಯ, ಸವಿತಾ, ಪ್ರಕಾಶ್ ನಾಯಕ್ ಉಪಸ್ಥಿತರಿದ್ದರು.



ಉಡುಪಿ ಪೇಜಾವರ ಮಠದ ಆಡಳಿತಕ್ಕೆ ಒಳಪಟ್ಟ ಶಿರ್ವದ ಪಾಜಕ ಆನಂದತೀರ್ಥ ವಿದ್ಯಾಲಯದಲ್ಲಿ ಯೋಗ ದಿನಾಚರಣೆ ನಡೆಯಿತು. ಕೂನ್ನತೆ ಇಂಟರ್‌ನ್ಯಾಷನಲ್ ಸಂಸ್ಥೆಯ ಸಂಸ್ಥಾಪಕ ಮಂಜುನಾಥ ಪಾಟ್ಕರ್ ಪ್ರಾತಿಕ್ಷಿಕೆ ನೀಡಿದರು. ಶಾಲಾ ಪ್ರಾಂಶುಪಾಲ ಗೀತಾ ಶಶಿಧರ್, ವಿದ್ಯಾರ್ಥಿ ಸುಮುಖ ಯೋಗ ಕುರಿತು ಮಾತನಾಡಿದರು.



ಶ್ರೀರಾಮ ಶಾಲೆ ಉಪ್ಪಿನಂಗಡಿಯಲ್ಲಿ ವಿಶ್ವ ಯೋಗ ದಿನಾಚರಣೆ ನಡೆಯಿತು. ಶಾಲಾ ಸಂಚಾಲಕ ಯು.ಜಿ. ರಾಧಾ, ಪ್ರೌಢ ವಿಭಾಗದ ಮುಖ್ಯಗುರು ರಘುರಾಮ ಭಟ್ ಸಿ., ಹಾಗೂ ಪ್ರಾಥಮಿಕ ವಿಭಾಗದ ಪ್ರಭಾರ ಮುಖ್ಯ ಮಾತಾಜಿ ಉಷಾ ಬಿ., ಇವರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳಾಗಿ ಜಯಂತ ಪೊರೋಳಿ ಭಾಗವಹಿಸಿದರು.



ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಮೂಡುಬೆಳ್ಳೆ ಜ್ಞಾನಗಂಗಾ ಪ.ಪೂ.ಕಾಲೇಜಿನಲ್ಲಿ ಕಾರ್ಯಕ್ರಮ ಜರುಗಿತು. ಮುಲ್ಕಿ ಕೆಂಚನಕೆರೆ ಉಚಿತ ಯೋಗ ತರಬೇತಿ ಕೇಂದ್ರದ ಯೋಗ ಗುರು ಜಯ ಮುದ್ದು ಶೆಟ್ಟಿ ಪ್ರಾತಿಕ್ಷಿಕೆ ನೀಡಿದರು. ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಯಾದವ ದೇವಾಡಿಗ, ಪ್ರಾಂಶುಪಾಲೆ ಡಾ.ಲೀನಾ ಎಸ್ ನಾಯ್ಕ್, ಸಂಸ್ಥೆಯ ಪ್ರಭಾರ ಕಾರ್ಯದರ್ಶಿ ಪ್ರಭಾಕರ .ಕೆ.ಎಸ್., ಮತ್ತಿತರರಿದ್ದರು.



ಕೋಟದ ವಿವೇಕ ಬಾಲಕಿಯರ ಪ್ರೌಢಶಾಲೆಯ ಕ್ರೀಡಾ ಸಂಘ ಮತ್ತು ಆರೋಗ್ಯ ಸಂಘದ ಜಂಟಿ ಆಶ್ರಯದಲ್ಲಿ ಯೋಗ ದಿನಾಚರಣೆ ಹಮ್ಮಿಕೊಳ್ಳಲಾಯಿತು. ಯೋಗ ಗುರು ಚೇಂಪಿ ಪ್ರಕಾಶ್ ಭಟ್ ಪ್ರಾತಿಕ್ಷಿಕೆ ನೀಡಿದರು. ವೇದಿಕೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರಾದ ವೆಂಕಟೇಶ ಉಡುಪ, ಆರೋಗ್ಯ ಸಂಘದ ಸಂಚಾಲಕಿ ಮಮತಾ ಹಾಗೂ ಕ್ರೀಡಾ ಸಂಘದ ಕಾರ್ಯದರ್ಶಿ ಕುಮಾರಿ ಸಮೀಕ್ಷಾ ಉಪಸ್ಥಿತರಿದ್ದರು. ಆರೋಗ್ಯ ಸಂಘದ ಕಾರ್ಯದರ್ಶಿ ಕುಮಾರಿ ಸಾನ್ವಿ ವಂದಿಸಿದರು.

ಸುತ್ತಮುತ್ತ

ಕಾಸರಗೋಡು: ಇಂದು ಮಿನಿ ಜಾಬ್ ಡ್ರೈವ್

ಕಾಸರಗೋಡು: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಮತ್ತು ಕಾಸರಗೋಡು ಉದ್ಯೋಗಾವಕಾಶ ಕೇಂದ್ರವು ಜಂಟಿಯಾಗಿ ಜೂ.24ರಂದು ಬೆಳಗ್ಗೆ 10 ಗಂಟೆಯಿಂದ ಕಾಸರಗೋಡು ಸಿವಿಲ್ ಸ್ಟೇಷನ್ ನಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಾವಕಾಶ ಕೇಂದ್ರದಲ್ಲಿ ಜಿಲ್ಲೆಯ ಅಭ್ಯರ್ಥಿಗಳಿಗೆ ನೇಮಕಾತಿ ಅಭಿಯಾನವನ್ನು ಆಯೋಜಿಸಲಿದೆ. ವಿವಿಧ ಖಾಸಗಿ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಎಸ್‌ಎಸ್ ಎಲ್‌ಸಿ, ಪ್ಲಸ್ ಟು, ಪದವಿ, ಡಿಪ್ಲೊಮಾ ವಿದ್ಯಾರ್ಹತೆ ಹೊಂದಿರುವವರು ಭಾಗವಹಿಸಬಹುದು. ಈಗಾಗಲೇ ಉದ್ಯೋಗಾವಕಾಶ ಕೇಂದ್ರದಲ್ಲಿ ನೋಂದಾಯಿಸಿಕೊಂಡಿರುವ ಅಭ್ಯರ್ಥಿಗಳು ನೇರವಾಗಿ ಭಾಗವಹಿಸಬಹುದು.
ನೋಂದಾಯಿಸಿಕೊಳ್ಳದವರಿಗೆ ಅದೇ ದಿನ ಸ್ಪಾಟ್ ನೋಂದಣಿ ಸೌಲಭ್ಯವಿರುತ್ತದೆ. ಹೆಚ್ಚಿನ ವಿವರಗಳಿಗೆ 9207155700 ಕರೆ ಮಾಡಬಹುದು.

ಜೂ.26ರಂದು ವ್ಯಸನ ವಿರೋಧಿ ಮಿನಿ ಮ್ಯಾರಥಾನ್

ಕಾಸರಗೋಡು: ಚಿನ್ಮಯ ಮಿಷನ್‌ನ ಯುವ ಅಂಗವಾದ ಚಿನ್ಮಯ ಯುವ ಕೇಂದ್ರವು ಕೇರಳ ಸರಕಾರದ ಆಪರೇಷನ್ ತೂಫಾನ್‌ಗೆ ಬೆಂಬಲವಾಗಿ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನವಾದ ಜೂ.26ರಂದು ಮಿನಿ ಮ್ಯಾರಥಾನ್ ಆಯೋಜಿಸುತ್ತಿದೆ.
ಬೆಳಗ್ಗೆ 6.30ಕ್ಕೆ ಹೊಸ ಬಸ್ ನಿಲ್ದಾಣ ಪ್ರದೇಶದಿಂದ ಆರಂಭವಾಗಿ ವಿದ್ಯಾನಗರ ಚಿನ್ಮಯ ಕ್ಯಾಂಪಸ್‌ನಲ್ಲಿ ಕೊನೆಗೊಳ್ಳಲಿದೆ. ಕಾಸರಗೋಡು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಎಂ.ದೇವದಾಸನ್ ಧ್ವಜಾರೋಹಣ ನೆರವೇರಿಸುವರು. ಸಹಾಯಕ ಅಬಕಾರಿ ಆಯುಕ್ತ ಹಾಗೂ ಅಬಕಾರಿ ವ್ಯವಸ್ಥಾಪಕ ಅನ್ವರ್ ಸಾದತ್ ಅವರು ಮಾದಕ ವಸ್ತು ವಿರೋಧಿ ಸಂದೇಶ ನೀಡಲಿದ್ದಾರೆ. ಚಿನ್ಮಯ ಮಿಷನ್ ಕೇರಳ ಘಟಕದ ಮುಖ್ಯಸ್ಥ ಸ್ವಾಮಿ ವಿವಿಕ್ತಾನಂದ ಸರಸ್ವತಿ ಆಶೀರ್ವಚನ ನೀಡಲಿದ್ದಾರೆ. ಚಿನ್ಮಯ ಯುವ ಕೇಂದ್ರದ ರಾಜ್ಯ ಪರಿಷತ್ ಸದಸ್ಯೆ ಬ್ರಹ್ಮಚಾರಿಣಿ ದಿಶಾ ಚೈತನ್ಯ ಪಾಲ್ಗೊಳ್ಳುವರು. ಚಿನ್ಮಯ ಯುವ ಕೇಂದ್ರದ ಮುಖಂಡರಾದ ಪ್ರಿಯಾಂಕಾ ಪಿ., ನಿಖಿಲೇಶ್ ವಿ., ರಶ್ಮಿ ಮುರಳೀಧರನ್, ಚಿನ್ಮಯ ಮಿಷನ್ ಅಧ್ಯಕ್ಷ ಎ.ಕೆ.ನಾಯರ್, ಕಾರ್ಯದರ್ಶಿ ಕೆ.ಬಾಲಚಂದ್ರನ್, ಉಪಾಧ್ಯಕ್ಷ ವಿ.ಗಣೇಶ್ ಪ್ರಭು, ಪಿ.ಗಣೇಶ್ ಭಟ್, ಚಿನ್ಮಯ ವಿದ್ಯಾಲಯದ ಪ್ರಾಂಶುಪಾಲ ಟಿ.ವಿ.ಸುಕುಮಾರನ್, ಉಪ ಪ್ರಾಂಶುಪಾಲ ಅಭಿಜಿತ್ ಮತ್ತಿತರರು ನೇತೃತ್ವ ವಹಿಸಲಿದ್ದಾರೆ.

ಜೂ.28ರಂದು ಅನಂತಪುರ ಕ್ಷೇತ್ರದಲ್ಲಿ ಸಮಾಲೋಚನಾ ಸಭೆ

ಕುಂಬಳೆ: ಸರೋವರ ಕ್ಷೇತ್ರವೆಂದೇ ಪ್ರಸಿದ್ಧಿ ಪಡೆದಿರುವ ಅನಂತಪುರ ಶ್ರೀ ಅನಂತ ಪದ್ಮನಾಭ ಸ್ವಾಮೀ ದೇವಸ್ಥಾನದ ಬ್ರಹ್ಮಕಲಶೋತ್ಸವದ ಬಗ್ಗೆ ಸಮಾಲೋಚಿಸಲು ಜೂ.28ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಕ್ಷೇತ್ರದ ಸಭಾ ಭವನದಲ್ಲಿ ಭಕ್ತರಿಂದ ಸಮಾಲೋಚನಾ ಸಭೆ ನಡೆಯಲಿದೆ.
ಬ್ರಹ್ಮಕಲಶೋತ್ಸವದ ದಿನಾಂಕ ನಿಗದಿ, ವಿವಿಧ ಉಪಸಮಿತಿಗಳ ರೂಪೀಕರಣ ಈ ಸಂದರ್ಭ ಜರಗಲಿದೆ. ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಬ್ರಹ್ಮಶ್ರೀ ದೇಲಂಪಾಡಿ ಗಣೇಶ ತಂತ್ರಿ ಹಾಗೂ ಧಾರ್ಮಿಕ, ಸಾಮಾಜಿಕ ವಲಯಗಳ ಮುಖಂಡರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಸಂಬಂಧಪಟ್ಟ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರಿಸರ ದಿನಾಚರಣೆ

ಮಂಜೇಶ್ವರ: ಮಂಜೇಶ್ವರ ಗ್ರಾಮ ಪಂಚಾಯತ್ ಕೃಷಿ ಭವನದ ನೇತೃತ್ವದಲ್ಲಿ ಪರಿಸರ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಹೊಸಬೆಟ್ಟು ಜಿಎಲ್‌ಪಿ ಶಾಲೆಯಲ್ಲಿ ನಡೆದ ಸಮಾರಂಭವನ್ನು ಮಂಜೇಶ್ವರ ಗ್ರಾ.ಪಂ. ಅಧ್ಯಕ್ಷ ಬಶೀರ್ ಕನಿಲ ಉದ್ಘಾಟಿಸಿದರು.
ಗ್ರಾ.ಪಂ. ಉಪಾಧ್ಯಕ್ಷೆ ಫಾತಿಮತ್ ಸುಹರಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವಾರ್ಡ್ ಸದಸ್ಯ ಮುಕ್ತಾರ್, ಇಲ್ಯಾಸ್ ಸೇರಿದಂತೆ ಗ್ರಾ.ಪಂ.ನ ಎಲ್ಲಾ ಎಡಿಸಿ ಸದಸ್ಯರು, ವಾರ್ಡ್ ಸದಸ್ಯರು, ಕೃಷಿ ಭವನದ ಅಧಿಕಾರಿಗಳು, ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಕರ ನೇಮಕಾತಿ

ಕಾಸರಗೋಡು: ಎಳೇರಿತಟ್ಟು ಇ.ಕೆ.ನಾಯನಾರ್ ಸ್ಮಾರಕ ಸರಕಾರಿ ಕಾಲೇಜಿನ ಇತಿಹಾಸ ವಿಭಾಗದಲ್ಲಿ ಶಿಕ್ಷಕರ ನೇಮಕಾತಿಗಾಗಿ ಸಂದರ್ಶನವು ಜೂ.29ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ. ಕಾಲೇಜು ಶಿಕ್ಷಣ ಇಲಾಖೆಯ ಉಪ ನಿರ್ದೇಶನಾಲಯದಲ್ಲಿ ಹೆಸರು ನೋಂದಾಯಿಸಿದವರು ಭಾಗವಹಿಸಬಹುದು. ನೆಟ್, ಸಂಬಂಧಿತ ವಿಷಯದಲ್ಲಿ ಪಿಎಚ್‌ಡಿ ವಿದ್ಯಾರ್ಹತೆಯಾಗಿದೆ. ಅವರ ಅನುಪಸ್ಥಿತಿಯಲ್ಲಿ ಶೇಕಡಾ 55ಕ್ಕಿಂತ ಕಡಿಮೆಯಿಲ್ಲದ ಅಂಕಗಳನ್ನು ಹೊಂದಿರುವ ಸ್ನಾತಕೋತ್ತರ ಪದವೀಧರರನ್ನು ಪರಿಗಣಿಸಲಾಗುತ್ತದೆ. ಹೆಚ್ಚಿನ ವಿವರಗಳಿಗೆ 0467 2245833 ಕರೆ ಮಾಡಬಹುದು.

ಡೇಟಾ ಎಂಟ್ರಿ ಆಪರೇಟರ್ ನೇಮಕಾತಿ

ಕಾಸರಗೋಡು: ಚೆಮ್ನಾಡು ಗ್ರಾಮ ಪಂಚಾಯತ್‌ನಲ್ಲಿ ಜನನ, ಮರಣ ಮತ್ತು ವಿವಾಹ ನೋಂದಣಿಯನ್ನು ನವೀಕರಿಸಲು ಕನ್ನಡ ಮತ್ತು ಮಲೆಯಾಳ ತಿಳಿದಿರುವ ಡೇಟಾ ಎಂಟ್ರಿ ಆಪರೇಟರ್ ಗಳನ್ನು ನೇಮಿಸುವ ಸಂದರ್ಶನವು ಜೂ.27ರಂದು ಬೆಳಗ್ಗೆ 10.30ಕ್ಕೆ ಪಂಚಾಯತ್ ಕಚೇರಿಯಲ್ಲಿ ನಡೆಯಲಿದೆ. ಹೆಚ್ಚಿನ ವಿವರಗಳಿಗೆ 04994 237276 ಸಂಪರ್ಕಿಸಬಹುದು.

ಪ್ರಧಾನಿ ಮೋದಿ ಸರ್ಕಾರಕ್ಕೆ 12ನೇ ವರ್ಷದ ಸಂಭ್ರಮ | ಡಾ. ಶ್ಯಾಮಪ್ರಸಾದ್ ಮುಖರ್ಜಿ ಸ್ಮರಣೆ

ಬಿಜೆಪಿಯಿಂದ ವಿಕಸಿತ ಭಾರತ ಸಮಾವೇಶ ಆಯೋಜನೆ

ಕಾಸರಗೋಡು: ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ 12ನೇ ವಾರ್ಷಿಕೋತ್ಸವದ ಅಂಗವಾಗಿ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ನವ ಭಾರತ ಸದಸ್ ಎಂಬ ಹೆಸರಿನಲ್ಲಿ ವಿಕಸಿತ ಭಾರತ ಸಮಾವೇಶವನ್ನು ಮಂಗಳವಾರ ಆಯೋಜಿಸಲಾಯಿತು.

ಬಿಜೆಪಿ ಜಿಲ್ಲಾ ಕಾರ್ಯಾಲಯವಾದ ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಉದ್ಘಾಟಿಸಿ, ವಿಶ್ವದ 10ನೇ ಆರ್ಥಿಕ ಶಕ್ತಿಯಾಗಿದ್ದ ಭಾರತವನ್ನು ಕೇವಲ 12 ವರ್ಷಗಳಲ್ಲಿ 4ನೇ ಸ್ಥಾನಕ್ಕೇರಿಸಲು ನರೇಂದ್ರ ಮೋದಿಯವರಿಂದ ಸಾಧ್ಯವಾಯಿತು ಎಂದು ಹೇಳಿದರು.

ಭಾರತಕ್ಕೆ ಆರ್ಥಿಕ ಚೈತನ್ಯ

ಭ್ರಷ್ಟಾಚಾರ ಮತ್ತು ಆಡಳಿತಾತ್ಮಕ ಅಸ್ಥಿರತೆ ಗಳಿಂದ ನಶಿಸುತ್ತಿದ್ದ ಭಾರತಕ್ಕೆ ಆರ್ಥಿಕ ಚೈತನ್ಯ ಮತ್ತು ನಿರ್ದೇಶನ ದೊರೆತದ್ದು ಮೋದಿಯವರ ಆಡಳಿತಾವಧಿಯಲ್ಲಾಗಿದೆ. ಜನಕಲ್ಯಾಣ ಯೋಜನೆಗಳ ಜೊತೆಗೆ ಬೃಹತ್ ನಿರ್ಮಾಣ ಯೋಜನೆಗಳನ್ನು ಹಾಗೂ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಮೋದಿ ಸರಕಾರವು ನಿರಂತರವಾಗಿ ಜಾರಿಗೆ ತಂದಿದೆ ಎಂದು ಅವರು ಸಮಗ್ರ ಮಾಹಿತಿ ನೀಡಿದರು.



ವಿಕಸಿತ ಭಾರತ ಗುರಿ ಸಾಧನೆಯತ್ತ

ವಂದೇ ಭಾರತ್‌ನಿಂದ ಹಿಡಿದು ಬುಲೆಟ್ ರೈಲುಗಳ ವರೆಗೆ ಹಾಗೂ ಯುದ್ಧ ವಿಮಾನಗಳಿಂದ ಸೆಮಿಕಂಡಕ್ಟರ್‌ಗಳ ತನಕ ಎಲ್ಲವನ್ನೂ ದೇಶೀಯವಾಗಿ ಉತ್ಪಾದಿಸಲು ಭಾರತಕ್ಕೆ ಸಾಧ್ಯವಾಯಿತು. ಮಾಹಿತಿ ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿನ ಮುನ್ನಡೆಯು 2047ರ ವೇಳೆಗೆ ವಿಕಸಿತ ಭಾರತ ಎಂಬ ಗುರಿಯನ್ನು ಸಾಧಿಸಲು ದೇಶಕ್ಕೆ ಸಹಾಯವಾಗಲಿದೆ ಎಂದು ಎಂ.ಎಲ್.ಅಶ್ವಿನಿ ತಿಳಿಸಿದರು.

ಕೇರಳದಲ್ಲಿ ಆಡಳಿತ ನಡೆಸುವ ಐಕ್ಯರಂಗ ಸರಕಾರ ಮತ್ತು ವಿಪಕ್ಷ ಎಡರಂಗ ಒಕ್ಕೂಟಕ್ಕೆ ಜನಹಿತದ ಯೋಜನೆಗಳು ಬೇಕಾಗಿಲ್ಲ, ಆದ್ದರಿಂದ ಜನಪರವಾದ ಯಾವುದೇ ಯೋಜನೆಗಳನ್ನು ಕೇಂದ್ರ ಸರಕಾರವು ಜಾರಿಗೊಳಿಸುವಾಗ ಅದಕ್ಕೆ ರಾಜ್ಯದಲ್ಲಿ ಬೆಂಬಲ ಲಭಿಸುತ್ತಿಲ್ಲ. ಕೇರಳದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರಕಾರವು ಕೋಟ್ಯಂತರ ರೂಪಾಯಿಗಳ ಅನುದಾನಗಳನ್ನು ಒದಗಿಸುತ್ತಿದ್ದರೂ ಅದನ್ನು ಸಮರ್ಥವಾಗಿ ಪಡೆಯುವಲ್ಲಿ ರಾಜ್ಯ ಸರಕಾರವು ವಿಫಲವಾಗಿದೆ. ಕೇರಳದಲ್ಲೂ ಜನರು ಬದಲಾವಣೆ ಬಯಸಿದ್ದು, ಮುಂದಿನ ದಿನಗಳಲ್ಲಿ ಬಿಜೆಪಿ ಶಕ್ತಿವರ್ಧನೆಯಾಗಲಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮನುಲಾಲ್ ಮೇಲತ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಆರ್.ಸುನೀಲ್, ಜಿಲ್ಲಾ ಉಪಾಧ್ಯಕ್ಷ ಎಂ.ಬಲರಾಜ್, ಕೃಷಿಕ ಮೋರ್ಚಾ ರಾಜ್ಯ ಉಪಾಧ್ಯಕ್ಷ ಕುಂಞಿಕಣ್ಣನ್ ಬಳಾಲ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಲೋಕೇಶ್ ನೋಂಡ, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಜಿಲ್ಲಾ ಸೆಲ್ ಸಂಚಾಲಕ ಸುಕುಮಾರ ಕುದ್ರೆಪ್ಪಾಡಿ ಸೇರಿದಂತೆ ಬಿಜೆಪಿ ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಕಾರ್ಯಕರ್ತರು, ಪಾಲ್ಗೊಂಡಿದ್ದರು.

ಸಮಾವೇಶಕ್ಕೂ ಮುನ್ನ ಡಾ.ಶ್ಯಾಮಪ್ರಸಾದ್ ಮುಖರ್ಜಿ ಅವರ ಸ್ಮರಣೆ ಹಾಗೂ ಪುಷ್ಪಾರ್ಚನೆ ನಡೆಯಿತು.

> **ಕಾಸರಗೋಡು ಜಿಲ್ಲೆಯಲ್ಲಿ ಬಿಜೆಪಿ ಬಲವರ್ಧನೆ**
>
> ಕಳೆದ ಎರಡು - ಮೂರು ಚುನಾವಣೆಗಳನ್ನು ಗಣನೆಗೆ ತೆಗೆದುಕೊಂಡಾಗ ಕಾಸರಗೋಡು ಜಿಲ್ಲೆಯಲ್ಲಿ ಬಿಜೆಪಿ ಪ್ರವರ್ಧಮಾನಕ್ಕೆ ಏರುತ್ತಿದೆ. ಅದರಲ್ಲೂ ಮಂಜೇಶ್ವರ ಮತ್ತು ಕಾಸರಗೋಡು ಕ್ಷೇತ್ರಗಳಲ್ಲಿ ಬಿಜೆಪಿ ತನ್ನ ಶಕ್ತಿ ವೃದ್ಧಿಸಿಕೊಂಡಿದ್ದು, ಕಾಸರಗೋಡಿನ ಐದು ಗ್ರಾ. ಪಂ.ಗಳಲ್ಲಿ ಪಕ್ಷವು ಅಧಿಕಾರ ನಡೆಸುತ್ತಿದೆ. ಪಕ್ಷದ ನೇತೃತ್ವದಲ್ಲಿ ನಡೆಯುತ್ತಿರುವ ಆಡಳಿತವು ಜನಪರ ಹಾಗೂ ಅಭಿವೃದ್ಧಿಪರವಾಗಿ ಮುಂದುವರಿಯುತ್ತಿದ್ದು ಈ ಮೂಲಕ ಜನಸಾಮಾನ್ಯರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸುವ ಕೆಲಸಗಳು ಆಗುತ್ತಿವೆ. ಮುಂದಿನ ದಿನಗಳಲ್ಲಿ ಜಿಲ್ಲೆಯಲ್ಲಿ ಪಕ್ಷದ ಕಾರ್ಯಚಟುವಟಿಕೆಗಳು ಇನ್ನಷ್ಟು ವೇಗವಾಗಿ ನಡೆಯಲಿದ್ದು, ಈ ನಿಟ್ಟಿನಲ್ಲಿ ಹಿರಿಯರ ಮಾರ್ಗದರ್ಶನದೊಂದಿಗೆ ಕಾರ್ಯಕರ್ತರು ತೊಡಗಿಸಿಕೊಳ್ಳಬೇಕು.
>
> ● ಎಂ.ಎಲ್.ಅಶ್ವಿನಿ, ಕಾಸರಗೋಡು ಬಿಜೆಪಿ ಜಿಲ್ಲಾಧ್ಯಕ್ಷೆ

ಕುಂಬಳೆಯ ಬಿಜೆಪಿ ಕಚೇರಿಯಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿ ಸಂಸ್ಮರಣೆ



ಕುಂಬಳೆ: ಅಖಂಡ ಭಾರತದ ಏಕತೆಗೆ ಶ್ರಮಿಸಿ ಪ್ರಾಣತೆತ್ತ ಶ್ರೀಮಂತ ನಾಯಕ ಮತ್ತು ದೇಶಭಕ್ತ ಹಾಗೂ ಜನಸಂಘದ ಸಂಸ್ಥಾಪಕರಾಗಿದ್ದ ಡಾ.ಶ್ಯಾಮಪ್ರಸಾದ್ ಮುಖರ್ಜಿಯವರ ಬಲಿದಾನ ದಿನವನ್ನು ಬಿಜೆಪಿ ಕುಂಬಳೆ ಪಂಚಾಯತ್ ಸಮಿತಿಯ ವತಿಯಿಂದ ಕುಂಬಳೆ ಪಕ್ಷದ ಕಚೇರಿಯಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಬಿಜೆಪಿ ಕೇರಳ ರಾಜ್ಯ ಸಮಿತಿ ಸದಸ್ಯ ವಿ.ರವೀಂದ್ರನ್ ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಬಿಜೆಪಿ ಕುಂಬಳೆ ದಕ್ಷಿಣ ವಲಯ ಸಮಿತಿ ಅಧ್ಯಕ್ಷ ಕೆ.ಸುಜಿತ್ ರೈ ವಹಿಸಿದ್ದರು.

ಬಿಜೆಪಿ ಮಂಡಲ ಉಪಾಧ್ಯಕ್ಷರಾದ ಕೆ.ಸುಧಾಕರ ಕಾಮತ್, ಬಿ.ವಿಕ್ರಂ ಪೈ, ಕುಂಬಳೆ ಸೇ. ಸ. ಬ್ಯಾಂಕ್‌ನ ಅಧ್ಯಕ್ಷ ರಾಧಾಕೃಷ್ಣ ರೈ ಮಡ್ವ, ಬಿಜೆಪಿ ಕುಂಬಳೆ ಉತ್ತರ ವಲಯ ಸಮಿತಿ ಅಧ್ಯಕ್ಷ ಶಿವಪ್ರಸಾದ್ ರೈ ಮಡ್ವ, ಜನಪ್ರತಿನಿಧಿಗಳಾದ ಕೆ.ರಮೇಶ್ ಭಟ್, ಅಜಿತ್‌ಕುಮಾರ್, ಅಮಿತಾ ಆಳ್ವ, ಉತ್ತರ ವಲಯ ಸಮಿತಿ ಉಪಾಧ್ಯಕ್ಷ ರಾಜೇಶ್ ರೈ, ದಕ್ಷಿಣ ವಲಯ ಸಮಿತಿ ಪ್ರಧಾನ ಕಾರ್ಯದರ್ಶಿ ವಿವೇಕಾನಂದ ಶೆಟ್ಟಿ, ಆಫೀಸ್ ಇನ್‌ಚಾರ್ಜ್ ಕೆ. ವಿನೋದನ್ ಕಡಪ್ಪುರ, ಮಂಡಲ ಕಚೇರಿ ಕಾರ್ಯದರ್ಶಿ ಶಶಿ ಕುಂಬಳೆ ಉಪಸ್ಥಿತರಿದ್ದರು. ಗ್ರಾ. ಪಂ. ಸದಸ್ಯ ರಾದ ಕಾಂಚಾರ ಎ. ಸ್ವಾಗತಿಸಿ, ಶಾರದಾ ವಂದಿಸಿದರು.

ಟೀಮ್ ಕಲ್ಕಿ ಮಂಜೇಶ್ವರದಿಂದ ಮಾದರಿ ಕೆಲಸ: ಮಳೆಗೆ ಹಾನಿಗೊಂಡ ಮನೆ ದುರಸ್ತಿ!



ಮಂಜೇಶ್ವರ: ಹೊಸಂಗಡಿ ಬಳಿಯ ಮಜಿಬೈಲು ನಿವಾಸಿ ಕೇಶವ ಹಾಗೂ ಲಲಿತಾ ದಂಪತಿಯ ಹೆಂಚು ಹಾಸಿದ ಮನೆಗೆ ಇತ್ತೀಚೆಗೆ ಸುರಿದ ಭಾರೀ ಮಳೆ ಗಾಳಿಯಿಂದಾಗಿ ಮನೆಯ ಮೇಲ್ಛಾವಣಿಗೆ ಮರ ಬಿದ್ದು ಸಂಪೂರ್ಣ ಹಾನಿ ಸಂಭವಿಸಿತ್ತು. ಈ ಸಂಕಷ್ಟದ ಸಂದರ್ಭದಲ್ಲಿ ವಿಷಯವನ್ನರಿತ ಕಲ್ಕಿ ಮಂಜೇಶ್ವರ ತಂಡವು ತಕ್ಷಣ ಸ್ಪಂದಿಸಿ ಮನೆ ದುರಸ್ತಿ ಕಾರ್ಯಕ್ಕೆ ನೆರವಾಗಿ ಮಾನವೀಯತೆ ಮೆರೆದಿದೆ.

ಸುಮಾರು 70,000 ರೂಪಾಯಿ ವೆಚ್ಚದಲ್ಲಿ ದುರಸ್ತಿ ಕಾರ್ಯ ನೆರವೇರಿದ್ದು, ಈ ಮಹತ್ಕಾರ್ಯಕ್ಕೆ ಟೀಮ್‌ನ ಸಹೃದಯಿ ದಾನಿಗಳು ಹಾಗೂ ಚಕ್ರವರ್ತಿ ಹೊಸಂಗಡಿ ಸಂಸ್ಥೆ ಸಹಕರಿಸಿದ್ದು ಅವರೆಲ್ಲರಿಗೂ ಟೀಮ್ ಕಲ್ಕಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದೆ.

ಈ ಸಹಾಯ ಕಾರ್ಯದಲ್ಲಿ ಪಾಲ್ಗೊಂಡು ಪ್ರೋತ್ಸಾಹ ನೀಡಿದ ಯುವ ನಾಯಕ ಹಾಗೂ ಚಲನಚಿತ್ರ ನಟ ಭವೀಶ್ ಶೆಟ್ಟಿ ಎಕ್ಕೂರು, ಮಂಜೇಶ್ವರ ಗ್ರಾ. ಪಂ. ನ ಮಾಜಿ ಸದಸ್ಯ ಎಂ.ಹರಿಶ್ಚಂದ್ರ ಮಂಜೇಶ್ವರ, ಟೀಮ್ ಕಲ್ಕಿ ಮುಖ್ಯಸ್ಥ ಅಖಿಲ್ ಶೆಟ್ಟಿ, ಟೀಮ್ ಕಲ್ಕಿ ಮಂಜೇಶ್ವರ ಸಂಸ್ಥಾಪಕ ಅರುಣ್ ಕುಮಾರ್ ದುರ್ಗಿಪಳ್ಳ, ಅಧ್ಯಕ್ಷ ರಂಜಿತ್ ಕುಮಾರ್, ಚಕ್ರವರ್ತಿ ಹೊಸಂಗಡಿ ಸಂಸ್ಥೆಯ ಉಪಾಧ್ಯಕ್ಷ ಸುರೇಶ್ ಗಾಣಂ ಜಾಲ್, ಟೀಮ್ ಕಲ್ಕಿ ಪ್ರಮುಖ್ ಅಕ್ಷಯ್‌ಕುಮಾರ್ ಮೊದಲಾದವರು ಉಪಸ್ಥಿತರಿದ್ದರು.

ಕೊಂಡೆವೂರು ಸದ್ಗುರು ಶ್ರೀ ನಿತ್ಯಾನಂದ ವಿದ್ಯಾಪೀಠದಲ್ಲಿ ಯೋಗ ದಿನಾಚರಣೆ



ಉಪ್ಪಳ: ಕೊಂಡೆವೂರು ಸದ್ಗುರು ಶ್ರೀ ನಿತ್ಯಾನಂದ ವಿದ್ಯಾಪೀಠದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉಪ್ಪಳದ ಭಟ್ಸ್ ಕ್ಲಿನಿಕ್‌ನ ಯೋಗ ತಜ್ಞರಾದ ಡಾ.ಅಮೂಲ್ಯ ಎಚ್.ಆರ್. ಹಾಗೂ ಡಾ.ನಿಶಾ ಕಟೀಲ್ ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟಿಸಿದರು. ವಿದ್ಯಾರ್ಥಿಗಳು ವಿಶೇಷ ಯೋಗ ಪ್ರದರ್ಶನ ನೀಡಿ ಯೋಗದ ಮಹತ್ವವನ್ನು ಮನದಟ್ಟು ಮಾಡಿಕೊಟ್ಟರು.

ಬಳಿಕ ಸಂಪನ್ಮೂಲ ವ್ಯಕ್ತಿಗಳು ಯೋಗದ ಮಹತ್ವ, ಆರೋಗ್ಯಕರ ಜೀವನದಲ್ಲಿ ಯೋಗದ ಪಾತ್ರ ಹಾಗೂ ದೈನಂದಿನ ಜೀವನದಲ್ಲಿ ಯೋಗಾಭ್ಯಾಸದ ಅಗತ್ಯತೆಯ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ವಿವಿಧ ಯೋಗಾಸನಗಳು, ಪ್ರಾಣಾಯಾಮಗಳು, ಸರಳ ಯೋಗಾಭ್ಯಾಸಗಳನ್ನು ಮಕ್ಕಳಿಗೆ ನಡೆಸಿಕೊಟ್ಟರು.

ಶಾಲೆಯ ಪ್ರಾಂಶುಪಾಲೆ ಮಲ್ಲಿಕಾ ಸಂಪನ್ಮೂಲ ವ್ಯಕ್ತಿಗಳನ್ನು ಸನ್ಮಾನಿಸಿದರು. ಶಿಕ್ಷಕಿ ಚೈತನ್ಯ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಜ್ಯೋತಿ ವಂದಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು.

ಮುಳ್ಳೇರಿಯ- ಗಾಡಿಗುಡ್ಡೆ ರಸ್ತೆಯಲ್ಲಿನ ಚರಂಡಿ ಸಮಸ್ಯೆ ಪರಿಹಾರಕ್ಕೆ ಜನತೆ ಆಗ್ರಹ



ಕಾಸರಗೋಡು: ಮುಳ್ಳೇರಿಯ ಪೇಟೆಯಿಂದ ಗಾಡಿಗುಡ್ಡೆ ಭಾಗಕ್ಕೆ ತೆರಳುವ ರಸ್ತೆ ಬದಿಯಲ್ಲಿ ಚರಂಡಿ ವ್ಯವಸ್ಥೆಯು ಅಸಮರ್ಪಕವಾಗಿದೆ. ಇದರಿಂದಾಗಿ ಅಪಾರ ಸಮಸ್ಯೆ ತಲೆದೋರಿದೆ. ಮಳೆಗಾಲದಲ್ಲಿ ನೀರು ರಸ್ತೆಯಲ್ಲೇ ಹರಿಯುತ್ತಿದ್ದು, ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ಸಂಕಷ್ಟ ಎದುರಾಗಿದೆ.

ಮಾತ್ರವಲ್ಲದೆ ಈ ಪ್ರದೇಶದ ವ್ಯಾಪಾರಿಗಳು ಭಾರೀ ಸಮಸ್ಯೆ ಅನುಭವಿಸುತ್ತಿದ್ದಾರೆ. ಗಾಡಿಗುಡ್ಡೆ ಭಾಗದ ರಸ್ತೆ ಬದಿಯಲ್ಲಿರುವ ಚರಂಡಿಯಲ್ಲಿ ಕಸಕಡ್ಡಿಗಳು, ಪ್ಲಾಸ್ಟಿಕ್ ತ್ಯಾಜ್ಯಗಳು ತುಂಬಿಹೋಗಿದ್ದು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದೆ. ಇದರಿಂದಾಗಿ ಮಳೆನೀರು ಹರಿದು ಹೋಗಲು ಯಾವುದೇ ವ್ಯವಸ್ಥೆಯಿಲ್ಲದೆ ನಿತ್ಯ ಪ್ರಯಾಣಿಕರು ಅಕ್ಷರಶಃ ಬವಣೆ ಅನುಭವಿಸುವಂತಾಗಿದೆ.

ಹಲವು ವರ್ಷಗಳಿಂದ ಈ ಚರಂಡಿಯನ್ನು ದುರಸ್ತಿಗೊಳಿಸದ ಕಾರಣ ಮುಳ್ಳೇರಿಯದಿಂದ ಗಾಡಿಗುಡ್ಡೆಗೆ ತೆರಳುವ ರೂಟ್‌ನಲ್ಲಿ ಮಳೆಗಾಲದಲ್ಲಿ ಪ್ರಯಾಣವೇ ದುಸ್ತರವಾಗಿದೆ. ಈ ಬಗ್ಗೆ ಕೇರಳ ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಮುಳ್ಳೇರಿಯ ಘಟಕವು ಲೋಕೋಪಯೋಗಿ ರಸ್ತೆ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಮನವಿ ಸಲ್ಲಿಸಿ ಚರಂಡಿಯನ್ನು ದುರಸ್ತಿಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಹಾಗೂ ಪರಿಸರದ ವ್ಯಾಪಾರಿಗಳಿಗೆ ಯಾವುದೇ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದೆ.

ಮುಳ್ಳೇರಿಯ ಸರಕಾರಿ ವೊಕೇಶನಲ್ ಹೈಯರ್ ಸೆಕೆಂಡರಿ ಶಾಲೆಗೆ ವಿದ್ಯಾರ್ಥಿಗಳು ಈ ರಸ್ತೆ ಮೂಲಕವೇ ನಡೆದು ಹೋಗುತ್ತಿದ್ದು, ದಿನನಿತ್ಯ ವಾಹನಗಳ ದಟ್ಟಣೆಯಿರುವ ಪ್ರಮುಖ ರಸ್ತೆ ಇದಾಗಿದೆ. ಅಗಲ ಕಿರಿದಾದ ಈ ರಸ್ತೆಯಲ್ಲಿ ವಾಹನಗಳು ಸಂಚರಿಸುವಾಗ ಮಳೆಗಾಲದಲ್ಲಿ ಕೆಸರು ನೀರಿನ ಅಭಿಷೇಕವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ರಸ್ತೆಯ ಬದಿಯಲ್ಲಿರುವ ಚರಂಡಿಯ ಕಸಕಡ್ಡಿಗಳನ್ನು ಮತ್ತು ಇನ್ನಿತರ ಮಾಲಿನ್ಯಗಳನ್ನು ತೆರವುಗೊಳಿಸಿ ಮಳೆನೀರು ಸರಾಗವಾಗಿ ಹರಿದುಹೋಗುವಂತೆ ಶಾಶ್ವತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕ ವಲಯ ಒತ್ತಾಯಿಸಿದೆ.

ಕಾಸರಗೋಡು ಕೋ ಓಪರೇಟಿವ್ ಟೌನ್ ಬ್ಯಾಂಕ್ ಬೋವಿಕ್ಕಾನ ಶಾಖೆ ಉದ್ಘಾಟನೆ



ಕಾಸರಗೋಡು: ಕಾಸರಗೋಡು ಕೋ ಓಪರೇಟಿವ್ ಟೌನ್ ಬ್ಯಾಂಕ್‌ನ ನೂತನ ಬೋವಿಕ್ಕಾನ ಶಾಖೆಯ ಉದ್ಘಾಟನೆಯನ್ನು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರು ಬೋವಿಕ್ಕಾನ ಬಿ.ಕೆ. ಕಾಂಪ್ಲೆಕ್ಸ್‌ನಲ್ಲಿ ಸೋಮವಾರ ದೀಪ ಬೆಳಗಿಸಿ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಕಾಸರಗೋಡು ಟೌನ್ ಬ್ಯಾಂಕ್‌ನ ಅಧ್ಯಕ್ಷ ವಕೀಲ ಕೆ.ಕರುಣಾಕರನ್ ನಂಬ್ಯಾರ್ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕ್ ಕೌಂಟರ್‌ನ್ನು ಮುಳಿಯಾರು ಗ್ರಾಮ ಪಂಚಾಯತ್ ಅಧ್ಯಕ್ಷ ಬಿ.ಕೆ.ಮಹಮ್ಮದ್ ಕುಂಞಿ, ಸ್ಟ್ರಾಂಗ್ ರೂಮ್‌ನ್ನು ಸಹಕಾರಿ ಸಂಘದ ಕಾಸರಗೋಡು ಸಹಾಯಕ ನಿಬಂಧಕ (ಜನರಲ್) ವಿನೋದ್‌ಕುಮಾರ್ ಸಿ. ಉದ್ಘಾಟಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ಮುಳಿಯಾರು ಪಂಚಾಯತ್ ಸ್ಥಾಯೀ ಸಮಿತಿ ಅಧ್ಯಕ್ಷೆ ಅನಿಸಾ ಮನ್ಸೂರ್, ಗ್ರಾಮ ಪಂಚಾಯತ್ ಸದಸ್ಯ ಜಯಕೃಷ್ಣನ್ ಮಾಸ್ತರ್, ಮಲ್ಲ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಟ್ರಸ್ಟಿ ವಕೀಲ ಶಶಿಧರ, ಸಹಕಾರ ಭಾರತಿ ರಾಜ್ಯ ಸಮಿತಿ ಸದಸ್ಯ ಐತ್ತಪ್ಪ ಮವ್ವಾರು, ಮುಳಿಯಾರು ಸೇವಾ ಸಹಕಾರಿ ಬ್ಯಾಂಕ್‌ನ ಉಪಾಧ್ಯಕ್ಷ ಬಾಲಚಂದ್ರನ್ ನಾಯರ್, ಮುಳಿಯಾರು ಕೃಷಿಕರ ಕ್ಷೇಮಾಭಿವೃದ್ಧಿ ಸಹಕಾರ ಸಂಘದ ಅಧ್ಯಕ್ಷ ಕೆ.ದಾಮೋದರನ್, ಟೌನ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ, ವಕೀಲ ಎ.ಸಿ.ಅಶೋಕ್ ಕುಮಾರ್, ಬೋವಿಕ್ಕಾನ ಬಿಎಆರ್ ಎಚ್ ಶಾಲಾ ವ್ಯವಸ್ಥಾಪಕ ಗಂಗಾಧರನ್ ನಾಯರ್ ಪಾಡಿ, ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಮುಳಿಯಾರು ಘಟಕದ ಕಾರ್ಯದರ್ಶಿ ಮುಸ್ತಾಬಿಸ್ಮಿಲ್ಲಾ, ಟೌನ್ ಬ್ಯಾಂಕ್ ನೌಕರರ ಸಂಘ (ಬಿಎಂಎಸ್)ದ ಅಧ್ಯಕ್ಷ ಉಪೇಂದ್ರ ಕೋಟೆಕಣಿ ಮಾತನಾಡಿದರು. ಟೌನ್ ಬ್ಯಾಂಕ್ ಉಪಾಧ್ಯಕ್ಷ ಕೆ.ಮಹಾ ಬಲ ರೈ ಸ್ವಾಗತಿಸಿ, ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕಿ (ಪ್ರಭಾರ) ಪಿ.ಎನ್.ನಿಶಾ ವಂದಿಸಿದರು.

ಮೀಯಪದವು: ಪಿ.ಎನ್. ಪಣಿಕ್ಕರ್ ಸ್ಮರಣಾರ್ಥ ವಾಚನ ಸಪ್ತಾಹಕ್ಕೆ ಚಾಲನೆ

ಮಂಜೇಶ್ವರ: ಮೀಯಪದವು ಶ್ರೀ ವಿದ್ಯಾವರ್ಧಕ ಪ್ರೌಢಶಾಲೆಯಲ್ಲಿ ಪಿ.ಎನ್. ಪಣಿಕ್ಕರ್ ಅವರ ಸವಿ ನೆನಪಿಗಾಗಿ ವಾಚನಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



ಮುಖ್ಯೋಪಾಧ್ಯಾಯಿನಿ ಮೃದುಲಾ ಕೆ.ಎಂ. ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿ, ಮಕ್ಕಳಲ್ಲಿ ಅರಿವಿನ ಹಣತೆ ಸದಾ ಬೆಳಗಲು ಓದು ಎಣ್ಣೆಯ ರೀತಿ ಸಹಕರಿಸುತ್ತದೆ. ಯುವ ಪೀಳಿಗೆ ಓದಿನ ಮಹತ್ವವನ್ನು ಅರಿತು ಪುಸ್ತಕ ಓದುವುದನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.
ಹಿರಿಯ ಕನ್ನಡ ಅಧ್ಯಾಪಿಕೆ ಸಾವಿತ್ರಿ ಕಾರ್ಯಕ್ರಮಕ್ಕೆ ಶುಭಹಾರೈಸಿದರು. ಕನ್ನಡ ಅಧ್ಯಾಪಕ ರಾಜಾರಾಮ ಪಿ. ಕಾರ್ಯಕ್ರಮ ನಿರೂಪಿಸಿದರು.

ವಾಚನಾ ಸಪ್ತಾಹದ ಮೊದಲ ದಿನ ಕನ್ನಡ ಭಾಷಣ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸರಣಿ ಕಾರ್ಯಕ್ರಮಗಳ ಮೂಲಕ ಏಳು ದಿನಗಳ ಕಾಲ ವಿವಿಧ ಸಾಹಿತ್ಯಪರ ಸ್ಪರ್ಧೆಗಳೊಂದಿಗೆ ವಾಚನ ಸಪ್ತಾಹವನ್ನು ಏರ್ಪಡಿಸಲಾಗಿದೆ. ಶಾಲಾ ಅಧ್ಯಾಪಕರು, ಸಿಬ್ಬಂದಿ ವರ್ಗದವರು ಕಾರ್ಯಕ್ರಮಕ್ಕೆ ಸಕ್ರಿಯರಾಗಿ ಸಹಕರಿಸಿದ್ದಾರೆ.



ನಬಾರ್ಡ್ ಸಂಸ್ಥೆಯ ಕೇರಳ ರೀಜಿಯನಲ್ ಚೀಫ್ ಜನರಲ್ ಮೆನೇಜರ್ ನಾಗೇಶ್‌ಕುಮಾರ್ ಅನುಮಾಲ ಅವರು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರನ್ನು ವಿಧಾನಸಭೆಯ ಮುಖ್ಯಮಂತ್ರಿಯವರ ಚೇಂಬರ್‌ನಲ್ಲಿ ಮಂಗಳವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಕಾಸರಗೋಡಿನ ಡಾ.ರತ್ನಾಕರ ಮಲ್ಲಮೂಲೆಯವರ ಬನವಾಸಿ ಮನೆಗೆ ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಭೇಟಿ

ಗಡಿನಾಡು ಕಾಸರಗೋಡಿನಲ್ಲಿ ಇನ್ನೂ ಹಸಿರಾಗಿದೆ ಕನ್ನಡದ ಉಸಿರು

ಬದಿಯಡ್ಕ: ಕನ್ನಡ ಪ್ರಜ್ಞೆ ಮತ್ತು ಪರಿಸರ ಪ್ರೀತಿಯ ಪ್ರತೀಕವಾಗಿ ಕಾಸರಗೋಡಿನ ಡಾ.ರತ್ನಾಕರ ಮಲ್ಲಮೂಲೆಯವರ ನೀರ್ಚಾಲು ಸಮೀಪದಲ್ಲಿರುವ ಬನವಾಸಿ ಮನೆ ಮತ್ತು ಪರಿಸರವು ಕಂಗೊಳಿಸುತ್ತಿರುವುದು ಕನ್ನಡಿಗರು ಅಭಿಮಾನ ಪಡಬೇಕಾದ ವಿಷಯ ಎಂದು ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಹಿರಿಯ ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಬನವಾಸಿಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, ಒಳನಾಡಿಗಿಂತಲೂ ಗಡಿನಾಡು ಕಾಸರಗೋಡಿನಲ್ಲಿ ಕನ್ನಡತನದ ಉಸಿರು ಇನ್ನೂ ಹಸುರಾಗಿದೆ. ಇಲ್ಲಿನ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಮತ್ತು ಇಲ್ಲಿನ ಜನರ ಮೈಮನಗಳಲ್ಲಿ ಕನ್ನಡ ಪ್ರೀತಿ ಇಂದಿಗೂ ಜೀವಂತವಾಗಿದೆ. ಅದು ಇಲ್ಲಿನ ಕನ್ನಡಿಗರ ಬದುಕಿನ ಪ್ರತಿಯೊಂದು ಹೆಜ್ಜೆಗಳಲ್ಲೂ ಕಾಣಲು ಸಾಧ್ಯ. ಅದಕ್ಕೊಂದು ಉತ್ತಮ ಉದಾಹರಣೆ ಪ್ರಾಧ್ಯಾಪಕ ರತ್ನಾಕರ ಮಲ್ಲಮೂಲೆಯವರ ಬನವಾಸಿಯೆಂಬ ನಾಮಧೇಯದ ಮನೆ ಮತ್ತು ಪರಿಸರ ಎಂದರು.



ಮನೆಯ ಪ್ರತಿಯೊಂದು ಕೋಣೆಗೂ ಕನ್ನಡದ ಹೆಸರುಗಳನ್ನಿರಿಸಿದ್ದು ಮಾತ್ರವಲ್ಲದೆ ಮಳೆ ಕೊಯ್ಲು ಕೊಳ ಹಾಗೂ ಕೈತೋಟಕ್ಕೂ ಅವರು ಕನ್ನಡದ ಹೆಸರುಗಳನ್ನಿರಿಸಿ ಇಲ್ಲಿ ಇನ್ನೂ ಕನ್ನಡ ಜೀವಂತ ವಿದೆಯೆಂದು ಸಾಬೀತುಪಡಿಸಿದ್ದಾರೆ ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಹಾಗೂ ಹಿರಿಯ ಸಾಹಿತಿ ಪ್ರೊ.ಎಲ್.ಎನ್.ಮುಕುಂದರಾಜ್, ಅವರ ಸಹಧರ್ಮಿಣಿ ಡಾ.ಪದ್ಮ ಟಿ. ಬೆಂಗಳೂರು, ಮುಕುಂದರಾಜ್ ಅವರ ಸೊಸೆ ಶ್ರುತಿ, ಮಕ್ಕಳಾದ ಆದ್ಯತ್, ಅಗಮ್ಯ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಎ.ಆರ್.ಸುಬ್ಬಯ್ಯಕಟ್ಟೆ, ಗಮಕ ಕಲಾ ಪರಿಷತ್‌ನ ಕೇರಳ ಗಡಿನಾಡ ಘಟಕದ ಅಧ್ಯಕ್ಷ ಟಿ.ಶಂಕರನಾರಾಯಣ ಭಟ್, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎ.ಶ್ರೀನಾಥ್, ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ ಕಾರ್ಯದರ್ಶಿ ಅಖಿಲೇಶ್ ನಗುಮುಗಂ, ಬದಿಯಡ್ಕ ಗ್ರಾ.ಪಂ.ಮಾಜಿ ಸದಸ್ಯ ಈಶ್ವರ ಮಾಸ್ತರ್, ಗಾಯಕ ವಸಂತ ಬಾರಡ್ಕ, ಮಹಮ್ಮದ್ ಹಾಶಿಂ ಮುಂತಾದವರು ಇದ್ದರು. ಡಾ.ರತ್ನಾಕರ ಮಲ್ಲಮೂಲೆ ಸ್ವಾಗತಿಸಿ, ಸುನೀತಾ ಯಾದವ್ ವಂದಿಸಿದರು. ವಸಂತ ಬಾರಡ್ಕ ಪ್ರಾರ್ಥನೆ ಹಾಡಿದರು.

> **ಇಲ್ಲಿಗೆ ಭೇಟಿ ನೀಡಲು ಆಹ್ವಾನ ಬೇಡ**
>
> ಮನೆಗೆ ಬರುವ ರಸ್ತೆಗೆ ಆದಿಕವಿ ಪಂಪನ ಹೆಸರನ್ನಿಡುವ ಮೂಲಕ ಸಾಹಿತ್ಯ, ಪರಿಸರ ಮತ್ತು ಬದುಕು ಬೇರೆಯಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇಂತಹ ಕನ್ನಡ ಪ್ರೀತಿಯನ್ನು ಹಸುರಿನ ಮಧ್ಯೆ ಕಾಣುವಾಗ ಮನಸ್ಸು ಪ್ರಫುಲ್ಲವಾಗುತ್ತದೆ. ಈ ಕಾರಣದಿಂದಲೇ ಬನವಾಸಿ ನೋಡಲು ಜನರು ಬರುತ್ತಿದ್ದಾರೆ. ಇಲ್ಲಿಗೆ ಭೇಟಿ ನೀಡಲು ಕನ್ನಡಿಗರಿಗೆ ಪ್ರತ್ಯೇಕ ಕರೆ ಬೇಕಾಗಿಲ್ಲ.
>
> ● ಪ್ರೊ.ಎಸ್. ಜಿ.ಸಿದ್ದರಾಮಯ್ಯ

ಉಡುಪಿ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಪುಣ್ಯಸ್ಮರಣೆ

ದೇಶದ ಅಖಂಡತೆ, ಏಕತೆಗೆ ಶ್ರಮಿಸಿದ ಧೀಮಂತ ನಾಯಕ

ಉಡುಪಿ: ಭಾರತೀಯ ಜನಸಂಘದ ಸಂಸ್ಥಾಪಕ ಹಾಗೂ ದೇಶದ ಅಖಂಡತೆ ಮತ್ತು ಏಕತೆಗಾಗಿ ತಮ್ಮ ಪ್ರಾಣವನ್ನೇ ಬಲಿದಾನಗೈದ ಧೀಮಂತ ನಾಯಕ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರು ಭಾರತದ ಇತಿಹಾಸದಲ್ಲಿ ಪ್ರಾತಃ ಸ್ಮರಣೀಯರಾಗಿದ್ದಾರೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಹೆರ್ಗ ಅವರು ತಿಳಿಸಿದರು.

ಅವರು ಬಿಜೆಪಿ ಉಡುಪಿ ಜಿಲ್ಲಾ ಉಪಾಧ್ಯಕ್ಷ ಕಿರಣ್ ಕುಮಾರ್ ಬೈಲೂರು ಅವರ ಅಧ್ಯಕ್ಷತೆಯಲ್ಲಿ ಉಡುಪಿಯ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಧೀಮಂತ ನಾಯಕ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಬಲಿದಾನ ದಿನದ ಭಕ್ತಿಪೂರ್ವಕ ಸ್ಮರಣೆ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಭಾಗವಹಿಸಿ ಮಾತನಾಡಿದರು.

'ಒಂದು ದೇಶದಲ್ಲಿ ಎರಡು ಪ್ರಧಾನಿ, ಎರಡು ಸಂವಿಧಾನ ಹಾಗೂ ಎರಡು ಧ್ವಜಗಳು ಇರಲು ಸಾಧ್ಯವೇ ಇಲ್ಲ' ಎಂದು ಬಲವಾಗಿ ಪ್ರತಿಪಾದಿಸಿ, ಜಮ್ಮು ಮತ್ತು ಕಾಶ್ಮೀರ ಭಾರತದೊಂದಿಗೆ ಸಂಪೂರ್ಣವಾಗಿ ವಿಲೀನಗೊಳ್ಳಬೇಕು ಎಂದು



ನಿರಂತರವಾಗಿ ಹೋರಾಡಿದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಉದಾತ್ತ ಜೀವನಾದರ್ಶಗಳು ಮತ್ತು ರಾಷ್ಟ್ರಭಕ್ತಿಯ ಚಿಂತನೆಗಳು ಇಂದಿಗೂ ಪ್ರತಿಯೊಬ್ಬ ಪಕ್ಷದ ಕಾರ್ಯಕರ್ತರಿಗೂ ಸದಾ ಕಾಲ ಪ್ರೇರಣಾದಾಯಕವಾಗಿವೆ ಎಂದು ಹೇಳಿದರು.

ಕೈಗಾರಿಕಾ ಸಚಿವರಾಗಿ ಭದ್ರ ಬುನಾದಿ

ಡಾ. ಮುಖರ್ಜಿ ಅವರ ಸಾಧನೆಗಳನ್ನು ಸ್ಮರಿಸಿದ ಅವರು, ಕಲ್ಕತ್ತಾ ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಅತ್ಯಂತ ಕಿರಿಯ ವಯಸ್ಸಿನ ಉಪ ಕುಲಪತಿಯಾಗಿ ಸೇವೆ ಸಲ್ಲಿಸಿ ಶಿಕ್ಷಣ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದ ಅಪ್ರತಿಮ ವಿದ್ವಾಂಸ ಇವರಾಗಿದ್ದಾರೆ. ಸ್ವಾತಂತ್ರ್ಯದ ಬಳಿಕ ಭಾರತ ದೇಶದ ಮೊದಲ ಕೈಗಾರಿಕಾ ಮತ್ತು ಸರಬರಾಜು ಸಚಿವರಾಗಿ ಅಧಿಕಾರ ವಹಿಸಿಕೊಂಡು ದೇಶದ ಕೈಗಾರಿಕಾ ಪ್ರಗತಿಗೆ ಭದ್ರ ಬುನಾದಿ ಹಾಕಿದ್ದರು. ಆದರೆ ಅಂದಿನ ಪ್ರಧಾನಿ ಜವಾಹರ್ ಲಾಲ್ ನೆಹರು ಅವರ ನೇತೃತ್ವದ ಸರ್ಕಾರದ ತುಷ್ಟೀಕರಣದ ನೀತಿಗಳನ್ನು ಸಂಪೂರ್ಣವಾಗಿ ವಿರೋಧಿಸಿ ತಮ್ಮ ಮಂತ್ರಿ ಮಂಡಲದ ಪದವಿಗೆ ನಿರ್ದಾಕ್ಷಿಣ್ಯವಾಗಿ ರಾಜೀನಾಮೆ ನೀಡಿದರು. ತದನಂತರ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರ ಮಾರ್ಗದರ್ಶನದೊಂದಿಗೆ ದೇಶದ ರಾಷ್ಟ್ರೀಯತೆ ಪ್ರತಿಬಿಂಬಿಸುವ ಭಾರತೀಯ ಜನಸಂಘ ಸ್ಥಾಪಿಸಿದರು. ಅದುವೇ ದೇಶದಲ್ಲಿ ರಾಜಕೀಯ ಕ್ರಾಂತಿಗೆ ಮುನ್ನುಡಿ ಬರೆಯಿತು ಎಂದರು.

ಕಾಶ್ಮೀರದಲ್ಲಿ ಜಾರಿಯಲ್ಲಿದ್ದ ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ವಿಭಜಕ '370ನೇ ವಿಧಿ'ಯನ್ನು ತೀವ್ರವಾಗಿ ವಿರೋಧಿಸಿದ್ದ ಡಾ. ಮುಖರ್ಜಿ ಅವರು, 1953ರಲ್ಲಿ ಯಾವುದೇ ಪರವಾನಗಿ ಇಲ್ಲದೆ ಜಮ್ಮು ಮತ್ತು ಕಾಶ್ಮೀರವನ್ನು ಪ್ರವೇಶಿಸಿದಾಗ ಅಲ್ಲಿನ ಸರ್ಕಾರದಿಂದ ಬಂಧನಕ್ಕೊಳಗಾದರು. ಜೈಲುವಾಸದಲ್ಲಿರುವಾಗಲೇ ಅವರು ಅತ್ಯಂತ ಅನುಮಾನಾಸ್ಪದವಾಗಿ ನಿಧನರಾದರು. ಅವರ ದೂರದೃಷ್ಟಿ, ತ್ಯಾಗ ಮತ್ತು ಬಲಿದಾನದ ಇತಿಹಾಸ ನಮ್ಮ ದಾರಿದೀಪ ಎಂದರು.

ಇದೇ ಸಂದರ್ಭದಲ್ಲಿ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಭಾವಚಿತ್ರಕ್ಕೆ ಪಕ್ಷದ ಮುಖಂಡರಿಂದ ಸಾಮೂಹಿಕ ಪುಷ್ಪಾರ್ಚನೆಗೈಯಲಾಯಿತು. ಕಾರ್ಯಕ್ರಮದಲ್ಲಿ ಬಿಜೆಪಿ ಮಂಗಳೂರು ವಿಭಾಗ ಸಹ ಪ್ರಭಾರಿ ಜಯಂತ್ ಕೋಟ್ಯಾನ್, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಸತ್ಯಾನಂದ ನಾಯಕ್ ಸಹಿತ ಪಕ್ಷದ ವಿವಿಧ ಸ್ತರದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ಕಾರ್ಯಕ್ರಮ ನಿರೂಪಿಸಿ, ಕಾರ್ಯಕ್ರಮ ವಂದಿಸಿದರು.

ಪ್ರೇರಣಾದಾಯಕ

ಬಿಜೆಪಿ ಕಾರ್ಯಕರ್ತರಿಗೆ ಡಾ. ಶ್ಯಾಮಪ್ರಸಾದ್ ಮುಖರ್ಜಿ ದೇಶಕ್ಕೆ ನೀಡಿದ ಕೊಡುಗೆ ಪ್ರೇರಣಾದಾಯಕ. ಅವರ ಸಾಧನೆ, ತ್ಯಾಗಮಯ ಜೀವನ ಇಂದಿನ ಪೀಳಿಗೆಗೆ ತಿಳಿಯಪಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

● ದಿನಕರ ಶೆಟ್ಟಿ ಹೆರ್ಗ

ಸುತ್ತ ಮುತ್ತ

ಬಂಟಕಲ್ಲು: ಜೂ.28ರಂದು ಕೆಸರುಗದ್ದೆ ಕ್ರೀಡಾಕೂಟ

ಶಿರ್ವ: ರಾಜಾಪುರ ಸಾರಸ್ವತ ಸೇವಾ ವೃಂದ ಬಂಟಕಲ್ಲು ಇದರ ಆಶ್ರಯದಲ್ಲಿ ಶ್ರೀದುರ್ಗಾ ಮಹಿಳಾ ವೃಂದ ಬಂಟಕಲ್ಲು ಇದರ ಸಹಭಾಗಿತ್ವದಲ್ಲಿ ಕೆಸರು ಗದ್ದೆ ಕ್ರೀಡಾಕೂಟ ಜೂ.28ರಂದು ಬಂಟಕಲ್ಲು ಸಮೀಪದ ಸಡಂಬೈಲು ಅನಂತರಾಮ ವಾಗ್ಲೆ ಅವರ ಗದ್ದೆಯಲ್ಲಿ ಬೆಳಿಗ್ಗೆ 9.30ರಿಂದ ನಡೆಯಲಿದೆ. ವೈಯುಕ್ತಿಕ ಹಾಗೂ ಗುಂಪು ಆಟಗಳು ಸೇರಿದಂತೆ ಮಕ್ಕಳಿಗೆ, ಯುವಕರಿಗೆ, ಮಧ್ಯ ವಯಸ್ಸಿನಗೆ ಹಾಗೂ ಹಿರಿಯ ನಾಗರಿಕರಿಗೆ ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವಿಭಾಗಗಳಲ್ಲಿ ಜನಪದೀಯ ರೀತಿಯಲ್ಲಿ ವಿವಿಧ ಸ್ಪರ್ಧೆಗಳು ಜರುಗಲಿವೆ. ಅಪರಾಹ್ನ ಸಮಾರೋಪ ಸಮಾರಂಭ ನಡೆಯಲಿದೆ ಎಂದು ರಾಜಾಪುರ ಸಾರಸ್ವತ ಸೇವಾ ವೃಂದದ ಪ್ರಕಟಣೆ ತಿಳಿಸಿದೆ.

ಎಸ್.ಐ.ಆರ್.: ಕಾಂಗ್ರೆಸ್‌ನಿಂದ ಜಾಗೃತಿ

ಉಡುಪಿ: ಎಸ್.ಐ.ಆರ್. ಬಗ್ಗೆ ಸಂಪೂರ್ಣ ಮಾಹಿತಿಯನ್ನು ಸಾರ್ವಜನಿಕರಿಗೆ, ಕಾರ್ಯಕರ್ತರಿಗೆ ಮತ್ತು ಬಿಎಲ್‌ಎ-2ಗಳಿಗೆ ನೀಡುವ ನಿಟ್ಟಿನಲ್ಲಿ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ಕಾಂಗ್ರೆಸ್ ಮುಖಂಡ ಉದಯ್ ಶೆಟ್ಟಿ ಮಾರ್ಗದರ್ಶನದಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರದ ಆರು ವಲಯಗಳಲ್ಲಿ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಜೂ.28ಕ್ಕೆ ಮಧ್ಯಾಹ್ನ 2:30ಕ್ಕೆ ಹೆಬ್ರಿಯ ಚೈತನ್ಯ ಸಭಾಂಗಣ, ಸಂಜೆ 4ಕ್ಕೆ ಅಜೆಕಾರಿಯ ಹೋಟೆಲ್ ರಚನಾ, 5.30ಕ್ಕೆ ಕಾರ್ಕಳ ಪುರಸಭಾ ವ್ಯಾಪ್ತಿಯ ಹೋಟೆಲ್ ಮಯೂರದಲ್ಲಿ ಆಯೋಜಿಸಲಾಗಿದೆ. ಜೂ.29ಕ್ಕೆ ಮಧ್ಯಾಹ್ನ 2:30ಕ್ಕೆ ಕುಕ್ಕುಂದೂರು ದೇವಿಕೃಪಾ ಸಭಾಭವನ, ಸಂಜೆ 4ಕ್ಕೆ ಬಜಗೋಳಿಯ ಹೋಟೆಲ್ ಚಿರಾಗ್, 5:30ಕ್ಕೆ ಬೆಳ್ಮಣ್ಣ್ ಹೋಟೆಲ್ ಸೂರಜ್ ಇಲ್ಲಿ ಆಯೋಜಿಸಲಾಗಿದೆ ಎಂದು ಕಾರ್ಕಳ ಮತ್ತು ಹೆಬ್ರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಶುಭದ ರಾವ್ ಮತ್ತು ಗೋಪಿನಾಥ್ ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಆ್ಯಂಬುಲೆನ್ಸ್!

ಮಾಯಿಲಕೋಟೆಯಲ್ಲಿ ಸುಮಾರು 25ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿದ್ದು ಇದರಲ್ಲಿ ಒಂದು ಭಾಗದವರಿಗೆ ರಸ್ತೆ ಸಂಪರ್ಕವಿದೆ. ಕೆಲವು ಮನೆಗಳಿಗೆ 1 ಕಿಲೋ ಮೀಟರ್ ಕಾಡಿನ ಮೂಲಕ ನಡೆದು ರಸ್ತೆಗೆ ಸೇರಬೇಕಾಗುತ್ತದೆ. ಈಕ್ಷಣ ನಾಯ್ಕರ ಮನೆಯಲ್ಲಿ ಅಸೌಖ್ಯ ಬಾಧಿತ ಪತ್ನಿ ಹಾಗೂ ಓರ್ವ ಪುತ್ರನಿದ್ದಾರೆ. ವಿವಾಹವಾಗಿ ತೆರಳಿರುವ ಪುತ್ರಿ ಕೂಡಾ ಇದೀಗ ತಂದೆಯ ಆರೈಕೆಗಾಗಿ ಮನೆಯಲ್ಲೇ ಉಳಿದುಕೊಂಡಿದ್ದಾರೆ. ಬಿಪಿಎಲ್ ಕಾರ್ಡ್ ಹೊಂದಿರುವ ಈ ಬಡ ಕುಟುಂಬದ ವೃದ್ಧರ ಜೀವ ಉಳಿಸಲು ಊರಿನ ಜನರೆಲ್ಲ ಪ್ರಯತ್ನಿಸುತ್ತಿದ್ದರೂ ಅಧಿಕಾರಿಗಳು ಇತ್ತ ಗಮನಿಸದಿರುವುದು ವಿಪರ್ಯಾಸವಾಗಿದೆ.

ನಡುವೆ ಕತ್ತಲು!

ದಿನನಿತ್ಯ ವಿದ್ಯುತ್ ಕಡಿತದಿಂದ ಸಹನೆ ಕಳೆದುಕೊಂಡ ಸ್ಥಳೀಯರು ವಿಚಾರಿಸಲು ಸಾಲೆತ್ತೂರಿನ ಮೆಸ್ಕಾಂ ಕಚೇರಿಗೆ ಹೋಗಿದ್ದಾಗ ಹೊರಭಾಗದಲ್ಲಿ ಹಾಕಿದ್ದ ಬೀಗ ತೆರವುಗೊಳಿಸಿದ ಆರೋಪದಲ್ಲಿ ಸಾರ್ವಜನಿಕರ ಮೇಲೆಯೇ ಪೊಲೀಸರಿಗೆ ದೂರು ಸಲ್ಲಿಸಲಾಗಿದೆ ಎಂಬ ಆರೋಪವೂ ಸ್ಥಳೀಯರು ಮಾಡುತ್ತಿದ್ದಾರೆ. ಕರ್ತವ್ಯ ನಿರ್ವಹಣೆಯಲ್ಲಿನ ಉಡಾಫೆಗೆ ಬೇಸತ್ತಿರುವ ಸ್ಥಳೀಯರು ಮೆಸ್ಕಾಂ ಹಿರಿಯ ಅಧಿಕಾರಿಗಳ ಸಹಿತ ನಿಗಮದ ಅಧ್ಯಕ್ಷ ಹರೀಶ್ ಕುಮಾರ್ ಅವರಿಗೂ ದೂರು ನೀಡಲು ಮುಂದಾಗಿದ್ದಾರೆ. ಈ ಸಮಸ್ಯೆಯ ಬಗ್ಗೆ ಸ್ಪಷ್ಟನೆ, ಮಾಹಿತಿಗಾಗಿ ಸಂಪರ್ಕಿಸಲು ಯತ್ನಿಸಿದ 'ಹೊಸದಿಗಂತ'ಕ್ಕೂ ಜೆಇ ಸಂಪರ್ಕಕ್ಕೆ ಲಭ್ಯರಾಗಿಲ್ಲ.

ಸಿಗದ ನಿವೇಶನ

ಗುಳಿಕಾನದವರಿಗೆ ನಿವೇಶನ ನೀಡಿ ಮನೆ ಕಟ್ಟಿಕೊಳ್ಳಲು ತಲಾ ರೂ.5 ಲಕ್ಷ ಹಣ ಸರ್ಕಾರದಿಂದ ಪ್ರಕೃತಿ ವಿಕೋಪದಡಿ ಅಂದು ಮುಂಜೂರಾಗಿತ್ತು. ಅಲ್ಲದೆ, ಗುಳಿಕಾನದಲ್ಲಿ ತೊಂದರೆಗೊಳಗಾದ ಉಮೇಶ್, ಲೋಕಯ್ಯ, ಪೂವಮ್ಮ ಬಾಲಪ್ಪ ಅಂಗಾರ, ಪುಟ್ಟಣ್ಣ ದೆಯ್ಯು, ಯಮುನಾ, ಬಾಬು, ಚನ್ನು ಇವರೆಲ್ಲರ ಅಕೌಂಟ್‌ಗೆ ಆರಂಭಿಕ ಮೊತ್ತ 1 ಲಕ್ಷ ಜಮೆಯೂ ಆಯಿತು. ಇದರಲ್ಲಿ ಉಮೇಶ್ ಎಂಬವರು ಮನೆ ನಿವೇಶಕ್ಕೆ ಕಾಯದೆ ತಮಗೆ ಕಲ್ಮಕಾರಿನಲ್ಲಿದ್ದ ಸ್ವಂತ ಜಮೀನಿನಲ್ಲಿ ಮನೆ ಕಟ್ಟಲಾರಂಭಿಸಿದರು. ಬಳಿಕ ಅವರಿಗೆ ಹಂತ ಹಂತವಾಗಿ ರೂ.5 ಲಕ್ಷ ಹಣ ಲಭಿಸಿ ಅದನ್ನು ಬಳಸಿಕೊಂಡು ಮನೆ ಕಟ್ಟಿಕೊಂಡರು. ಆದರೆ, ಒಂದು ಲಕ್ಷ ಅಕೌಂಟ್‌ಗೆ ಬಿದ್ದ ಉಳಿದವರು ಜಮೀನು ಇಲ್ಲದೆ, ಮನೆ ಕಟ್ಟಿಕೊಳ್ಳಲು ಆರಂಭಿಸದ ಕಾರಣ ಹಣ ಅಕೌಂಟ್‌ನಲ್ಲೇ ಉಳಿದಿದೆ.

35 ಲ.ರೂ. ವೆಚ್ಚದಲ್ಲಿ ನಿರ್ಮಿಸಿದ ಕಲ್ಮಾಡಿ ಗರಡಿ ಬಳಿಯ ಕೆರೆ ಉದ್ಘಾಟನೆ



ಉಡುಪಿ: ನಗರಸಭೆಯ ಕಲ್ಮಾಡಿ ವಾರ್ಡಿನ ಗರಡಿ ಬಳಿಯಲ್ಲಿ ಸುಮಾರು 35 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡ ಕರೆ ಕಾಮಗಾರಿಯ ಉದ್ಘಾಟನೆಯನ್ನು ಉಡುಪಿ ವಿಧಾನಸಭಾ ಕ್ಷೇತ್ರದ ಶಾಸಕ ಯಶ್ ಪಾಲ್ ಸುವರ್ಣ ನೆರವೇರಿಸಿದರು.

ಕೆರೆ ಕಾಮಗಾರಿಯ ಉದ್ಘಾಟನೆ ನೆರವೇರಿಸಿದ ಶಾಸಕ ಯಶ್‌ಪಾಲ್ ಸುವರ್ಣ ಮಾತನಾಡಿ, ಕಲ್ಮಾಡಿ ಗರಡಿ ಬಳಿಯಲ್ಲಿರುವ ಕೆರೆಯನ್ನು ಅಭಿವೃದ್ಧಿ ಮಾಡುವ ಸ್ಥಳೀಯರ ಬೇಡಿಕೆಯಂತೆ ನಗರಸಭೆಯ ಮೂಲಕ 35 ಲಕ್ಷ ಅನುದಾನ ಒದಗಿಸಿ ಕಾಮಗಾರಿ ಪೂರ್ಣಗೊಂಡು ಇದೀಗ ಉದ್ಘಾಟನೆಗೊಂಡಿದ್ದು, ಈಗಾಗಲೇ ಕಲ್ಮಾಡಿ ವಾರ್ಡಿನ ಮೂಲ ಸೌಕರ್ಯ ಅಭಿವೃದ್ಧಿಗೆ ಗರಿಷ್ಠ ಅನುದಾನ ಒದಗಿಸಿದ್ದು, ಶೀಘ್ರದಲ್ಲಿಯೇ 5 ಕೋಟಿ ವೆಚ್ಚದಲ್ಲಿ ಕಲ್ಮಾಡಿ ಬಂಕೇರಕಟ್ಟ ಹೊಸ ಸೇತುವೆಯ ಕಾಮಗಾರಿ ಆರಂಭಗೊಳ್ಳಲಿದೆ ಎಂದರು.

ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಮಾಜಿ ನಗರಸಭಾ ಸದಸ್ಯ ಸುಂದರ ಜೆ. ಕಲ್ಮಾಡಿ, ಬಾಲಕೃಷ್ಣ ಶೆಟ್ಟಿ, ಸ್ಥಳೀಯ ಮುಖಂಡರಾದ ವಿನಯ್ ಕುಮಾರ್, ವಿವೇಕ್, ವಿನೋದ್ ಹೊಸ ಕಟ್ಟ, ಲಕ್ಷ್ಮೀಶ ಬಂಗೇರ, ಮನೋಜ್ ಕುಮಾರ್, ಸಚಿನ್, ನಿತಿನ್,ರಾಘವ್ ಪೂಜಾರಿ, ರತ್ನಾಕರ ಸಾಲ್ಯಾನ್, ರಮೇಶ್ ಮಾಸ್ಟರ್, ರೋಹಿತ್ ಬೊಟ್ಟಲ,ಗೋವಿಂದ ಗುರಿಕಾರ, ಸಾಧು ಪೂಜಾರಿ, ಗಿರೀಶ್ ಕಲ್ಮಾಡಿ, ಚಂದ್ರಕಾಂತ್ ಕಲ್ಮಾಡಿ, ಯಶೋದ ಕಲ್ಮಾಡಿ, ಜಯಶ್ರೀ, ಸುಶೀಲ ಮೊದಲಾದವರು ಉಪಸ್ಥಿತರಿದ್ದರು.

ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾದ ಉಡುಪಿ ಲೊಂಬಾರ್ಡ್ ಮಿಷನ್ ಆಸ್ಪತ್ರೆ

ಉಡುಪಿ: ಇಲ್ಲಿನ ಪ್ರಸಿದ್ಧ ಸಿಎಸ್ಐ ಲೊಂಬಾರ್ಡ್ ಸ್ಮಾರಕ (ಮಿಷನ್) ಆಸ್ಪತ್ರೆಯು ಸುಸ್ಥಿರ ಆರೋಗ್ಯ ಸೇವೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ ತೋರಿದ ಗಮನಾರ್ಹ ಸಾಧನೆಗಾಗಿ, ರಾಷ್ಟ್ರೀಯ ಮಟ್ಟದ 'ಅತ್ಯುತ್ತಮ ಹಸಿರು ಇಂಧನ ದಕ್ಷತಾ ಕ್ರಮಗಳು' ವಿಭಾಗದ 2026ರ ಹೆಲ್ಸ್ ಸುಸ್ಥಿರತಾ ಶ್ರೇಷ್ಠತಾ ಪ್ರಶಸ್ತಿಗೆ ಭಾಜನವಾಗಿದೆ.



ಆರೋಗ್ಯ ಮತ್ತು ಪರಿಸರ ನಾಯಕತ್ವ ವೇದಿಕೆ (ಹೆಲ್ಸ್ ಸಂಸ್ಥೆ) ವತಿಯಿಂದ ಹೈದರಾಬಾದ್‌ನ ಯಶೋದ ಆಸ್ಪತ್ರೆಯಲ್ಲಿ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಆಸ್ಪತ್ರೆಯ ನಿರ್ದೇಶಕ ಡಾ. ಸುಶೀಲ್ ಜತನ್ನಾ ಅವರು ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

ಡಾ. ಸುಶೀಲ್ ಜತನ್ನಾ ಅವರ ನೇತೃತ್ವದಲ್ಲಿ 2024ರ ಜೂನ್‌ನಲ್ಲಿ ಆರಂಭಿಸಲಾದ 'ಇನ್ ಸ್ಪೈರ್' ಹಸಿರು ಆಸ್ಪತ್ರೆ ಯೋಜನೆಯಡಿ ಕೈಗೊಳ್ಳಲಾದ ಪರಿಸರ ಪೂರಕ ಕಾರ್ಯಕ್ರಮ ಪರಿಗಣಿಸಿ ಈ ಮಾನ್ಯತೆ ನೀಡಲಾಗಿದೆ. ಯೋಜನೆಯ ಭಾಗವಾಗಿ ಆಸ್ಪತ್ರೆಯಲ್ಲಿ ಸೌರ ವಿದ್ಯುತ್ ವ್ಯವಸ್ಥೆ ಅಳವಡಿಕೆ, ಕಾರ್ಬನ್ ಹೆಜ್ಜೆಗುರುತು ಮೌಲ್ಯಮಾಪನ, ಇಂಧನ ಮತ್ತು ನೀರಿನ ಸಂರಕ್ಷಣೆ, ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಹಾಗೂ ಆವರಣದಲ್ಲಿ ಹಸಿರೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಸುಶೀಲ್ ಜತನ್ನಾ, ಪರಿಸರದ ಬಗ್ಗೆ ಜವಾಬ್ದಾರಿಯುತ ಆರೋಗ್ಯ ಸೇವೆ ಒದಗಿಸುವ ನಮ್ಮ ಬದ್ಧತೆಗೆ ಸಂದ ಗೌರವ ಇದಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಲ್ಲದೆ, ಇದಕ್ಕೆ ಶ್ರಮಿಸಿದ ಆಸ್ಪತ್ರೆಯ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸಹಕಾರ ನೀಡಿದ ಸ್ವಿಟ್ಜರ್‌ಲ್ಯಾಂಡ್‌ನ ಲೊಂಬಾರ್ಡ್ ಪ್ರತಿಷ್ಠಾನವನ್ನು ಸ್ಮರಿಸಿದರು. 1923ರಲ್ಲಿ ಸ್ಥಾಪನೆಯಾಗಿ ಎನ್‌ಎಬಿಹೆಚ್ ಮಾನ್ಯತೆ ಪಡೆದಿರುವ ಈ ಆಸ್ಪತ್ರೆಯು ಕರಾವಳಿಯ ಪ್ರಮುಖ ಆರೋಗ್ಯ ಸಂಸ್ಥೆಯಾಗಿ ಮುಂಚೂಣಿಯಲ್ಲಿದೆ. ಹೆಲ್ಸ್ ಸಂಸ್ಥೆಯು ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾ ಹಾಗೂ ಹೆಲ್ತ್ ಕೇರ್ ವಿತೌಟ್ ಹರ್ಮ್ ಸಹಯೋಗದ ಜಾಗತಿಕ ಜಾಲದ ಭಾರತೀಯ ಘಟಕವಾಗಿದ್ದು ಪರಿಸರ ಸ್ನೇಹಿ ಆಸ್ಪತ್ರೆಗಳನ್ನು ಪ್ರೋತ್ಸಾಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ಬೈಂದೂರಿನಲ್ಲಿ 8 ವರ್ಷದಲ್ಲಿ 19 ತಹಶೀಲ್ದಾರರ ವರ್ಗಾವಣೆ: ಆಕ್ಷೇಪ



ಬೈಂದೂರು: ತಾಲೂಕಿನಲ್ಲಿ ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಒಟ್ಟು 19 ತಹಶೀಲ್ದಾರರು ವರ್ಗಾವಣೆಯಾಗಿದ್ದು ಜೂ.18ರಂದ 20ನೇ ಹೊಸ ತಹಶೀಲ್ದಾರರು ಅಧಿಕಾರ ವಹಿಸಿಕೊಂಡಿದ್ದಾರೆ. ಈ ನಿರಂತರ ವರ್ಗಾವಣೆಗಳಿಗೆ ಕಾರಣವೇನು ಎಂಬುದು ಸಾಮಾನ್ಯ ಜನರಿಗೆ ತಿಳಿದಿಲ್ಲ, ಆದರೆ ಇದರ ಪರಿಣಾಮವಾಗಿ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ಹಿರಿಯ ನಾಗರಿಕ ವೇದಿಕೆಯ ಅಧ್ಯಕ್ಷ ಎಚ್. ಚಂದ್ರಶೇಖರ ಶೆಟ್ಟಿ ಬೇಸರ ವ್ಯಕ್ತಪಡಿಸಿದ್ದಾರೆ.

ಅನೇಕ ಸಂದರ್ಭ ತಹಶೀಲ್ದಾರರನ್ನು ಭೇಟಿ ಮಾಡಲು ಕಚೇರಿಗೆ ಹೋದಾಗ ಅವರು ಕುಂದಾಪುರ ಉಪವಿಭಾಗಾಧಿಕಾರಿ ಕಚೇರಿ ಅಥವಾ ಉಡುಪಿ ಜಿಲ್ಲಾಧಿಕಾರಿ ಕಚೇರಿಯ ಸಭೆಗಳಿಗೆ ತೆರಳಿರುವುದು ಕಂಡುಬರುತ್ತದೆ. ಇದರಿಂದ ಸಾರ್ವಜನಿಕರ ಕೆಲಸಗಳು ವಿಳಂಬವಾಗುತ್ತಿವೆ. ಮುಂದಿನ ದಿನಗಳಲ್ಲಿ ಬೈಂದೂರು ತಾಲೂಕಿಗೆ ಸ್ಥಿರ ಅವಧಿಗೆ ತಹಶೀಲ್ದಾರರನ್ನು ನೇಮಕ ಮಾಡುವ ಮೂಲಕ ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ದೊರಕುವಂತೆ ಕ್ರಮ ಕೈಗೊಳ್ಳುವಂತೆ ಶಾಸಕ ಗುರುರಾಜ ಗಂಟಿಹೊಳೆ ಮೂಲಕ ಸರ್ಕಾರ ಹಾಗೂ ಉಡುಪಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭ ವೇದಿಕೆ ಅಧ್ಯಕ್ಷ ಎಚ್. ಚಂದ್ರಶೇಖರ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಯುವಸಂಗಮ ಕೌಡೂರು: ಸಾಧಕ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ವಿತರಣೆ



ಕಾರ್ಕಳ: ಯುವಸಂಗಮ ಕೌಡೂರು ಇವರ ವತಿಯಿಂದ ಸಾರ್ವಜನಿಕರಿಗಾಗಿ ಉಚಿತ ಹೃದಯ ತಪಾಸಣೆ (ಇಸಿಜಿ), ಮಂಡಿನೋವು ಉಚಿತ ತಪಾಸಣೆ, ಚರ್ಮರೋಗ ತಪಾಸಣೆ ಹಾಗೂ ಆರೋಗ್ಯ ತಪಾಸಣಾ ಶಿಬಿರ ಹಾಗೂ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಜೂ. 21ರಂದು ಬೈಲೂರು ಶ್ರೀ ಮಾರಿಯಮ್ಮ ದೇವಸ್ಥಾನ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಶಾಸಕ ವಿ. ಸುನೀಲ್ ಕುಮಾರ್ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ.ಆರ್. ಸುಧೀರ್ ಹೆಗ್ಡೆ ನಾಯರಬೆಟ್ಟು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಾಣೂರು ರಾಜೇಶ್ವರಿ ಎಜ್ಯುಕೇಶನ್ ಫೌಂಡೇಶನ್‌ನ ದೇವಿಪ್ರಸಾದ್ ಶೆಟ್ಟಿ, ಪಣಂಬೂರು ಎಸಿಪಿ ಶ್ರೀಕಾಂತ್ ಕೆ., ಬೈಲೂರು ಗುರುಕೃಪಾ ನರ್ಸಿಂಗ್ ಹೋಮ್‌ನ ಡಾ. ರಾಮಕೃಷ್ಣ ನಾಯಕ್, ಆರೂರ್ಸ್ ನರ್ಸಿಂಗ್ ಹೋಮ್‌ನ ಡಾ. ಶಶಿಕಿರಣ್ ಆಚಾರ್, ಜಿ.ಪಂ. ನಿಕಟಪೂರ್ವ ಸದಸ್ಯ ಸುಮಿತ್ ಶೆಟ್ಟಿ ಕೌಡೂರು, ಹರೀಶ್ ಶೆಟ್ಟಿ ಸೇರಿಗಾರಬೆಟ್ಟು, ಪ್ರವೀಣ್ ಶೆಟ್ಟಿ ಸೇರಿಗಾರಬೆಟ್ಟು ಉಪಸ್ಥಿತರಿದ್ದರು. ಶಿಬಿರದಲ್ಲಿ ಬೆಂಗಳೂರು ಜಯದೇವ ಆಸ್ಪತ್ರೆ, ಉಡುಪಿಯ ಹೈಟೆಕ್ ಮತ್ತು ಮಿತ್ರ ಆಸ್ಪತ್ರೆಯ ಖ್ಯಾತ ಹೃದಯ ತಜ್ಞ ಡಾ. ಅನೂಪ್ ಕೆ. ಶೆಟ್ಟಿ ದುರ್ಗಾ ಸಂಜೀವಿನಿ ಮಣಿಪಾಲ್ ಆಸ್ಪತ್ರೆ ಕಟೀಲು ಇಲ್ಲಿಯ ಎಲುಬು ಮತ್ತು ಕೀಲುರೋಗ ತಜ್ಞ ವೈದ್ಯ ಡಾ. ಸುಧೀಂದ್ರ ಕಾರ್ನಾಡ್, ಇರ್ವತ್ತೂರು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ಖ್ಯಾತ ಚರ್ಮರೋಗ ತಜ್ಞ ಡಾ. ಯಶೋಧರ ಕಾರ್ಕಳ, ಬೈಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಮಹಂತ್ ಹೆಗ್ಡೆ, ಹೆಬ್ರಿ ಹೆಲ್ತ್‌ಕೇರ್ ಸೆಂಟರ್‌ನ ಕನ್ಸಲ್ಟೆಂಟ್ ಫಿಸಿಯೋಥೆರಪಿಸ್ಟ್ ಡಾ. ನಿಶಾ ಶೆಟ್ಟಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಒಟ್ಟು 27 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, 4 ಮಕ್ಕಳಿಗೆ ಶಾಲಾ ಶುಲ್ಕ, ಈರ್ವರಿಗೆ ಸಹಾಯಧನ ನೀಡಲಾಯಿತು. ಒಟ್ಟು 458 ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು. ಇಸಿಜಿ ಪರೀಕ್ಷೆಯನ್ನು 296 ಮಂದಿ, ಮಂಡಿ ನೋವಿನ ಬಗ್ಗೆ 184 ಮಂದಿಗೆ ಎಕ್ಸ್ ರೇ ಮಾಡಿಸಲಾಯಿತು. ಅಧ್ಯಕ್ಷ ಪ್ರಸನ್ನ ಶೆಟ್ಟಿ ಪ್ರಸ್ತಾವನೆಗೈದರು. ಸುಮಿತ್ ಶೆಟ್ಟಿ ಸ್ವಾಗತಿಸಿ, ಕಾರ್ಯದರ್ಶಿ ನಾಗೇಶ್ ಪೂಜಾರಿ ವಂದಿಸಿದರು. ನಿತೇಶ್ ಎಕ್ಕಾರು ನಿರೂಪಿಸಿದರು.

ಪ್ರಧಾನ ಮಂತ್ರಿ ಫಸಲ್ ವಿಮಾ ಯೋಜನೆ: ನೋಂದಾವಣೆಗೆ ಸೂಚನೆ

ಉಡುಪಿ: ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಮುಖ್ಯ ಬೆಳೆಯಾದ ಮಳೆಯಾಶ್ರಿತ ಭತ್ತವನ್ನು ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಬಿಮಾ (ವಿಮಾ) ಬೆಳೆ ವಿಮೆ ಯೋಜನೆಯಡಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ಕಚೇರಿಗಳಲ್ಲಿ ಹಾಗೂ ಸ್ಥಳಿಯಾಡಳಿತ ಸಂಸ್ಥೆಗಳಲ್ಲಿ ವಿಮಾ ಮೊತ್ತ ಪ್ರತಿ ಹೆಕ್ಟೇರ್‌ಗೆ 75,600 ರೂ. ಗಳಂತೆ ವಿಮಾ ಕಂತಿನ ದರವನ್ನು ಪ್ರತಿ ಹೆ.ಗೆ 1512 (2%) ರೂ. ಗಳಂತೆ ನಿಗದಿಪಡಿಸಿದ್ದು ನೋಂದಣಿಗಾಗಿ ಅಧಿಸೂಚಿಸಲಾಗಿದೆ. ರೈತರು ಬೆಳೆ ವಿಮೆ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲು ಜು.31 ಕೊನೆ ದಿನ. ಬೆಳೆ ಸಾಲ ಪಡೆಯದ ರೈತರು ಪಹಣಿ ಪತ್ರ, ಖಾತೆ ಪಾಸ್ ಪುಸ್ತಕ/ಬ್ಯಾಂಕ್ ಪಾಸ್ ಪುಸ್ತಕ, ಕಂದಾಯ ರಸೀದಿ ಮತ್ತು ಆಧಾರ್ ಸಂಖ್ಯೆಗಳನ್ನು ಒದಗಿಸಿ ವಾಣಿಜ್ಯ ಬ್ಯಾಂಕ್‌ಗಳು ಅಥವಾ ಗ್ರಾಮೀಣ ಮಟ್ಟದ ವ್ಯವಸಾಯ ಸೇವಾ ಸಹಕಾರ ಸಂಘಗಳು, ಸಾರ್ವಜನಿಕ ಸೇವಾ ಕೇಂದ್ರ, ಗ್ರಾಮ ಒನ್ ಮತ್ತು ವಿಮಾ ಸಂಸ್ಥೆಗಳನ್ನು ಸಂಪರ್ಕಿಸಿ, ಬೆಳೆ ವಿಮೆಗೆ ನೋಂದಾಯಿಸಿಕೊಳ್ಳಬಹುದಾಗಿದೆ.

ಮಳೆ ಅಭಾವ ಅಥವಾ ಇತರೆ ಪ್ರತಿಕೂಲ ಹವಾಮಾನ ಪರಿಸ್ಥಿತಿಯಲ್ಲಿ ಶೇ. 75 ರಷ್ಟು ಬಿತ್ತನೆಯಾಗದಿದ್ದಲ್ಲಿ ವಿಮೆ ಮಾಡಿಸಿದ ರೈತರಿಗೆ ವಿಮಾ ಮೊತ್ತದ ಶೇ. 25 ರಷ್ಟು ಪರಿಹಾರ ದೊರೆಯಲಿದೆ. ನಿರೀಕ್ಷಿತ ಇಳುವರಿಯು, ಸಾಮಾನ್ಯ ಇಳುವರಿಯ ಶೇ.50 ಕ್ಕಿಂತ ಕಡಿಮೆ ಇದ್ದಲ್ಲಿ ಅಥವಾ ಬೆಳೆ ನಷ್ಟ ಕಂಡುಬಂದಲ್ಲಿ ವಿಮೆ ಮಾಡಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ನಷ್ಟ ಪರಿಹಾರದಲ್ಲಿ ಶೇ.25 ರಷ್ಟು ಹಣ ಮುಂಚಿತವಾಗಿ ದೊರೆಯಲಿದೆ. ಕಟಾವಿನ ನಂತರದ ಬೆಳೆಯನ್ನು ಜಮೀನಿನಲ್ಲಿ ಒಣಗಲು ಬಿಟ್ಟ ಸಂದರ್ಭ ಹಾಗೂ ಕಟಾವು ಕೈಗೊಳ್ಳುವ 14 ದಿನಗಳ ಒಳಗೆ ಚಂಡಮಾರುತ, ಅಕಾಲಿಕ ಮಳೆಯಿಂದ ಬೆಳೆ ನಾಶವಾದಲ್ಲಿ ವೈಯಕ್ತಿಕವಾಗಿ ಪರಿಹಾರ ದೊರೆಯಲಿದೆ. ಮೇಲಿನ ಎರಡೂ ಸಂದರ್ಭದಲ್ಲಿ ರೈತರು ವಿಮಾ ಸಂಸ್ಥೆ/ ಆರ್ಥಿಕ ಸಂಸ್ಥೆ ಅಥವಾ ಕೃಷಿ ಇಲಾಖಾ ಕಚೇರಿಗೆ 72 ಗಂಟೆಗಳ ಒಳಗಾಗಿ ಬೆಳೆ ಹಾನಿ ವಿವರದ ಮಾಹಿತಿ ಒದಗಿಸಬೇಕು. ಪ್ರಸಕ್ತ ಸಾಲಿನ ಪಿ.ಎಂ.ಎಫ್.ಬಿ.ವೈ ಯೋಜನೆಯನ್ನು ಇಂಡಸ್ ಇಂಡ್ ಜನರಲ್ ಇನ್ಶುರೆನ್ಸ್ ಕಂಪನಿ ಅನುಷ್ಠಾನಗೊಳಿಸಲಿದೆ. ವಿಮೆಯಲ್ಲಿ ಭಾಗವಹಿಸಲು ಇಚ್ಛಿಸದಿದ್ದಲ್ಲಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಮುಚ್ಚಳಿಕೆ ಪತ್ರ ನೀಡುವಂತೆ ಕೋರಬೇಕು. ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಕೃಷಿ ಇಲಾಖೆಯ ಕಚೇರಿ, ವಾಣಿಜ್ಯ ಬ್ಯಾಂಕ್ ಅಥವಾ ಸಂಬಂಧಿಸಿದ ಸೇವಾ ಸಹಕಾರ ಸಂಘಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಕಾಪು ಮೊಗವೀರ ಮಹಾಸಭಾ: ನೂತನ ಪದಾಧಿಕಾರಿಗಳ ಪದಗ್ರಹಣ



ಕಾಪು: ಕಾಪು ಮೊಗವೀರ ಮಹಾಸಭಾ (ರಿ.), ಕಾಪು ಇದರ ನೂತನ ಪದಾಧಿಕಾರಿಗಳ ಅಧಿಕಾರ ಹಸ್ತಾಂತರ ಕಾರ್ಯಕ್ರಮವು ಕಾಪು ಮೊಗವೀರ ಮಹಿಳಾ ಮಂಡಳಿಯ ಸಭಾಭವನದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಮಹಾಸಭಾದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸುಜಿತ್ ಕುಮಾರ್ ಹಾಗೂ ನೂತನ ಪದಾಧಿಕಾರಿಗಳಿಗೆ, ನಿರ್ಗಮಿತ ಅಧ್ಯಕ್ಷರಾದ ಕುಶ ಎನ್. ಸಾಲ್ಯಾನ್ ಅವರು ಅಧಿಕಾರ ಹಸ್ತಾಂತರ ಮಾಡಿದರು. ಈ ಸಂದರ್ಭದಲ್ಲಿ ಕಳೆದ 6 ವರ್ಷಗಳಿಂದ ಮಹಾಸಭಾದ ಅಧ್ಯಕ್ಷರಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ ಕುಶ ಎನ್. ಸಾಲ್ಯಾನ್ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೊಗವೀರ ಮಹಾಸಭಾದ ಸದಸ್ಯರು ಹಾಗೂ ಮಾಜಿ ಶಾಸಕರಾದ ಲಾಲಾಜಿ ಆರ್. ಮೆಂಡನ್, ಸದಸ್ಯರಾದ ಮೋಹನ್ ಬಂಗೇರ, ಸದಾಶಿವ ಶ್ರೀಯಾನ್, ಸುಜಿತ್ ಕುಮಾರ್, ನವೀನ್ ಅಮೀನ್, ಮಧುಕರ ಎಸ್., ಹೇಮನಾಥ ಕೋಟ್ಯಾನ್, ಮುರಳಿ (ಲಾಲಾಜಿ) ಪುತ್ರನ್, ಮೋನಪ್ಪ ಸುವರ್ಣ, ಶಿವಾಜಿ ಕೋಟ್ಯಾನ್, ಸಂದೇಶ್ ಮೆಂಡನ್, ಧೀರೇಶ್ ತಿಂಗಳಾಯ, ಶಿವ ಅಮೀನ್, ನಿತಿನ್ ಕೋಟ್ಯಾನ್, ಚೇತನ್ ಬಂಗೇರ, ಸಂತೋಷ್ ಪುತ್ರನ್, ಚಂದ್ರಶೇಖರ್ ಸುವರ್ಣ, ವಸಂತ ಕರ್ಕೇರ, ಬಾಲಕೃಷ್ಣ ಕೋಟ್ಯಾನ್, ರತ್ನಾಕರ ಸುವರ್ಣ, ಆನಂದ್ ಶ್ರೀಯಾನ್, ಜಗದೀಶ ಮೆಂಡನ್ ಹಾಗೂ ಚಂದ್ರಶೇಖರ್ ಮೆಂಡನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳು ಮಹಾಸಭಾದ ಮುಂದಿನ ಕಾರ್ಯ ಚಟುವಟಿಕೆಗಳನ್ನು ಸಮರ್ಪಕವಾಗಿ ಮುನ್ನಡೆಸಿ, ಸಮಾಜಮುಖಿ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸುವ ವಿಶ್ವಾಸವನ್ನು ವ್ಯಕ್ತಪಡಿಸಿದರು.

ರಸ್ತೆ, ಚರಂಡಿ, ಜಂಕ್ಷನ್ ಅಭಿವೃದ್ಧಿಗೆ ಅಂದಾಜು ಪಟ್ಟಿ ತಯಾರಿಸಲು ಯಶ್‌ಪಾಲ್ ಸೂಚನೆ

ಉಡುಪಿ-ಮಣಿಪಾಲ ಹೆದ್ದಾರಿ ಕಾಮಗಾರಿಗಳ ಪರಿಶೀಲನೆ

ಉಡುಪಿ: ರಾಷ್ಟ್ರೀಯ ಹೆದ್ದಾರಿ 169ರ ಉಡುಪಿ ಕರಾವಳಿ ಬೈಪಾಸ್‌ನಿಂದ ಮಣಿಪಾಲ ಸಿಂಡಿಕೇಟ್ ಸರ್ಕಲ್ ವರೆಗಿನ ಅಗತ್ಯ ಕಾಮಗಾರಿಗಳ ಬಗ್ಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಉಡುಪಿ ನಗರಸಭೆಯ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಶಾಸಕ ಯಶ್ ಪಾಲ್ ಸುವರ್ಣ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಕರಾವಳಿ ಜಂಕ್ಷನ್ ಬಳಿಯಿಂದ ಬನ್ನಂಜೆ ನಾರಾಯಣ ಗುರು ಸರ್ಕಲ್ ವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಚರಂಡಿ ನಿರ್ಮಾಣ, ಬನ್ನಂಜೆ ಜಂಕ್ಷನ್ ಅಭಿವೃದ್ಧಿ, ರಸ್ತೆಯ ಇಕ್ಕೆಲಗಳಲ್ಲಿ ಇಂಟರ್ ಲಾಕ್ ಮರು ಅಳವಡಿಕೆ, ಕಡಿಯಾಳಿ ಕುಂಜಿಬೆಟ್ಟು ಭಾಗದಲ್ಲಿ ಚರಂಡಿ ನಿರ್ಮಾಣ, ಶಾರದಾ ಕಲ್ಯಾಣ ಮಂಟಪ ಜಂಕ್ಷನ್ ಅಭಿವೃದ್ಧಿ, ಎಂ.ಜಿ. ಎಂ. ಕಾಲೇಜಿನ ಬಳಿಯಿಂದ ಇಂದ್ರಾಳಿ ರೈಲ್ವೆ ನಿಲ್ದಾಣದ ರಸ್ತೆಯ ವರೆಗೆ ಇಂಟರ್ ಲಾಕ್ ಅಳವಡಿಕೆ, ಲಕ್ಷ್ಮೀಂದ್ರನಗರ ಬಳಿ ವ್ಯವಸ್ಥಿತ ಚರಂಡಿ ನಿರ್ಮಾಣ, ಇಂದ್ರಾಳಿ ಸೇತುವೆ ಬಳಿ ಶಾಲೆಗೆ ಸಂಪರ್ಕಿಸುವಂತೆ ಸರ್ವಿಸ್ ರಸ್ತೆ ನಿರ್ಮಾಣ, ಅಗತ್ಯ ಸ್ಥಳಗಳಲ್ಲಿ ಬಸ್ ಶೆಲ್ಟರ್ ನಿರ್ಮಾಣ ಮಾಡುವ ಬಗ್ಗೆ ತಕ್ಷಣ ಅಂದಾಜು ಪಟ್ಟಿ ತಯಾರಿಸಿ ಪ್ರಸ್ತಾವನೆ ಸಲ್ಲಿಸುವಂತೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಮಾಜಿ ಸದಸ್ಯರಾದ ಹರೀಶ್ ರಾಮ್ ಬನ್ನಂಜೆ, ಬಾಲಕೃಷ್ಣ ಶೆಟ್ಟಿ ನಿಟ್ಟೂರು, ಗಿರೀಶ್ ಅಂಚನ್, ಟಿ. ಜಿ. ಹೆಗ್ಡೆ, ಸತೀಶ್ ಕುಲಾಲ್ ಕಡಿಯಾಳಿ, ಸತೀಶ್ ಭಾಗವತ್, ಧನ್ಯವಂತ ಪ್ರಭು ಬನ್ನಂಜೆ, ಉಡುಪಿ ನಗರಸಭೆ ಪೌರಾಯುಕ್ತ ಮಹಾಂತೇಶ ಹಂಗರಗಿ, ಇಂಜಿನಿಯರ್ ಕಾರ್ತಿಕ್, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಾದ ಮಂಜನ್ ಗೌಡ, ನವೀನ್ ರಾಜ್, ಶಶಿಧರ್ ಮತ್ತಿತರರಿದ್ದರು.

ನಗರಸಭೆಗೆ ಸೂಚನೆ

ಉಡುಪಿ ನಗರಸಭೆಯ ಮೂಲಕ ಈಗಾಗಲೇ ಮಂಜೂರುಗೊಂಡಿರುವ ಎಂ.ಜಿ.ಎಂ. ಕಾಲೇಜು ಮುಂಭಾಗ ಹಾಗೂ ಇಂದ್ರಾಳಿ ರೈಲ್ವೇ ಮೇಲ್ಸೇತುವೆ ಬಳಿ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ತಕ್ಷಣ ಆರಂಭಕ್ಕೆ ಕ್ರಮ ವಹಿಸುವಂತೆ ಪೌರಾಯುಕ್ತರಿಗೆ ಶಾಸಕರು ಸೂಚಿಸಿದರು.


4 ವಿಧಾನಸಭಾ ಕ್ಷೇತ್ರದ ಶಾಲೆಗಳಲ್ಲಿ ಯಕ್ಷಶಿಕ್ಷಣ ತರಬೇತಿ

ಬೈಂದೂರಿನಲ್ಲಿ 19 ಶಾಲೆಗಳಲ್ಲಿ ಅನುಷ್ಠಾನ

ಉಡುಪಿ: ಯಕ್ಷಶಿಕ್ಷಣ ಟ್ರಸ್ಟ್ ಉಡುಪಿ ಜಿಲ್ಲೆಯ ನಾಲ್ಕು ವಿಧಾನಸಭಾ ವ್ಯಾಪ್ತಿಯ ಪ್ರೌಢಶಾಲೆಗಳಲ್ಲಿ ಯಕ್ಷಶಿಕ್ಷಣ ತರಬೇತಿ ನೀಡುತ್ತಿದೆ. ಬೈಂದೂರು ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ಮುಖ್ಯೋಪಾಧ್ಯಾಯರೊಂದಿಗೆ ಸಮಾಲೋಚನಾ ಸಭೆ ಬೈಂದೂರು ಶಾಸಕ ಗುರುರಾಜ ಗಂಟಿಹೊಳೆಯವರ ಅಧ್ಯಕ್ಷತೆಯಲ್ಲಿ ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಜರುಗಿತು.

ಯಕ್ಷಶಿಕ್ಷಣ ಕಲಿಕೆಗೆ ಪೂರಕ

ಯಕ್ಷಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಮುರಲಿ ಕಡೆಕಾರ್ ಮಾತನಾಡಿ, ಯಕ್ಷಗಾನ ತರಬೇತಿಯ ಸ್ವರೂಪ ಮತ್ತು ಶಾಲಾ ಮುಖ್ಯೋಪಾಧ್ಯಾಯರು ಇದನ್ನು ಶಾಲೆಗಳಲ್ಲಿ ಅನುಷ್ಠಾನಗೊಳಿಸಬೇಕಾದ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿಗಳನ್ನು ತಿಳಿಸಿ ಯಕ್ಷಶಿಕ್ಷಣ ಕಲಿಕೆಗೆ ಪೂರಕ ಎಂಬುದನ್ನು ಹೇಳಿದರು.



ಅಧ್ಯಕ್ಷತೆ ವಹಿಸಿದ್ದ ಗಂಟಿಹೊಳೆಯವರು ಯಕ್ಷಗಾನ ಕಲಾರಂಗದ ಸಮಾಜಮುಖಿ ಕಾರ್ಯಗಳನ್ನು ಅಭಿನಂದಿಸಿ, ಕಲಾರಂಗದ ಕಾರ್ಯಕರ್ತರ ಪರಿಶ್ರಮ, ಯಕ್ಷಶಿಕ್ಷಣ ಟ್ರಸ್ಟ್ ಉದ್ದೇಶ ಈಡೇರುವಲ್ಲಿ ಶಾಲಾ ಮುಖ್ಯೋಪಾಧ್ಯಾಯರ, ಅಧ್ಯಾಪಕ ವೃಂದದ ತೊಡಗಿಸಿಕೊಳ್ಳುವಿಕೆ ಬಹಳ ಮುಖ್ಯ ಸಂಗತಿ ಎಂದು ಹೇಳಿದರು.

ಕುಂದಾಪುರ ಕ್ಷೇತ್ರಶಿಕ್ಷಣಾಧಿಕಾರಿ ಶೋಭಾ ಶೆಟ್ಟಿ, ಟ್ರಸ್ಟಿ ನಾರಾಯಣ ಹೆಗಡೆ ಉಪಸ್ಥಿತರಿದ್ದರು. ಬೈಂದೂರು ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ ನಾಯಕ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಈ ವರ್ಷ ಬೈಂದೂರು ವಿಧಾನಸಭಾ ವ್ಯಾಪ್ತಿಯಲ್ಲಿ 19 ಪ್ರೌಢಶಾಲೆಗಳಲ್ಲಿ ಯಕ್ಷಶಿಕ್ಷಣ ತರಬೇತಿ ನಡೆಯಲಿದೆ.